ಮಂಗಳವಾರ, ಫೆಬ್ರುವರಿ 18, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 49 | ಪುಟ 14
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ದೇಹದಲ್ಲಿ ಶೇಖರಣೆಯಾಗುವ ಕಫದಿಂದ ಚರ್ಮಕ್ಕೂ ತೊಂದರೆಯಾಗಬಹುದು

ಆಳ-ಅಗಲ
'ದೊಡ್ಡಣ್ಣ'ನ ಹಾದಿಯಲ್ಲಿ ಬ್ರಿಟನ್

ಎಚ್‌ಡಿಕೆ, ಸಂಬಂಧಿಕರ ಜಮೀನು ಸರ್ವೆ ಶುರು 7

ಜ್ಞಾನೇಶ್ ಕುಮಾರ್ ಹೊಸ ಸಿಇಸಿ 11

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
75,996 ▲	22,959 ▲	₹89,250 (ಬೆಂಗಳೂರು) ▲	₹1.01 ಲಕ್ಷ (ಬೆಂಗಳೂರು)	86.88 ▼

ಜುಲೈ 31ರ ಒಳಗೆ ಕ್ರಮ ತೆಗೆದುಕೊಳ್ಳುವಂತೆ ಆಡಳಿತ ಇಲಾಖೆಗಳಿಗೆ ನಿರ್ದೇಶನ

ನಿಷ್ಕ್ರಿಯ, ನಷ್ಟ: 49 ಕಂಪನಿ ಬಂದ್?

• ರಾಜೇಶ್ ರೈ ಚಟ್ಲ

ಬೆಂಗಳೂರು: ನಿಷ್ಕ್ರಿಯ ಹಾಗೂ ನಷ್ಟದಲ್ಲಿರುವ ಒಟ್ಟು 49 ಕಂಪನಿಗಳನ್ನು ಮುಚ್ಚಲು ಅಥವಾ ಮತ್ತೊಂದು ಕಂಪನಿಯ ಜತೆ ವಿಲೀನಗೊಳಿಸಲು ರಾಜ್ಯ ಸರ್ಕಾರ ಮುಂದಾಗಿದೆ.

ರಾಜ್ಯ ಸರ್ಕಾರಿ ಸ್ವಾಮ್ಯದಲ್ಲಿ ಸಾರ್ವಜನಿಕ ವಲಯದ ಒಟ್ಟು 125 ಉದ್ದಿಮೆಗಳಿವೆ. ಇವುಗಳಲ್ಲಿ 34 ಮಾತ್ರ ಲಾಭದಲ್ಲಿವೆ. 16 ನಿಷ್ಕ್ರಿಯಗೊಂಡಿದ್ದು, 33 ನಷ್ಟದಲ್ಲಿವೆ. ಸಾಮಾಜಿಕ ಆಶಯ (ಜಾತಿ ಆಧಾರಿತ) ಅಥವಾ ಕಾಮಗಾರಿ ನಿರ್ವಹಣೆಗಾಗಿ ಸ್ಥಾಪಿಸಲಾದ 42 ಕಂಪನಿ ಅಥವಾ ನಿಗಮಗಳಿವೆ.

ಈ ಪೈಕಿ ನಿಷ್ಕ್ರಿಯಗೊಂಡ ಹಾಗೂ ನಷ್ಟದಲ್ಲಿರುವ ಕಂಪನಿಗಳನ್ನು ಪಟ್ಟಿ ಮಾಡಿರುವ ಆರ್ಥಿಕ ಇಲಾಖೆ, ಅವುಗಳನ್ನು ಮೌಲ್ಯಮಾಪನ ಮಾಡಿ ಬೀಗ ಹಾಕುವ ಅಥವಾ ವಿಲೀನಗೊಳಿಸುವ ಕುರಿತಂತೆ ಜುಲೈ 31ರ ಒಳಗೆ ಅಗತ್ಯ ಕ್ರಮ ತೆಗೆದುಕೊಳ್ಳಬೇಕು ಎಂದು ಸಂಬಂಧಪಟ್ಟ ಆಡಳಿತ ಇಲಾಖೆಗಳಿಗೆ ನಿರ್ದೇಶನ ನೀಡಿದೆ.

ನಷ್ಟದ ಹಾದಿಯಲ್ಲಿರುವ ಕಂಪನಿಗಳ ಮೌಲ್ಯಮಾಪನವನ್ನು ತಜ್ಞರಿಂದ ನಡೆಸಬೇಕು. ಜೊತೆಗೆ, ಸರ್ಕಾರದ ಹೂಡಿಕೆ ಮೇಲೆ ಉತ್ತಮ ಲಾಭ ಗಳಿಸಲು ಸಾಧ್ಯವಾಗುವಂತೆ ಇತರ ಕಂಪನಿಗಳ ಕಾರ್ಯಚಟುವಟಿಕೆಯ ಬಗ್ಗೆಯೂ ಮೌಲ್ಯಮಾಪನ ನಡೆಸಬೇಕು. ನಿಷ್ಕ್ರಿಯಗೊಂಡಿರುವ ಕಂಪನಿಗಳನ್ನು ಮುಚ್ಚುವುದರಿಂದ ಕಾರ್ಯಾಚರಣೆಗಳಿಗೆ ತಗಲುವ ವೆಚ್ಚವನ್ನು ಉಳಿತಾಯ ಮಾಡಬಹುದು. ಅಲ್ಲದೆ, ಸಂಪನ್ಮೂಲ ಕ್ರೋಡೀಕರಣ ಮತ್ತು ಉತ್ತಮ ಬಂಡವಾಳ ನಿರ್ವಹಣೆಯೂ ಸಾಧ್ಯವಾಗಲಿದೆ. ನಿಗದಿಪಡಿಸಿದ ರೀತಿಯಲ್ಲಿಯೇ ಕಂಪನಿಗಳನ್ನು ವಿಲೀನಗೊಳಿಸಿದರೆ ಲಾಭ ಪಡೆಯಬಹುದು ಎಂದೂ ಆರ್ಥಿಕ ಇಲಾಖೆ ಅಭಿಪ್ರಾಯಪಟ್ಟಿದೆ.

ಸಚಿವ ಸಂಪುಟ ಉಪ ಸಮಿತಿಯ ಶಿಫಾರಸಿನ ಅನ್ವಯ ಸಾರ್ವಜನಿಕ ಉದ್ಯಮಗಳ ಇಲಾಖೆಯನ್ನು 2022ರ ಮೇ 25ರಂದು ರದ್ದುಪಡಿಸಲಾಗಿದೆ. ಈ ಇಲಾಖೆಯು ನಿರ್ವಹಿಸುತ್ತಿದ್ದ ಉದ್ದಿಮೆಗಳನ್ನು ಆರ್ಥಿಕ ಇಲಾಖೆಗೆ ವಹಿಸಲಾಗಿದೆ. ಆ ನಂತರ ಸಾರ್ವಜನಿಕ ಉದ್ದಿಮೆಗಳನ್ನು ಪುನರ್ ರಚಿಸುವ ಮತ್ತು ಸದೃಢಗೊಳಿಸಲು ಹಲವು ಕ್ರಮಗಳನ್ನು ಇಲಾಖೆ ತೆಗೆದುಕೊಂಡಿದೆ. ಹಣಕಾಸು ಬೆಂಬಲ ನೀಡಲು ಆಂತರಿಕ ಕಾರ್ಪೊರೇಟ್ ಠೇವಣಿಗಳನ್ನು (ಐಸಿಡಿ) ಆರಂಭಿಸಲು ಸಚಿವ ಸಂಪುಟದಿಂದ ಆರ್ಥಿಕ ಇಲಾಖೆ ಅನುಮೋದನೆ ಪಡೆದುಕೊಂಡಿತ್ತು.

ನಿಷ್ಕ್ರಿಯಗೊಂಡಿರುವ ಕಂಪನಿಗಳನ್ನು ಮುಚ್ಚುವ ಪ್ರಸ್ತಾವದ ಬಗ್ಗೆ 2024ರ ಅ. 9ರಂದು ನಡೆದ ವಿಧಾನ ಮಂಡಲದ ಸಾರ್ವಜನಿಕ ಉದ್ದಿಮೆಗಳ ಸಭೆಯಲ್ಲಿ ಕೂಡಾ ಚರ್ಚಿಸಲಾಗಿತ್ತು. ಅಲ್ಲದೆ, ಈ ಕಂಪನಿಗಳು ಕುರಿತಂತೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವಂತೆ ಆರ್ಥಿಕ ಇಲಾಖೆಗೆ ಸಲಹೆ ನೀಡಲಾಗಿತ್ತು.

7ನೇ ಪುಟ ನೋಡಿ

₹64,440 ಕೋಟಿ ಹೂಡಿಕೆ: ₹285 ಕೋಟಿ ಲಾಭ

ಸಾರ್ವಜನಿಕ ವಲಯದ ಕಂಪನಿಗಳಲ್ಲಿ ₹64,440 ಕೋಟಿ ಮೊತ್ತವನ್ನು ರಾಜ್ಯ ಸರ್ಕಾರ ಈವರೆಗೆ ಹೂಡಿಕೆ ಮಾಡಿದೆ. ಈ ಹೂಡಿಕೆಯ ಮೇಲೆ 2023–24ರಲ್ಲಿ ಸರ್ಕಾರಕ್ಕೆ ಸಂದ ಲಾಭಾಂಶ ₹285 ಕೋಟಿ. ಈಕ್ವಿಟಿಯ ಮೇಲಿನ ಲಾಭ ಶೇ 0.46ರಷ್ಟು ಮಾತ್ರ. ಹೀಗಾಗಿ, ರಾಜ್ಯದ ಎಲ್ಲ ಸಾರ್ವಜನಿಕ ಉದ್ದಿಮೆಗಳ ಹೂಡಿಕೆಗಳ ಸಂಪೂರ್ಣ ಹೊರೆಯನ್ನು ಲಾಭದಾಯಕ ವಾಗಿರುವ 34 ಉದ್ದಿಮೆಗಳು ಹೊರಬೇಕಾಗಿದೆ ಎಂದು ಆರ್ಥಿಕ ಇಲಾಖೆ ಹೇಳಿದೆ.

ನಿಷ್ಕ್ರಿಯ, ನಷ್ಟದಲ್ಲಿರುವ ಕಂಪನಿಗಳನ್ನು ಮುಚ್ಚುವ, ವಿಲೀನಗೊಳಿಸುವ ಹಾಗೂ ಲಾಭದಾಯಕ ಕಂಪನಿಗಳಿಗೆ ಉತ್ತೇಜನ ನೀಡುವ ಕ್ರಮ ತೆಗೆದುಕೊಳ್ಳಲು ಉದ್ದೇಶಿಸಲಾಗಿದೆ

ಆರ್. ವಿಶಾಲ್, ಕಾರ್ಯದರ್ಶಿ (ವಿತ್ತೀಯ ಸುಧಾರಣೆ), ಆರ್ಥಿಕ ಇಲಾಖೆ

ಅಂಕಿ ಅಂಶಗಳು

125 ಒಟ್ಟು ಸಾರ್ವಜನಿಕ ವಲಯ ಉದ್ದಿಮೆಗಳು

16 ನಿಷ್ಕ್ರಿಯ ಉದ್ದಿಮೆಗಳು

33 ನಷ್ಟದಲ್ಲಿರುವ ಉದ್ದಿಮೆಗಳು

34 ಲಾಭದಲ್ಲಿರುವ ಉದ್ದಿಮೆಗಳು

42 ಸಮುದಾಯ ಅಭಿವೃದ್ಧಿ, ಸಾರ್ವಜನಿಕ ಸೇವೆ, ಮೂಲಸೌಕರ್ಯ ಅಭಿವೃದ್ಧಿ, ಇತರ

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಶಾಲಾ ಮಕ್ಕಳಿಗೆ ಚಿಕ್ಕಿ ವಿತರಣೆ ಇಲ್ಲ

ಬೆಂಗಳೂರು: ಮಧ್ಯಾಹ್ನದ ಬಿಸಿ ಯೂಟದ ಜತೆಗೆ ಮೊಟ್ಟೆ ತಿನ್ನದ ಮಕ್ಕಳಿಗೆ ನೀಡುತ್ತಿದ್ದ ಚಿಕ್ಕಿ ವಿತರಣೆಯನ್ನು ಸ್ಥಗಿತಗೊಳಿಸಲು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆದೇಶ ಹೊರಡಿಸಿದೆ.

ಕಲಬುರಗಿ ವಿಭಾಗದ ಕೆಲ ಶಾಲೆಗಳಲ್ಲಿ ವಿತರಿಸಿದ ಚಿಕ್ಕಿಗಳು ಮಕ್ಕಳು ತಿನ್ನಲು ಯೋಗ್ಯವಾಗಿರಲಿಲ್ಲ. ಮಕ್ಕಳ ಆರೋಗ್ಯದ ಮೇಲೆ ಪರಿಣಾಮ ಬೀರುವ ಕೊಬ್ಬು ಹಾಗೂ ಸಕ್ಕರೆ ಅಂಶ ಹೆಚ್ಚಿನ ಮಟ್ಟದಲ್ಲಿದೆ ಎನ್ನುವ ಕುರಿತು ಶಾಲಾ ಶಿಕ್ಷಣ ಇಲಾಖೆ ಹೆಚ್ಚುವರಿ ಆಯುಕ್ತರು ಬರೆದ ಪತ್ರ ಆಧರಿಸಿ ಇಲಾಖೆ ಕ್ರಮ ಕೈಗೊಂಡಿದೆ.

6ನೇ ಪುಟ ನೋಡಿ

ಪಂಚಾಯಿತಿ ಮೀಸಲು ಮೇ ಅಂತ್ಯಕ್ಕೆ ಸಿದ್ಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿ ಕ್ಷೇತ್ರಗಳ ಮೀಸಲಾತಿಗೆ ಸಂಬಂಧಿಸಿದಂತೆ ಮೇ ಅಂತ್ಯದೊಳಗೆ ಅಧಿಸೂಚನೆ ಪ್ರಕಟಿಸಲಾಗುವುದು' ಎಂದು ರಾಜ್ಯ ಸರ್ಕಾರವು ಹೈಕೋರ್ಟ್‌ಗೆ ಮೌಖಿಕವಾಗಿ ಮುಚ್ಚಳಿಕೆ ಕೊಟ್ಟಿದೆ.

ಈ ಕುರಿತಂತೆ ದಾಖಲಾಗಿದ್ದ ಎರಡು ಪ್ರತ್ಯೇಕ ನ್ಯಾಯಾಂಗ ನಿಂದನೆ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ಚುನಾವಣೆಗಳಿಗೆ ನಾವು ಸಿದ್ಧರಾಗಿದ್ದೇವೆ. ಹೈಕೋರ್ಟ್ ಸೂಚನೆ ಮೇರೆಗೆ ಚುನಾವಣೆ ನಡೆಸಲಾಗುವುದು

ಸಿದ್ದರಾಮಯ್ಯ, ಮುಖ್ಯಮಂತ್ರಿ

'ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಕ್ಷೇತ್ರಗಳ ಮೀಸಲಾತಿ ಪಟ್ಟಿಯನ್ನು ರಾಜ್ಯ ಚುನಾವಣಾ ಆಯೋಗಕ್ಕೆ ಹೆಚ್ಚೆಂದರೆ ಮೇ ಅಂತ್ಯದಲ್ಲಿ ಒದಗಿಸಲಾಗುವುದು' ಎಂದು ಸರ್ಕಾರದ ಪರ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ ಅವರು ವಿಚಾರಣೆ ವೇಳೆ ಹೇಳಿದರು.

7ನೇ ಪುಟ ನೋಡಿ

ಮಾರ್ಚ್ 7ಕ್ಕೆ ರಾಜ್ಯ ಬಜೆಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಜೆಟ್ ಮಂಡನೆಯಲ್ಲಿ ತಮ್ಮದೇ ದಾಖಲೆಯನ್ನು ಮುರಿಯಲಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ತಮ್ಮ 16ನೇ ಬಜೆಟ್ ಅನ್ನು ಮಾರ್ಚ್ 7ರಂದು ಮಂಡಿಸಲಿದ್ದಾರೆ.

'ವಿಧಾನಮಂಡಲ ಅಧಿವೇಶನ ಮಾರ್ಚ್ 3ರಿಂದ ಆರಂಭವಾಗಲಿದೆ. ಮೊದಲ ದಿನ ರಾಜ್ಯಪಾಲರು ಜಂಟಿ ಸದನವನ್ನು ಉದ್ದೇಶಿಸಿ ಭಾಷಣ ಮಾಡಲಿದ್ದಾರೆ. ಮಾರ್ಚ್ 4 ರಿಂದ 6ರವರೆಗೆ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ನಡೆಯಲಿದೆ' ಎಂದು ಸಿದ್ದರಾಮಯ್ಯ ಹೇಳಿದರು.

ADVERTORIAL

ಮಂಡಿನೋವು ಸರ್ಜರಿ ಇಲ್ಲದೇ ಉಪಶಮನ

ನಿಮ್ಮ ದೇಹದ ಸ್ವಯಂ-ಗುಣಪಡಿಕೆಯ ಸಾಮರ್ಥ್ಯದ ಮೂಲಕ ನೋವನ್ನು ಉಪಶಮನಗೊಳಿಸುವ ಆಧುನಿಕ ನೈಸರ್ಗಿಕ ವಿಧಾನ



ಮೊಣಕಾಲು ನೋವಿನ ಉಪಶಮನಕ್ಕೆ ಪ್ಲೇಟ್ಲೆಟ್ ಪ್ಲಾಸ್ಮಾ ಚಿಕಿತ್ಸೆ ಚುಚ್ಚುಮದ್ದು

ಮೊಣಕಾಲು ನೋವು ಗಾಯ, ಸಂಧಿವಾತ, ಅಥವಾ ಸವೆತದಿಂದ ಉಂಟಾಗುತ್ತದೆ, ಈ ಕಾರಣದಿಂದಾಗಿ ಜೀವನದ ಗುಣಮಟ್ಟದ ಮೇಲೆ ಗಾಢವಾದ ಪ್ರಭಾವ ಬೀರುತ್ತದೆ.

ಪಿಆರ್‌ಪಿ ಚಿಕಿತ್ಸೆಯ ಹಂತಗಳು

STAGE 1: ರಕ್ತ ಸಂಗ್ರಹಣೆ

STAGE 2: ರಕ್ತದ ಪ್ಲೇಟ್ಲೆಟ್ ಬೇರ್ಪಡಿಕೆ

STAGE 3: ಪ್ಲೇಟ್ಲೆಟ್ ಸಂಗ್ರಹಿಸುವುದು

STAGE 4: ಹಾನಿಗೊಳಗಾದ ಪ್ರದೇಶಕ್ಕೆ ಪಿಆರ್‌ಪಿ ಚುಚ್ಚುವುದು

ಪ್ಲೇಟ್‌ಲೆಟ್-ರಿಚ್ ಪ್ಲಾಸ್ಮಾ (ಪಿಆರ್‌ಪಿ) ಚಿಕಿತ್ಸೆಯು ಮೊಣಕಾಲಿನ ಅಸ್ವಸ್ಥತೆಯನ್ನು ನಿವಾರಿಸುವಲ್ಲಿ ಮತ್ತು ಚಲನಶೀಲತೆಯನ್ನು ಹೆಚ್ಚಿಸುವಲ್ಲಿ ಸಾಕಷ್ಟು ಜನರ ಗಮನ ಸೆಳೆಯುತ್ತಿದೆ. ಇದು ನಿರಂತರ ನೋವಿನಿಂದ ಬಳಲುತ್ತಿರುವವರಿಗೆ ನವೀಕೃತ ಜೀವನವನ್ನು ನೀಡುತ್ತದೆ.

ಪಿಆರ್‌ಪಿ ಚಿಕಿತ್ಸೆಯು ಅತ್ಯಾಧುನಿಕ ವೈದ್ಯಕೀಯ ವಿಧಾನವಾಗಿದ್ದು, ಮೊಣಕಾಲು ನೋವನ್ನು ಅದರ ಮೂಲದಲ್ಲಿ ಉಪಶಮನಗೊಳಿಸಲು ದೇಹದ ನೈಸರ್ಗಿಕ ಗುಣಪಡಿಸುವ ಕಾರ್ಯವಿಧಾನಗಳನ್ನು ಬಳಸಿಕೊಳ್ಳುತ್ತದೆ. ಮಂಡಿಯ ನೋವಿನಿಂದ ಬಳಲುತ್ತಿರುವವರ ಸ್ವಂತ ಪ್ಲೇಟ್ಲೆಟ್ಗಳನ್ನು ಬಳಸಿಕೊಳ್ಳುವ ಮೂಲಕ, ಪಿಆರ್‌ಪಿ ಚುಚ್ಚುಮದ್ದು ಅಂಗಾಂಶದ ಸರಿಪಡಿಸುವಿಕೆ ಮತ್ತು ಪುನರುತ್ಪಾದನೆಯನ್ನು ಉತ್ತೇಜಿಸುತ್ತದೆ, ಮತ್ತು ಉರಿಯೂತವನ್ನು ಕಡಿಮೆ ಮಾಡುತ್ತದೆ.

ಈ ಚಿಕಿತ್ಸೆಯು ಏಕೆ ಜನರ ಗಮನ ಸೆಳೆಯುತ್ತಿದೆ?
- 30-60 ನಿಮಿಷದ ವಿಧಾನ
- ಆಸ್ಪತ್ರೆ ವಾಸವಿಲ್ಲ
- 48 ಗಂಟೆಗಳಲ್ಲಿ ನಿಮ್ಮ ಕೆಲಸಕ್ಕೆ ತೆರಳಬಹುದು

ಬಹುಪಾಲು ಜನರಿಗೆ ಸಂಧಿವಾತ ನೋವನ್ನು ಸರ್ಜರಿ ಇಲ್ಲದೇ ಉಪಶಮನಗೊಳಿಸುವ ಸಾಧ್ಯತೆ ಇದೆ. 40–60 ವರ್ಷ ವಯಸ್ಸಿನಲ್ಲಿರುವ ಜನರು, ಸಂಧಿವಾತದ ರೋಗ ಲಕ್ಷಣಗಳು ಆರಂಭಿಕ ಹಂತಗಳಲ್ಲಿಯೇ ಕಂಡು ಬಂದಲ್ಲಿ, ಇವರ ಕ್ಲಿನಿಕ್‌ನಲ್ಲಿ ಸಹಾಯ ಪಡೆಯುವುದು ಉತ್ತಮ. ಇದರಿಂದಾಗಿ ನಂತರದ ವರ್ಷಗಳಲ್ಲಿ ಮಂಡಿಗೆ ಆಗುವ ತೀವ್ರವಾದ ಹಾನಿಯನ್ನು ತಡೆಗಟ್ಟಲು ಸಾಧ್ಯವಾಗುತ್ತದೆ.

ಇವರು ಕೊಡುವ ಪಿಆರ್‌ಪಿ ಚಿಕಿತ್ಸೆಯಿಂದ ನೋವುರಹಿತ ನಾಳೆಯ ಸಾಧ್ಯತೆಯಿದೆ. ಈಗಲೇ ಕರೆ ಮಾಡಿ ಮತ್ತು ಪ್ರಕಾಶಮಾನವಾದ ಭವಿಷ್ಯದತ್ತ ನಿಮ್ಮ ಮೊದಲ ಹೆಜ್ಜೆಯನ್ನು ಇರಿಸಿ.

ಬೆನ್ನು, ಕುತ್ತಿಗೆ, ಭುಜ, ಕಾಲು, ಪಾದ, ಕೆಳಬೆನ್ನು, ಕ್ಯಾನ್ಸರ್ ಮತ್ತಿತರ ನೋವಿಗೂ ಕೂಡ ಚಿಕಿತ್ಸೆಗಳು ಇಲ್ಲಿ ಲಭ್ಯವಿವೆ

ಅಲಿವಿಯೇಟ್
ನೋವು ನಿವಾರಣಾ ಕೇಂದ್ರಗಳು

ಬೆಂಗಳೂರಿನಲ್ಲಿ ಇವರ ಕ್ಲಿನಿಕ್ಸ್ ಇಲ್ಲಿವೆ
ಪೀಣ್ಯಾ ದಾಸರಹಳ್ಳಿ | ಸದಾಶಿವನಗರ | ಜಯನಗರ | ಇಂದಿರಾನಗರ | ವೈಟ್‌ಫೀಲ್ಡ್

CALL NOW 81475 50855 080 23614888

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ನಗರಾಭಿವೃದ್ಧಿ ಇಲಾಖೆ
ಪೌರಾಡಳಿತ ನಿರ್ದೇಶನಾಲಯ

ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ರಾಜ್ಯದ ಎಲ್ಲಾ ಮಹಾನಗರ ಪಾಲಿಕೆ ಮತ್ತು ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ದಿನಾಂಕ 10.05.2025 ರವರೆಗೆ

ಇ-ಖಾತಾ ಅಭಿಯಾನ

ಇ-ಖಾತಾ ಪಡೆಯಲು ಸರಳ ವಿಧಾನಗಳು

1. ಸರ್ಕಾರದಿಂದ ವಿತರಿಸಿದ ಯಾವುದೇ ಬಗೆಯ ಗುರುತಿನ ಚೀಟಿ
2. ಆಸ್ತಿ ಮಾಲೀಕರ ಫೋಟೊ
3. ಮಾಲೀಕತ್ವ ದೃಢೀಕರಿಸುವ ನೋಂದಾಯಿತ ದಾಖಲೆಗಳು
4. ಸ್ವತ್ತಿನ ಋಣಭಾರ ಪ್ರಮಾಣ ಪತ್ರ
5. ಸ್ವತ್ತಿನ ಛಾಯಾಚಿತ್ರ
6. ಆಸ್ತಿ ತೆರಿಗೆ ಪಾವತಿಸಿದ ರಶೀದಿ

ಶ್ರೀ ಬಿ.ಎಸ್. ಸುರೇಶ, ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು ಹಾಗೂ ಶ್ರೀ ರಹೀಂ ಖಾನ್, ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರು ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿರುವುದು.

ಇ-ಖಾತೆ ಪಡೆಯಲು ಯಾವುದಾದರೂ ಸಮಸ್ಯೆ ಇದ್ದಲ್ಲಿ ಸಂಪರ್ಕಿಸಿ :
ಸಹಾಯವಾಣಿ : 080-23003100
ವಾಟ್ಸಾಪ್ : 6366674001

ಈ ಮೇಲಿನ ದಾಖಲೆಗಳೊಂದಿಗೆ ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆಗಳಿಗೆ ಭೇಟಿ ನೀಡಿ ಇ-ಖಾತೆ ದಾಖಲೆಯನ್ನು ಪಡೆದುಕೊಳ್ಳಬಹುದು. ಈಗಾಗಲೇ ಇರುವ ಕೈಬರಹ ಖಾತೆಗೆ ಇ-ಖಾತಾ ಪಡೆಯಿರಿ.

PARLIAMENT OF INDIA
"ನಮ್ಮ ವೈವಿಧ್ಯಮಯ ಸಂಸ್ಕೃತಿಯ ಶ್ರೇಷ್ಠ ಪರಂಪರೆಯನ್ನು ಗೌರವಿಸುವುದು ಮತ್ತು ರಕ್ಷಿಸುವುದು" – ಇದು ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಕರ್ತವ್ಯ.

ನುಡಿದಂತೆ ನಡೆದಿದ್ದೇವೆ...
ಶಕ್ತಿ – ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ
ಗೃಹ ಜ್ಯೋತಿ – ಪ್ರತಿ ಮನೆಗೆ 200 ಯೂನಿಟ್‌ವರೆಗೆ ವಿದ್ಯುತ್ ಉಚಿತ
ಅನ್ನಭಾಗ್ಯ – ಬಡವರಿಗೆ ಪ್ರತಿ ತಿಂಗಳು 10 kg
ಗೃಹಲಕ್ಷ್ಮಿ – ₹2000
ಯುವನಿಧಿ – ಪ್ರತಿ ತಿಂಗಳು ನಿರುದ್ಯೋಗ ಭತ್ಯೆ ₹3000 | ₹1500



ಐತಿಹಾಸಿಕ ಆಹಾರ ಮಾರುಕಟ್ಟೆಗೆ ಮೂಲಸೌಕರ್ಯ • ಕೊನೆಯ ಹಂತ ತಲುಪಿದ ಕಾಮಗಾರಿಗಳು

ವಿ.ವಿ. ಪುರ ತಿಂಡಿ ಬೀದಿಗೆ ಹೊಸ ಸ್ವರೂಪ

• ಖಲೀಲಅಹ್ಮದ ಶೇಖ

ಬೆಂಗಳೂರು: 'ಸಿಲಿಕಾನ್ ಸಿಟಿ'ಯ ತಿಂಡಿ ಪ್ರಿಯರ ಅಚ್ಚುಮೆಚ್ಚಿನ ಪ್ರದೇಶಗಳಲ್ಲಿ ಒಂದಾಗಿರುವ ವಿಶ್ವೇಶ್ವರಪುರ ತಿಂಡಿ ಬೀದಿಗೆ ಆಧುನಿಕ ಸ್ಪರ್ಶ ನೀಡಲಾಗುತ್ತಿದೆ. ದಶಕಗಳ ಇತಿಹಾಸವಿರುವ ಈ ಆಹಾರ ತಾಣದಲ್ಲಿ ವ್ಯಾಪಾರಿಗಳು ಮತ್ತು ಗ್ರಾಹಕರ ಅನುಕೂಲಕ್ಕೆ ಬೇಕಾದ ಹಲವು ಮೂಲಸೌಕರ್ಯಗಳ ಅಭಿವೃದ್ಧಿ ಭರದಿಂದ ಸಾಗಿದೆ. ಎಲ್ಲ ಕೆಲಸಗಳೂ ಪೂರ್ಣಗೊಂಡರೆ ತಿಂಡಿ ಬೀದಿ ನವ ಸ್ವರೂಪದೊಂದಿಗೆ ಕಂಗೊಳಿಸಲಿದೆ.

ಇಲ್ಲಿ ಪ್ರತಿನಿತ್ಯ ಜಾತ್ರೆಯ ವಾತಾವರಣ ನಿರ್ಮಾಣವಾಗುತ್ತದೆ. ಹಲವು ಬಗೆಯ ದೋಸೆಗಳು, ಚೈನೀಸ್ ಕುರುಕಲು ತಿನಿಸುಗಳು, ಬಗೆ ಬಗೆಯ ಪಾನಿಪೂರಿ, ಮಂಚೂರಿಯನ್ ರೋಲ್, ಪಾವ್ ಬಾಜಿ, ಮಿರ್ಚಿ ಬಜ್ಜಿ ಹೀಗೆ ನೂರಾರು ತಿಂಡಿಗಳು ಒಂದೇ ಸೂರಿನಡಿಯಲ್ಲಿ ಸಿಗುವ ತಾಣ.

ವಿ.ವಿ.ಪುರದ ಸಜ್ಜನ್ ರಾವ್ ವೃತ್ತದಿಂದ ಮಿನರ್ವ ವೃತ್ತದ ಮಾರ್ಗದಲ್ಲಿ ಎಲ್ಲಿ ನೋಡಿದರೂ ತಿಂಡಿ–ತಿನಿಸುಗಳು ರಾರಾಜಿಸುತ್ತವೆ. ಇಲ್ಲಿನ ಬಹುತೇಕ ಅಂಗಡಿ, ಬೇಕರಿಗಳು ನೂರಾರು ವರ್ಷಗಳ ಇತಿಹಾಸ ಹೊಂದಿದ್ದು, ಶುಚಿ–ರುಚಿಯಾದ ತಿಂಡಿಗೆ ಹೆಸರುವಾಸಿಯಾಗಿವೆ. ದೇಶ–ವಿದೇಶಗಳಿಂದ ಜನ ಇಲ್ಲಿನ ತಿಂಡಿ ಸವಿಯಲು ಬರುತ್ತಾರೆ.

ಸಜ್ಜನ್ ರಾವ್ ವೃತ್ತದ ಬಳಿ ಇರುವ 120 ಮೀಟರ್ ಉದ್ದದ ವಿ.ವಿ. ಪುರ ತಿಂಡಿ ಬೀದಿಗೆ ನೂರಾರು ವರ್ಷಗಳ ಇತಿಹಾಸವಿದೆ. ಪ್ರತಿನಿತ್ಯ ಸಾವಿರಾರು ಮಂದಿ ತಿಂಡಿಪ್ರೋತರು ಭೇಟಿ ನೀಡುವ ಈ ಬೀದಿಗೆ ಬಿಬಿಎಂಪಿ ಮೂಲಸೌಕರ್ಯದ ಜೊತೆಗೆ ಆಧುನಿಕ ಸ್ಪರ್ಶ ನೀಡಲು ಯೋಜನೆ ರೂಪಿಸಿದೆ. ಸಾರ್ವಜನಿಕರು ಓಡಾಡಲು ಅನುಕೂಲವಾಗುವ ಉದ್ದೇಶದಿಂದ 7 ಮೀಟರ್ ಇದ್ದ ರಸ್ತೆಯ ಅಗಲವನ್ನು 5 ಮೀಟರ್‌ಗೆ ಕಿರಿದಾಗಿಸಿದೆ.

ವಿ.ವಿ. ಪುರ ತಿಂಡಿ ಬೀದಿಯಲ್ಲಿರುವ ಮಳಿಗೆಯೊಂದರಲ್ಲಿ ಗ್ರಾಹಕರು ತಿಂಡಿ ಖರೀದಿಸಿದರು

ಪ್ರಜಾವಾಣಿ ಚಿತ್ರಗಳು: ಕಿಶೋರ್ ಕುಮಾರ್ ಬೋಳಾರ್

ಇದರಿಂದ 3.5 ಮೀಟರ್ ಅಗಲದ ಪಾದಚಾರಿ ಮಾರ್ಗ ನಿರ್ಮಿಸಲಾಗಿದ್ದು, ತಿಂಡಿ, ತಿನಿಸು ಸವಿಯಲು ಬರುವ ಸಾರ್ವಜನಿಕರು ನಿರಾತಂಕವಾಗಿ ಓಡಾಡಲು ಅನುಕೂಲವಾಗಿದೆ.

ತಿಂಡಿ ಬೀದಿ ಮಾರ್ಗದಲ್ಲಿ ಒಟ್ಟು 40 ಮಳಿಗೆಗಳಿದ್ದು, ಪಾದಚಾರಿ ಮಾರ್ಗದಲ್ಲೂ ಪಾನಿಪೂರಿ ಸೇರಿದಂತೆ ವಿವಿಧ ಸಣ್ಣ ಪುಟ್ಟ ಗೂಡಂಗಡಿಗಳು ಇವೆ. ತಿಂಡಿ ಬೀದಿಗೆ ಮೂಲಸೌಕರ್ಯ ಕಲ್ಪಿಸಲು 2022ರಲ್ಲಿ ₹6 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಆರಂಭಿಸಲಾಗಿತ್ತು. ಬಹುತೇಕ ಕಾಮಗಾರಿಗಳು ಕೊನೆಯ ಹಂತ ತಲುಪಿವೆ. ಈಗಾಗಲೇ ರಸ್ತೆ ಮತ್ತು ಪಾದಚಾರಿ ಮಾರ್ಗ ನಿರ್ಮಿಸಲಾಗಿದ್ದು, ಅಲ್ಲಲ್ಲಿ ಆಸನಗಳ ವ್ಯವಸ್ಥೆ, ಕಲ್ಲಿನ ಬೆಂಚ್‌ಗಳನ್ನು ನಿರ್ಮಿಸಲಾಗಿದೆ. ರಸ್ತೆಯ ಎರಡೂ ಬದಿಯಲ್ಲಿ ಆರ್‌.ಸಿ.ಸಿ ಕಾಲುವೆ, ಎರಡೂ ಕಡೆ ಒಳಚರಂಡಿ ಪೈಪ್‌ಲೈನ್ ವ್ಯವಸ್ಥೆ ಕಲ್ಪಿಸಲಾಗಿದೆ. ಅಲಂಕಾರಿಕ ಸಸಿಗಳನ್ನು ನೆಡಲಾಗಿದೆ.

ಉಳಿದಿರುವ ಕಾಮಗಾರಿಗಳು: ಹಸಿ ಕಸ/ಒಣ ಕಸವನ್ನು ಪ್ರತ್ಯೇಕವಾಗಿ ಹಾಕಲು ಕಸದ ಬುಟ್ಟಿಗಳನ್ನು ಅಳವಡಿಸಬೇಕಿದೆ. ಎಲ್ಲ ತಿಂಡಿ ಮಳಿಗೆಗಳಿಗೆ ಏಕರೂಪದ ನೆರಳಿನ ವ್ಯವಸ್ಥೆ ಕಲ್ಪಿಸುವ ಕೆಲಸವೂ ಬಾಕಿ ಉಳಿದಿದೆ.

ವಿ.ವಿ. ಪುರ ತಿಂಡಿ ಬೀದಿಯ ಮಳಿಗೆಗಳು

ಪ್ರತಿದಿನ ಖಾದ್ಯಗಳ ಮೇಳ

'ಇಲ್ಲಿ ಉತ್ತರ ಕರ್ನಾಟಕ ರೊಟ್ಟಿ ಊಟ, ಚೈನೀಸ್ ಫಾಸ್ಟ್‌ಫುಡ್, ರಾಜಸ್ಥಾನಿ ಪರೋಟ, ಬಗೆ ಬಗೆಯ ಪಾನಿಪೂರಿ, 100ಕ್ಕೂ ಹೆಚ್ಚು ಬಗೆಯ ದೋಸೆಗಳು, ಇಡ್ಲಿ, ವಡಾ, ಬೋಂಡಾ–ಬಜ್ಜಿ, ಪನ್ನೀರಿನ ಖಾದ್ಯಗಳು, ಗೋಬಿ ಮಂಚೂರಿ, ಪಲಾವ್, ಉಪ್ಪಿಟ್ಟು, ಬಿಸಿಬೇಳೆ ಬಾತ್ ಸೇರಿದಂತೆ ಹಲವಾರು ಖಾದ್ಯಗಳ ಮೇಳ ಪ್ರತಿದಿನ ನಡೆಯುತ್ತದೆ. ಇಲ್ಲಿನ ತಿಂಡಿಗಳಿಗೆ ಮನಸೋಲದವರೇ ಇಲ್ಲ. ಈ ವೈವಿಧ್ಯಮಯ ತಿಂಡಿಗಳನ್ನು ಸವಿಯಲು ನಿತ್ಯವೂ ಸಾವಿರಾರು ಮಂದಿ ಸಂಜೆ 4 ಗಂಟೆಯ ನಂತರ ಬರುತ್ತಾರೆ. ಇದು ಬೆಂಗಳೂರಿನ ಐತಿಹಾಸಿಕ ತಿಂಡಿ ಬೀದಿಯಾಗಿ ಪ್ರಸಿದ್ಧಿ ಪಡೆದುಕೊಂಡಿದೆ' ಎಂದು ವ್ಯಾಪಾರಿ ಸುಹಾಸ್ ಮಾಹಿತಿ ನೀಡಿದರು.

'ಬಿಬಿಎಂಪಿ ಈ ಭಾಗದಲ್ಲಿ ಕೈಗೊಂಡ ಅಭಿವೃದ್ಧಿ ಕಾಮಗಾರಿಗಳನ್ನು ಕೂಡಲೇ ಪೂರ್ಣಗೊಳಿಸಿದರೆ, ನಮ್ಮಂತಹ ವ್ಯಾಪಾರಿಗಳಿಗೆ ಹಾಗೂ ಇಲ್ಲಿಗೆ ಬರುವ ತಿಂಡಿ ಪ್ರಿಯರಿಗೆ ಅನುಕೂಲವಾಗಲಿದೆ' ಎಂದು ತಿಳಿಸಿದರು.

ರಸ್ತೆ, ಪಾದಚಾರಿ ಮಾರ್ಗ ಅಭಿವೃದ್ಧಿಪಡಿಸಿ, ಬೀದಿ ದೀಪಗಳನ್ನು ಅಳವಡಿಸಲಾಗಿದೆ. ಇದರಿಂದ ತಿಂಡಿ ಬೀದಿಗೆ ಭೇಟಿ ನೀಡುವವರ ಸಂಖ್ಯೆ ಹೆಚ್ಚಾಗಿದೆ. ವಾಹನ ನಿಲುಗಡೆ ಮಾಡಲು ಅವಕಾಶ ಕಲ್ಪಿಸಬೇಕು

ನಾಗರಾಜ್, ಅಂಗಡಿ ಮಾಲೀಕ

ನಾನು ತಿಂಡಿ ಬೀದಿಗೆ ಹಲವಾರು ಬಾರಿ ಭೇಟಿ ನೀಡಿದ್ದೇನೆ. ಈಗ ಈ ಬೀದಿಯ ಸ್ವರೂಪ ಬದಲಾಗಿದೆ. ಕಡಲೆಕಾಯಿ ಪರಿಷೆ ಹಾಗೂ ಅವರೇಕಾಯಿ ಮೇಳದ ಸಂದರ್ಭದಲ್ಲಿ ಇಲ್ಲಿಗೆ ಸಾವಿರಾರು ಜನ ಭೇಟಿ ನೀಡುತ್ತಾರೆ. ಇಲ್ಲಿ ತಿಂಡಿಗಳು ಗುಣಮಟ್ಟದಿಂದ ಕೂಡಿದ್ದು, ಕಡಿಮೆ ಬೆಲೆಗೆ ಸಿಗುತ್ತವೆ

ಸತ್ಯಾ, ಗ್ರಾಹಕಿ

ನಾವು ಕಲಬುರಗಿಯವರು. ವಿ.ವಿ. ಪುರ ತಿಂಡಿ ಬೀದಿಯಲ್ಲಿ ಉತ್ತರ ಕರ್ನಾಟಕ ಸೇರಿದಂತೆ ನಾಡಿನ ಎಲ್ಲ ಭಾಗದಲ್ಲಿ ದೊರೆಯುವ ತಿಂಡಿಗಳು ಸಿಗುತ್ತವೆ. ಇಲ್ಲಿನ ತಿಂಡಿಯ ಗುಣಮಟ್ಟ ಹಾಗೂ ಬೆಲೆಯೂ ಕಡಿಮೆ ಇದೆ. ಇಲ್ಲಿನ ತಿಂಡಿ ಮಳಿಗೆಗಳು ರುಚಿ ಮತ್ತು ಶುಚಿತ್ವಕ್ಕೆ ಆದ್ಯತೆ ನೀಡುತ್ತವೆ

ಶೈಲಜಾ, ಶ್ರೀರಾಂಪುರ

ತಿಂಡಿ ಸವಿಯುವುದಕ್ಕೆ ನಾವು ವಿ.ವಿ. ಪುರ ತಿಂಡಿ ಬೀದಿಗೆ ಬರುತ್ತಿದ್ದೇವೆ. ಈ ಹಿಂದೆ ಇಲ್ಲಿನ ಪಾದಚಾರಿ ಮಾರ್ಗ ಚಿಕ್ಕದಾಗಿತ್ತು. ಈಗ ವಿಸ್ತಾರ ಮಾಡಿರುವುದರಿಂದ, ಕಲ್ಲಿನ ಬೆಂಚ್‌ಗಳನ್ನು ನಿರ್ಮಿಸಿರುವುದರಿಂದ ಇಲ್ಲಿಗೆ ಬರುವ ಸಾರ್ವಜನಿಕರು ಆರಾಮದಿಂದ ತಿಂಡಿ ಸವಿಯಲು ಅನುಕೂಲವಾಗಿದೆ

ಭಾವನಾ, ಗ್ರಾಹಕಿ

ಭಾರತ ಸರ್ಕಾರ
ಬಾಹ್ಯಾಕಾಶ ಇಲಾಖೆ
ಮಾನವ ಬಾಹ್ಯಾಕಾಶ ಹಾರಾಟ ಕೇಂದ್ರ (ಹೆಚ್‌ಎಸ್‌ಎಫ್‌ಸಿ)
ನಿರ್ಮಾಣ ಮತ್ತು ನಿರ್ವಹಣೆ ಸಮೂಹ (ಸಿಎಂಜಿ), ಅಂತರಿಕ್ಷ ಭವನ,
ಬೆಂಗಳೂರು – 560 094. ದೂ: (080) 22172614/2613

ಎನ್‌ಐಟಿ ಸಂಖ್ಯೆ: ಹೆಚ್‌ಎಸ್‌ಎಫ್‌ಸಿ/ಸಿಎಂಜಿ/ಎಂಎಂ/ಸಿ/136/2024–25 ದಿನಾಂಕ: 17.02.2025

ಇ–ಟೆಂಡರ್ ಪ್ರಕಟಣೆ

ಭಾರತದ ರಾಷ್ಟ್ರಪತಿಯವರ ಪರವಾಗಿ, ಈ ಕೆಳಕಂಡ ಕಾಮಗಾರಿಗಳಿಗೆ ಇ–ಟೆಂಡರಿಂಗ್ ವಿಧಾನದ ಮೂಲಕ ಆನ್‌ಲೈನ್ ಐಟಂದರದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕಾಮಗಾರಿ ಹೆಸರು	ಬೆಂಗಳೂರು (ಹೆಚ್‌ಎಸ್‌ಎಫ್‌ಸಿ) ದೇವನಹಳ್ಳಿ ಭೂಪ್ರದೇಶದ (27 ಎಕರೆ) ಹೊರವಲಯದಲ್ಲಿ ವಾಹನ ಸಂಚಾರಕ್ಕೆ ಸಬ್–ಬೇಸ್ ರಸ್ತೆ ಒದಗಿಸುವುದು
ಟೆಂಡರ್‌ಗಿಟ್ಟ ಅಂದಾಜು ಮೊತ್ತ	ರೂ.15.65 ಲಕ್ಷಗಳು
ಪೂರ್ಣಗೊಳಿಸುವ ಕಾಲಾವಧಿ	3 ತಿಂಗಳು
ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಅವಧಿ	18.02.2025, 11.00 ಗಂಟೆ ಯಿಂದ 02.03.2025, 23.30 ಗಂಟೆ ವರೆಗೆ
ಬಿಡ್ ಸ್ಪಷ್ಟೀಕರಣ	18.02.2025, 11.30 ಗಂಟೆ ಯಿಂದ 03.03.2025, 10.30 ಗಂಟೆ ವರೆಗೆ
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	04.03.2025, 11.00 ಗಂಟೆ ವರೆಗೆ
ಟೆಂಡರ್ ತೆರೆಯುವ ದಿನಾಂಕ	04.03.2025, 11.30 ಗಂಟೆ
ಇಎಂಡಿ ಮೊತ್ತ	ರೂ. 31,300/-

ಟೆಂಡರ್ ವಿಜಾರ್ಡ್‌ನಲ್ಲಿ ನೋಂದಣಿ ಮಾಡಿಸಿ ಮತ್ತು ಟೆಂಡರ್ ಪ್ರಕ್ರಿಯಾ ಶುಲ್ಕ ಪಾವತಿ ಮಾಡಿ ಟೆಂಡರ್ ದಸ್ತಾವೇಜುಗಳನ್ನು ವೆಬ್‌ಸೈಟ್ www.tenderwizard.com/ISRO ಇಲ್ಲಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ವೆಂಡರ್ ನೋಂದಣಿಯ ಕ್ರಮಾವಳಿಗಳನ್ನು ಮೇಲೆ ತಿಳಿಸಿರುವ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

ಆಸಕ್ತಿಯುಳ್ಳ ಟೆಂಡರುದಾರರು ವೆಬ್‌ಸೈಟ್ www.isro.gov.in ಇಲ್ಲಿ ವಿವರವಾದ ಟೆಂಡರ್ ಆಹ್ವಾನ ಪ್ರಕಟಣೆಯನ್ನು (ಎನ್‌ಐಟಿ) ಪರಿವೀಕ್ಷಿಸಬಹುದು ಮತ್ತು ಹೆಚ್ಚಿನ ವಿವರಗಳಿಗಾಗಿ ಮತ್ತು ಟೆಂಡರ್ ದಸ್ತಾವೇಜುಗಳ ಖರೀದಿಗಾಗಿ www.tenderwizard.com/ISRO ಇಲ್ಲಿಗೆ ಭೇಟಿನೀಡಿ.

ಸಹಿ/- ಮುಖ್ಯಸ್ಥರು, ಸಿಎಂಡಿ, ಸಿಎಂಜಿ, ಹೆಚ್‌ಎಸ್‌ಎಫ್‌ಸಿ

ಸುಧಾ ಮಯೂರ ಓದಿರಿ

CORRIGENDUM

The General Public are hereby Notified that the Public Notice dated 14.02.2025, published in Deccan Herald and Prajavani Edition dated 15.02.2025, the **Sale Deed dated 29.05.1955 at serial No.1 and 2, shall after rectification be read as 29.05.1995.**

N. Jaiprakash Rao, Veena Rao,
Ashok Kumar N
JAYPEE ASSOCIATES LAW FIRM
38, "KRISHNA" 1st Cross, Malleshwaram,
Bengaluru-560 003.
Ph: 23560365, 23468742, 23565286
Email: contact.jaypee1234@gmail.com
Place: Bangalore Date: 17.02.2025

ನಗರದಲ್ಲಿ ಇಂದು

'ವ್ಯಸನ ಮುಕ್ತ ಕಾರ್ಯಾಗಾರ'ದ ಉದ್ಘಾಟನೆ: ಲಿಂಗರಾಜ ಗಾಂಧಿ, ಉಪಸ್ಥಿತಿ: ಜವರೇಗೌಡ ಟಿ., ವಿಕ್ಟರ್ ಪೌಲ್, ಸುಪರ್ಣಾ ಮಜೂಂದಾರ್ ಕರ್, ಅಧ್ಯಕ್ಷತೆ: ರಿತಿಕಾ ಸಿನ್ಹಾ, ಆಯೋಜನೆ: ಸಮಾಜ ಕಾರ್ಯ ವಿಭಾಗ, ಬೆಂಗಳೂರು ನಗರ ವಿಶ್ವವಿದ್ಯಾಲಯ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜಿನ ಆವರಣ, ಬೆಳಿಗ್ಗೆ 10.30

16ನೇ ಬುಡಕಟ್ಟು ಯುವ ವಿನಿಮಯ ಕಾರ್ಯಕ್ರಮದ ಉದ್ಘಾಟನೆ: ಜಿ.ಸಿ. ಚಂದ್ರಶೇಖರ್, ಅತಿಥಿಗಳು: ಅಶೋಕ್ ಕುಮಾರ್ ದಾಶ್, ರಂದೀಪ್ ಡಿ., ಪದ್ಮಾ ಕುಮಾರ್, ಸುರೇಶ್ ಪಿ.ಎನ್., ಸುಭಾಷ್ ಚಂದ್ರ ಕುಂಟಿಯಾ, ಸ್ಥಳ: ರೀಜನಲ್ ಇನ್‌ಸ್ಟಿಟ್ಯೂಟ್ ಆಫ್ ಕೋ–ಆಪರೇಟಿವ್ ಮ್ಯಾನೇಜ್‌ಮೆಂಟ್, ಪದ್ಮನಾಭನಗರ, ಸಂಜೆ 4

ಶಿವರಾಜ ಬ್ಯಾಡರಹಳ್ಳಿ ಅವರ 'ಒಂದು ತಲೆ ಚವುರದ ಕಥೆ' ಪುಸ್ತಕ ಬಿಡುಗಡೆ: ಬಸವರಾಜ ಸಿ. ಕಲ್ಗುಡಿ, ಅಧ್ಯಕ್ಷತೆ: ಎಸ್‌.ಜಿ. ಸಿದ್ಧರಾಮಯ್ಯ, ಪುಸ್ತಕದ ಕುರಿತು: ನೆಲ್ಲುಕುಂಟೆ ವೆಂಕಟೇಶ್, ಬಿ.ಯು. ಸುಮಾ, ಉಪಸ್ಥಿತಿ: ಎಂ. ತಿಮ್ಮಯ್ಯ, ಜಿ.ವಿ. ಧನಂಜಯ, ಆಯೋಜನೆ: ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟ, ಸ್ಥಳ: ಕುವೆಂಪು ಸಭಾಂಗಣ, ಸಿದ್ಧರಾಮಯ್ಯ ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5



'ಗೋಪಾಲಕೃಷ್ಣ ಅಡಿಗ' ಕವಿಗಳ ಕವಿಗೆ ನುಡಿನಮನ: ಜಯರಾಮ ಅಡಿಗ, ಎಲ್. ವೆಂಕಟಪ್ಪ, ಅಧ್ಯಕ್ಷತೆ: ಶ್ರೀರಾಮೇಗೌಡ, ಆಯೋಜನೆ ಮತ್ತು ಸ್ಥಳ: ಉದಯಭಾನು ಕಲಾಸಂಘ, ಕೆಂಪೇಗೌಡನಗರ, ಸಂಜೆ 6

ತ್ಯಾಗರಾಜ ಕೋ ಆಪರೇಟಿವ್ ಬ್ಯಾಂಕ್‌ನಿಂದ ಸಾಲಮೇಳ

ಇ.ವಿ ವಾಹನಗಳ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ಕೃಷ್ಟವಾಗಿ ಕಾರ್ಯಕ್ರಮ ರೂಪಿಸಿಕೊಂಡು ಇತರೆ ಬ್ಯಾಂಕ್‌ಗಳಿಗಿಂತ ತ್ಯಾಗರಾಜ ಕೋ ಆಪರೇಟಿವ್ ಬ್ಯಾಂಕ್ ಭಿನ್ನವಾಗಿ ನಿಂತು ಮಾದರಿಯಾಗಿ ಕಾರ್ಯ ನಿರ್ವಹಿಸುತ್ತಿದೆ ಎಂದು ಶಾಸಕ ಎಲ್‌.ಎ. ರವಿ ಸುಬ್ರಹ್ಮಣ್ಯ ಶ್ಲಾಘಿಸಿದರು.

ಶ್ರೀ ತ್ಯಾಗರಾಜ ಕೋ ಆಪರೇಟಿವ್ ಬ್ಯಾಂಕ್ ವಜ್ರ ಮಹೋತ್ಸವ ನಿಮಿತ್ತ ಶ್ರೀನಿವಾಸನಗರದಲ್ಲಿ ಭಾನುವಾರ ಆಯೋಜಿಸಿದ್ದ ವಿದ್ಯುತ್‌ಚಾಲಿತ ವಾಹನಗಳ ಪ್ರದರ್ಶನ ಮತ್ತು ಬೃಹತ್ ಸಾಲ ಮೇಳ ಉದ್ಘಾಟಿಸಿ ಅವರು ಮಾತನಾಡಿದರು.

ಬ್ಯಾಂಕ್ ಅಧ್ಯಕ್ಷ ಎಂ.ಆರ್‌.ವೆಂಕಟೇಶ್ ಮಾತನಾಡಿ, 'ಪ್ರಮುಖ 11 ವಿತರಕರು ನಮ್ಮೊಂದಿಗೆ ಕೈಜೋಡಿಸಿದ್ದಾರೆ. ಕೇಂದ್ರ ಸರ್ಕಾರ ವಿದ್ಯುತ್‌ಚಾಲಿತ ವಾಹನ ಖರೀದಿಗೆ ನೀಡುವ ಸಹಾಯಧನ ಮುಂದುವರಿಸಬೇಕು. ಬಿಬಿಎಂಪಿ, ಬಿಎಂಟಿಸಿ, ಕೆಎಸ್ ಆರ್‌ಟಿಸಿ ಜಾಗದಲ್ಲಿ ಹೆಚ್ಚು ಚಾರ್ಜಿಂಗ್ ಸ್ಟೇಷನ್ ಸ್ಥಾಪಿಸಲು ಸರ್ಕಾರ ಮುಂದಾಗಬೇಕು' ಎಂದು ಆಗ್ರಹಿಸಿದರು.

ಸಂಸದ ತೇಜಸ್ವಿ ಸೂರ್ಯ ಮಾತನಾಡಿ, 'ವಿದ್ಯುತ್ ಚಾಲಿತ ವಾಹನಗಳ ಬಳಕೆ ಹೆಚ್ಚಳವಾಗಲಿದೆ. ಪೆಟ್ರೋಲ್, ಡೀಸೆಲ್ ಚಾಲಿತ ವಾಹನಗಳು ವಿದ್ಯುತ್ ಚಾಲಿತ ವಾಹನಕ್ಕೆ ಪರಿವರ್ತನೆಗೊಳ್ಳಬೇಕು. ಇವಿ ಖರೀದಿಗೆ ಮತ್ತು ಸೌರಶಕ್ತಿ ಅಳವಡಿಕೆಗೆ ಕೇಂದ್ರ ನೀಡುತ್ತಿರುವ ಸಹಾಯಧನವನ್ನು ಸಾರ್ವಜನಿಕರ ಸದ್ಬಳಕೆ ಮಾಡಿಕೊಳ್ಳಬೇಕು' ಎಂದು ಹೇಳಿದರು.

ನಗರದಲ್ಲಿ ಭಾನುವಾರ 'ಶ್ರೀ ತ್ಯಾಗರಾಜ ಕೋ–ಆಪರೇಟಿವ್ ಬ್ಯಾಂಕ್' ಆಯೋಜಿಸಿದ್ದ ವಿದ್ಯುತ್ ಚಾಲಿತ ವಾಹನಗಳ ಪ್ರದರ್ಶನ ಮತ್ತು ಬೃಹತ್ ಸಾಲ ಮೇಳಕ್ಕೆ ಶಾಸಕ ಎಲ್‌.ಎ. ರವಿ ಸುಬ್ರಮಣ್ಯ ಚಾಲನೆ ನೀಡಿದರು. ಬ್ಯಾಂಕ್ ಅಧ್ಯಕ್ಷ ಎಂ.ಆರ್‌. ವೆಂಕಟೇಶ್, ಬಿಬಿಎಂಪಿ ಮಾಜಿ ಸದಸ್ಯ ಸಂಗಾತಿ ವೆಂಕಟೇಶ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಬ್ಯಾಂಕಿನ ಉಪಾಧ್ಯಕ್ಷ ರಾಮೇಗೌಡ, ಬಿಬಿಎಂಪಿ ಮಾಜಿ ಸದಸ್ಯ ಸಂಗಾತಿ ವೆಂಕಟೇಶ್, ಜಿಲ್ಲಾ ಸಹಕಾರಿ ಯೂನಿಯನ್ ಅಧ್ಯಕ್ಷ ಜೆ. ಮಂಜುನಾಥ್, 'ವಿಜಯವಾಣಿ' ಪತ್ರಿಕೆ ಸಂಪಾದಕ ಕೆ.ಎನ್ . ಚನ್ನೇಗೌಡ, ಬ್ಯಾಂಕಿನ ನಿರ್ದೇಶಕರು, ಆಡಳಿತ ಮಂಡಳಿ ಸದಸ್ಯರು ಭಾಗವಹಿಸಿದ್ದರು.

ಕರ್ನಾಟಕ ಸರ್ಕಾರ
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ
ಆಯುಕ್ತರ ಕಛೇರಿ, ಕೆ.ಆರ್. ವೃತ್ತ, ಬೆಂಗಳೂರು–560001,
ದೂರವಾಣಿ ಸಂಖ್ಯೆ : 91–080–22212408, ಫ್ಯಾಕ್ಸ್ ನಂ. : 91–080–22277528

ಸಂಖ್ಯೆ: SSLR-12026/22/2025-SSLR ದಿನಾಂಕ : 17.02.2025

ಪ್ರಕಟಣೆ

ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವಾಲಯದ ಭೂ ಸಂಪನ್ಮೂಲ ಇಲಾಖೆಯು ಜಾರಿಗೆ ತಂದಿದ್ದ "DILRMP" Digital India Land Records Modernization Programme " ಯೋಜನೆಯನ್ನು ನಗರ/ಪಟ್ಟಣ ಪ್ರದೇಶಗಳಿಗೂ ವಿಸ್ತರಿಸಿ, "NAKSHA" National geospatial Knowledge-based land Survey of urban Habitations " ಎಂಬ ಯೋಜನೆಯನ್ನು ದಿನಾಂಕ : 25.09.2024 ರಂದು ಜಾರಿಗೆ ತಂದಿರುತ್ತದೆ.

ಈ ಯೋಜನೆಗಾಗಿ ದೇಶಾದ್ಯಂತ 152 ನಗರ/ಪಟ್ಟಣ ಪ್ರದೇಶಗಳನ್ನು ಪ್ರಾಯೋಗಿಕವಾಗಿ ಆಯ್ಕೆ ಮಾಡಿಕೊಂಡಿದ್ದು, ಈ ಪೈಕಿ ಕರ್ನಾಟಕದಲ್ಲಿ 10 ನಗರ/ಪಟ್ಟಣಗಳಾದ ಕೋಲಾರ, ಸಿರುಗುಪ್ಪ, ಭಾಗ್ಯನಗರ, ಚಿಕ್ಕಮಗಳೂರು, ಬೋಗಾದಿ, ಆನವಟ್ಟಿ, ಬೋರಗಾಂವ್, ಗೋಕಾಕ, ಬಸವಕಲ್ಯಾಣ ಮತ್ತು ಬಾಗಲಕೋಟೆ ಗಳಲ್ಲಿ ಈ ಯೋಜನೆಯನ್ನು ಕಂದಾಯ ಇಲಾಖೆ, ಭೂಮಾಪನ, ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ ಹಾಗೂ ನಗರಾಭಿವೃದ್ಧಿ ಇಲಾಖೆ /ಪೌರಡಾಳಿತ ಇಲಾಖೆ ಸಹಯೋಗದೊಂದಿಗೆ ಜಾರಿಗೆ ತರಲಾಗುತ್ತಿದೆ. ಈಗಾಗಲೇ ಕೋಲಾರ, ಭಾಗ್ಯನಗರ ಮತ್ತು ಸಿರುಗುಪ್ಪ ನಗರ/ಪಟ್ಟಣ ಗಳಲ್ಲಿ ಪ್ರಥಮ ಹಂತದ ಕೆಲಸವನ್ನು ಪ್ರಾರಂಭಿಸಲಾಗಿದೆ.

ನಕ್ಷಾ ಯೋಜನೆಯನ್ನು ಡ್ರೋಣ್, ರೋವರ್ಸ್ ಇತ್ಯಾದಿ ಆಧುನಿಕ ಉಪಕರಣಗಳನ್ನು ಬಳಸಿಕೊಂಡು ನಿಖರತೆಗೆ ಮಹತ್ವ ನೀಡಿ ನಿರ್ವಹಿಸಲಾಗುವುದು. ಈ ಯೋಜನೆಗೆ "ಸರ್ವೆ ಆಫ್ ಇಂಡಿಯಾ" ಸಂಸ್ಥೆಯವರು ತಾಂತ್ರಿಕ ಪಾಲುದಾರರಾಗಿ Drone Flying ನಡೆಸಿ, ಇದರ ದತ್ತಾಂಶವನ್ನು ಭೂಮಾಪನ, ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆಗೆ ನೀಡುತ್ತಾರೆ. ಭೂಮಾಪನ ಇಲಾಖೆಯು ಸದರಿ ದತ್ತಾಂಶವನ್ನು ಬಳಸಿಕೊಂಡು ಸ್ಥಳದಲ್ಲಿನ ವಾಸ್ತವಾಂಶ ಹಾಗೂ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಚಾಲ್ತಿಯಲಿರುವ ಹಕ್ಕು ದಾಖಲೆಗಳನ್ವಯ ಅಳತೆ ಕೆಲಸ ನಿರ್ವಹಿಸಿ, ಆಸ್ತಿಯ ದಾಖಲೆಯನ್ನು ಅಂತಿಮಗೊಳಿಸಲಾಗುತ್ತದೆ.

ಒಟ್ಟಾರೆ, ನಗರ ಪ್ರದೇಶದಲ್ಲಿನ ಆಸ್ತಿಗಳಾದ ನಿವೇಶನಗಳು, ಮನೆಗಳು, ಕಟ್ಟಡಗಳು, ಸಾರ್ವಜನಿಕ ಆಸ್ತಿಗಳು, ಸರ್ಕಾರಿ ಆಸ್ತಿಗಳು, ಉದ್ಯಾನವನ, ರಸ್ತೆ, ಚರಂಡಿ, ನೀರಿನ ಸಂಪರ್ಕ, ವಿದ್ಯುತ್ ಲೈನ್, ಕೆರೆ, ಕಟ್ಟೆ, ಸ್ಮಶಾನ ಮುಂತಾದ ಆಸ್ತಿಗಳನ್ನು ನಿಖರವಾಗಿ ಅಳತೆ ಮಾಡಿ ದಾಖಲೆಗಳನ್ನು ತಯಾರಿಸಲಾಗುತ್ತದೆ. ಅಂತಿಮವಾಗಿ ಈ ಪ್ರಕ್ರಿಯೆಯಿಂದ, ಒಂದು ಆಸ್ತಿಯ ಬಾಬ್ತು, ವಿಸ್ತೀರ್ಣ, ಅಳತೆ, ಮಾಲೀಕರ ವಿವರ, ಋಣಭಾರ, ಛಾಯಾಚಿತ್ರ ಮುಂತಾದ ವಿವರಗಳನ್ನು ಒಳಗೊಂಡಂತೆ, "**ಪ್ರಾಪರ್ಟಿ ಕಾರ್ಡ್**" ಅನ್ನು ವಿತರಿಸಲಾಗುವುದು.

ನಕ್ಷಾ ಯೋಜನೆಯನ್ನು ನಿಖರವಾಗಿ ಜಾರಿಗೊಳಿಸುವ ನಿಟ್ಟಿನಲ್ಲಿ ಇಲಾಖಾ ಸಿಬ್ಬಂದಿಯವರುಗಳು, ಸ್ಥಳಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಆಸ್ತಿದಾರರು ತಮ್ಮ ಆಸ್ತಿಗಳಿಗೆ ಸಂಬಂಧಿಸಿದ ದಾಖಲೆಗಳಾದ ಕ್ರಯಪತ್ರ, ವಿಭಾಗ ಪತ್ರ, ದಾನ ಪತ್ರ, ವಿಲ್, ನ್ಯಾಯಾಲಯದ ಆದೇಶಗಳು, ತೆರಿಗೆ ಪಾವತಿ ಪತ್ರ ಮುಂತಾದ ದಾಖಲೆಗಳನ್ನು ಒದಗಿಸಿ, ಸಕ್ರಿಯವಾಗಿ ಭಾಗವಹಿಸಿ ಯೋಜನೆಯನ್ನು ಯಶಸ್ವಿಗೊಳಿಸಲು ವಿನಂತಿಸಲಾಗಿದೆ.

ಸಹಿ/–
ಆಯುಕ್ತರು,
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಬೆಂಗಳೂರು

ವಾಸಾಸಂಇ/ವಾ.ಪ್ರ/5112/ಎಸ್‌ಎಸ್‌ಸಿ/2024–25

ಸಾರ್ವಜನಿಕ ಪ್ರಕಟಣೆ

ಈ ಕೆಳಗಿನ **'ಷೆಡ್ಯೂಲ್'**ನಲ್ಲಿ ಹೆಚ್ಚು ಸ್ಪಷ್ಟವಾಗಿ ವಿವರಿಸಲಾಗಿರುವ ಮತ್ತು ಇಲ್ಲಿ ಇನ್ನುಮುಂದೆ ಸಮಗ್ರವಾಗಿ **'ಷೆಡ್ಯೂಲ್ ಸ್ವತ್ತುಗಳು'** ಎನ್ನಲಾಗುವ ಸ್ಥಿರಾಸ್ತಿಗಳಿಗೆ ಸಂಬಂಧಿಸಿದಂತೆ, ಬೆಂಗಳೂರಿನ ನಿವಾಸಿಗಳಾದ ಶ್ರೀ. ನೆಲ್ಲೋರ್ ಬಲಿಜ ಸುರೇಶ್ ಕುಮಾರ್ ಬಿನ್ ಲೇಟ್ ಎನ್.ಬಿ. ವೆಂಕಟ ರಂಗಣ್ಣ ಮತ್ತು ಶ್ರೀ. ಎಚ್.ಎಂ. ನರೇಂದ್ರ ಬಾಬು ಬಿನ್ ಲೇಟ್ ಎಚ್.ಎಸ್. ಮುನಿಯುಪ್ಪ (**'ಮಾಲೀಕರು'**), ಇವರೊಂದಿಗೆ ನಮ್ಮ ಕಕ್ಷಿದಾರರು (**ಕಕ್ಷಿದಾರರು**) ಜಂಟಿ ಅಭಿವೃದ್ಧಿ ಯೋಜನೆ ಕೈಗೊಳ್ಳಲು ಉದ್ದೇಶಿಸಿರುತ್ತಾರೆ. ಸದರಿ ಮಾಲೀಕರು, ಉಲ್ಲೇಖಿತ ಷೆಡ್ಯೂಲ್ ಸ್ವತ್ತುಗಳಲ್ಲಿನ ತಮ್ಮ–ತಮ್ಮ ಭಾಗದ ಸ್ವತ್ತುಗಳಿಗೆ ತಾವೇ ಸಂಪೂರ್ಣ ಮಾಲೀಕರಾಗಿದ್ದೇವೆ ಮತ್ತು ಅವುಗಳ ಮೇಲೆ ಇನ್ನಿತರ ಯಾರದೇ ಹಸ್ತಕ್ಷೇಪವಿಲ್ಲದಂತಹ ಅನಿರ್ಬಂಧಿತ ಹಕ್ಕುಗಳನ್ನು ಹೊಂದಿರುತ್ತೇವೆ ಎಂದು ನಮ್ಮ ಕಕ್ಷಿದಾರರಿಗೆ ತಿಳಿಸಿರುತ್ತಾರೆ.

ಇದೀಗ, ಈ ಪ್ರಕಟಣೆಯ ಮೂಲಕ ಸಾಮಾನ್ಯ ಸಾರ್ವಜನಿಕರಿಗೆ ತಿಳಿಸುವುದು ಏನೆಂದರೆ, ಉಲ್ಲೇಖಿತ ಷೆಡ್ಯೂಲ್ ಸ್ವತ್ತುಗಳಿಗೆ ಸಂಬಂಧಿಸಿದಂತೆ, ಮೇಲ್ಕಂಡ ಮಾಲೀಕರನ್ನು ಹೊರತುಪಡಿಸಿ ಇನ್ನಿತರ ಯಾವುದೇ ವ್ಯಕ್ತಿಗಳು ಸದರಿ ಷೆಡ್ಯೂಲ್ ಸ್ವತ್ತುಗಳ ಮೇಲೆ ಯಾವುದೇ ಸ್ವರೂಪದ ಹಕ್ಕು, ಅಧಿಕಾರ, ಚಾರ್ಜ್, ಲೀನ್, ಕ್ಲೇಮ್ ಅಥವಾ ಇನ್ನಾವುದೇ ಹಿತಾಸಕ್ತಿ ಹೊಂದಿದ್ದಲ್ಲಿ, ಅಥವಾ ಮೇಲ್ಕಂಡ ವ್ಯವಹಾರಕ್ಕೆ ಸಂಬಂಧಿಸಿದಂತೆ ಯಾವುದೇ ಆಕ್ಷೇಪಣೆಗಳನ್ನು ಹೊಂದಿದ್ದಲ್ಲಿ, ಅಂತಹವರು ಷೆಡ್ಯೂಲ್ ಸ್ವತ್ತುಗಳ ಮೇಲ್ಕಂಡ ವ್ಯವಹಾರಕ್ಕೆ ಸಂಬಂಧಿತ ತಮ್ಮ ಆಕ್ಷೇಪಣೆಗಳನ್ನು, ಕೆಳಕಂಡ ಸಹಿದಾರರಿಗೆ ಸಲ್ಲಿಸಬೇಕೆಂದು ಕರೆ ನೀಡಲಾಗಿದೆ. ನಿಮ್ಮ ಯಾವುದೇ ಕ್ಲೇಮ್ ಅಥವಾ ಆಕ್ಷೇಪಣೆಗಳನ್ನು ಕಡ್ಡಾಯವಾಗಿ ಲಿಖಿತ ರೂಪದಲ್ಲಿ, ಆಯಾ ಕ್ಲೇಮ್ ಅಥವಾ ಆಕ್ಷೇಪಣೆಗಳಿಗೆ ಸಂಬಂಧಿತ ಪೂರಕ ದಾಖಲಾತಿಗಳ ಸಮೇತ, ಈ ಪ್ರಕಟಣೆಯು ಪ್ರಕಟಗೊಂಡ ದಿನಾಂಕದಿಂದ **15 (ಹದಿನೈದು) ದಿನಗಳೊಳಗೆ** ಕೆಳಗಿನ ವಿಳಾಸಕ್ಕೆ ತಲುಪಿಸತಕ್ಕದ್ದು. ಒಂದು ವೇಳೆ, ಅಂತಹ ಯಾವುದೇ ಕ್ಲೇಮ್‌ಗಳು ಅಥವಾ ಆಕ್ಷೇಪಣೆಗಳು ನಿಗದಿತ 15 (ಹದಿನೈದು) ದಿನಗಳ ಅವಧಿಯೊಳಗೆ ಸಲ್ಲಿಕೆಯಾಗದಿದ್ದಲ್ಲಿ, ಷೆಡ್ಯೂಲ್ ಸ್ವತ್ತುಗಳ ಮೇಲೆ ಸದರಿ ಮಾಲೀಕರನ್ನು ಹೊರತುಪಡಿಸಿ, ಅನ್ಯರ ಯಾವುದೇ ರೀತಿಯ ಹಕ್ಕು, ಅಧಿಕಾರ, ಚಾರ್ಜ್, ಲೀನ್, ಕ್ಲೇಮ್ ಅಥವಾ ಹಿತಾಸಕ್ತಿ ಇರುವುದಿಲ್ಲ ಎಂದು ಪರಿಗಣಿಸಲಾಗುತ್ತದೆ. ಮುಂದುವರಿದಂತೆ, ಒಂದು ವೇಳೆ ನಿಗದಿತ 15 (ದಿನಗಳ) ಅವಧಿಯೊಳಗೆ ಯಾವುದೇ ಕ್ಲೇಮ್‌ಗಳು ಅಥವಾ ಆರೋಪಿತ ಹಿತಾಸಕ್ತಿಗಳು ಸಲ್ಲಿಕೆಯಾಗದಿದ್ದಲ್ಲಿ, ಅಂತಹವುಗಳನ್ನು ವಿವೇಚನಾಪೂರ್ವಕವಾಗಿಯೇ ಕೈಬಿಡಲಾಗುತ್ತದೆ ಮತ್ತು ಎಲ್ಲಾ ಉದ್ದೇಶ ಹಾಗೂ ಅಗತ್ಯಗಳಿಂದಲೂ ಅವುಗಳನ್ನು ನಿರ್ಲಕ್ಷಿಸಲಾಗುತ್ತದೆ ಮತ್ತು ಅಂತಹವುಗಳು ನಮ್ಮ ಕಕ್ಷಿದಾರರ ಮೇಲೆ ಯಾವುದೇ ನಿರ್ಬಂಧಗಳನ್ನು ರೂಪಿಸಲಾರವು ಹಾಗೂ ಸದರಿ ಷೆಡ್ಯೂಲ್ ಸ್ವತ್ತುಗಳಿಗೆ ಸಂಬಂಧಿಸಿದಂತೆ ನಮ್ಮ ಕಕ್ಷಿದಾರರು ತಮ್ಮ ಮೇಲ್ಕಂಡ ವ್ಯವಹಾರವನ್ನು ಮುಂದುವರಿಸುವಲ್ಲಿ ಸ್ವತಂತ್ರರಾಗುತ್ತಾರೆ.

ಷೆಡ್ಯೂಲ್
(ಷೆಡ್ಯೂಲ್ ಸ್ವತ್ತುಗಳ ವಿವರ)

ಕೊಂಡೇನಹಳ್ಳಿ ಗ್ರಾಮ, ವಿಜಯಪುರ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ವಿಳಾಸದಲ್ಲಿ ಸ್ಥಿತಗೊಂಡಿರುವ, ಸರ್ವೆ ನಂ. 43/1 ರಲ್ಲಿ 02 ಎಕರೆ 37½ ಗುಂಟಾ ವಿಸ್ತೀರ್ಣವುಳ್ಳ (23 ಗುಂಟಾ ಖರಾಬ್ ಜಮೀನು ಹೊರತುಪಡಿಸಿ), ವಸತಿ ಉದ್ದೇಶದ ಬಡಾವಣೆಗಾಗಿ ಪರಿವರ್ತನೆಗೊಂಡಿರುವ ಸ್ಥಿರಾಸ್ತಿಯ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಸದರಿ ಸ್ವತ್ತುಗಳ ಚಕ್ಕುಬಂದಿ:

ಪೂರ್ವಕ್ಕೆ : ಚನ್ನಸಂದ್ರ ಗ್ರಾಮದ ಸರಹದ್ದು;
ಪಶ್ಚಿಮಕ್ಕೆ : ರಸ್ತೆ;
ಉತ್ತರಕ್ಕೆ : ಸರ್ವೆ ನಂ. 43/2 ರಲ್ಲಿರುವ ಸ್ವತ್ತು; ಮತ್ತು
ದಕ್ಷಿಣಕ್ಕೆ : ಚನ್ನಸಂದ್ರ ಗ್ರಾಮದ ಸರ್ವೆ ನಂ. 6/2 ರಲ್ಲಿರುವ ಸ್ವತ್ತು.

ಚನ್ನಸಂದ್ರ ಗ್ರಾಮ, ವಿಜಯಪುರ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ವಿಳಾಸದಲ್ಲಿ ಸ್ಥಿತಗೊಂಡಿರುವ, ಸರ್ವೆ ನಂ. 6/2 ರಲ್ಲಿ 03 ಎಕರೆ 3 ½ ಗುಂಟಾ ವಿಸ್ತೀರ್ಣವುಳ್ಳ, ವಸತಿ ಉದ್ದೇಶದ ಬಡಾವಣೆಗಾಗಿ ಪರಿವರ್ತನೆಗೊಂಡಿರುವ ಸ್ಥಿರಾಸ್ತಿಯ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಸದರಿ ಸ್ವತ್ತುಗಳ ಚಕ್ಕುಬಂದಿ:

ಪೂರ್ವಕ್ಕೆ : ಸರ್ವೆ ನಂ.7 ರಲ್ಲಿರುವ ಸ್ವತ್ತು;
ಪಶ್ಚಿಮಕ್ಕೆ : ಕೊಂಡೇನಹಳ್ಳಿ ಗ್ರಾಮದ ಸರಹದ್ದು;
ಉತ್ತರಕ್ಕೆ : ಸರ್ವೆ ನಂ. 6/1 ರಲ್ಲಿರುವ ಸ್ವತ್ತು; ಮತ್ತು
ದಕ್ಷಿಣಕ್ಕೆ : ಸರ್ವೆ ನಂ. 5 ರಲ್ಲಿರುವ ಸ್ವತ್ತು.

ದಿನಾಂಕ: 18.02.2025
ಸ್ಥಳ: ಬೆಂಗಳೂರು

ಶ್ರೀಮತಿ. ಬ್ರಿಜಿತಾ ಪ್ರಕಾಶ್
ಪಾಲುದಾರರು
ಜೆ. ಸಾಗರ್ ಅಸೋಸಿಯೇಟ್ಸ್
ವಕೀಲರು ಮತ್ತು ಸಾಲಿಸಿಟರ್ಸ್
18ನೇ ಮಹಡಿ, ಎಸ್‌ಕೆಎವಿ 909, ನಂ. 9/1
ರೆಸಿಡೆನ್ಸಿ ರಸ್ತೆ
ರಿಚ್ಮಂಡ್ ಸರ್ಕಲ್, ಬೆಂಗಳೂರು – 560 025.
ಫೋನ್ : 080-4350 3600/080-4350 3676
ಇ–ಮೇಲ್ — brijita.prakash@jsalaw.com

ಭಾರತ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ನಿರ್ಮಾಣ ಭವನ, ಮೌಲಾನಾ ಆಜಾದ್ ರಸ್ತೆ, ನವದೆಹಲಿ 110011

ಜಾಹೀರಾತು

ನ್ಯಾಷನಲ್ ಕಮಿಷನ್ ಫಾರ್ ಅಲೈಡ್ ಅಂಡ್ ಹೆಲ್ತ್‌ಕೇರ್ ಪ್ರೊಫೆಷನ್ (ಎನ್‌ಸಿಎಎಚ್‌ಪಿ) ರವರ ಕಾರ್ಯದರ್ಶಿ ಹುದ್ದೆಗಾಗಿ 20.02.2025 ರಿಂದ 22.03.2025 ರವರೆಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

1. ಅರ್ಜಿ ಸ್ವೀಕರಿಸುವ ಕೊನೆಯ ದಿನಾಂಕದಂದು ಅರ್ಜಿದಾರರ ವಯಸ್ಸು 65 ವರ್ಷ ಮೀರಿರಕೂಡದು.
2. ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ **22.03.2025.**
3. ವಿವರವಾದ ಜಾಹೀರಾತು ಮತ್ತು ಅರ್ಜಿ ನಮೂನೆಯನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ https://mohfw.gov.in ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುತ್ತದೆ ಮತ್ತು ಆಸಕ್ತಿಯುಳ್ಳವರು ಇದನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು.
4. ಸಂಪೂರ್ಣವಾಗಿ ಭರ್ತಿ ಮಾಡಿರುವ ನಿರ್ದಿಷ್ಟ ನಮೂನೆಯ ಅರ್ಜಿಯನ್ನು, ಸಂಬಂಧಿತ ಎಲ್ಲಾ ಸ್ವಯಂದೃಢೀಕೃತ ಪ್ರಮಾಣಪತ್ರಗಳ ಪ್ರತಿಗಳ ಸಮೇತ ಒಂದು ಲಕೋಟೆಯಲ್ಲಿ ಮೊಹರು ಹಾಕಿ, ಲಕೋಟೆಯ ಮೇಲೆ ದಪ್ಪ ಅಕ್ಷರಗಳಲ್ಲಿ **"ಎನ್‌ಸಿಎಎಚ್‌ಪಿ'ರವರ ಕಾರ್ಯದರ್ಶಿ ಹುದ್ದೆಗಾಗಿ ಅರ್ಜಿ"** ಎಂದು ನಮೂದಿಸಿ, ಕೆಳಕಂಡ ವಿಳಾಸಕ್ಕೆ ಸಲ್ಲಿಸತಕ್ಕದ್ದು:

ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ನಿರ್ಮಾಣ ಭವನ, ಮೌಲಾನಾ ಆಜಾದ್ ರಸ್ತೆ, ನವದೆಹಲಿ–110011

5. ಅರ್ಜಿ ನಮೂನೆ ಮತ್ತು ಅಗತ್ಯ ಎಲ್ಲಾ ಪ್ರಮಾಣಪತ್ರಗಳ ಸ್ಕ್ಯಾನ್ಡ್ ಪ್ರತಿಗಳನ್ನು ಕಡ್ಡಾಯವಾಗಿ ಸದರಿ ಇಮೇಲ್ ವಿಳಾಸಕ್ಕೆ ಸಲ್ಲಿಸುವುದು: ahssection-mohfw@gov.in
6. ಅಭ್ಯರ್ಥಿತನವನ್ನು ಪರಿಗಣಿಸುವುದಕ್ಕಾಗಿ, ಅರ್ಜಿಯ ಕರಡು ಪ್ರತಿ ಮತ್ತು ಆನ್‌ಲೈನ್ ಅರ್ಜಿ, ಎರಡೂ ಕೂಡ ಕಡ್ಡಾಯವಾಗಿರುತ್ತವೆ. **ಸ್ಕ್ಯಾನ್ ಮಾಡಿ ಕಳುಹಿಸಲಾಗುವ ಆನ್‌ಲೈನ್ ಪ್ರತಿಯನ್ನು ಅಂತಿಮ ಅರ್ಜಿಯನ್ನಾಗಿ ಪರಿಗಣಿಸಲಾಗುತ್ತದೆ** ಹಾಗೂ ಇದು ನಿಗದಿತ **ಇಮೇಲ್ ವಿಳಾಸದಲ್ಲಿ ಕೊನೆಯ ದಿನಾಂಕ ಮತ್ತು ಸಮಯದೊಳಗೆ ಸಲ್ಲಿಕೆಯಾಗಿರತಕ್ಕದ್ದು.**

CBC 17102/11/0030/2425

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ವಲಯ ಜಂಟಿ ಆಯುಕ್ತರವರ ಕಚೇರಿ, ಆರ್.ಆರ್. ನಗರ ವಲಯ,
ಐಡಿಯಲ್ ಹೋಮ್ಸ್, 18ನೇ ಕ್ರಾಸ್, ರಾಜರಾಜೇಶ್ವರಿನಗರ, ಬೆಂಗಳೂರು–560098.

ಸಂಖ್ಯೆ: ಬೃಬೆಂಮಪಾ/ವಜಂಆ(ಆರ್‌ಆರ್‌ನ)/ಟೆಂಡರ್/02/2024–25 ದಿನಾಂಕ: 14.02.2025

ಟೆಂಡರ್ ಪ್ರಕಟಣೆ

ದ್ವಿಲಕೋಟೆ ಟೆಂಡರ್ – (ಜಿಒಕೆ ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ವಲಯ ಜಂಟಿ ಆಯುಕ್ತರು, ಆರ್.ಆರ್.ನಗರ ವಲಯ, ಬಿಬಿಎಂಪಿ, ಬೆಂಗಳೂರು ಇವರು ಆಯುಕ್ತರು, ಬಿಬಿಎಂಪಿ ಇವರ ಪರವಾಗಿ ಈ ಕೆಳಕಂಡ ಕಾಮಗಾರಿಗಾಗಿ ಬಿಬಿಎಂಪಿ ಅಥವಾ ಸಿಪಿಡಬ್ಲ್ಯೂಡಿ/ಕೆಪಿಡಬ್ಲ್ಯೂಡಿ/ರೈಲ್ವೇಸ್/ ಎಂಇಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತಗೊಂಡ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಸೇವೆಗಳ ಹೆಸರು	ಇಎಂಡಿ ಮೊತ್ತ
1	ಆರ್.ಆರ್. ನಗರ ವಲಯದಲ್ಲಿ 2024–25ನೇ ಸಾಲಿಗೆ 11 ತಿಂಗಳ ಅವಧಿಗೆ ಡಾಟಾ ಎಂಟ್ರಿ ಆಪರೇಟರ್‌ಗಳನ್ನು ಒದಗಿಸುವ ಕಾಮಗಾರಿ.	ರೂ. 2,24,000/–
	ಸೇವೆಯ ಅವಧಿ : **11 ತಿಂಗಳು.**	

<u>**ಟೆಂಡರ್ ದಿನಾಂಕಗಳು :**</u> (1) ಟೆಂಡರ್ ದಾಖಲೆಗಳನ್ನು ಕೆಪಿಪಿ ಪೋರ್ಟಲ್ **https://kppp.karnataka.gov.in**ನಿಂದ **ದಿನಾಂಕ: 20.02.2025, ಸಂಜೆ 4.00 ಗಂಟೆಯಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್ ಆಕ್ಷೇಪಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **24.02.2025ರ ಸಂಜೆ 4.00 ಗಂಟೆವರೆಗೆ.** (3) ಪೂರ್ವ–ಬಿಡ್ ಸಭೆಯ ದಿನಾಂಕ: **28.02.2025ರಂದು ಮಧ್ಯಾಹ್ನ 3.00 ಗಂಟೆಗೆ.** (4) ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **13.03.2025ರ ಸಂಜೆ 4.00 ಗಂಟೆವರೆಗೆ.** (5) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **14.03.2025 ರಂದು ಸಂಜೆ 4.30 ಗಂಟೆಗೆ.** (6) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **ತಾಂತ್ರಿಕವಾಗಿ ಅರ್ಹತೆಗೊಂಡ ಬಿಡ್‌ದಾರರಿಗೆ ತಿಳಿಸಲಾಗುವುದು.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ಕೆಪಿಪಿ ಪೋರ್ಟಲ್ **https://kppp.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ವಲಯ ಜಂಟಿ ಆಯುಕ್ತರು
ಆರ್.ಆರ್.ನಗರ ವಲಯ, ಬಿಬಿಎಂಪಿ

ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್
ಕಾರ್ಪೋರೇಟ್ ಐಡೆಂಟಿಫಿಕೇಶನ್ ನಂಬರ್ (ಸಿಐಎನ್): L18101KA2004PLC033475
ನೋಂದಾಯಿತ ಕಛೇರಿ: ನಂ. 25, 2ನೇ ಅಡ್ಡರಸ್ತೆ, 3ನೇ ಮುಖ್ಯರಸ್ತೆ, ಕೈಗಾರಿಕಾ ಉಪನಗರ, ಯಶವಂತಪುರ, ಬೆಂಗಳೂರು–560022
ದೂ: +91 80 68951000 ಫ್ಯಾಕ್ಸ್: +91 80 68951001 ಇಮೇಲ್: cs@gokaldasexports.com; ವೆಬ್‌ಸೈಟ್: www.gokaldasexports.com

ಅಂಚೆ ಮತಪತ್ರದ ನೋಟೀಸ್

ಸದಸ್ಯರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, ಕಂಪನಿಗಳ ಕಾಯಿದೆ, 2013 ("ಕಾಯ್ದೆ") ಸೆಕ್ಷನ್ 108 ಮತ್ತು 110ರ ಅನುಗುಣವಾಗಿ ಮತ್ತು ಅನ್ವಯವಾಗುವ ಇತರೆ ಅನ್ವಯವಾಗುವ ನಿಬಂಧನೆಗಳು, ಯಾವುದಾದರೂ ಇದ್ದಲ್ಲಿ, ಜೊತೆಗೆ ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014 ("ನಿಯಮಗಳು")ರ ಕಂಪನಿಗಳ ನಿಯಮ 20 ಮತ್ತು 22ನ್ನು ಓದಿಕೊಂಡಂತೆ, (ಸದ್ಯಕ್ಕೆ ಜಾರಿಯಲ್ಲಿರುವ ಯಾವುದೇ ಕಾನೂನುಬದ್ಧ ಮಾರ್ಪಾಡು ಅಥವಾ ಮರು–ಅನುಷ್ಠಾನ ಸೇರಿದಂತೆ) ಮತ್ತು ಮಿನಿಸ್ಟ್ರಿ ಆಫ್ ಕಾರ್ಪೋರೇಟ್ ಅಫೇರ್ಸ್‌ನಿಂದ ("ಎಂಸಿಎ") ಹೊರಡಿಸಲಾದ ಸುತ್ತೋಲೆ ಸಂಖ್ಯೆ 14/2020 ದಿನಾಂಕ ಏಪ್ರಿಲ್ 8, 2020, ಸುತ್ತೋಲೆ ಸಂಖ್ಯೆ 17/2020 ದಿನಾಂಕ ಏಪ್ರಿಲ್ 13, 2020, ಸುತ್ತೋಲೆ ಸಂಖ್ಯೆ 09/2024 ದಿನಾಂಕ ಸೆಪ್ಟೆಂಬರ್ 19, 2024 (ಇನ್ನು ಮುಂದೆ ಒಟ್ಟಾರೆಯಾಗಿ "ಎಂಸಿಎ" ಸುತ್ತೋಲೆಗಳು ಎಂದು ಉಲ್ಲೇಖಿಸಲಾಗಿದೆ), ಇನ್‌ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರಿಸ್ ಆಫ್ ಇಂಡಿಯಾರವರು ಹೊರಡಿಸಿದ ಸಾಮಾನ್ಯ ಸಭೆಗಳ ಮೇಲೆ ಸೆಕ್ರೆಟರಿ ಸ್ಟ್ಯಾಂಡರ್ಡ್ಸ್‌ನ ನಿಯಮಗಳಿಗೆ ಅನುಗುಣವಾಗಿ, ಸೆಕ್ಯೂರಿಟೀಸ್ ಆಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ ದ ("ಲಿಸ್ಟಿಂಗ್ ಆಬ್ಲಿಗೇಷನ್ಸ್ ಅಂಡ್ ಡಿಸ್‌ಕ್ಲೋಷರ್ ರಿಕ್ವಾಯರ್‌ಮೆಂಟ್ಸ್ ನಿಬಂಧನೆಗಳು") ನಿಯಂತ್ರಣಗಳು, 2015ರ (**"ಎಲ್‌ಒಆರ್‌ಡಿ ರೆಗ್ಯುಲೇಷನ್ಸ್"**) ನಿಯಂತ್ರಣ 44ಅನ್ನು ಓದಿಕೊಂಡಂತೆ ಮತ್ತು ಕಾಯ್ದೆಯ ಇತರ ಅನ್ವಯವಾಗುವ ಕಾನೂನು, ನಿಯಮಗಳು ಮತ್ತು ನಿಬಂಧನೆಗಳಡಿಯ ನಿಯಮಗಳು, ಸುತ್ತೋಲೆಗಳು ಮತ್ತು ಅಧಿಸೂಚನೆಗಳಂತೆ (ಸದ್ಯಕ್ಕೆ ಜಾರಿಯಲ್ಲಿರುವ ಯಾವುದೇ ಶಾಸನಬದ್ಧ ಮಾರ್ಪಾಡು(ಗಳು) ಅಥವಾ ಅದರ ಮರುರೂಪಿಸುವಿಕೆ(ಗಳು) ಸೇರಿದಂತೆ) ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್ (**"ಕಂಪನಿ"**) ವಿದ್ಯುನ್ಮಾನ ಮೂಲಕ ಮತದಾನ (ಸದೂರ ಇ–ಮತದಾನ) ಪ್ರಕ್ರಿಯೆಯ ಮೂಲಕ ದಿನಾಂಕ ಫೆಬ್ರವರಿ 07, 2025ರ ಅಂಚೆ ಮತಪತ್ರ ನೋಟೀಸ್‌ನ ಮೂಲಕ ಈ ಕೆಳಗೆ ತಿಳಿಸಲಾದ ವಿಶೇಷ ನಿರ್ಣಯದ ಮೇಲೆ ತನ್ನ ಸದಸ್ಯರಿಂದ ಅನುಮೋದನೆ ಅಪೇಕ್ಷಿಸುತ್ತದೆ.

ವಿಶೇಷ ನಿರ್ಣಯದ ವಿವರ
ಕಂಪನಿ ಕಾಯಿದೆ, 2013ರ ಸೆಕ್ಷನ್ 186ರ ಅಡಿಯಲ್ಲಿ ಸಾಲಗಳನ್ನು ನೀಡಲು, ಹೂಡಿಕೆಗಳನ್ನು ಮಾಡಲು ಮತ್ತು ಗ್ಯಾರಂಟಿಗಳು ಅಥವಾ ಭದ್ರತೆಯನ್ನು ಒದಗಿಸಲು ಮಿತಿಗಳನ್ನು ಹೆಚ್ಚಿಸುವುದು

ಎಂಸಿಎ ಸುತ್ತೋಲೆಗಳ ಅನುಸಾರವಾಗಿ, ಫೆಬ್ರವರಿ 14, 2025ರಂತೆ (**"ಕಟ್–ಆಫ್ ದಿನಾಂಕ"**) ಷೇರುಗಳನ್ನು ಹೊಂದಿರುವ ಸದಸ್ಯರು ತಮ್ಮ ಇ–ಮೇಲ್ ವಿಳಾಸಗಳನ್ನು ಡಿಪಾಸಿಟರೀಸ್ / ಡಿಪಾಸಿಟರಿ ಪಾರ್ಟಿಸಿಪೆಂಟ್(ಗಳು)ರವರೊಂದಿಗೆ ಮತ್ತು ಕಂಪನಿಯ ಷೇರು ವರ್ಗಾವಣೆ ಏಜೆಂಟ್, ಅಂದರೆ ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್ (ಕೆಫಿನ್ ಟೆಕ್) ನೊಂದಿಗೆ ನೋಂದಾಯಿಸಿಕೊಂಡಿರುವ ಸದಸ್ಯರಿಗೆ ಕಂಪನಿಯು ವಿದ್ಯುನ್ಮಾನ ವಿಧಾನದ ಮೂಲಕ ಮಾತ್ರ ಪೋಸ್ಟಲ್ ಬ್ಯಾಲೆಟ್ ನೋಟೀಸ್ ರವಾನೆಯನ್ನು ಸೋಮವಾರ, ಫೆಬ್ರವರಿ 17, 2025ರಂದು ಪೂರ್ಣಗೊಳಿಸಿದೆ. ಅಂಚೆ ಮತಪತ್ರದ ನೋಟೀಸನ್ನು ಕಂಪನಿಯ ವೆಬ್‌ಸೈಟ್ www.gokaldasexports.com ನಿಂದ ಅಥವಾ ಕೆಫಿನ್ ಟೆಕ್ ವೆಬ್‌ಸೈಟ್‌ನಿಂದ https://evoting.kfintech.com/ ಡೌನ್‌ಲೋಡ್ ಮಾಡಬಹುದು. ನೋಟೀಸನ್ನು ಕಂಪನಿಯ ಷೇರುಗಳನ್ನು ಪಟ್ಟಿ ಮಾಡಲಾಗಿರುವಲ್ಲಿ ನ್ಯಾಷನಲ್ ಸ್ಟಾಕ್ ಎಕ್ಸ್ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ (www.nseindia.com) ಮತ್ತು ಬಿಎಸ್‌ಇ ಲಿಮಿಟೆಡ್ (www.bseindia.com)ನ ವೆಬ್‌ಸೈಟ್‌ನಲ್ಲಿ ಸಹ ಪ್ರಕಟಿಸಲಾಗಿರುತ್ತದೆ.

ಕಟ್–ಆಫ್ ದಿನಾಂಕದಂದು ಸದಸ್ಯರು / ಫಲಾನುಭವಿ ಮಾಲೀಕರ ಹೆಸರಿನಲ್ಲಿ ನೋಂದಾಯಿಸಲಾದ ಈಕ್ವಿಟಿ ಷೇರುಗಳ ಪಾವತಿಸಿದ ಮೌಲ್ಯದ ಮೇಲೆ ಮತದಾನದ ಹಕ್ಕುಗಳನ್ನು ಪರಿಗಣಿಸಲಾಗುತ್ತದೆ. ಕಟ್–ಆಫ್ ದಿನಾಂಕದಂದು ಸದಸ್ಯರಲ್ಲದ ವ್ಯಕ್ತಿಯು ಈ ನೋಟೀಸನ್ನು ಮಾಹಿತಿ ಉದ್ದೇಶಕ್ಕಾಗಿ ಮಾತ್ರ ಎಂದು ಪರಿಗಣಿಸತಕ್ಕದ್ದು. ಸದಸ್ಯರ ಸಮ್ಮತಿ ಅಥವಾ ಅಸಮ್ಮತಿ ಅಭಿಪ್ರಾಯದ ಸಂವಹನವು ರಿಮೋಟ್ ಇ–ಮತದಾನ ವ್ಯವಸ್ಥೆಗಳ ಮೂಲಕ ಮಾತ್ರ ನಡೆಯುತ್ತದೆ.

ಕಂಪನಿಯು ತನ್ನ ಎಲ್ಲಾ ಸದಸ್ಯರಿಗೆ ಇ–ಮತದಾನದ ಸೌಲಭ್ಯವನ್ನು ಒದಗಿಸುವ ಉದ್ದೇಶಕ್ಕಾಗಿ ಕೆಫಿನ್ ಟೆಕ್‌ನ ಸೇವೆಗಳನ್ನು ಬಳಸಿಕೊಂಡಿದೆ. ಇ–ಮತದಾನದ ಅವಧಿಯು ಮಂಗಳವಾರ, ಫೆಬ್ರವರಿ 18, 2025ರಂದು ಬೆಳಿಗ್ಗೆ 9.00 ಗಂಟೆ ಐಎಸ್‌ಟಿಗೆ ಪ್ರಾರಂಭವಾಗುತ್ತದೆ ಮತ್ತು ಬುಧವಾರ, ಮಾರ್ಚ್ 19, 2025ರ ಸಂಜೆ 5.00 ಗಂಟೆ ಐಎಸ್‌ಟಿಗೆ ಮುಕ್ತಾಯಗೊಳ್ಳುತ್ತದೆ. ತದನಂತರ ಇ–ಮತದಾನವನ್ನು ಕೆಫಿನ್ ಟೆಕ್‌ನಿಂದ ನಿಷ್ಕ್ರಿಯಗೊಳಿಸಲಾಗುವುದು.

ತಮ್ಮ ಇಮೇಲ್ ವಿಳಾಸಗಳು ಮತ್ತು ಮೊಬೈಲ್ ಸಂಖ್ಯೆಗಳನ್ನು ನೋಂದಾಯಿಸದ ಸದಸ್ಯರು, ಕೆಫಿನ್ ಟೆಕ್‌ನೊಂದಿಗೆ ಅದರ ವೆಬ್‌ಸೈಟ್‌ನಲ್ಲಿ ತಾತ್ಕಾಲಿಕವಾಗಿ ನೋಂದಾಯಿಸಲು/ ನವೀಕರಿಸಲು ವಿನಂತಿಸಲಾಗಿದೆ. ಇ–ಮೇಲ್ ವಿಳಾಸದ ಶಾಶ್ವತ ನೋಂದಣಿಗಾಗಿ, ಸದಸ್ಯರು ತಮ್ಮ ಸಂಬಂಧಪಟ್ಟ ಡಿಪಾಸಿಟರಿ ಪಾರ್ಟಿಸಿಪೆಂಟ್‌ರವರೊಂದಿಗೆ ಹೊಂದಿರುವ ಎಲೆಕ್ಟ್ರಾನಿಕ್ ಹೋಲ್ಡಿಂಗ್‌ಗಳು ಮತ್ತು ಕೆಫಿನ್ ಟೆಕ್‌ನೊಂದಿಗೆ ಹೊಂದಿರುವ ಭೌತಿಕ ಹೋಲ್ಡಿಂಗ್‌ಗಳಿಗೆ ಅನುಗುಣವಾಗಿ ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸಲು ವಿನಂತಿಸಲಾಗಿದೆ ಎಂದು ಈ ಮೂಲಕ ಸ್ಪಷ್ಟಪಡಿಸಲಾಗಿದೆ. ತಮ್ಮ ಇ–ಮೇಲ್ ವಿಳಾಸವನ್ನು ನೋಂದಾಯಿಸಿರುವ ಯಾವುದೇ ಸದಸ್ಯರು, ಅಂಚೆ ಮತಪತ್ರದ ನೋಟೀಸ್, ರಿಮೋಟ್ ಇ–ಮತದಾನಕ್ಕಾಗಿ ಯೂಸರ್ ಐಡಿ ಮತ್ತು ಪಾಸ್‌ವರ್ಡ್ ಸ್ವೀಕರಿಸದಿದ್ದರೆ, ಅಂತಹ ಸದಸ್ಯರು ಅದನ್ನು ಸ್ವೀಕರಿಸಲು ತಮ್ಮ ನೋಂದಾಯಿತ ಇಮೇಲ್ ವಿಳಾಸದಿಂದ einward.ris@kfintech.com ಗೆ ಬರೆಯುವುದರ ಮೂಲಕ ಪಡೆಯಬಹುದು.

ರಿಮೋಟ್ ಇ–ಮತದಾನ ಕಾರ್ಯವಿಧಾನದ ಮೂಲಕ ನಡೆಯುವ ಪೋಸ್ಟಲ್ ಬ್ಯಾಲೆಟ್ ಪ್ರಕ್ರಿಯೆಯು ನ್ಯಾಯಯುತ ಮತ್ತು ಪಾರದರ್ಶಕ ರೀತಿಯಲ್ಲಿ ನಡೆಸಲು ಕಂಪನಿಯ ನಿರ್ದೇಶಕರ ಮಂಡಳಿಯು, ಕಂಪನಿ ಕಾರ್ಯದರ್ಶಿ (ಸದಸ್ಯತ್ವ ಸಂಖ್ಯೆ ಎಫ್‌ಸಿಎಸ್ 5553) ಶ್ರೀ ನಾಗೇಂದ್ರ ಡಿ ರಾವ್ ಅವರನ್ನು ಪರಿವೀಕ್ಷಕರನ್ನಾಗಿ ನೇಮಿಸಿದೆ.

ಇ–ಮತದಾನದ ಫಲಿತಾಂಶಗಳನ್ನು ಶುಕ್ರವಾರ, ಮಾರ್ಚ್ 21, 2025ರಂದು ಅಥವಾ ಮೊದಲು ಪ್ರಕಟಿಸಲಾಗುವುದು ಮತ್ತು ಕಂಪನಿಯ ವೆಬ್‌ಸೈಟ್ www.gokaldasexports.com ಮತ್ತು ಕೆಫಿನ್ ಟೆಕ್‌ನ ವೆಬ್‌ಸೈಟ್ https://evoting.kfintech.com/ ನಲ್ಲಿ ಪ್ರಕಟಣೆ ಮಾಡಲಾಗುವುದು ಜೊತೆಗೆ ಕಂಪನಿಯ ಷೇರುಗಳನ್ನು ಪಟ್ಟಿ ಮಾಡಲಾದ ಸ್ಟಾಕ್ ಎಕ್ಸ್‌ಚೇಂಜ್‌ಗಳೊಂದಿಗೆ ಸಂವಹನ ಮಾಡಲಾಗುತ್ತದೆ.

ಇ–ಮತದಾನಕ್ಕೆ ಸಂಬಂಧಿಸಿದಂತೆ ಸದಸ್ಯರು ಯಾವುದೇ ಪ್ರಶ್ನೆಗಳು/ ಕುಂದುಕೊರತೆಗಳಿಗಾಗಿ https://evoting.kfintech.com (ಕೆಫಿನ್ ಟೆಕ್ ವೆಬ್‌ಸೈಟ್) ನ ಡೌನ್‌ಲೋಡ್ ವಿಭಾಗದಲ್ಲಿ ಲಭ್ಯವಿರುವ ಸಹಾಯ ಮತ್ತು ಪದೇ ಪದೇ ಕೇಳಲಾಗುವ ಪ್ರಶ್ನೆಗಳು (FAQ ಗಳು) ಮತ್ತು ಇ–ಮತದಾನ ಬಳಕೆದಾರರ ಕೈಪಿಡಿಯನ್ನು ವೀಕ್ಷಿಸಬಹುದು ಅಥವಾ ಶ್ರೀ ಶಿವಕುಮಾರ್ ರವರನ್ನು evoting@kfintech.com ನಲ್ಲಿ ಅಥವಾ ಕೆಫಿನ್ ಟೆಕ್‌ನ ಟೋಲ್ ಫ್ರೀ ಸಂಖ್ಯೆ 1–800–309–4001 ಗೆ ಕರೆ ಮಾಡಿ ಸಂಪರ್ಕಿಸಬಹುದು ಅಥವಾ ಕಂಪನಿ ಕಾರ್ಯದರ್ಶಿ ಶ್ರೀ ಗೌರೀಶ್ ಹೆಗಡೆ ಅವರನ್ನು cs@gokaldasexports.com ನ ಮೂಲಕ ಸಂಪರ್ಕಿಸಬಹುದು.

ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್ ಪರವಾಗಿ
ಸಹಿ/–
ಗೌರೀಶ್ ಹೆಗಡೆ
ಕಂಪನಿ ಕಾರ್ಯದರ್ಶಿ

ಸ್ಥಳ : ಬೆಂಗಳೂರು
ದಿನಾಂಕ : ಫೆಬ್ರವರಿ 17, 2025

ಬಿಬಿಎಂಪಿ ಸುಪರ್ದಿಯಲ್ಲಿರುವ ಕೊಳವೆಬಾವಿ, ನೀರು ಶುದ್ಧೀಕರಣ ಘಟಕ ಹಸ್ತಾಂತರ

ನೀರು: ಜಲಮಂಡಳಿಗೆ ಪೂರ್ಣ ಜವಾಬ್ದಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಎಲ್ಲ ಪ್ರದೇಶಗಳಲ್ಲಿ ಏಪ್ರಿಲ್ 1ರಿಂದ ನೀರು ಸರಬರಾಜು, ನಿರ್ವಹಣೆಯ ಜವಾಬ್ದಾರಿಯನ್ನು ಸಂಪೂರ್ಣವಾಗಿ ಬೆಂಗಳೂರು ಜಲಮಂಡಳಿ ನಿಭಾಯಿಸಲಿದೆ.

ಪಾಲಿಕೆ ಸುಪರ್ದಿಯಲ್ಲಿರುವ ಎಲ್ಲ ಕೊಳವೆಬಾವಿ ಹಾಗೂ ನೀರು ಶುದ್ಧೀಕರಣ ಘಟಕಗಳನ್ನು ಜಲ ಮಂಡಳಿಗೆ ಹಸ್ತಾಂತರಿಸುವ ಪ್ರಕ್ರಿಯೆ ಆರಂಭವಾಗಿದ್ದು, ಮಾರ್ಚ್ ಅಂತ್ಯಕ್ಕೆ ಪೂರ್ಣಗೊಳ್ಳಲಿದೆ. ಬಳಿಕ ಜಲ ಮಂಡಳಿಯೇ ಕುಡಿಯುವ ನೀರಿಗೆ ಸಂಬಂಧಿಸಿದ ಎಲ್ಲ ಕೆಲಸಗಳನ್ನೂ ನಿರ್ವಹಿಸಲಿದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಸುದ್ದಿಗಾರರಿಗೆ ಸೋಮವಾರ ತಿಳಿಸಿದರು.

ಕಾವೇರಿ ಐದನೇ ಹಂತವು ನಗರದಲ್ಲಿ ಈಗಾಗಲೇ ಚಾಲ್ತಿಯಲ್ಲಿರುವುದರಿಂದ ಎಲ್ಲ ಪ್ರದೇಶಗಳಿಗೂ ನೀರು ಸರಬರಾಜು ಮಾಡಬಹುದಾಗಿದೆ. ಹೀಗಾಗಿ, ಕೊಳವೆ ಬಾವಿ ನಿರ್ವಹಣೆ ಸೇರಿದಂತೆ ಕುಡಿಯುವ ನೀರಿಗೆ ಸಂಬಂಧಿಸಿದ ಎಲ್ಲ ಕಾರ್ಯಗಳನ್ನೂ ಜಲಮಂಡಳಿಯೇ ನಿರ್ವಹಿಸಲಿದೆ. ಹೊಸ ಕೊಳವೆಬಾವಿಗಳನ್ನೂ ಪಾಲಿಕೆ ಇನ್ನು ಮುಂದೆ ಕೊರೆಯುವುದಿಲ್ಲ. ಕುಡಿಯುವ ನೀರಿಗೆ ಸಂಬಂಧಿಸಿದ ಎಲ್ಲ ಅನುದಾನಗಳನ್ನೂ ಜಲಮಂಡಳಿಗೆ ವರ್ಗಾಯಿಸಲಾಗುವುದು ಎಂದು ಮಾಹಿತಿ ನೀಡಿದರು.

‘ನಗರದಲ್ಲಿ ಕೆಲವು ಶುದ್ಧ ಕುಡಿಯುವ ನೀರಿನ ಘಟಕಗಳು ಕಾರ್ಯನಿರ್ವಹಿಸದಿರುವುದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ನಗರ ಸಂಚಾರ ಸಂದರ್ಭದಲ್ಲಿ ಗಮನಕ್ಕೆ ಬಂದಿದೆ. ಹೀಗಾಗಿ, ಶುದ್ಧ ಕುಡಿಯುವ ನೀರಿನ ಘಟಕಗಳ ಸ್ಥಿತಿ–ಗತಿಗಳ ಬಗ್ಗೆ ಒಂದು ವಾರದಲ್ಲಿ ವರದಿ ಸಲ್ಲಿಸಲು ಎಲ್ಲ ವಲಯ ಆಯುಕ್ತರಿಗೆ ಸೂಚಿಸಲಾಗಿದೆ. ಯಾವುದಾದರೂ ಸಮಸ್ಯೆ ಇದ್ದರೆ ಅದನ್ನು ಪರಿಹರಿಸಲಾಗುತ್ತದೆ. ಮಾರ್ಚ್ ಅಂತ್ಯದ ವರೆಗೆ ನಮ್ಮ ಕೆಲಸವನ್ನು ನಾವು ಮಾಡಲಿದ್ದೇವೆ’ ಎಂದು ಹೇಳಿದರು.

ಹೊಸ ಖಾತಾ: ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಆಸ್ತಿಗಳಿಗೆ ಹೊಸದಾಗಿ ಖಾತಾ ವಿತರಿಸಲು ವೆಬ್‌ಸೈಟ್ ಆರಂಭಿಸಲಾಗಿದೆ. ಈವರೆಗೆ ಸುಮಾರು 10 ಸಾವಿರ ಆಸ್ತಿ ಮಾಲೀಕರು ಖಾತಾ ಪಡೆದುಕೊಂಡಿದ್ದಾರೆ. ಒಂದು ಬಾರಿಯ ಪರಿಹಾರ ಯೋಜನೆ (ಒಟಿಎಸ್) ಜಾರಿಯಿದ್ದ ವೇಳೆಯೂ ಖಾತೆ ಮಾಡಿಕೊಳ್ಳಲು ಅವಕಾಶ ನೀಡಲಾಗಿತ್ತು. ಆ ಸಂದರ್ಭದಲ್ಲಿ ಸುಮಾರು 80 ಸಾವಿರ ಆಸ್ತಿ ಮಾಲೀಕರು ಖಾತೆ ಮಾಡಿಸಿಕೊಂಡಿದ್ದಾರೆ ಎಂದು ತುಷಾರ್ ಗಿರಿನಾಥ್ ತಿಳಿಸಿದರು.

ನಗರದಲ್ಲಿರುವ ಎಲ್ಲ ಆಸ್ತಿಗಳನ್ನು ತೆರಿಗೆ ವ್ಯಾಪ್ತಿಗೆ ತರಲು ಆಯಾ ವಲಯಗಳಲ್ಲಿ ಅಭಿಯಾನ ಹಮ್ಮಿಕೊಳ್ಳಲಾಗುತ್ತಿದೆ. ಬೆಸ್ಕಾಂ ದತ್ತಾಂಶದೊಂದಿಗೆ ತುಲನೆ ಮಾಡಿದಾಗ, ಸುಮಾರು ಏಳು ಲಕ್ಷ ಆಸ್ತಿಗಳು ತೆರಿಗೆ ವ್ಯಾಪ್ತಿಯಲ್ಲಿಲ್ಲ ಎಂಬುದು ಪತ್ತೆಯಾಗಿದೆ. ಈ ಪೈಕಿ ಒಂದು ಲಕ್ಷ ಆಸ್ತಿಗಳು ತೆರಿಗೆ ಪಾವತಿಸಿದರೂ ಸುಮಾರು ₹100 ಕೋಟಿ ವರಮಾನ ಪಾಲಿಕೆಗೆ ಬರಲಿದೆ’ ಎಂದರು.

‘ರಸ್ತೆ ಸುಧಾರಣೆಗೆ ₹600 ಕೋಟಿ’

ಶಿವಕುಮಾರ್

‘ನಗರದ ರಸ್ತೆಗಳನ್ನು ಸುಧಾರಿಸಲು ₹600 ಕೋಟಿ ಮೊತ್ತದ ಯೋಜನೆಯನ್ನು ಅನುಷ್ಠಾನ ಮಾಡಲಾಗುತ್ತದೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

‘ನಿಮ್ಮ ಬೆಂಗಳೂರು ಸಿಟಿ ರೌಂಡ್ ಅನ್ನು ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರು ಫೋಟೋ ಶೂಟ್ ಎಂದು ಟೀಕಿಸಿದ್ದಾರೆ’ ಎಂದು ಸುದ್ದಿಗಾರರು ಕೇಳಿದಾಗ, ‘ಅಶೋಕ ಅವರು ಅವರ ಸಮಯದಲ್ಲಿ ಕಾರಿನಲ್ಲಿ ಕೂತು ಹೋಗುತ್ತಿದ್ದರಲ್ಲ? ಬಿಜೆಪಿಯವರು ಇರುವುದೇ ಟೀಕೆ ಮಾಡಲು. ನಾವು ನಮ್ಮ ಕರ್ತವ್ಯ ಮಾಡುತ್ತಿದ್ದೇವೆ’ ಎಂದು ಪ್ರತಿಕ್ರಿಯಿಸಿದರು.

‘ವೈಟ್ ಟಾಪಿಂಗ್ ಯೋಜನೆ ದೊಡ್ಡದು. ಅಂತಹ ಯೋಜನೆಗಳನ್ನು ಮುಂದೆಯೂ ಅನುಷ್ಠಾನಗೊಳಿಸಲಾಗುತ್ತದೆ. ನಗರದ ಶಾಸಕರ ಅಭಿಪ್ರಾಯಗಳನ್ನೂ ಪಡೆದಿದ್ದೇನೆ’ ಎಂದರು.

ಸುರಂಗ ರಸ್ತೆಗೆ ಹುಡ್ಕೊ ಸಾಲ: ತುಷಾರ್ ಗಿರಿನಾಥ್



‘ನಗರದಲ್ಲಿ ಸುರಂಗ ರಸ್ತೆ ನಿರ್ಮಿಸಲು ಕೇಂದ್ರ ಸರ್ಕಾರದ ವಸತಿ ಮತ್ತು ನಗರಾಭಿವೃದ್ಧಿ ನಿಗಮ (ಹುಡ್ಕೊ) ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡಲಿದೆ. ಯೋಜನೆಗೆ ಸಂಬಂಧಿಸಿದ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸೇರಿದಂತೆ ಎಲ್ಲ ವಿವರಗಳನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ. ಹಣಕಾಸು ಇಲಾಖೆ ಸೇರಿದಂತೆ ಸಂಬಂಧಪಟ್ಟ ಎಲ್ಲ ಇಲಾಖೆಗಳ ಅಭಿಪ್ರಾಯದೊಂದಿಗೆ ಸಚಿವ ಸಂಪುಟದ ಮುಂದೆ ಮಂಡನೆಯಾಗಲಿದೆ. ಆಡಳಿತಾತ್ಮಕ ಅನುಮೋದನೆ ಸಿಕ್ಕ ಬಳಿಕ ಟೆಂಡರ್ ಆಹ್ವಾನಿಸಲಾಗುತ್ತದೆ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

ಖರೀದಿ ಇಲ್ಲ: ‘ನಗರದ ರಸ್ತೆಗಳಲ್ಲಿ ಕಸ ತೆರವು ಮಾಡಲು ‘ಸ್ವೀಪಿಂಗ್’ ಯಂತ್ರಗಳನ್ನು ಪಾಲಿಕೆ ವತಿಯಿಂದ ಖರೀದಿಸಲು ಸಾಧ್ಯವಿಲ್ಲ. ಅದರ ನಿರ್ವಹಣೆಯ ಅನುಭವ ನಮ್ಮವರಿಗಿಲ್ಲ. ಹೀಗಾಗಿ, ಟೆಂಡರ್ ಕರೆದು ಗುತ್ತಿಗೆ ನೀಡಲಾಗುತ್ತದೆ. ಹೊಸ ಯಂತ್ರ ಖರೀದಿಸಿ ಏಳು ವರ್ಷ ಕಾರ್ಯನಿರ್ವಹಿಸಬೇಕು. ಅವರು ಮಾಡಿದ ಕೆಲಸಕ್ಕೆ ಹಣ ನೀಡಲಾಗುತ್ತದೆ. ಪ್ರತಿ ವರ್ಷ ಸುಮಾರು ₹100 ಕೋಟಿ ವೆಚ್ಚವಾಗಲಿದೆ. ಯೋಜನೆ ಅನುಷ್ಠಾನಕ್ಕೆ, ಸರ್ಕಾರದ ಅನುಮತಿಗಾಗಿ ಕಾಯಲಾಗುತ್ತಿದೆ’ ಎಂದು ಹೇಳಿದರು.

ಗುಣಮಟ್ಟ ಪರಿಶೀಲನೆಗೆ ತನಿಖಾ ತಂಡ

‘ಬಿಬಿಎಂಪಿ ವ್ಯಾಪ್ತಿಯಲ್ಲಿ ನಡೆಯುತ್ತಿರುವ ವೈಟ್ ಟಾಪಿಂಗ್ ಕಾಮಗಾರಿಯ ಗುಣಮಟ್ಟ ಪರಿಶೀಲನೆಗೆ ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ನೇತೃತ್ವದಲ್ಲಿ ತಾಂತ್ರಿಕ ಮತ್ತು ಜಾಗೃತ ಕೋಶದ (ಟಿವಿಸಿಸಿ) ಎಂಜಿನಿಯರ್‌ಗಳ ತಂಡವನ್ನು ರಚಿಸಲಾಗಿದೆ’ ಎಂದು ತುಷಾರ್ ಗಿರಿನಾಥ್ ತಿಳಿಸಿದರು.

‘ಉಪ ಮುಖ್ಯಮಂತ್ರಿಯವರು ಭಾನುವಾರ ನಡೆಸಿದ ಕಾಮಗಾರಿ ಪರಿಶೀಲನೆ ಸಂದರ್ಭದಲ್ಲಿ ಲೋಪ ಕಂಡು ಬಂದ ಕಾರಣದಿಂದ ತನಿಖೆಗೆ ಸೂಚಿಸಿದ್ದಾರೆ. ಹೀಗಾಗಿ ತಂಡ ರಚಿಸಲಾಗಿದೆ’ ಎಂದರು.

ಕುಡಿಯುವ ನೀರು ಪೋಲು ದಂಡ ವಿಧಿಸಲು ಆದೇಶ

ಪ್ರಜಾವಾಣಿ ವಾರ್ತೆ

ರಾಮ್‌ಪ್ರಸಾತ್ ಮನೋಹರ್

ಬೆಂಗಳೂರು: ಕುಡಿಯುವ ನೀರನ್ನು ವಾಹನಗಳ ಸ್ವಚ್ಛತೆ, ಕೈದೋಟಕ್ಕೆ, ಕಟ್ಟಡ ನಿರ್ಮಾಣ, ರಸ್ತೆ ನಿರ್ಮಾಣ ಹಾಗೂ ನೆಲ ಸ್ವಚ್ಛತೆಗೆ ಬಳಸುವುದನ್ನು ನಿಷೇಧಿಸಿ ಜಲಮಂಡಳಿ ಆದೇಶ ಹೊರಡಿಸಿದೆ.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಕಾಯ್ದೆ- 1964ರ ಕಲಂ 33 ಮತ್ತು 34ರ ಅನ್ವಯ ಜಲಮಂಡಳಿ ಅಧ್ಯಕ್ಷ ರಾಮ್‌ಪ್ರಸಾತ್ ಮನೋಹರ್ ಸೋಮವಾರ ಈ ಆದೇಶ ಹೊರಡಿಸಿದ್ದಾರೆ.

‘ಸಿನಿಮಾ ಮಂದಿರ ಮತ್ತು ಮಾಲ್‌ಗಳಲ್ಲಿ ಕುಡಿಯುವ ನೀರಿಗಲ್ಲದೇ, ಇತರೆ ಚಟುವಟಿಕೆಗಳಿಗೆ ಬಳಸುವುದನ್ನು ನಿಷೇಧಿಸಲಾಗಿದೆ’ ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ.

ಆದೇಶ ಉಲ್ಲಂಘಿಸುವವರ ವಿರುದ್ಧ ಜಲಮಂಡಳಿ ಕಾಯ್ದೆಯ ಕಲಂ 109ರ ಅನ್ವಯ ₹500 ದಂಡ ವಿಧಿಸಲಾಗುವುದು. ಉಲ್ಲಂಘನೆ ಮರುಕಳಿಸಿದರೆ ದಂಡದ ಮೊತ್ತ ₹500 ಹಾಗೂ ಹೆಚ್ಚುವರಿಯಾಗಿ ಪ್ರತಿ ದಿನ ₹500 ದಂಡ ವಿಧಿಸಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಗರದ ವಿವಿಧ ವಾರ್ಡ್‌ಗಳಲ್ಲಿ ಬೇಸಿಗೆಯಲ್ಲಿ ಅಂತರ್ಜಲ ಕುಸಿಯುವ ಸಾಧ್ಯತೆ ಇದ್ದು, ಇದರಿಂದ ನೀರಿನ ಅಭಾವ ಎದುರಾಗಬಹುದು ಎಂದು ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ವಿಜ್ಞಾನಿಗಳು ವರದಿಯಲ್ಲಿ ಎಚ್ಚರಿಸಿದ್ದಾರೆ. ಹಾಗಾಗಿ ಸಾರ್ವಜನಿಕರು ಕುಡಿಯುವ ನೀರನ್ನು ಸಮರ್ಪಕವಾಗಿ ಬಳಸುವ ಹಾಗೂ ಪೋಲು ಮಾಡುವುದನ್ನು ತಪ್ಪಿಸುವುದು ಈ ಆದೇಶದ ಉದ್ದೇಶವಾಗಿದೆ. ಆದೇಶ ಉಲ್ಲಂಘನೆ ಕಂಡುಬಂದಲ್ಲಿ ಸಾರ್ವಜನಿಕರು ಕೂಡಲೇ ಜಲಮಂಡಳಿಯ ಸಹಾಯವಾಣಿ 1916ಕ್ಕೆ ದೂರು ನೀಡಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ದೂರದರ್ಶನ ಚಂದನ ವಾಹಿನಿ ನಿರೂಪಕಿ ಚೇತನಾ ರಾಜೇಂದ್ರ ಹಾಗೂ ಮಿಥಿಕ್ ಸೊಸೈಟಿ ಆಡಳಿತ ಮಂಡಳಿ ಸದಸ್ಯ ಕೆ.ಎಸ್. ಶ್ರೀಧರ್ ಅವರೊಂದಿಗೆ ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆಯ ವಿಜೇತರು

‘ಸ್ಪರ್ಧೆಗಳಿಂದ ಸೃಜನಶೀಲತೆ ವೃದ್ಧಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸ್ಪರ್ಧೆಗಳು ಸೃಜನಶೀಲತೆಯನ್ನು ಹೆಚ್ಚಿಸಿ, ಭಾರತವನ್ನು ಉನ್ನತ ಸ್ಥಾನಕ್ಕೆ ತಲುಪಿಸಲು ಯುವ ಶಕ್ತಿಯನ್ನು ತಯಾರು ಮಾಡುತ್ತಿವೆ’ ಎಂದು ಮಿಥಿಕ್ ಸೊಸೈಟಿ ಆಡಳಿತ ಮಂಡಳಿ ಸದಸ್ಯ ಕೆ.ಎಸ್. ಶ್ರೀಧರ್ ಹೇಳಿದರು.

ವಿವೇಕಾನಂದ ಜಯಂತಿ ಪ್ರಯುಕ್ತ ಮಿಥಿಕ್ ಸೊಸೈಟಿ ಹಾಗೂ ಸಮರ್ಥ ಭಾರತದ ವತಿಯಿಂದ ಕಾಲೇಜು ವಿದ್ಯಾರ್ಥಿಗಳಿಗಾಗಿ ಆಯೋಜಿಸಲಾಗಿದ್ದ ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆಯ ಬಹುಮಾನ ವಿತರಣಾ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಸ್ಪರ್ಧೆಯಲ್ಲಿ ಗೆಲುವು ಅಥವಾ ಸೋಲು ಮುಖ್ಯವಲ್ಲ, ಭಾಗವಹಿಸುವುದು ಮುಖ್ಯ. ತಮ್ಮಲ್ಲಿರುವ ಪ್ರತಿಭೆಗಳನ್ನು, ಸಾಮರ್ಥ್ಯವನ್ನು ಪ್ರದರ್ಶಿಸಲು ಸ್ಪರ್ಧೆಗಳು ಸಹಕಾರಿ’ ಎಂದರು.

ದೂರದರ್ಶನ ಚಂದನ ವಾಹಿನಿ ನಿರೂಪಕಿ ಚೇತನಾ ರಾಜೇಂದ್ರ ಮಾತನಾಡಿ, ‘ಈ ಸ್ಪರ್ಧೆಯ ಮೂಲಕ ನಿಮ್ಮ ಜೀವನದಲ್ಲಿ ವಿವೇಕಾನಂದರ ಅಧ್ಯಯನದ ಪ್ರಾರಂಭವಾಗಿದೆ. ಅದನ್ನು ಮುಂದುವರಿಸಿದರೆ ಯಶಸ್ಸು ಸಿಗಲಿದೆ. ಉತ್ತಮ ವಿಚಾರಗಳಿಂದ ನಾವು ಸಮಾಜದಲ್ಲಿ ತೊಡಗಿಸಿಕೊಳ್ಳಬೇಕು’ ಎಂದರು.

‘3 ಕೃಷಿ ಕಾಯ್ದೆ ವಾಪಸ್ ಪಡೆಯಿರಿ’

ಬಜೆಟ್ ಪೂರ್ವಭಾವಿ ಸಭೆಯಲ್ಲಿ ಮುಖ್ಯಮಂತ್ರಿಗೆ ರೈತರ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರೈತ ವಿರೋಧಿ ಮೂರು ಕೃಷಿ ಕಾಯ್ದೆಗಳನ್ನು ರಾಜ್ಯ ಸರ್ಕಾರ ತಕ್ಷಣ ವಾಪಸ್ ಪಡೆಯಬೇಕು. ವಿದ್ಯುತ್ ಖಾಸಗೀಕರಣ ಮಾಡುವುದಿಲ್ಲವೆಂದು ನಿರ್ಣಯ ತೆಗೆದುಕೊಂಡು ಕೇಂದ್ರಕ್ಕೆ ಕಳುಹಿಸಬೇಕು’ ಎಂಬ ಬೇಡಿಕೆಗಳನ್ನು ರೈತ ಸಂಘಟನೆಗಳ ಪ್ರಮುಖರು ಮಂಡಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಧಾನಸೌಧದಲ್ಲಿ ಸೋಮವಾರ ನಡೆದ ರೈತ ಸಂಘಟನೆಗಳ ಪ್ರಮುಖರ ಜತೆ ಬಜೆಟ್ ಪೂರ್ವಭಾವಿ ಸಭೆ ನಡೆಸಿದರು.

ಸಭೆಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷ ಎಚ್.ಆರ್. ಬಸವರಾಜಪ್ಪ, ಕಾಂಗ್ರೆಸ್‌ನ ಕಿಸಾನ್ ಘಟಕದ ಅಧ್ಯಕ್ಷ ಸಚಿನ್ ಮೀಗಾ, ರೈತ ಸಂಘಟನೆ ಪ್ರಮುಖ ಕೋಡಿಹಳ್ಳಿ ಚಂದ್ರಶೇಖರ್, ಸಿದಗೌಡ ಮೋದಗಿ ಮೊದಲಾದವರು ಭಾಗವಹಿಸಿದ್ದರು.

‘ವಿದ್ಯುತ್ ಪಂಪ್‌ಸೆಟ್‌ಗಳ ಅಕ್ರಮ–ಸಕ್ರಮ ಯೋಜನೆಯಡಿಯಲ್ಲಿ ಸಾಕಷ್ಟು ಪ್ರಕರಣಗಳು ಬಾಕಿ ಇದ್ದು, ತಕ್ಷಣವೇ ತಂತಿ, ಕಂಬ, ಟಿ.ಸಿಗಳನ್ನು ಕೊಡಿಸಬೇಕು, ಕಬ್ಬಿನ ಬಾಕಿ ಹಣವನ್ನು ತಕ್ಷಣ ಕೊಡಬೇಕು’ ಎಂದು ರೈತ ನಾಯಕರು ಆಗ್ರಹಿಸಿದರು.

‘ರೈತರು ಮತ್ತು ಸರ್ಕಾರ ಸೇರಿ ತಲಾ ಶೇ 50ರಷ್ಟು ಹಣದೊಂದಿಗೆ ವಿಮೆ ಕಂಪನಿಗಳ ಜೊತೆ ಚರ್ಚಿಸಿ ಜಾನುವಾರು ವಿಮೆ ಜಾರಿ ಮಾಡಬೇಕು. ರೈತರು ಆಕಸ್ಮಿಕ ಮರಣ ಹೊಂದಿದರೆ ನೀಡುವ ಪರಿಹಾರ ಧನವನ್ನು ₹3 ಲಕ್ಷಕ್ಕೆ ಹೆಚ್ಚಿಸಬೇಕು, ರೈತರ ಮೇಲಿನ ಎಲ್ಲ ಮೊಕದ್ದಮೆಗಳನ್ನು ವಾಪಸ್ ಪಡೆಯಬೇಕು’ ಎಂದು ಆಗ್ರಹಿಸಿದರು.

‘ವಾಣಿವಿಲಾಸ ಸಾಗರ ಹಿನ್ನೀರಿನಲ್ಲಿ ಭೂಮಿ ಕಳೆದುಕೊಂಡ ರೈತ ಕುಟುಂಬಗಳಿಗೆ ತಕ್ಷಣ ವಸತಿ ಸೌಲಭ್ಯ ಕಲ್ಪಿಸಿಕೊಡಬೇಕು. ವಿವಿಧ ಯೋಜನೆಗಳಿಗೆ ಭೂಸ್ವಾಧೀನ ಮಾಡಿದ ಬಳಿಕ ಬಳಕೆ ಮಾಡದೆ ಉಳಿದಿರುವ ಜಮೀನುಗಳನ್ನು ರೈತರಿಗೆ ವಾಪಸ್ ನೀಡಬೇಕು, ಫಲವತ್ತಾದ ಕೃಷಿ ಭೂಮಿಯನ್ನು ಭೂಸ್ವಾಧೀನ ಮಾಡಬಾರದು’ ಎಂದು ಒತ್ತಾಯಿಸಿದರು.

‘ರೈತರ ಹಿತ ಕಾಯುವಲ್ಲಿ ಹಿಂದೆ ಬಿದ್ದಿಲ್ಲ’

ಸಿದ್ದರಾಮಯ್ಯ

ಕರ್ನಾಟಕ ಸರ್ಕಾರ ರೈತರ ಹಿತವನ್ನು ಕಾಪಾಡುವುದರಲ್ಲಿ ಹಿಂದೆ ಬಿದ್ದಿಲ್ಲ ಎಂದು ಸಿದ್ದರಾಮಯ್ಯ ಹೇಳಿದರು.

‘ಬಜೆಟ್ ಸಿದ್ಧಪಡಿಸುವಾಗ ರೈತ ಸಂಘಟನೆಗಳ ಮುಖಂಡರ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಇತಿಮಿತಿಯೊಳಗೆ ಸೇರ್ಪಡೆ ಮಾಡಲಾಗುವುದು. ನಮ್ಮ ಸರ್ಕಾರ ಯಾವತ್ತೂ ರೈತರ ಪರವಾಗಿದ್ದು, ಕೃಷಿ ಕ್ಷೇತ್ರ ಬೆಳವಣಿಗೆಗೆ ಪೂರಕವಾಗಿ ನಡೆದುಕೊಳ್ಳುತ್ತಿದೆ’ ಎಂದು ಪ್ರತಿಪಾದಿಸಿದರು.

ಗೀತೂಸ್ ಗ್ರಾವಿಟಿ ಡಿಸೈನರ್ ಸ್ಟುಡಿಯೊ ಮತ್ತು ರಿದಮ್ಸ್ ತಂಡ ಹಮ್ಮಿಕೊಂಡಿದ್ದ ಫ್ಯಾಷನ್ ಶೋದಲ್ಲಿ ಕಲಾವಿದರು ಭಾಗವಹಿಸಿದ್ದರು

ಪ್ರತಿಭಾನ್ವೇಷಣೆಗಾಗಿ ಫ್ಯಾಷನ್ ಶೋ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿಭಾನ್ವೇಷಣೆ ಮತ್ತು ಹೊಸ ಮುಖಗಳನ್ನು ಪ್ರೋತ್ಸಾಹಿಸಲು ಮಲ್ಲೇಶ್ವರದ ರಿಜಾಯ್ಸ್ ಸಭಾಂಗಣದಲ್ಲಿ ಫ್ಯಾಷನ್ ಶೋ ನಡೆಯಿತು.

ಗೀತಾ ರಾಮಚಂದ್ರ ಒಡೆತನದ ಗೀತೂಸ್ ಗ್ರಾವಿಟಿ ಡಿಸೈನರ್ ಸ್ಟುಡಿಯೊ, ಭರತ್ ರಾಮಾನುಜಂ ಒಡೆತನದ ರಿದಮ್ಸ್ ತಂಡ ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದವು.

ನಟಿ, ನೃತ್ಯಗಾರ್ತಿ ನಮಿತಾ ರಾವ್, ನಟ, ನಿರ್ದೇಶಕ ವಿಕ್ರಮ್ ಸೂರಿ, ನಟ ಭಾರ್ಗವ್, ಸನ್ ನೆಟ್‌ವರ್ಕ್‌ಗಳ ಚಾನೆಲ್ ಮುಖ್ಯಸ್ಥ ಭುವನ್ ಶಾಸ್ತ್ರಿ ಭಾಗವಹಿಸಿದ್ದರು.

ನಿಧನವಾರ್ತೆ

ಕೆ.ಆರ್.ವೆಂಕಟರಾಮು

ಬೆಂಗಳೂರು: ಹೈಕೋರ್ಟ್‌ನ ವಕೀಲರಾಗಿದ್ದ ಕೆ.ಆರ್. ವೆಂಕಟರಾಮು (76) ಅವರು ಅನಾರೋಗ್ಯದಿಂದ ಸೋಮವಾರ ನಿಧನರಾದರು.

ಮೃತರಿಗೆ ಪತ್ನಿ ಮತ್ತು ಒಬ್ಬ ಪುತ್ರಿ ಇದ್ದಾರೆ.

ವೆಂಕಟರಾಮು ಅವರು ಮಾಗಡಿ ತಾಲ್ಲೂಕಿನ ಕಲ್ಯ ಗ್ರಾಮದವರು.

ಮೃತರ ಅಂತ್ಯಕ್ರಿಯೆ ಮಂಗಳವಾರ ಕೆಂಗೇರಿ ಚಿತಾಗಾರದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಾಕಳಿ ಸಮೀಪ ಸೋಮವಾರ ನಡೆದ ಅಪಘಾತದಲ್ಲಿ ನಜ್ಜುಗುಜ್ಜಾಗಿರುವ ಕಾರು

ಕಾರು ಅಪಘಾತ ಇಬ್ಬರ ಸಾವು

ಪ್ರಜಾವಾಣಿ ವಾರ್ತೆ

ದೊಡ್ಡಬಳ್ಳಾಪುರ: ತಾಲ್ಲೂಕಿನ ಹಿಂದೂಪುರ ರಾಜ್ಯ ಹೆದ್ದಾರಿಯ ಮಾಕಳಿ ಬಳಿ ಸೋಮವಾರ ಕಾರು-ಲಾರಿ ನಡುವೆ ನಡೆದ ಅಪಘಾತದಲ್ಲಿ ಕಾರಿನ ಚಾಲಕ ಸೇರಿದಂತೆ ಇಬ್ಬರು ಮೃತಪಟ್ಟಿದ್ದಾರೆ.

ಕಾರಿನಲ್ಲಿದ್ದ ಬೆಂಗಳೂರಿನ ನಂದಿನಿ ಲೇಔಟ್ ನಿವಾಸಿ ಚೇತನ್(24) ಹಾಗೂ ವಸಂತ್(21) ಮೃತ ಪಟ್ಟಿದ್ದಾರೆ. ಕಾರಿನಲ್ಲಿದ್ದ ಕಿರಣ್, ಯಶವಂತ್ ಎಂಬುವವರು ಗಂಭೀರವಾಗಿ ಗಾಯಗೊಂಡಿದ್ದಾರೆ. ಅವರನ್ನು ಬೆಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಅಪಘಾತದ ರಭಸಕ್ಕೆ ಕಾರು ನಜ್ಜುಗುಜ್ಜಾಗಿದೆ ಎಂದು ಗ್ರಾಮಾಂತರ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಸಾದಿಕ್ ಪಾಷಾ ತಿಳಿಸಿದ್ದಾರೆ. ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಂಜುನಾಥ್ ಎಂ. ಹಳ್ಳೂರ್ ಐಸಿಎಐ ಅಧ್ಯಕ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಚಾರ್ಟೆಡ್ ಅಕೌಂಟೆಂಟ್ಸ್ ಸಂಸ್ಥೆ (ಐಸಿಎಐ) ಬೆಂಗಳೂರು ಶಾಖೆಯ 56ನೇ ಅಧ್ಯಕ್ಷರಾಗಿ ಮಂಜುನಾಥ್ ಎಂ. ಹಳ್ಳೂರ್ ಹಾಗೂ ಉಪಾಧ್ಯಕ್ಷರಾಗಿ ಕವಿತಾ ಪರಮೇಶ ಆಯ್ಕೆಯಾಗಿದ್ದಾರೆ.

ಐಸಿಎಐ ಬೆಂಗಳೂರು ಶಾಖೆಯ ಅಧ್ಯಕ್ಷ ಹಾಗೂ ಪದಾಧಿಕಾರಿಗಳ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಮುಪ್ಪಣ್ಣ (ಕಾರ್ಯದರ್ಶಿ), ಶ್ರೀಪಾದ್ ಎಚ್. ನಾರಾಯಣ್ (ಖಜಾಂಜಿ), ನಿಶ್ಚಲ್ ಆರ್.ಬದ್ರಿನಾಥ್ (ಸಿಕಾಸಾ ಅಧ್ಯಕ್ಷ), ಚಂದ್ರ ಪ್ರಕಾಶ್ ಜೈನ್, ವಿನೋದ್ ಗರ್ಗ್, ರಾಘವೇಂದ್ರ ಹೆಗ್ಡೆ, ಶ್ರೀರಕ್ಷಾ. ಕೆ.ಎನ್ (ವ್ಯವಸ್ಥಾಪಕ ಸಮಿತಿ ಸದಸ್ಯರು), ಮಧುಕರ್ ಎನ್. ಹಿರೇಗಂಗೆ (ಕೌನ್ಸಿಲ್ ಸದಸ್ಯ), ಪ್ರಮೋದ್ ಆರ್. ಹೆಗ್ಡೆ, ಪಂಪಣ್ಣ ಬಿ.ಇ (ಪ್ರಾದೇಶಿಕ ಕೌನ್ಸಿಲ್ ಸದಸ್ಯರು) ಆಯ್ಕೆಯಾಗಿದ್ದಾರೆ.

‘ಯಾಕೆ ಚಾಕು ಇರಿದೆ ಎಂದು ಗೊತ್ತಿಲ್ಲ’

ನಾಲ್ವರಿಗೆ ಚಾಕು ಇರಿದಿದ್ದ ರೌಡಿ ಕದಂಬನ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಲ್ವರಿಗೆ ಚಾಕು ಇರಿದಿದ್ದ ರೌಡಿ ಕದಂಬನನ್ನು ಎಂಟು ದಿನ ಕಸ್ಟಡಿಗೆ ಪಡೆದಿರುವ ಇಂದಿರಾನಗರ ಪೊಲೀಸರು, ವಿಚಾರಣೆ ತೀವ್ರಗೊಳಿಸಿದ್ದಾರೆ.

‘ದ್ವಿಚಕ್ರ ವಾಹನ ಸವಾರ ಹೊರತುಪಡಿಸಿ ಉಳಿದ ಮೂವರಿಗೆ ಯಾಕೆ ಚಾಕು ಇರಿದೆ ಎಂದು ಗೊತ್ತಾಗಿಲ್ಲ’ ಎಂದು ಹೇಳಿಕೆ ನೀಡಿದ್ದಾನೆ. ಈ ಬಗ್ಗೆ ಹೆಚ್ಚಿನ ವಿಚಾರಣೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಶುದ್ಧ ನೀರು ಘಟಕದಿಂದ ಕುಡಿಯಲು ನೀರು ತರಲು ಬೈಕ್‌ನಲ್ಲಿ ಹೋಗುತ್ತಿದ್ದ ಜಸ್ವಂತ್ ಅವರನ್ನು ಅಡ್ಡಗಟ್ಟಿ, ಡ್ರಾಪ್ ಕೇಳಿದೆ. ಎಡಕ್ಕೆ ಹೋಗುವಂತೆ ಸೂಚಿಸಿದರೂ ಬಲಕ್ಕೆ ಹೋಗಿದ್ದರು. ಹೀಗಾಗಿ, ಚಾಕುವಿನಿಂದ ಅವರ ಮೇಲೆ ಹಲ್ಲೆ ಮಾಡಿದ್ದೆ ಎಂದು ಹೇಳಿಕೆ ನೀಡಿದ್ದಾನೆ’ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಕದಂಬ

ಪದೇ ಪದೇ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿದ್ದ ಆರೋಪಿಯನ್ನು ಈ ಹಿಂದೆ ಬಂಧಿಸಿ ವಿಚಾರಣೆಗೆ ಒಳಪಡಿಸಿದಾಗ ಇದೇ ರೀತಿಯ ಹೇಳಿಕೆ ನೀಡಿದ್ದ. ಹಾಗಾಗಿ ಕಳೆದ ವರ್ಷ ಈತನನ್ನು ರೌಡಿಪಟ್ಟಿಗೆ ಸೇರಿಸಲಾಗಿತ್ತು. ಈತನ ಸಹೋದರ ವಿಷ್ಣು ಕೂಡ ರೌಡಿಶೀಟರ್ ಆಗಿದ್ದು, ಈ ಹಿಂದೆ ಪೂರ್ವ ವಿಭಾಗ ಠಾಣೆಯವರು ಗಡೀಪಾರು ಮಾಡಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಫೆಬ್ರುವರಿ 8ರ ರಾತ್ರಿ 20 ನಿಮಿಷದ ಅವಧಿಯಲ್ಲಿ ಇಂದಿರಾನಗರ ಮೂರನೇ ಅಡ್ಡರಸ್ತೆಯಲ್ಲಿ ಜಸ್ವಂತ್, ತಮ್ಮಯ್ಯ, ಮಹೇಶ್ ಸೀತಾಪತಿ ಹಾಗೂ ದೀಪಕ್ ಕುಮಾರ್ ಎಂಬುವವರಿಗೆ ಚಾಕುವಿನಿಂದ ಇರಿದು ಪರಾರಿಯಾಗಿದ್ದ ಕದಂಬನನ್ನು ಹೊಸಕೋಟೆಯಲ್ಲಿ ಬಂಧಿಸಲಾಗಿತ್ತು. ಪರಾರಿಯಾಗಲು ಸಹಕರಿಸಿದ್ದ ತಂದೆ ಸುರೇಶ್, ಸಹೋದರ ವಿಷ್ಣು ಹಾಗೂ ಅಕ್ಕ ಸುಶ್ಮಿತಾ ಅವರನ್ನು ಬಂಧಿಸಲಾಗಿತ್ತು.

ಐಶ್ವರ್ಯಾ ಗೌಡ ವಿರುದ್ಧ ಹಣ ವಂಚನೆ ಆರೋಪ: ₹70 ಕೋಟಿ ವಹಿವಾಟು ನಡೆದಿರುವುದು ಪತ್ತೆ

ಆಸ್ತಿ ಮೂಲ ಪರಿಶೀಲನೆಗೆ ಇ.ಡಿ.ಗೆ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವಜನಿಕರಿಗೆ ಹಣ, ಚಿನ್ನ ವಂಚಿಸಿದ ಆರೋಪ ಎದುರಿಸುತ್ತಿರುವ ಐಶ್ವರ್ಯಾ ಗೌಡ ಅವರ ಆಸ್ತಿ ಮೂಲದ ಕುರಿತು ಪರಿಶೀಲನೆ ಮಾಡುವಂತೆ ಕೋರಿ ಜಾರಿ ನಿರ್ದೇಶನಾಲಯಕ್ಕೆ (ಇ.ಡಿ.) ಪೊಲೀಸರು ಪತ್ರ ಬರೆದಿದ್ದಾರೆ.



ಐಶ್ವರ್ಯಾಗೌಡ

ಮಾಜಿ ಸಂಸದ ಡಿ.ಕೆ.ಸುರೇಶ್ ಸಂಬಂಧಿ ಎಂಬುದಾಗಿ ಹೇಳಿಕೊಂಡು ಚಿನ್ನದ ವ್ಯಾಪಾರಿ, ಉದ್ಯಮಿ ಹಾಗೂ ವೈದ್ಯರಿಂದ ಕೋಟ್ಯಂತರ ರೂಪಾಯಿ ಪಡೆದು, ವಾಪಸ್ ನೀಡದೆ ವಂಚನೆ ಮಾಡಿರುವ ಸಂಬಂಧ ಐಶ್ವರ್ಯಾಗೌಡ ವಿರುದ್ಧ ವಿವಿಧ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿದ್ದು, ಜಾಮೀನಿನ ಮೇಲೆ ಹೊರಗಿದ್ದಾರೆ.

ಪ್ರಕರಣದ ತನಿಖೆ ನಡೆಸುತ್ತಿರುವ ಪೊಲೀಸರು, ಅವರ ಮನೆ ಮೇಲೆ ದಾಳಿ ನಡೆಸಿದ್ದ ವೇಳೆ ಚಿನ್ನಾಭರಣ, ಬೆಳ್ಳಿ ಹಾಗೂ ಐಷಾರಾಮಿ ಕಾರುಗಳನ್ನು ಜಪ್ತಿ ಮಾಡಿದ್ದರು. ಬ್ಯಾಂಕ್ ಖಾತೆ ಪರಿಶೀಲನೆ ವೇಳೆ ಸುಮಾರು ₹70 ಕೋಟಿ ವಹಿವಾಟು ನಡೆದಿರುವುದು ಪತ್ತೆಯಾಗಿತ್ತು. ಹಾಗಾಗಿ ಕೆಲ ದಿನಗಳ ಹಿಂದೆ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳಿಗೆ ಪತ್ರ ಬರೆದಿದ್ದರು. ಈಗ ಜಾರಿ ನಿರ್ದೇಶನಾಲಯಕ್ಕೂ ಪತ್ರ ಬರೆದಿದ್ದಾರೆ.

ಐಶ್ವರ್ಯಾ ಅವರು ರಾಜ್ಯದ ಹಲವು ಪ್ರಭಾವಿ ರಾಜಕಾರಣಿಗಳ ಜತೆಗೆ ಸಂಪರ್ಕ ಹೊಂದಿರುವುದು ಹಾಗೂ ಹಲವರಿಗೆ ವಂಚಿಸಿದ ಹಣದಲ್ಲಿ ರಾಜಕಾರಣಿಗಳ ಜತೆಗೆ ವಹಿವಾಟು ನಡೆಸಿರುವ ಬಗ್ಗೆಯೂ ಪೊಲೀಸರಿಗೆ ಮಾಹಿತಿ ಸಿಕ್ಕಿದೆ.

ಈ ನಡುವೆ ಪ್ರಕರಣದ ತನಿಖಾಧಿಕಾರಿಯೂ ಆಗಿರುವ ಎಸಿಪಿ ಭರತ್ ರೆಡ್ಡಿ ವಿರುದ್ಧ ಆರೋಪ ಮಾಡಿರುವ ಐಶ್ವರ್ಯಾ ಗೌಡ, ‘ನನ್ನ ಮನೆಗೆ ಮಹಜರು ಮಾಡಲು ಬಂದ ಸಂದರ್ಭದಲ್ಲೂ ಅಧಿಕಾರಿ ಸರಿಯಾಗಿ ನಡೆದುಕೊಂಡಿಲ್ಲ. ಮನೆಯ ಮಾಲೀಕರಿಗೆ ನನ್ನ ಬಗ್ಗೆ ಕೆಟ್ಟದಾಗಿ ಹೇಳಿದ್ದಾರೆ. ಭರತ್ ರೆಡ್ಡಿ ಅವರಿಂದ ವೈಯಕ್ತಿಕವಾಗಿ ತೊಂದರೆ ಆಗುತ್ತಿದೆ ಎಂಬ ವಿಚಾರಕ್ಕೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ಪ್ರಮಾಣಪತ್ರ ಸಲ್ಲಿಸಿದ್ದೆ. ಇದರಿಂದ ಕೋಪಗೊಂಡು ನನ್ನ ವಿರುದ್ಧ ತನಿಖಾ ಸಂಸ್ಥೆಗೆ ಪತ್ರ ಬರೆದಿದ್ದಾರೆ’ ಎಂದು ಐಶ್ವರ್ಯಾ ಗೌಡ ಮಾಧ್ಯಮಗಳಿಗೆ ತಿಳಿಸಿದ್ದಾರೆ.

‘ಡಿ.ಕೆ.ಸುರೇಶ್ ಅವರಿಗೂ ನಮಗೂ ಯಾವುದೇ ಸಂಬಂಧ ಇಲ್ಲ. ನಾನು ತಪ್ಪು ಮಾಡಿದ್ದೇನೋ ಇಲ್ಲವೋ ಎಂಬುದು ಮುಂದೆ ಗೊತ್ತಾಗುತ್ತದೆ. ಪೊಲೀಸ್ ಅಧಿಕಾರಿಯೊಬ್ಬರ ಜತೆ ಗೋವಾ ಪ್ರವಾಸ ಹೋಗಿದ್ದೆ ಎಂಬ ಆರೋಪವೂ ಸುಳ್ಳು. ಈ ರೀತಿಯ ಆರೋಪಗಳನ್ನು ಯಾಕೆ ಮಾಡುತ್ತಾರೋ ಗೊತ್ತಿಲ್ಲ. ನನ್ನ ಕುಟುಂಬದವರನ್ನು ಹೊರತುಪಡಿಸಿ ಯಾರ ಜತೆಯೂ ಪ್ರವಾಸ ಹೋಗಿಲ್ಲ. ನ್ಯಾಯ ಸಿಗುವವರೆಗೂ ಹೋರಾಡುತ್ತೇನೆ’ ಎಂದು ಹೇಳಿದ್ದಾರೆ.

‘ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ನನ್ನನ್ನು ಕಚೇರಿಗೆ ಕರೆಸಿಕೊಂಡು ವಿಚಾರಣೆ ಮಾಡಿ ಕಳುಹಿಸಿದರು. ಆದರೆ, ವಿಚಾರಣೆಗೆ ಕರೆಸಿಕೊಳ್ಳುವ ಪೊಲೀಸರು, ಸಂಜೆ 6 ಗಂಟೆಗೆ ವಿಚಾರಣೆ ಮುಕ್ತಾಯವಾಗಿದೆ ಎಂಬ ಪತ್ರಕ್ಕೆ ಸಹಿ ಮಾಡಿಸಿಕೊಳ್ಳುತ್ತಾರೆ. ಆದರೆ, ರಾತ್ರಿವರೆಗೂ ವಿಚಾರಣೆ ಮಾಡುತ್ತಾರೆ’ ಎಂದು ಆರೋಪಿಸಿದರು.

ಸೇಫ್ಟಿ ಗಾರ್ಡ್ ಮೇಲೆ ನಿಂತು ಪ್ರಯಾಣ, ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರಿನ ಹಿಂಬದಿಯ ಸೇಫ್ಟಿ ಗಾರ್ಡ್ ಮೇಲೆ ನಿಂತು ಪ್ರಯಾಣಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಚಾಲಕ ಸೇರಿ ಮೂವರನ್ನು ಕಾಮಾಕ್ಷಿ ಪಾಳ್ಯ ಠಾಣೆ ಸಂಚಾರ ಪೊಲೀಸರು ಬಂಧಿಸಿದ್ದಾರೆ.

ಯಾದಗಿರಿಯ ಕರಿಯ (21), ಈತನ ಸ್ನೇಹಿತರಾದ ಸುರೇಶ್ ಕುಮಾರ್ ಮತ್ತು ಚನ್ನಬಸವ ಅವರನ್ನು ಬಂಧಿಸಿದ್ದು, ಬಳಿಕ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ನಾಗರಬಾವಿ ನಿವಾಸಿ ಕರಿಯ ಕ್ಯಾಬ್ ಚಾಲಕನಾಗಿದ್ದು, ಫೆಬ್ರುವರಿ 8ರಂದು ಬೆಳಿಗ್ಗೆ ಸ್ನೇಹಿತರ ಜತೆ ಕಾರಿನಲ್ಲಿ ತಿಂಡಿ ತಿನ್ನಲು ಹೋಗಿದ್ದರು. ಈ ವೇಳೆ ಹಿಂಬದಿಯ ಸೇಫ್ಟಿ ಗಾರ್ಡ್ ಬಗ್ಗೆ ಮಾತು ಬಂದಿದೆ. ಆಗ ಸುರೇಶ್ ಮತ್ತು ಚನ್ನಬಸವ ಕಾರು ನಿಲ್ಲಿಸುವಂತೆ ಸ್ನೇಹಿತನಿಗೆ ಹೇಳಿ, ಹಿಂಬದಿಯ ಸೇಫ್ಟಿ ಗಾರ್ಡ್ ಮೇಲೆ ಏಕಾಏಕಿ ನಿಂತುಕೊಂಡಿದ್ದಾರೆ. ಬಳಿಕ ಚಾಲಕ ಕರಿಯ ಸುಮಾರು 2 ಕಿ.ಮೀ.ನಷ್ಟು ದೂರ ಕ್ರಮಿಸಿದ್ದಾರೆ.

ಈ ದೃಶ್ಯವನ್ನು ಹಿಂದಿನಿಂದ ಬರುತ್ತಿದ್ದ ಕಾರು ಚಾಲಕರೊಬ್ಬರು ತಮ್ಮ ಮೊಬೈಲ್‌ನಲ್ಲಿ ಸೆರೆಹಿಡಿದು ಸಾಮಾಜಿಕ ಜಾಲತಾಣಗಳಲ್ಲಿ ಅಪ್‌ಲೋಡ್ ಮಾಡಿ ನಗರ ಸಂಚಾರ ಪೊಲೀಸರ ಖಾತೆಗೆ ಟ್ಯಾಗ್ ಮಾಡಿದ್ದರು.

ಪೊಲೀಸರು ಕಾರ್ಯಾಚರಣೆ ನಡೆಸಿ ಕರಿಯ ಮತ್ತು ಸ್ನೇಹಿತರನ್ನು ಪತ್ತೆಹಚ್ಚಿ, ಸ್ವಯಂ ಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಆರೋಪಿಗಳನ್ನು ಬಂಧಿಸಿ, ಬಿಡುಗಡೆ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಮಗು ಕೊಂದು ತಾಯಿ ಆತ್ಮಹತ್ಯೆ

ಪತಿಯ ವಿವಾಹೇತರ ಸಂಬಂಧದ ಆರೋಪ: ಮರಣಪತ್ರದಲ್ಲಿ ಉಲ್ಲೇಖ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೌಟುಂಬಿಕ ಕಲಹದ ಕಾರಣಕ್ಕೆ ನಾಲ್ಕು ವರ್ಷದ ಹೆಣ್ಣು ಮಗುವನ್ನು ಕೊಲೆ ಮಾಡಿದ ಬಳಿಕ ತಾಯಿಯೂ ಆತ್ಮಹತ್ಯೆ ಮಾಡಿಕೊಂಡ ಘಟನೆ ನಾಗಸಂದ್ರದ ಎಂ.ಎಸ್. ರಾಮಯ್ಯ ಲೇಔಟ್‌ನಲ್ಲಿ ನಡೆದಿದೆ.

ಶ್ರುತಿ

ನಾಗಸಂದ್ರ ನಿವಾಸಿಯಾಗಿರುವ ಜೆ.ಕೆ.ಶ್ರುತಿ (34) ಅವರು ತನ್ನ ಮಗಳು ರೋಶಿಣಿಯನ್ನು ನೇಣು ಬಿಗಿದು ಕೊಲೆ ಮಾಡಿ, ಬಳಿಕ ತಾನೂ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಮೃತಳ ತಮ್ಮ ಶಶಿಧರ್ ಅವರ ದೂರಿನ ಮೇರೆಗೆ ಶ್ರುತಿ ಅವರ ಪತಿ ಗೋಪಾಲಕೃಷ್ಣ ಹಾಗೂ ಆತನ ಗೆಳತಿ ಸಾಯಿ ಸುಮಾ ವಿರುದ್ಧ ಬಾಗಲಗುಂಟೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಶ್ರುತಿ ಅವರು ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನ ಬ್ಯಾಡನೂರು ಗ್ರಾಮ ಪಂಚಾಯಿತಿಯ ಹಾಲಿ ಅಧ್ಯಕ್ಷೆಯಾಗಿದ್ದರು. ಲೆಕ್ಕ ಪರಿಶೋಧಕ ಗೋಪಾಲಕೃಷ್ಣ ಅವರನ್ನು ಪ್ರೀತಿಸಿ ಮದುವೆಯಾಗಿದ್ದರು. ಹತ್ತು ವರ್ಷಗಳಿಂದ ರಾಮಯ್ಯ ಲೇಔಟ್‌ನಲ್ಲಿ ವಾಸವಾಗಿರುವ ದಂಪತಿಗೆ ಇಬ್ಬರು ಮಕ್ಕಳು. ಕಚೇರಿ ಕೆಲಸದ ಸಂದರ್ಭದಲ್ಲಿ ಶ್ರುತಿ ಅವರು ಪಂಚಾಯಿತಿಗೆ ಹೋಗಿ ಬರುತ್ತಿದ್ದರು.

ಭಾನುವಾರ ಸಂಜೆ ಪತಿ ಪಾವಗಡಕ್ಕೆ ಹೋಗಿದ್ದ ವೇಳೆ ಶ್ರುತಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ವೇಳೆ ಎಂಟು ವರ್ಷದ ಮಗ ಮನೆಯ ಹೊರಗೆ ಆಟವಾಡುತ್ತಿದ್ದ. ಆತ ಮನೆಯೊಳಗೆ ಬಂದಾಗ ಘಟನೆ ಬಗ್ಗೆ ಗೊತ್ತಾಗಿದೆ. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ, ಶವಗಳನ್ನು ವಾರಸುದಾರರಿಗೆ ಹಸ್ತಾಂತರಿಸಲಾಯಿತು ಎಂದು ಪೊಲೀಸರು ಹೇಳಿದರು.

‘ಗೋಪಾಲಕೃಷ್ಣ ಅವರು ವಿವಾಹೇತರ ಸಂಬಂಧ ಹೊಂದಿದ್ದರು ಹಾಗೂ ವರದಕ್ಷಿಣೆ ಕಿರುಕುಳ ನೀಡುತ್ತಿದ್ದರು ಎಂದು ಶಶಿಧರ್ ದೂರು ನೀಡಿದ್ದಾರೆ. ಮರಣಪತ್ರದಲ್ಲಿ ಈ ವಿಚಾರ ಬರೆದಿದ್ದಾರೆ ಎಂದು ಹೇಳಿದ್ದಾರೆ. ಆದರೆ, ಮರಣಪತ್ರ ಇನ್ನೂ ವಶಪಡಿಸಿಕೊಂಡಿಲ್ಲ. ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಆರೋಪದಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಈವರೆಗೆ ಯಾರನ್ನೂ ಬಂಧಿಸಿಲ್ಲ. ಗೋಪಾಲಕೃಷ್ಣ ಅವರನ್ನು ವಿಚಾರಣೆ ಮಾಡಲಾಗುತ್ತಿದೆ ’ ಎಂದು ಪೊಲೀಸರು ತಿಳಿಸಿದರು.

ಬುದ್ಧಿಮಾತು ಹೇಳಿದ್ದಕ್ಕೆ ಕೊಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾದಕ ವಸ್ತು ಮತ್ತು ಮದ್ಯ ಸೇವನೆ ಬಿಡುವಂತೆ ಬುದ್ಧಿವಾದ ಹೇಳಿದ ತಂದೆಯನ್ನು ಮಗ ಹತ್ಯೆ ಮಾಡಿರುವ ಪ್ರಕರಣ ಬ್ಯಾಡರಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ವರದಿಯಾಗಿದೆ.

ಬಾಲಾಜಿನಗರದ ತಿಗಳರಪಾಳ್ಯ ನಿವಾಸಿ ಚನ್ನಬಸವಯ್ಯ (61) ಕೊಲೆಯಾದವರು. ಕೃತ್ಯ ಎಸಗಿದ ಅವರ ಪುತ್ರ ಅಮಿತ್‌ನನ್ನು (26) ಬಂಧಿಸಲಾಗಿದೆ.

ಮಗನಿಂದಲೇ ಕೊಲೆ

ಬಿಎಸ್‌ಎಫ್‌ನಿಂದ (ಗಡಿ ಭದ್ರತಾ ಪಡೆ) ಒಂದು ವರ್ಷದ ಹಿಂದಷ್ಟೇ ನಿವೃತ್ತಿಯಾಗಿದ್ದ ಚನ್ನಬಸವಯ್ಯ, ಖಾಸಗಿ ಕಂಪನಿಯೊಂದರಲ್ಲಿ ಭದ್ರತಾ ಸಿಬ್ಬಂದಿಯಾಗಿ ಕೆಲಸ ಮಾಡುತ್ತಿದ್ದರು. ಪತ್ನಿ, ಪುತ್ರಿ ಹಾಗೂ ಪುತ್ರನ ಜತೆ ತಿಗಳರಪಾಳ್ಯದಲ್ಲಿ ವಾಸವಾಗಿದ್ದರು.

ಪದವಿ ವ್ಯಾಸಂಗ ಮಾಡಿರುವ ಪುತ್ರ ಅಮಿತ್, ಮಾದಕ ವಸ್ತು ಮತ್ತು ಮದ್ಯ ವ್ಯಸನಿಯಾಗಿದ್ದ. ನಿತ್ಯವೂ ಮದ್ಯ ಸೇವಿಸಿ ಮನೆಗೆ ಬರುತ್ತಿದ್ದ. ಇದೇ ವಿಚಾರಕ್ಕೆ ಮನೆಯಲ್ಲಿ ಯಾವಾಗಲೂ ಗಲಾಟೆ ನಡೆಯುತ್ತಿತ್ತು.

ಸೋಮವಾರ ಸಂಜೆ ಕೂಡ ಇದೇ ವಿಚಾರವಾಗಿ ತಂದೆ-ಮಗನ ನಡುವೆ ಗಲಾಟೆ ಆಗಿದ್ದು, ಮದ್ಯ, ಮಾದಕ ವಸ್ತು ಸೇವನೆಯಿಂದ ದೂರವಿದ್ದು, ಉತ್ತಮ ಕೆಲಸ ಮಾಡುವಂತೆ ಚನ್ನಬಸವಯ್ಯ ಬುದ್ಧಿವಾದ ಹೇಳಿದ್ದಾರೆ.

ಕೋಪಗೊಂಡ ಆರೋಪಿ, ಚಾಕುವಿನಿಂದ ತಂದೆಯ ಎದೆ, ಕುತ್ತಿಗೆ ಭಾಗಕ್ಕೆ ಇರಿದಿದ್ದಾನೆ. ಕೂಡಲೇ ಅವರನ್ನು ಸಮೀಪದ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆದರೆ ಅವರು ಚಿಕಿತ್ಸೆಗೆ ಸ್ಪಂದಿಸಲಿಲ್ಲ. ಸ್ಥಳೀಯರು ನೀಡಿದ ಮಾಹಿತಿ ಮೇರೆಗೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಲಾಗಿದೆ. ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಮುಖ್ಯಾಂಶಗಳು

- ಮಾದಕ ವಸ್ತು ಮತ್ತು ಮದ್ಯ ವ್ಯಸನಿಯಾಗಿದ್ದ ಅಮಿತ್– ಮನೆಯಲ್ಲಿ ಗಲಾಟೆ
- ಕುಡಿತ ಬಿಟ್ಟು ಉತ್ತಮ ಕೆಲಸ ಮಾಡುವಂತೆ ತಂದೆಯಿಂದ ಬುದ್ಧಿವಾದ
- ತಂದೆಯ ಎದೆ, ಕತ್ತಿನ ಭಾಗಕ್ಕೆ ಚೂರಿ ಇರಿತ– ಚಿಕಿತ್ಸೆಗೆ ಸ್ಪಂದಿಸದೆ ಸಾವು

ಹುಂಡಿ ಕಳ್ಳತನ ಇಬ್ಬರ ಬಂಧನ

ಬೆಂಗಳೂರು: ಚಾಮರಾಜಪೇಟೆಯ ವೆಂಕಟರಮಣಸ್ವಾಮಿ ದೇವಸ್ಥಾನದ ಹುಂಡಿ ಹಣ ಕಳವು ಮಾಡಿದ್ದ ಪ್ರಕರಣದಲ್ಲಿ ಕಾನೂನು ಸಂಘರ್ಷಕ್ಕೆ ಒಳಗಾದ ಇಬ್ಬರನ್ನು ಬಂಧಿಸಿ, ನಗದು ಹಾಗೂ ಐದು ದ್ವಿಚಕ್ರ ವಾಹನ ವಶಪಡಿಸಿಕೊಳ್ಳಲಾಗಿದೆ.

ಫೆಬ್ರುವರಿ 11ರ ರಾತ್ರಿ ವೆಂಕಟರಮಣಸ್ವಾಮಿ ದೇವಸ್ಥಾನದ ಹುಂಡಿ ಕಳವು ಆಗಿರುವ ಬಗ್ಗೆ ದೇವಸ್ಥಾನದ ವ್ಯವಸ್ಥಾಪಕ ಶ್ರೀನಿವಾಸ್ ಅವರು ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡ ಪೊಲೀಸರು, ಸಿ.ಸಿ. ಟಿ.ವಿ. ಕ್ಯಾಮೆರಾ ದೃಶ್ಯಗಳು ಹಾಗೂ ಬಾತ್ಮಿದಾರರ ಮಾಹಿತಿ ಆಧರಿಸಿ ಇಬ್ಬರನ್ನು ಬಂಧಿಸಿದರು. ಇಬ್ಬರಿಂದ ದೇವಸ್ಥಾನದ ಹುಂಡಿ, ₹90 ಸಾವಿರ ಮೌಲ್ಯದ ಆಟೊ ರಿಕ್ಷಾ, ₹2.39 ಲಕ್ಷ ಮೌಲ್ಯದ ಐದು ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದರು.

ಮೊಬೈಲ್ ಕಳ್ಳರ ಬಂಧನ

ಬೆಂಗಳೂರು: ಮುಳ್ಳಕಟ್ಟಮ್ಮ ಪಾರ್ಕ್ ಬಳಿ ನಡೆದುಕೊಂಡು ಹೋಗುತ್ತಿದ್ದ ಮಹಿಳೆಯಿಂದ ಮೊಬೈಲ್ ಕಸಿದುಕೊಂಡು ಪರಾರಿಯಾಗಿದ್ದ ಇಬ್ಬರು ಆರೋಪಿಗಳನ್ನು ಚಾಮರಾಜಪೇಟೆ ಪೊಲೀಸರು ಬಂಧಿಸಿದ್ದಾರೆ.

ವಾಲ್ಮೀಕಿನಗರ ನಿವಾಸಿ ತಬ್ರೇಜ್ ಪಾಷಾ (26) ಮತ್ತು ಮೆಹಬೂಬ್ ನಗರದ ಚಾಂದ್ ಪಾಷಾ(19) ಬಂಧಿತರು.

ಫೆಬ್ರುವರಿ 10ರಂದು ಕಸ್ತೂರಬಾ ನಗರ ನಿವಾಸಿ ಜೈಶೀಲಾ ಅವರು ಮುಳ್ಳಕಟ್ಟಮ್ಮ ಪಾರ್ಕ್ ಬಳಿ ನಡೆದುಕೊಂಡು ಹೋಗುವಾಗ ಮೊಬೈಲ್ ಕಸಿದುಕೊಂಡು ಆರೋಪಿಗಳು ಪರಾರಿಯಾಗಿದ್ದರು. ಆರೋಪಿಗಳನ್ನು ಬಂಧಿಸಿ, ₹80,500 ಮೌಲ್ಯದ ದ್ವಿಚಕ್ರ ವಾಹನ, ₹1 ಲಕ್ಷ ಮೌಲ್ಯದ ಐದು ಮೊಬೈಲ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದರು.

ಟ್ರಾಯ್ ಅಧಿಕಾರಿ ಸೋಗಿನಲ್ಲಿ ಕರೆ; ಪೊಲೀಸರಿಂದ ತನಿಖೆ

ಮಹಿಳೆಗೆ ₹42.85 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರ (ಟ್ರಾಯ್) ಹಾಗೂ ಸಿಬಿಐ ಅಧಿಕಾರಿಗಳ ಸೋಗಿನಲ್ಲಿ ಮಹಿಳೆಯೊಬ್ಬರಿಗೆ ಕರೆ ಮಾಡಿದ ಸೈಬರ್ ವಂಚಕರು, ಹಣ ಅಕ್ರಮ ವರ್ಗಾವಣೆ ಪ್ರಕರಣ ದಾಖಲಾಗಿದೆ ಎಂದು ಬೆದರಿಸಿ, ₹42.85 ಲಕ್ಷ ವರ್ಗಾಯಿಸಿಕೊಂಡು ವಂಚನೆ ಮಾಡಿದ್ದಾರೆ.

ಹೂಡಿ ಸರ್ಕಲ್ ನಿವಾಸಿ ಕೆ.ಎನ್. ಸಾವಿತ್ರಿ ಅವರ ದೂರಿನ ಮೇರೆಗೆ ವೈಟ್‌ಫೀಲ್ಡ್ ವಿಭಾಗದ ಸೈಬರ್ ಕ್ರೈಂ ಅಪರಾಧ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

‘ನಿವೃತ್ತ ಸರ್ಕಾರಿ ನೌಕರರಾದ ಸಾವಿತ್ರಿ ಅವರಿಗೆ ಟ್ರಾಯ್ ಅಧಿಕಾರಿ ಹೆಸರಿನಲ್ಲಿ ಕರೆ ಮಾಡಿದ ವ್ಯಕ್ತಿ, ‘ನಿಮ್ಮ ಹೆಸರಿನಲ್ಲಿ ಅಕ್ರಮ ಮಾರ್ಕೆಟಿಂಗ್ ಮತ್ತು ನಿಂದನೆ ಸಂದೇಶಗಳು ಹಲವು ಜನರಿಗೆ ಹೋಗಿವೆ. ಈ ಸಂಬಂಧ ದೂರು ಬಂದಿದ್ದು, ಎಫ್‌ಐಆರ್ ದಾಖಲಾಗಿದೆ. ಈ ಪ್ರಕರಣದಲ್ಲಿ ಸಹಾಯ ಮಾಡಲು ಮುಂಬೈ ಪೊಲೀಸರಿಗೆ ಸಂಪರ್ಕ ಕಲ್ಪಿಸುತ್ತೇನೆ ಎಂದು ಹೇಳಿ, ಅಪರಿಚಿತ ವ್ಯಕ್ತಿಗಳಿಗೆ ಮೊಬೈಲ್ ಕರೆ ಸಂಪರ್ಕ ನೀಡಿದ್ದಾನೆ’ ಎಂದು ಪೊಲೀಸರು ತಿಳಿಸಿದರು.

‘ಬಳಿಕ ಸಿಬಿಐ ಅಧಿಕಾರಿಗಳ ಸೋಗಿನಲ್ಲಿ ಕರೆ ಮಾಡಿದ ಅಪರಿಚಿತರು, ಹಣ ಅಕ್ರಮ ವರ್ಗಾವಣೆ ಪ್ರಕರಣ ದಾಖಲಾಗಿರುವ ಕಾರಣ, ಬ್ಯಾಂಕ್ ಖಾತೆ ಪರಿಶೀಲಿಸಬೇಕು. ಹಾಗಾಗಿ ನಿಮ್ಮ ಖಾತೆಯಲ್ಲಿರುವ ಹಣವನ್ನು ನಾವು ನೀಡುವ ಬ್ಯಾಂಕ್ ಖಾತೆಗೆ ವರ್ಗಾಯಿಸಬೇಕು. ಪರಿಶೀಲನೆ ಬಳಿಕ ಹಣ ವಾಪಸ್ ಹಾಕುತ್ತೇವೆ ಎಂದು ನಂಬಿಸಿದ್ದರು’ ಎಂದು ವಿವರಿಸಿದರು.

‘ಅಪರಿಚಿತರ ಮಾತು ನಂಬಿದ ಸಂತ್ರಸ್ತೆ, ಅವರು ನೀಡಿದ ಬ್ಯಾಂಕ್ ಖಾತೆಗಳಿಗೆ ವಿವಿಧ ಹಂತಗಳಲ್ಲಿ ₹42.85 ಲಕ್ಷ ವರ್ಗಾಯಿಸಿದ್ದಾರೆ. ಬಳಿಕ ವಂಚಕರು ಕರೆ ಸ್ಥಗಿತಗೊಳಿಸಿದ್ದಾರೆ. ಹಲವು ಬಾರಿ ಪ್ರಯತ್ನಿಸಿದರೂ ಸಂಪರ್ಕಕ್ಕೆ ಸಿಗಲಿಲ್ಲ’ ಎಂದರು.

ಸರ್ಕಾರವೇ ಶತಮಾನೋತ್ಸವ ಆಚರಿಸಬೇಕಿತ್ತು: ಮೊಯಿಲಿ

‘ಬಹುಮುಖಿ ವ್ಯಕ್ತಿತ್ವದ ಎಲ್‌ಎಸ್‌ಎಸ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಹುಮುಖಿ ವ್ಯಕ್ತಿತ್ವದ ಸಾಹಿತಿ ಪ್ರೊ.ಎಲ್.ಎಸ್. ಶೇಷಗಿರಿರಾವ್ ಅವರ ಜನ್ಮ ಶತಮಾನೋತ್ಸವವನ್ನು ಸರ್ಕಾರವೇ ಆಚರಿಸಬೇಕಿತ್ತು. ಅದಾಗದಿರುವುದು ವಿಷಾದನೀಯ’ ಎಂದು ಮಾಜಿ ಮುಖ್ಯಮಂತ್ರಿ ಎಂ. ವೀರಪ್ಪ ಮೊಯಿಲಿ ಬೇಸರ ವ್ಯಕ್ತಪಡಿಸಿದರು.

ನಗರದಲ್ಲಿ ಕನ್ನಡ ಗೆಳೆಯರ ಬಳಗ ಆಯೋಜಿಸಿದ್ದ ‘ಪ್ರೊ.ಎಲ್.ಎಸ್. ಶೇಷಗಿರಿರಾವ್ ಜನ್ಮ ಶತಮಾನೋತ್ಸವ ಸಮಾರೋಪ’ ಉದ್ಘಾಟಿಸಿ, ಪ್ರೊ. ಎಲ್‌ಎಸ್‌ಎಸ್ ಗೌರವ ಸ್ವೀಕರಿಸಿ ಅವರು ಮಾತನಾಡಿದರು.

‘ಶೇಷಗಿರಿರಾವ್ ಅವರ ಜನ್ಮ ಶತಮಾನೋತ್ಸವವನ್ನು ಸರ್ಕಾರದಿಂದ ಆಚರಿಸಲಿ ಎಂದು ಕನ್ನಡ ಗೆಳೆಯರ ಬಳಗದವರು ಪ್ರಯತ್ನಿಸಿದ್ದಾರೆ. ಅದು ಸಾಧ್ಯವಾಗಿಲ್ಲ. ಇದು ದುರದೃಷ್ಟಕರ. ಸರ್ಕಾರ ಈಗಲಾದರೂ ಎಲ್.ಎಸ್. ಹೆಸರಿನಲ್ಲಿ ಅಧಿಕೃತ ಕಾರ್ಯಕ್ರಮವೊಂದನ್ನು ಮಾಡಬೇಕು. ಈ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬಳಿ ಮಾತನಾಡುತ್ತೇನೆ’ ಎಂದು ಅವರು ಭರವಸೆ ನೀಡಿದರು.

‘ನನ್ನನ್ನು ಕಾವ್ಯ ಲೋಕದಲ್ಲಿ ಮುನ್ನಡೆಸಿದವರು ಶೇಷಗಿರಿರಾವ್. ಅವರೊಂದಿಗೆ ಅತಿ ಹೆಚ್ಚು ಸಮಯ ಕಳೆದಿರುವ ಕಾರಣದಿಂದಲೇ ನನಗೆ ಮಹಾಕಾವ್ಯಗಳನ್ನು ರಚಿಸಲು ಪ್ರೇರಣೆಯಾಯಿತು. ನನ್ನ ಬದುಕಿನ ಉದ್ದಕ್ಕೂ ಯಶಸ್ವಿಯಾಗಲು ಅವರೊಂದಿಗಿನ ನಿಕಟ ಸಂಪರ್ಕವೇ ಕಾರಣ’ ಎಂದರು.

‘ಗುಂಡೂರಾವ್ ಮುಖ್ಯಮಂತ್ರಿಯಾಗಿದ್ದಾಗ ಶೇಷಗಿರಿರಾವ್ ಅವರು ಮಾಧ್ಯಮ ಕಾರ್ಯದರ್ಶಿಯಾಗಿದ್ದರು. ನಾನು ಮುಖ್ಯಮಂತ್ರಿಯಾಗಿದ್ದಾಗ ಸರ್ಕಾರಕ್ಕೆ ಉತ್ತಮ ಮಾರ್ಗದರ್ಶನ ನೀಡುತ್ತಿದ್ದರು. ಆ ಸಮಯದಲ್ಲಿ ಆರಂಭಿಸಿದ ಕನ್ನಡ ಪುಸ್ತಕ ಪ್ರಾಧಿಕಾರಕ್ಕೆ ಶೇಷಗಿರಿರಾವ್ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಿದ್ದೆ’ ಎಂದು ನೆನಪಿಸಿಕೊಂಡರು.

ಕಾರ್ಯಕ್ರಮದಲ್ಲಿ (ಕುಳಿತವರು ಎಡದಿಂದ) ವ.ಚ.ಚನ್ನೇಗೌಡ, ಪ್ರಧಾನ್ ಗುರುದತ್ತ, ಬಾಬು ಕೃಷ್ಣಮೂರ್ತಿ, ದೊಡ್ಡರಂಗೇಗೌಡ, ವೀರಪ್ಪ ಮೊಯಿಲಿ, ಸಿ.ಎನ್ ರಾಮಚಂದ್ರನ್, ನಾಗಮಣಿ ಎಸ್. ರಾವ್, ವೂಡೇ ಪಿ. ಕೃಷ್ಣ ಮತ್ತು ಆರ್. ರಾಮಕೃಷ್ಣ ಅವರಿಗೆ ‘ಪ್ರೊ.ಎಲ್.ಎಸ್.ಶೇಷಗಿರಿರಾವ್ ಜನ್ಮ ಶತಮಾನೋತ್ಸವ’ ಗೌರವಾರ್ಪಣೆ ಮಾಡಲಾಯಿತು

ಜನ್ಮಶತಮಾನೋತ್ಸವದ ನೆನಪಿಗಾಗಿ ಶೇಷಗಿರಿರಾವ್ ಅವರ ಕುರಿತು ಕನ್ನಡ ಗೆಳೆಯರ ಬಳಗ ಪ್ರಕಟಿಸಿರುವ ‘ಕನ್ನಡ ವಿಶೇಷ ಸಾಹಿತ್ಯ ಗಿರಿ’ ಗ್ರಂಥವನ್ನು ವಿಮರ್ಶಕ ಪ್ರೊ.ಸಿ.ಎನ್.ರಾಮಚಂದ್ರನ್ ಬಿಡುಗಡೆ ಮಾಡಿ ಮಾತನಾಡಿ, ಎಲ್‌ಎಸ್ ಅವರೊಂದಿಗಿನ ಒಡನಾಟ ನೆನಪಿಸಿಕೊಂಡರು.

ಕಾರ್ಯಕ್ರಮದಲ್ಲಿ ವಿವಿಧ ಸಾಧಕರಿಗೆ ‘ಪ್ರೊ.ಎಲ್.ಎಸ್.ಶೇಷಗಿರಿ ಜನ್ಮಶತಮಾನೋತ್ಸವ’ ಗೌರವಾರ್ಪಣೆ ಮಾಡಲಾಯಿತು. ಕನ್ನಡ ಗಣಕ ಪರಿಷತ್ ಅಭಿವೃದ್ಧಿಪಡಿಸಿರುವ ಶೇಷಗಿರಿರಾವ್ ಕುರಿತ ಜಾಲತಾಣವನ್ನು ವೀರಪ್ಪ ಮೊಯಿಲಿ ಉದ್ಘಾಟಿಸಿದರು.

ಸಾಹಿತಿ ಗೊ.ರೂ.ಚನ್ನಬಸಪ್ಪ, ವಿಮರ್ಶಕ ಮಲ್ಲೇಪುರಂ ಜಿ. ವೆಂಕಟೇಶ್, ಎಲ್.ಎಸ್.ಶೇಷಗಿರಿರಾವ್ ಅವರ ಪತ್ನಿ ಭಾರತಿ ಶೇಷಗಿರಿರಾವ್, ಕನ್ನಡ ಗೆಳೆಯರ ಬಳಗದ ಸಂಚಾಲಕ ರಾ.ನಂ. ಚಂದ್ರಶೇಖರ್, ಆರ್.ಶೇಷಶಾಸ್ತ್ರಿ, ಟಿ.ಎನ್. ವಾಸುದೇವಮೂರ್ತಿ, ಗೌತಮಿ, ಬಾ.ಹ ಉಪೇಂದ್ರ, ರಮೇಶ್ ಬಾಬು, ಮಾ.ಚಂದ್ರಶೇಖರ್, ಆರ್. ಶೇಷಶಾಸ್ತ್ರಿ, ರಾಮಸ್ವಾಮಿ, ರಘುವೀರ ಸಮರ್ಥ, ರವಿಕುಮಾರ್, ವೆಂಕಟೇಶ್ ಇದ್ದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

CONNECT ಕ್ಲಾಸಿಫೈಡ್ಸ್

JOB OPPORTUNITIES

Teachers/ Professors

TEACHER REQUIRED for Social and Hindi for High school contact Kenmore school whatsapp 9901501185 mail kenmoreschool@gmail.com

PUBLIC NOTICE

PUBLIC NOTICE

Notice is hereby given that **Mrs Radha Deepty alias Deepty A. KUMAR W/o Ajay Kumar M.K** & daughters have agreed to sell us the **‘Scheduled Property’** mentioned hereunder free from all encumbrances. Any person having any right, title, interest, claim or demand of any nature whatsoever in respect of the said property, is hereby required to make the same known in writing along with documentary proof thereof, to the undersigned within **14 days** from date of publication hereof, failing which the negotiations shall be completed, without any reference to such claims and the claims if any, shall be deemed to have been given up or waived.

SCHEDULED PROPERTY

All that piece and parcel of portion of property bearing Nos 26 & 27, in H.A.S.B. Katha No. 428/1, New E-Khata EPID No. 2425862225 situated at Marathahalli Village, Varthur Hobli, Bangalore south Taluk, presently under BBMP limits measuring East to West 80 Feet and North to South 30 Feet in all measuring 2400 Sq. Ft and bounded on. **East by:** Property No. 25, **West by:** Property No. 28, **North by:** Road **South by:** Private Property

Sd/- Madhukar Reddy K & Amaravathi Ganeesham
Mob: 98459 57779
Venkatadri Apartments, Top Floor, # 55-57, 8th Main, Chowdeshwari Layout, Marathahalli Bangalore.
Place: Bengaluru - Date: 18.02.2025

PUBLIC NOTICE

Public are hereby notified that my client negotiating to purchase all that property described in the Schedule herein from **Mr. P. Venkatesh** (Owner), who claim to be the owner of the Schedule Property. Any person or persons ascertaining any right, title, interest or claim in the Schedule Property or any part thereof and in any manner whatsoever against the Schedule Property based on the documents pertaining to the Schedule Property or objecting for the proposed development may lodge their objections and/or claims with the undersigned along with supporting documentary evidence within **7 (Seven) days** from the date of this publication and objections and/or claims received thereafter will not be binding on my client/s and my client/s will proceed to purchase the below mentioned property as if there are no objections/claims of whatsoever nature with regard to the Schedule Property.

SCHEDULE PROPERTY

All that piece and parcel of the undeveloped, vacant, residentially converted Property bearing Sy. No. 265/3 (Old Sy. No. 265/1) measuring 1 Guntas, converted vide Official Memorandum bearing No. ALN:SR/30/1983-84, dated: 09.03.1984 issued by the Special Deputy Commissioner, Bangalore District, situated at Kadugodi Village, Bidarahalli Hobli, Bengaluru East Taluk, Bengaluru Urban District, presently bearing BBMP Khatha No. 848/801 in records of Bruhat Bengaluru Mahanagara Palike (BBMP) and bounded on the: **East by :** Property belonging to Sri. P.N. Shashidharan; **West by:** Property belonging to Sri. Janardhan Nayar; **North by :** Property belonging to Children of Sri. Puttappa; **South by :** Road towards Kumbana Agrahara.

ROOPA SHETTY, Advocate
Lex Situs, No.810,
‘BILWAPRIYA PLATINA’,
2nd Floor, 27th Main Road,
HSR Layout, Sector 1,
Bangalore - 560102.
Phone: 9902026199 and 8088731020;
Email: info@lexsitus.com

PUBLIC NOTICE

Public are hereby notified that my client negotiating to purchase all that property described in the Schedule herein from **Mr. P. Nagaraj, Mr. P. Lakshmi Narayana, Mr. P. Venkatesh** (Owners), who claim to be the owner of the Schedule Property. Any person or persons ascertaining any right, title, interest or claim in the Schedule Property or any part thereof and in any manner whatsoever against the Schedule Property based on the documents pertaining to the Schedule Property or objecting for the proposed development may lodge their objections and/or claims with the undersigned along with supporting documentary evidence within **7 (Seven) days** from the date of this publication and objections and/or claims received thereafter will not be binding on my client/s and my client/s will proceed to purchase the below mentioned property as if there are no objections/claims of whatsoever nature with regard to the Schedule Property.

SCHEDULE PROPERTY

All that piece and parcel of the undeveloped, vacant, residentially converted Property bearing Sy. No. 266/3 measuring 27.4 Guntas, converted vide Official Memorandum bearing No. ALN:(EBK) SR/103/24-25, dated: 14.02.2025 issued by the Special Deputy Commissioner, Bangalore District, situated at Kadugodi Village, Bidarahalli Hobli, Bengaluru East Taluk, Bengaluru Urban District, and bounded on the: **East by :** Property Bearing Sy. No. 266/1A; **West by :** Belatturu Village Boarder; **North by :** Property Bearing Sy. No. 267; **South by :** Property Bearing Sy. No. 265/1.

ROOPA SHETTY, Advocate
Lex Situs, No.810,
‘BILWAPRIYA PLATINA’,
2nd Floor, 27th Main Road,
HSR Layout, Sector 1,
Bangalore - 560102.
Phone: 9902026199 and 8088731020;
Email: info@lexsitus.com

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

PERSONAL

Change of Name

CHANGE OF NAME

I, SUSHMA ANANTRAO ALBAL D/o Late Anant Venkatrao Albal R/a #18, Pranav Apartment, 3rd Floor, 1st Cross, 9th Main, Sadashivanagar, Bangalore-560080 have changed my Name to **SUSHMA ALBAL** vide affidavit dated 15.02.2025 before Notary G.B. Turamari, Bengaluru.

CHANGE OF NAME

I, **C.A. RAJESH** S/o. Gabriel Antappan presently R/a #15 10th main, 9th C Cross Parkia Street, Nisarga Colony, Horamavu, Bengaluru 560043 declare that **RAJESH CHONGAMTHARAYILANTAPPAN ANTAPPAN, RAJESH ANTAPPAN, RAJESH CHONGAMTHARAYIL, RAJESH CHONGAMTHARAYIL ANTAPPAN, RAJESH CHONGAMTHARAYIL A, C.A. RAJESH & RAJESH C.A.** are one and the same person and all the Names pertain to me only. And have changed my Name to **RAJESH C.A.** for all my future purpose. Vide affidavit dated: 2.12.2024 before Notary Uday Kumar, K. Bengaluru.

CHANGE OF NAME

I, **CHANNAPPA K.M.,** R/at #51/1, Pragathi, 2nd Cross, Next to Krishna Garden, Nanjappa Layout, R.R.Nagar, Bangalore-59, have changed my Daughter's name from **RASHMIKA GOWDA C** to **RASHMIKA CHANNAPPA** vide affidavit dated 11 Feb 2025, before Notary Natesh.D, Bangalore

CHANGE OF NAME

I, **ANURADHA SATISH GOKHALE** R/at Flat No.007, A Block, D.S. Max Skylish Apartment, Near Exide Gate, S Medahalli, Bidaraguppe, Bengaluru-562107, My name as mentioned **ANURADHA SATISH GOKHALE, ANNAPOORNAMMA GOKHALE, ANNAPOORNAMMA** In the documents. Hereby declaring that my actual & correct name is **ANURADHA SATISH GOKHALE** vide affidavit dated 15-2-2025, before Notary L Puttaraju, Bangalore

I, MAHABUBI residing at No. 220, Peresandra Village and Post, Chickballapur 562104 have changed my name to Mahaboobi vide affidavit dated 15.02.2024 before Notary K.H. Venkatappa, Chickballapur

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd. Bengaluru

2026ರಲ್ಲಿ ಮೆಟ್ರೊ ರೈಲು ಸಂಚಾರ ಆರಂಭಿಸುವ ಗುರಿ ಇಟ್ಟುಕೊಂಡಿರುವ ಬಿಎಂಆರ್‌ಸಿಎಲ್

ಗುಲಾಬಿ ಮಾರ್ಗ: ಕಾಮಗಾರಿ ಪೂರ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತಿ ಉದ್ದದ ಭೂಗತ ಮಾರ್ಗವನ್ನು ಹೊಂದಿರುವ 'ನಮ್ಮ ಮೆಟ್ರೊ' ಗುಲಾಬಿ ಮಾರ್ಗದಲ್ಲಿ ಭೂಗತ ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ. ತಾಂತ್ರಿಕ ಕೆಲಸಗಳು ನಡೆಯುತ್ತಿವೆ. 2026ರಲ್ಲಿ ಮೆಟ್ರೊ ರೈಲು ಸಂಚಾರ ಆರಂಭಗೊಳ್ಳಲಿದೆ.

ಕಾಳೇನ ಅಗ್ರಹಾರ–ನಾಗವಾರ ನಡುವೆ ನಿರ್ಮಾಣಗೊಳ್ಳುತ್ತಿರುವ ಗುಲಾಬಿ ಮಾರ್ಗವು 21 ಕಿ.ಮೀ. ಉದ್ದ ಹೊಂದಿದ್ದು, ಅದರಲ್ಲಿ 13.76 ಕಿ.ಮೀ. ಸುರಂಗ ಮಾರ್ಗವಾಗಿದೆ. ಅದರಲ್ಲಿ ನಿಲ್ದಾಣಗಳನ್ನು ಹೊರತುಪಡಿಸಿ 10.5 ಕಿ.ಮೀ. ಉದ್ದದ ಎರಡು ಸುರಂಗ ಮಾರ್ಗಗಳನ್ನು (ಒಟ್ಟು 21 ಕಿ.ಮೀ.) ನಿರ್ಮಿಸುವ ಯೋಜನೆ ಇದಾಗಿದ್ದು, ಸುರಂಗ ಮಾರ್ಗ ನಿರ್ಮಾಣ ಪೂರ್ಣವಾಗಿದೆ. ಭೂಗತ ಮಾರ್ಗದಲ್ಲಿ ತಲಾ ಸರಾಸರಿ 200 ಮೀಟರ್ ಉದ್ದದ 12 ನಿಲ್ದಾಣಗಳು ನಿರ್ಮಾಣಗೊಂಡಿವೆ. 6 ನಿಲ್ದಾಣಗಳು ಎತ್ತರಿಸಿದ ಮಾರ್ಗದಲ್ಲಿ ನಿರ್ಮಾಣಗೊಂಡಿವೆ.

ಬಿಎಂಆರ್‌ಸಿಎಲ್ ಸುರಂಗ ಮಾರ್ಗ ವಿಭಾಗದ ಮುಖ್ಯ ಎಂಜಿನಿಯರ್ ಸುಬ್ರಹ್ಮಣ್ಯ ಗುಡ್ಗೆ ಅವರು ಸೋಮವಾರ ಮಾಧ್ಯಮದವರಿಗೆ ಸುರಂಗ ಮಾರ್ಗದಲ್ಲೇ ಕಾಮಗಾರಿಯ ಬಗ್ಗೆ ಮಾಹಿತಿ ನೀಡಿದರು.

ಸುರಂಗ ಕೊರೆಯುವಾಗ ಉಸುಕು ಮಣ್ಣು, ಮೃದು ಮಣ್ಣು, ಕಲ್ಲುಗಳು ಹೀಗೆ ಭಿನ್ನ ಭಿನ್ನವಾದ ಪದರಗಳು ಸಿಕ್ಕಿವೆ. ಇಲ್ಲಿನ ಮಣ್ಣಿನ ಗುಣಕ್ಕೆ ಅನುಗುಣವಾಗಿ ಕೊರೆಯುವುದು ಸವಾಲಿನ ಕೆಲಸವಾಗಿತ್ತು. ಎಂ.ಜಿ. ರಸ್ತೆಯಿಂದ ಶಿವಾಜಿನಗರಕ್ಕೆ 1,080 ಮೀಟರ್ ಉದ್ದದ ಸುರಂಗ ಇದೆ. ಇದನ್ನು ನಿರ್ಮಿಸುವಾಗ ಸುರಂಗ ಕೊರೆಯುವ ಯಂತ್ರವು (ಟಿಬಿಎಂ) 193 ಬಾರಿ ಒಳಗೆ ಹೋಗಿ, ಹೊರಗೆ ಬಂದಿದೆ. ಇಷ್ಟೇ ದೂರವನ್ನು ದೆಹಲಿಯಲ್ಲಿ ನಿರ್ಮಿಸುವಾಗ ಇದರ ಶೇ 10ರಷ್ಟು ಬಾರಿ ಒಳಗೆ ಹೋಗಿ ಹೊರಬರುವಷ್ಟರಲ್ಲಿ ಪೂರ್ಣಗೊಳಿಸಲು ಸಾಧ್ಯವಾಗಿತ್ತು. ಅಲ್ಲಿನ ಮಣ್ಣಿಗೂ ಬೆಂಗಳೂರಿನ ಮಣ್ಣಿಗೂ ಇರುವ ವ್ಯತ್ಯಾಸ ಇದು ಎಂದು ವಿವರಿಸಿದರು.

'ನಿಯಂತ್ರಿತ ಸ್ಫೋಟ (ಕಂಟ್ರೋಲ್ಡ್ ಬ್ಲಾಸ್ಟಿಂಗ್) ಪದ್ಧತಿಯನ್ನು ಅಳವಡಿಸಿಕೊಂಡು ಯಾವ ಕಟ್ಟಡಗಳಿಗೂ ತೊಂದರೆಯಾಗದಂತೆ, ರಸ್ತೆ ಕುಸಿಯದಂತೆ ಕಲ್ಲುಗಳನ್ನು ಒಡೆದಿದ್ದೇವೆ. ಸುರಂಗಕ್ಕಿಂತ ಕಡಿಮೆ ಆಕಾರದ ಕಲ್ಲುಗಳು ಕೆಲವೊಮ್ಮೆ ಟಿಬಿಎಂ ಜತೆಗೆ ತಿರುಗುತ್ತಾ ಸವಾಲು ಒಡ್ಡಿದ್ದವು' ಎಂದು ಅನುಭವ ಹಂಚಿಕೊಂಡರು.

9 ಯಂತ್ರಗಳು ಸುರಂಗ ಕೊರೆದಿದ್ದವು. ಈಗ ವೈಜ್ಞಾನಿಕವಾಗಿ ಕಾಂಕ್ರೀಟ್ ಹಾಕಿ, ಹಳಿ ಅಳವಡಿಸಲಾಗಿದೆ. ಸಿವಿಲ್ ಕಾಮಗಾರಿಗಳನ್ನು ಮುಗಿಸಿ ಸಿಗ್ನಲಿಂಗ್ ಮಾಡುವವರಿಗೆ ಹಸ್ತಾಂತರಿಸಲಾಗಿದೆ. ಈ ವರ್ಷದ ಕೊನೆಗೆ ತಾಂತ್ರಿಕ ಕಾಮಗಾರಿಗಳು ಕೂಡ ಪೂರ್ಣಗೊಳ್ಳಲಿವೆ. ಮುಂದಿನ ವರ್ಷ ಸಂಚಾರ ಆರಂಭವಾಗಲಿದೆ ಎಂದರು.

'ನಮ್ಮ ಮೆಟ್ರೊ' ಗುಲಾಬಿ ಮಾರ್ಗದಲ್ಲಿ ಸುರಂಗ ಮಾರ್ಗದ ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ.
ಪ್ರಜಾವಾಣಿ ಚಿತ್ರ: ಕೃಷ್ಣ ಕುಮಾರ್ ಪಿ.ಎಸ್

3 ಇಂಟರ್‌ಚೇಂಜ್

ಗುಲಾಬಿ ಮಾರ್ಗದಲ್ಲಿ ಕಾಳೇನ ಅಗ್ರಹಾರ, ಹುಳಿಮಾವು, ಐಐಎಂಬಿ, ಜೆ.ಪಿ. ನಗರ ನಾಲ್ಕನೇ ಹಂತ, ಜಯದೇವ ಆಸ್ಪತ್ರೆ, ಸ್ವಾಗತ್ ರೋಡ್ ಕ್ರಾಸ್, ಡೇರಿ ಸರ್ಕಲ್, ಮೈಕೊ ಇಂಡಸ್ಟ್ರೀಸ್, ಲ್ಯಾಂಗ್‌ಫೋರ್ಡ್ ಟೌನ್, ವೆಲ್ಲಾರ, ಎಂ.ಜಿ. ರಸ್ತೆ, ಶಿವಾಜಿನಗರ, ಕಂಟೋನ್ಮೆಂಟ್, ಪಾಟರಿ ಟೌನ್, ಟ್ಯಾನರಿ ರಸ್ತೆ, ವೆಂಕಟೇಶಪುರ, ಅರೇಬಿಕ್ ಕಾಲೇಜು, ನಾಗವಾರ ಸೇರಿ ಒಟ್ಟು 18 ನಿಲ್ದಾಣಗಳಿವೆ.

ಎಂ.ಜಿ. ರಸ್ತೆ, ಜಯದೇವ ಆಸ್ಪತ್ರೆ, ನಾಗವಾರದಲ್ಲಿ ಇಂಟರ್‌ಚೇಂಜ್ ನಿಲ್ದಾಣಗಳು ನಿರ್ಮಾಣಗೊಳ್ಳಲಿವೆ. ಎಂ.ಜಿ. ರಸ್ತೆಯಲ್ಲಿ ನೇರಳೆ ಮಾರ್ಗವನ್ನು, ಜಯದೇವ ಆಸ್ಪತ್ರೆ ನಿಲ್ದಾಣದಲ್ಲಿ ಹಳದಿ ಮಾರ್ಗವನ್ನು, ನಾಗವಾರದಲ್ಲಿ ನೀಲಿ ಮಾರ್ಗವನ್ನು ಈ ಗುಲಾಬಿ ಮಾರ್ಗವು ಸಂಪರ್ಕಿಸಲಿದೆ.

'ಎಂ.ಜಿ. ರಸ್ತೆ ನಿಲ್ದಾಣದಲ್ಲಿ ಮಾತ್ರ ನಾಲ್ಕು ಕಡೆಗಳಿಗೆ ಪ್ರವೇಶ/ನಿರ್ಗಮನ ದಾರಿಗಳು ಇರಲಿದ್ದು, ಉಳಿದ ನಿಲ್ದಾಣಗಳಲ್ಲಿ ಎರಡು ದಿಕ್ಕುಗಳಿಗೆ ಮಾತ್ರ ಪ್ರವೇಶ/ನಿರ್ಗಮನ ದಾರಿಗಳು ಇರಲಿವೆ ಎಂದು ಸುಬ್ರಹ್ಮಣ್ಯ ಗುಡ್ಗೆ ತಿಳಿಸಿದರು.

ಬಿಎಂಟಿಸಿ ಪ್ರಯಾಣಿಕರ ಸಂಖ್ಯೆ 1 ಲಕ್ಷ ಏರಿಕೆ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಮೆಟ್ರೊ ಪ್ರಯಾಣದರ ಹೆಚ್ಚಳ ಮಾಡಿದ ಬಳಿಕ ಬಿಎಂಟಿಸಿ ಬಸ್‌ಗಳಲ್ಲಿ ಪ್ರಯಾಣಿಕರ ಸಂಖ್ಯೆ ನಿತ್ಯ ಸರಾಸರಿ 1 ಲಕ್ಷ ಹೆಚ್ಚಳವಾಗಿದೆ.

ಫೆಬ್ರುವರಿ 9ರಂದು ಮೆಟ್ರೊ ಪರಿಷ್ಕೃತ ದರ ಜಾರಿಗೆ ಬಂದಿತ್ತು. ಅದಕ್ಕಿಂತ ಹಿಂದೆ ಐದು ಸೋಮವಾರಗಳಲ್ಲಿ ಬಿಎಂಟಿಸಿಯಲ್ಲಿ ಸರಾಸರಿ ಪ್ರಯಾಣಿಕರ ಸಂಖ್ಯೆ 36.24 ಲಕ್ಷ ಇತ್ತು. ದರ ಏರಿಕೆಯ ಬಳಿಕದ ಮೊದಲ ಸೋಮವಾರ (ಫೆ.10) 37.22 ಲಕ್ಷಕ್ಕೆ ಏರಿತ್ತು. 98 ಸಾವಿರದಷ್ಟು ಪ್ರಯಾಣಿಕರ ಸಂಖ್ಯೆ ಹೆಚ್ಚಳವಾಗಿತ್ತು.

ಭಾನುವಾರ ರಜಾದಿನ ಆಗಿರುವುದರಿಂದ ಪ್ರಯಾಣಿಕರ ಸಂಖ್ಯೆ ಕಡಿಮೆಯಾಗಿರುತ್ತದೆ. ಸರಾಸರಿ 28.36 ಲಕ್ಷ ಇರುತ್ತಿತ್ತು. ದರ ಏರಿಕೆಯಾದ ಫೆ.9ರಂದು 29.53 ಲಕ್ಷ, ಫೆ.16ರಂದು 29.28 ಲಕ್ಷ ಪ್ರಯಾಣಿಕರು ಬಿಎಂಟಿಸಿ ಬಸ್‌ಗಳಲ್ಲಿ ಸಂಚರಿಸಿದ್ದಾರೆ.

10 ಸಾವಿರ ಸಹಿ: ಮೆಟ್ರೊ ಪ್ರಯಾಣ ದರ ಇಳಿಸಬೇಕು ಎಂದು ಬೆಂಗಳೂರು ಮೆಟ್ರೊ ಪ್ರಯಾಣಿಕರ ವೇದಿಕೆಯು (ಬಿಎಂಸಿಪಿ) ಬಿಎಂಆರ್‌ಸಿಎಲ್ ನಿರ್ದೇಶಕರಿಗೆ ಪತ್ರ ಬರೆದಿದೆ. ಈ ಪತ್ರಕ್ಕೆ ಸುಮಾರು 10 ಸಾವಿರ ಮೆಟ್ರೊ ಪ್ರಯಾಣಿಕರಿಂದ ಸಹಿ ಹಾಕಿಸಿದೆ.

'ಪ್ರಯಾಣ ದರವನ್ನು ಶೇಕಡ 100ಕ್ಕೆ ಏರಿಸಿ ಶೇ 70ಕ್ಕೆ ಇಳಿಸಲಾಗಿದೆ. ಇದು ಮಧ್ಯಮ ವರ್ಗ, ಕೆಳ ಮಧ್ಯಮ ವರ್ಗ, ಕಾರ್ಮಿಕರು ಮತ್ತು ವಿದ್ಯಾರ್ಥಿಗಳಿಗೆ ಭಾರಿ ಆರ್ಥಿಕ ಸಂಕಷ್ಟವನ್ನು ತಂದೊಡ್ಡಿದೆ. ಬಿಎಂಆರ್‌ಸಿಎಲ್ ಗರಿಷ್ಠ ಲಾಭ ಗಳಿಸುವ ಉದ್ದೇಶದಿಂದ ಕೆಲಸ ಮಾಡುವ ಖಾಸಗಿ ಸಂಸ್ಥೆಯಲ್ಲ. ಜನರ ಹಿತಾಸಕ್ತಿಯನ್ನು ರಕ್ಷಿಸುವ ಸಾಮಾಜಿಕ ಬಾಧ್ಯತೆ ಹೊಂದಿರುವ ನಿಗಮ' ಎಂದು ಪತ್ರದಲ್ಲಿ ತಿಳಿಸಲಾಗಿದೆ.

'ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕರಿಗೆ ಪತ್ರ ನೀಡಿದ್ದೇವೆ. ದರ ಇಳಿಕೆ ಮಾಡದೇ ಇದ್ದರೆ ಮುಂದಿನ ಹೋರಾಟ ಹೇಗಿರಬೇಕು ಎಂಬುದರ ಬಗ್ಗೆ ಚರ್ಚಿಸಲು ಫೆ.23ರಂದು ಕೊಂಡಜ್ಜಿ ಬಸಪ್ಪ ಸ್ಕೌಟ್ಸ್ ಆ್ಯಂಡ್ ಗೈಡ್ಸ್ ಸಭಾಂಗಣದಲ್ಲಿ ಚಿಂತಕರ ಸಭೆ ನಡೆಸಲು ನಿರ್ಧರಿಸಿದ್ದೇವೆ' ಎಂದು ಬಿಎಂಸಿಪಿ ಸಂಯೋಜಕ ಸದಸ್ಯ ರಾಜೇಶ್ ಭಟ್ ಅವರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ಮೆಟ್ರೊ ಪ್ರಯಾಣಿಕರ ಸಂಖ್ಯೆ 5.33 ಲಕ್ಷಕ್ಕೆ ಇಳಿಕೆ

'ನಮ್ಮ ಮೆಟ್ರೊ'ವನ್ನು ಪ್ರಯಾಣಿಕರು ತೊರೆಯದಂತೆ ಮಾಡಲು ಬಿಎಂಆರ್‌ಸಿಎಲ್‌ಗೆ ಆಗುತ್ತಿಲ್ಲ. ಭಾನುವಾರ ಪ್ರಯಾಣಿಸಿದವರ ಸಂಖ್ಯೆ 5.33 ಲಕ್ಷಕ್ಕೆ ಇಳಿದಿದೆ.

ರಜಾದಿನವಾದ ಭಾನುವಾರ ಪ್ರಯಾಣಿಕರ ಸಂಖ್ಯೆ ಸಹಜವಾಗಿಯೇ ಕಡಿಮೆ ಇರುತ್ತಿತ್ತು. ಆದರೂ ಸರಾಸರಿ 7 ಲಕ್ಷ ಮಂದಿ ಪ್ರಯಾಣಿಸುತ್ತಿದ್ದರು. ಮೆಟ್ರೊ ಪ್ರಯಾಣ ದರ ಜಾರಿಯಾದ ಭಾನುವಾರವೇ (ಫೆ.9) 6.23 ಲಕ್ಷಕ್ಕೆ ಇಳಿದಿತ್ತು. ಈ ಭಾನುವಾರ ಇನ್ನಷ್ಟು ಕುಸಿತ ಕಂಡಿದ್ದು, ಕಳೆದ ಭಾನುವಾರಕ್ಕಿಂತ 90 ಸಾವಿರ ಕಡಿಮೆಯಾಗಿದೆ. ಸೋಮವಾರದಿಂದ ಶುಕ್ರವಾರದವರೆಗೆ ಇರುತ್ತಿದ್ದ ಸರಾಸರಿ ಪ್ರಯಾಣಿಕರ ಸಂಖ್ಯೆ 8.50 ಲಕ್ಷ. ದರ ಏರಿದ ಬಳಿಕ ದಿನದಿಂದ ದಿನಕ್ಕೆ ಕಡಿಮೆಯಾಗಿ ಶುಕ್ರವಾರಕ್ಕೆ 7.63 ಲಕ್ಷಕ್ಕೆ ಇಳಿದಿತ್ತು.

'ಈಗಲೇ ಹೇಳುವುದು ಕಷ್ಟ'

'ಮೆಟ್ರೊ ಪ್ರಯಾಣ ದರ ಏರಿಕೆಯಾದ ನಂತರ ಬಿಎಂಟಿಸಿಯಲ್ಲಿ ಪ್ರಯಾಣಿಸುವವರ ಸಂಖ್ಯೆ ಸ್ವಲ್ಪ ಹೆಚ್ಚಳವಾಗಿರುವುದು ನಿಜ. ಆದರೆ, ಅದೇ ಕಾರಣದಿಂದ ಹೆಚ್ಚಾಗಿರುವುದು ಎಂಬುದನ್ನು ಈಗಲೇ ವಿಶ್ಲೇಷಣೆ ಮಾಡಲು ಸಾಧ್ಯವಿಲ್ಲ' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಸಾಧಾರಣವಾಗಿ 'ನಮ್ಮ ಮೆಟ್ರೊ'ದಲ್ಲಿ ಪ್ರಯಾಣಿಸುವವರೇ ಬೇರೆ, ನಗರ ಸಾರಿಗೆ ಬಸ್‌ಗಳಲ್ಲಿ ಪ್ರಯಾಣಿಸುವವರೇ ಬೇರೆ ಆಗಿರುತ್ತಾರೆ. ಹಿಂದೆಯೂ ತಿಂಗಳಲ್ಲಿ ಕೆಲವು ದಿನ ಹೆಚ್ಚು, ಕೆಲವು ದಿನ ಕಡಿಮೆ ಪ್ರಯಾಣಿಕರು ಇದ್ದರು. ಮೆಟ್ರೊ ಪ್ರಯಾಣ ದರ ಏರಿಕೆಯ ಪ್ರಭಾವದಿಂದ ಬಿಎಂಟಿಸಿಯಲ್ಲಿ ಪ್ರಯಾಣಿಸುವವರ ಸಂಖ್ಯೆ ಹೆಚ್ಚಾಗಿದೆಯೆ ಎಂಬುದನ್ನು ಕಂಡುಕೊಳ್ಳಲು ಕನಿಷ್ಠ ಒಂದು ತಿಂಗಳು ಕಾದು ನೋಡಬೇಕಾಗುತ್ತದೆ ಎಂದು ಅವರು ವಿವರಿಸಿದರು.

ಬಿಎಂಆರ್‌ಸಿಎಲ್‌ಗೆ ರೈತ ಸಂಘ ಮನವಿ

ಏಕಾಏಕಿ ದರ ಏರಿಸುವ ಬದಲು ಲಾಭ, ನಷ್ಟ ಪರಿಗಣಿಸಿ ವರ್ಷಕ್ಕೊಮ್ಮೆ ದರ ನಿಗದಿ ಮಾಡಬೇಕು. ಕಡಿಮೆ ದರದಲ್ಲಿ ಮೆಟ್ರೊ ಸೇವೆ ಒದಗಿಸುತ್ತಿರುವ ಬೇರೆ ರಾಜ್ಯಗಳಿಗೆ ಭೇಟಿ ನೀಡಿ ಅಧ್ಯಯನ ನಡೆಸಬೇಕು. ಸಾಧ್ಯವಾದರೆ ರೈಲಿನಲ್ಲಿ ಇರುವಂತೆ ಮೊದಲನೇ ದರ್ಜೆ, ಎರಡನೇ ದರ್ಜೆ, ಜನರಲ್ ಬೋಗಿ ಎಂಬುದಾಗಿ ಪ್ರತ್ಯೇಕಿಸಿ ದರ ನಿಗದಿ ಮಾಡಬೇಕು ಎಂಬ ಸಲಹೆಗಳಿರುವ ಮನವಿಪತ್ರವನ್ನು ಕರ್ನಾಟಕ ರಾಜ್ಯ ರೈತ ಸಂಘವು ಬಿಎಂಆರ್‌ಸಿಎಲ್‌ಗೆ ಸಲ್ಲಿಸಿದೆ.

ಬಿಪಿಎಲ್ ಕಾರ್ಡ್ ಹೊಂದಿರುವವರಿಗೆ ವಿಶೇಷ ವಿನಾಯಿತಿ ನೀಡಬೇಕು ಎಂದು ಪತ್ರದಲ್ಲಿ ತಿಳಿಸಲಾಗಿದೆ. ಕರ್ನಾಟಕ ರಾಜ್ಯ ರೈತ ಸಂಘದ ನದೀಮ್ ಪಾಷ ಪಟ್ಟ ರೆಡ್ಡಿಪಾಳ್ಯ, ಪ್ರಶಾಂತ್ ಹೊಸದುರ್ಗ, ಮಂಜುನಾಥ್, ಶ್ರೀನಿವಾಸ್, ನಾರಾಯಣಪ್ಪ, ಗುಂಡಪ್ಪ ರೇವಣ್ಣ ನಿಯೋಗದಲ್ಲಿದ್ದರು.

'ಹೆಚ್ಚಳವಾಗಲಿದೆ ವಾಹನ ಸಂಚಾರ ದಟ್ಟಣೆ'

ಬೆಂಗಳೂರು: 'ನಮ್ಮ ಮೆಟ್ರೊ ಪ್ರಯಾಣ ದರವನ್ನು ವಿಪರೀತ ಏರಿಸಿರುವ ಬಿಎಂಆರ್‌ಸಿಎಲ್ ಆನಂತರ ಕೆಲವು ಸ್ಟೇಜ್‌ಗಳಿಗೆ ಸ್ವಲ್ಪ ಪ್ರಮಾಣದಲ್ಲಿ ದರ ಇಳಿಸಿ ಮುಂಗೈಗೆ ಬೆಲ್ಲ ಸವರುವ ಕೆಲಸ ಮಾಡಿದೆ. ಆದರೆ ಎಲ್ಲ ಸ್ಟೇಜ್‌ಗಳ ಪ್ರಯಾಣ ದರ ಇಳಿಸಬೇಕು' ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಮೆಟ್ರೊ ಪ್ರಯಾಣ ದರ ಹೆಚ್ಚಳ

ಮೆಟ್ರೊ ಪ್ರಯಾಣ ದರ ಏರಿಕೆಗೆ ಸಂಬಂಧಿಸಿದಂತೆ ಕೇಂದ್ರ ಮತ್ತು ರಾಜ್ಯದ ಸರ್ಕಾರವನ್ನು ಪ್ರತಿನಿಧಿಸುವ ನಾಯಕರು ಒಬ್ಬರ ಮೇಲೆ ಇನ್ನೊಬ್ಬರು ಆರೋಪ ಮಾಡುತ್ತಿರುವುದು ಖಂಡನೀಯ. ಸಾರ್ವಜನಿಕರ ಬಗ್ಗೆ ಕಾಳಜಿ ಇದ್ದರೆ ಕೂಡಲೇ ಮೆಟ್ರೊ ಪ್ರಯಾಣ ದರವನ್ನು ಇಳಿಸಬೇಕು. ಈಗ ನಿಗದಿಪಡಿಸಿರುವ ದರ ಎಲ್ಲ ವರ್ಗದ ಜನರಿಗೆ ಹೊರೆಯಾಗಲಿದೆ. ಈಗಾಗಲೇ ಬಿಎಂಆರ್‌ಸಿಎಲ್ ಸಂಸ್ಥೆ ಲಾಭದಲ್ಲಿದೆ. ಮೆಟ್ರೊ ಪ್ರಯಾಣ ದರ ಯಥಾಸ್ಥಿತಿಯಲ್ಲಿ ಕಾಯ್ದುಕೊಂಡು ಹೋಗಬೇಕು.



ಪ್ರಸಾದ್ ಆರ್., ಕೆಂಗೇರಿ ಉಪನಗರ

'ನಮ್ಮ ಮೆಟ್ರೊ' ಪ್ರಯಾಣ ದರವನ್ನು ಏಕರೂಪವಾಗಿ ನಿಗದಿ ಮಾಡದೆ, ತಮಗೆ ಇಷ್ಟ ಬಂದಂತೆ ನಿಗದಿ ಮಾಡುವ ಮೂಲಕ ಮೆಟ್ರೊ ಇರುವುದು ಕೇವಲ ಉಳ್ಳವರಿಗೆ ಮಾತ್ರ ಎಂಬುದನ್ನು ಬಿಎಂಆರ್‌ಸಿಎಲ್ ಸಾಬೀತುಪಡಿಸಿದೆ. ನಾನು ನ್ಯಾಷನಲ್ ಕಾಲೇಜು ಮೆಟ್ರೊ ನಿಲ್ದಾಣದಿಂದ ಸರ್.ಎಂ. ವಿಶ್ವೇಶ್ವರಯ್ಯ ಸೆಂಟ್ರಲ್ ಕಾಲೇಜು ಮೆಟ್ರೊ ನಿಲ್ದಾಣಕ್ಕೆ ನಿಗದಿತ ಸಮಯಕ್ಕೆ ತೆರಳಲು ಅನುಕೂಲವಾಗಿತ್ತು. ಆದರೆ, ಈಗ ಈ ಮಾರ್ಗದಲ್ಲಿ ಶೇಕಡ 60ರಷ್ಟು ಪ್ರಯಾಣ ದರವನ್ನು ಹೆಚ್ಚಿಸಿರುವುದು ಹೊರೆಯಾಗಿ ಪರಿಣಮಿಸಿದೆ. ನಮ್ಮ ಮೆಟ್ರೊ ಈಗ ದೇಶದಲ್ಲಿ ದುಬಾರಿ ಪ್ರಯಾಣ ದರ ಹೊಂದಿರುವ ಕುಖ್ಯಾತಿಗೆ ಒಳಗಾಗಿದೆ.

ಸಿದ್ದೇಶ ಸಿ., ವಿಘ್ನೇಶ್ವರನಗರ

ನಾನು ಪ್ರತಿದಿನ ನಾಗಸಂದ್ರ ಮೆಟ್ರೊ ನಿಲ್ದಾಣದಿಂದ ಕೆಂಪೇಗೌಡ ಮೆಟ್ರೊ ನಿಲ್ದಾಣದವರೆಗೆ ಸಂಚರಿಸುತ್ತೇನೆ. ಹಿಂದೆ ಈ ಮಾರ್ಗದ ಪ್ರಯಾಣ ₹36.10 ಇತ್ತು. ಈಗ ₹57 ಆಗಿದೆ. ₹20.90 ಏರಿಕೆಯಾಗಿದ್ದು, ಯಾವ ಆಧಾರದಲ್ಲಿ ಇಷ್ಟೊಂದು ಪ್ರಯಾಣ ದರ ನಿಗದಿ ಪಡಿಸಿದ್ದಾರೆ ಎಂಬುದನ್ನು ಬಿಎಂಆರ್‌ಸಿಎಲ್ ಬಹಿರಂಗ ಪಡಿಸಬೇಕು. ಕೆಂಪೇಗೌಡ ಮೆಟ್ರೊ ನಿಲ್ದಾಣದಿಂದ ಪೀಣ್ಯ ಇಂಡಸ್ಟ್ರಿ, ಜಾಲಹಳ್ಳಿ, ದಾಸರಹಳ್ಳಿ ಮೆಟ್ರೊ ನಿಲ್ದಾಣಗಳಲ್ಲಿ ಇಳಿದರೂ ಪ್ರಯಾಣ ದರ ₹57 ಕಡಿತವಾಗುತ್ತಿದೆ. ಇದು ಅವೈಜ್ಞಾನಿಕ. ಬಿಎಂಆರ್‌ಸಿಎಲ್ ಲೂಟಿ ಸಂಸ್ಥೆಯಾಗದೇ, ಸಾರ್ವಜನಿಕರ ಸೇವೆ ಮಾಡುವ ಸಂಸ್ಥೆಯಾಗಲಿ.

ಡಿ. ಗಂಗಾಧರಪ್ಪ, ನಾಗಸಂದ್ರ

ನಗರದಲ್ಲಿ ಈಗಾಗಲೇ ವಿದ್ಯುತ್ ಚಾಲಿತ (ಇವಿ) ದ್ವಿಚಕ್ರ ವಾಹನ ಮತ್ತು ಕಾರುಗಳ ಸಂಖ್ಯೆ ಹೆಚ್ಚಾಗಿದೆ. ನನ್ನ ಇ.ವಿ ಕಾರಿನಲ್ಲಿ ಕೋಣನಕುಂಟೆ ಕ್ರಾಸ್‌ನಿಂದ ಮೆಜೆಸ್ಟಿಕ್ ತಲುಪಲು ₹26 ವೆಚ್ಚ ತಗಲುತ್ತದೆ. ಆದರೆ, ಕೋಣನಕುಂಟೆ ಮೆಟ್ರೊ ನಿಲ್ದಾಣದಿಂದ ಮೆಜೆಸ್ಟಿಕ್ ಮೆಟ್ರೊ ನಿಲ್ದಾಣಕ್ಕೆ ತಲುಪಲು ₹72 ಪ್ರಯಾಣ ದರ ಪಾವತಿಸಬೇಕಾಗಿದೆ. ಇ.ವಿ ದ್ವಿಚಕ್ರ ವಾಹನದಲ್ಲಿ ಇದಕ್ಕಿಂತ ಕಡಿಮೆ ವೆಚ್ಚವಾಗುತ್ತದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಮೆಟ್ರೊ ಪ್ರಯಾಣ ದರವನ್ನು ಇಳಿಸಬೇಕು.

ಮಂಡಗದ್ದೆ ಶ್ರೀನಿವಾಸಯ್ಯ, ಪ್ರೆಸ್ಟೀಜ್ ಫಾಲ್ಕನ್ ಸಿಟಿ

ನಗರದಲ್ಲಿರುವ ಬಹುತೇಕ ಐ.ಟಿ. ಕಂಪನಿಗಳು ತಮ್ಮ ನೌಕರರಿಗೆ ವಾಹನದ ವ್ಯವಸ್ಥೆ ಕಲ್ಪಿಸಿವೆ. ಆದರೆ, ಸಂಚಾರ ದಟ್ಟಣೆಯಿಂದ ತಪ್ಪಿಸಿಕೊಳ್ಳಲು ಐ.ಟಿ. ಉದ್ಯೋಗಿಗಳು ಮೆಟ್ರೊ ಮೂಲಕ ಕಚೇರಿಗಳಿಗೆ ತಲುಪುತ್ತಾರೆ. ಮೆಟ್ರೊ ಪ್ರಯಾಣ ದರ ಏರಿಕೆ ಮಾಡಿರುವುದರಿಂದ ನಮ್ಮಂತಹ ಐ.ಟಿ. ಉದ್ಯೋಗಿಗಳು ಮೆಟ್ರೊ ತ್ಯಜಿಸಿ, ಕಂಪನಿಯ ವಾಹನಗಳನ್ನು ಬಳಸುತ್ತೇವೆ. ಇದರಿಂದ ಸಂಚಾರ ದಟ್ಟಣೆಯ ಸಮಸ್ಯೆ ಹೆಚ್ಚಾಗಲಿದೆ. ವಾಯು ಮಾಲಿನ್ಯದಿಂದ ಆರೋಗ್ಯದ ಸಮಸ್ಯೆಗಳು ಹೆಚ್ಚುತ್ತವೆ. ಕೂಡಲೇ ಮೆಟ್ರೊ ಪ್ರಯಾಣ ದರವನ್ನು ಪರಿಷ್ಕರಿಸುವ ಅಗತ್ಯವಿದೆ.

ಅನುಷಾ ಬಿ., ಎಂಟನೇ ಮೈಲಿ

ನಾನು ಪ್ರತಿನಿತ್ಯ ವೈಟ್‌ಫೀಲ್ಡ್‌ನಿಂದ ಕೆಂಗೇರಿಯ ಕುಂಬಳಗೋಡಿನಲ್ಲಿರುವ ಎಂಜಿನಿಯರಿಂಗ್ ಕಾಲೇಜಿಗೆ ಮೆಟ್ರೊ ಮೂಲಕ ಪ್ರಯಾಣ ಮಾಡುತ್ತೇನೆ. ಸರಿಯಾದ ಸಮಯಕ್ಕೆ ಕಾಲೇಜಿಗೆ ತೆರಳಲು ಹಾಗೂ ಸುರಕ್ಷಿತವಾಗಿ ಮತ್ತೆ ಮನೆಗೆ ಬರಲು ಮೆಟ್ರೊ ಅನುಕೂಲವಾಗಿತ್ತು. ಕಾಲೇಜಿನಲ್ಲಿ ನೀಡುವ ಎಲ್ಲ ಅಸೈನ್‌ಮೆಂಟ್‌ಗಳು ಹಾಗೂ ನನ್ನ ಅಧ್ಯಯನಕ್ಕೆ ಯಾವುದೇ ತೊಂದರೆ ಆಗುತ್ತಿರಲಿಲ್ಲ. ಈಗ ಮೆಟ್ರೊ ಪ್ರಯಾಣ ದರ ಏರಿಕೆ ಮಾಡಿರುವುದರಿಂದ ನನಗೆ ಹೊರೆಯಾಗಿ ಪರಿಣಮಿಸಿದೆ. ನಾನು ಬಸ್‌ನಲ್ಲಿ ಉಚಿತವಾಗಿ ಪ್ರಯಾಣಿಸಬಹುದು. ಆದರೆ ಸರಿಯಾದ ಸಮಯಕ್ಕೆ ಕಾಲೇಜಿಗೆ ತೆರಳು ಸಾಧ್ಯವಿಲ್ಲ. ಬಿಎಂಆರ್‌ಸಿಎಲ್ ಕೂಡಲೇ ಮೆಟ್ರೊ ಪ್ರಯಾಣ ದರವನ್ನು ಇಳಿಸಿದರೆ ನನ್ನಂತಹ ಸಾವಿರಾರು ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ.

ರೇವತಿ, ವಿದ್ಯಾರ್ಥಿ, ವೈಟ್‌ಫೀಲ್ಡ್

ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಪದೇ ಪದೇ ಅಗತ್ಯ ವಸ್ತುಗಳ ದರ ಏರಿಕೆ ಮಾಡುತ್ತಿವೆ. ಈಗಾಗಲೇ ನೀರು, ಸಾರಿಗೆ, ವಿದ್ಯುತ್ ದರಗಳನ್ನು ಹೆಚ್ಚಿಸಲಾಗಿದೆ. ಈಗ ಮೆಟ್ರೊ ಪ್ರಯಾಣ ದರ ಏರಿಕೆ ಮಾಡುವ ಮೂಲಕ ಸಾರ್ವಜನಿಕರ ಮೇಲೆ ಬರೆ ಎಳೆದಿವೆ. ಸರ್ಕಾರದ ವಿವಿಧ ಇಲಾಖೆಗಳಲ್ಲಿ ಮಾಡುವ ದುಂದು ವೆಚ್ಚಗಳಿಗೆ ಕಡಿವಾಣ ಹಾಕಬೇಕು. ಮೆಟ್ರೊ ಪ್ರಯಾಣ ದರ ಏರಿಕೆಯ ನಿರ್ಧಾರವನ್ನು ಪರಿಷ್ಕರಿಸಬೇಕು.

ರಕ್ಷಿತಾ ಎಂ.ಕೆ., ವಿದ್ಯಾರ್ಥಿನಿ

ಬೆಂಗಳೂರು ಮೆಟ್ರೊ ರೈಲು ನಿಗಮವು ನಷ್ಟದ ನೆಪವೊಡ್ಡಿ ಪ್ರಯಾಣ ದರ ಏರಿಕೆಯನ್ನು ಮಾಡಿರುವ ನಿರ್ಧಾರ ಸಮಂಜಸವಲ್ಲ. ಜಾಗತೀಕರಣದ ನಂತರ ಸರ್ಕಾರದ ಹಲವು ಅಂಗ ಸಂಸ್ಥೆಗಳು ಪ್ರತ್ಯೇಕ ನಿಗಮಗಳಾಗಿ ಬದಲಾಗಿರುವುದರ ನೇರ ಪರಿಣಾಮ ಇದು. ಸ್ವಯಂ ಹಣಕಾಸು ಸಂಸ್ಥೆಗಳಾಗಿ ಈ ಸಾರಿಗೆ ನಿಗಮಗಳು ಮಾರ್ಪಾಡುಗೊಂಡ ನಂತರ ಖಾಸಗಿ ಸಂಸ್ಥೆಗಳ ರೀತಿಯಲ್ಲಿ ಲಾಭ ನಷ್ಟದ ಬಗ್ಗೆ ಮಾತನಾಡಿ ಪ್ರಯಾಣ ದರ ಏರಿಕೆ ಮಾಡಿರುವುದು ಖಂಡನೀಯ.

ಅಜಯ್ ಕಾಮತ್, ಮಲ್ಲೇಶ್ವರ

ಅಭಿಪ್ರಾಯ ಕಳುಹಿಸಿ
ಮೆಟ್ರೊ ಪ್ರಯಾಣ ದರ ಏರಿಕೆಯ ಬಗ್ಗೆ ಸಾರ್ವಜನಿಕರು ತಮ್ಮ ಅಭಿಪ್ರಾಯಗಳನ್ನು 50 ಪದಗಳ ಮಿತಿಯಲ್ಲಿ ಈ ಕೆಳಗಿನ ವಾಟ್ಸ್‌ಆ್ಯಪ್ ಸಂಖ್ಯೆಗೆ ಕಳುಹಿಸಬಹುದು. ಜೊತೆಗೆ ನಿಮ್ಮ ಭಾವಚಿತ್ರವೂ ಇರಲಿ. ವಾಟ್ಸ್‌ಆ್ಯಪ್ ಸಂಖ್ಯೆ: 96060 38256

ಕೇಂದ್ರ ಸಹಾಯಧನ ನೀಡಲಿ– ರಾಮಲಿಂಗಾರೆಡ್ಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೆಟ್ರೊ ಪ್ರಯಾಣ ದರ ಏರಿಕೆಗೆ ರಾಜ್ಯ ಸರ್ಕಾರ ಕಾರಣ ಎಂದು ಕೈ ತೋರಿಸಿ ತಪ್ಪಿಸಿಕೊಳ್ಳಲು ಬಿಜೆಪಿಯವರು ನೋಡುತ್ತಿದ್ದಾರೆ. ಇದರಿಂದ ಜನಕ್ಕೆ ಹೊರೆ ಆಗುತ್ತದೆ. 'ನಮ್ಮ ಮೆಟ್ರೊ'ಗೂ ಕೇಂದ್ರ ಸರ್ಕಾರ ಸಹಾಯಧನ ನೀಡಲಿ' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ನಷ್ಟವಾದರೂ ರಸ್ತೆ ಸಾರಿಗೆ ನಿಗಮಗಳಿಗೆ ನಾವು ಸಹಾಯಧನ ಕೊಡುತ್ತಿದ್ದೇವೆ' ಎಂದರು.

'ಮೆಟ್ರೊ ಪ್ರಯಾಣ ದರ ಏರಿಕೆಗೂ, ರಾಜ್ಯ ಸರ್ಕಾರಕ್ಕೂ ಯಾವುದೇ ಸಂಬಂಧ ಇಲ್ಲ. ಮೆಟ್ರೊ ಇರುವ ಎಲ್ಲ ರಾಜ್ಯಗಳು ದರ ಏರಿಕೆ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯುತ್ತವೆ. ಆ ಪತ್ರ ಆಧರಿಸಿ ಕೇಂದ್ರ ಸರ್ಕಾರವು ದರ ಏರಿಕೆ ಮಾಡಲು ಸಮಿತಿ ರಚಿಸುತ್ತದೆ. ಇದೇ ರೀತಿ 'ನಮ್ಮ ಮೆಟ್ರೊ'ದವರೂ ಪತ್ರ ಬರೆದಿದ್ದರು. ದರ ಹೆಚ್ಚಿಸುವ ತೀರ್ಮಾನವನ್ನು ಆ ಸಮಿತಿ ತೆಗೆದುಕೊಂಡಿದೆ. ಈ ವಿಚಾರದಲ್ಲಿ ಬಿಜೆಪಿಯವರು ಕೇಂದ್ರ ಸರ್ಕಾರದ ವಿರುದ್ಧ ಹೋರಾಟ ಮಾಡಬೇಕು' ಎಂದರು.

> **ಪ್ರಯಾಣ ದರ ನಿಗದಿ ಮಾಡುವ ಸಮಿತಿಗೆ ಅಧ್ಯಕ್ಷರನ್ನು ನೇಮಕ ಮಾಡುವುದು ಕೇಂದ್ರ ಸರ್ಕಾರ. ಪ್ರಸ್ತುತ ತಮಿಳುನಾಡು ರಾಜ್ಯದ ನಿವೃತ್ತ ನ್ಯಾಯಮೂರ್ತಿಯವರು ಅಧ್ಯಕ್ಷರಾಗಿದ್ದಾರೆ**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

'ಭಾರತ್ ಗಂಧರ್ವ ಯಾತ್ರಾ' ನಾಳೆಯಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಸಾಮಗಾನ ಸಭಾದ ವತಿಯಿಂದ ಫೆಬ್ರುವರಿ 19ರಿಂದ 23ರವರೆಗೆ 'ಭಾರತ್ ಗಂಧರ್ವ ಯಾತ್ರಾ–2025' ಶೀರ್ಷಿಕೆ ಅಡಿಯಲ್ಲಿ 16ನೇ ಭಾರತೀಯ ಶಾಸ್ತ್ರೀಯ ಸಂಗೀತೋತ್ಸವ ಮಲ್ಲೇಶ್ವರದ ಚೌಡಯ್ಯ ಸ್ಮಾರಕ ಭವನದಲ್ಲಿ ನಡೆಯಲಿದೆ.

ಫೆ. 19ರಂದು ಸಂಜೆ 4.30ಕ್ಕೆ ಸಂಗೀತೋತ್ಸವದ ಉದ್ಘಾಟನೆ ನಡೆಯಲಿದೆ. ಮೂರು ದಿನ ನಡೆಯುವ ಸಂಗೀತೋತ್ಸವದಲ್ಲಿ ರಂಜನಿ ಗಾಯತ್ರಿ, ಸಂದೀಪ್ ನಾರಾಯಣ, ತ್ರಿಶ್ಯೂರು ಸಹೋದರರು, ಸಾಯಿ ವಿಘ್ನೇಶ್, ಆರ್ಯ ಅಂಬೇಕರ್, ಲಕ್ಷ್ಮೀ ನಾಗರಾಜ್, ಇಂದೂ ನಾಗರಾಜ್, ಗಂಗಾ ಶಶಿಧರನ್, ಆರ್ಯಬನಿಕ್, ಮೈಸೂರು ಸುಮಂತ್, ಷಡಜ್ ಗೋಡ್ಖಿಂಡಿ ಅವರು ಸಂಗೀತ ಕಛೇರಿ ಪ್ರಸ್ತುತ ಪಡಿಸಲಿದ್ದಾರೆ.

ಫೆ. 23ರಂದು ನಡೆಯುವ ಕಾರ್ಯಕ್ರಮದಲ್ಲಿ ರಾಜ್ಯ ಸರ್ಕಾರದ ನಿವೃತ್ತ ಮುಖ್ಯಕಾರ್ಯದರ್ಶಿ ಎಸ್.ವಿ. ರಂಗನಾಥ್ ಅವರು ವೇಣು ವಾದಕ ಶಶಾಂಕ್ ಸುಬ್ರಹ್ಮಣ್ಯಂ ಅವರಿಗೆ '13ನೇ ಸಾಮಗಾನ ಮಾತಂಗ' ರಾಷ್ಟ್ರೀಯ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಭಾರತೀಯ ಸಾಮಗಾನ ಸಭಾದ ಸಂಸ್ಥಾಪಕ ಅಧ್ಯಕ್ಷ ಆರ್.ಆರ್. ರವಿಶಂಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

530 ಮರಕ್ಕೆ ಕತ್ತರಿ, 1,988 ಮರ ತೆರವು

ಬೆಂಗಳೂರು: ನಗರದ ಹಳೆ ವಿಮಾನ ನಿಲ್ದಾಣ ರಸ್ತೆಯಲ್ಲಿರುವ ಕಮಾಂಡೊ ಆಸ್ಪತ್ರೆಯ ವಿಸ್ತರಣೆ ಉದ್ದೇಶಕ್ಕಾಗಿ 530 ಮರಗಳನ್ನು ಕತ್ತರಿಸಲು ಇದ್ದ ತಡೆಯಾಜ್ಞೆ ತೆರವುಗೊಳಿಸಿರುವ ಹೈಕೋರ್ಟ್, ಮರ ಕತ್ತರಿಸಲು ಅನುಮತಿ ನೀಡಿದೆ.

ಅಂತೆಯೇ, ಬೆಂಗಳೂರು ಉಪನಗರ ರೈಲು ಯೋಜನೆಯ (ಬಿಎಸ್‌ಆರ್‌ಪಿ) ಅಂಬೇಡ್ಕರ್ ನಗರ ಮತ್ತು ಮುದ್ದೇನಹಳ್ಳಿ ಮಾರ್ಗದಲ್ಲಿ 1,988 ಮರಗಳನ್ನು ತೆರವುಗೊಳಿಸಲೂ ಕೆ-ರೈಡ್‌ಗೆ (ಕರ್ನಾಟಕ ರೈಲು ಮೂಲಸೌಲಭ್ಯ ಅಭಿವೃದ್ಧಿ ಕಂಪನಿ ನಿಯಮಿತ) ಒಪ್ಪಿಗೆ ನೀಡಿದೆ.

'ಕರ್ನಾಟಕ ಮರಗಳ ಸಂರಕ್ಷಣಾ ಕಾಯ್ದೆ-1976' ಅನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ನಿರ್ದೇಶಿಸಬೇಕು' ಎಂದು ಕೋರಿ ದತ್ತಾತ್ರೇಯ ಟಿ.ದೇವರೆ ಹಾಗೂ 'ಬೆಂಗಳೂರು ಎನ್ವಿರಾನ್ಮೆಂಟ್ ಟ್ರಸ್ಟ್' 2018ರಲ್ಲಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

'ಮರಗಳನ್ನು ಕತ್ತರಿಸುವ ಸಂಬಂಧದ ಪ್ರತಿಯೊಂದು ಅರ್ಜಿಯನ್ನೂ ಟ್ರೀ ಎಕ್ಸ್‌ಪರ್ಟ್ ಕಮಿಟಿ (ಟಿಇಸಿ) ಪರಿಶೀಲಿಸಿ ಅನುಮತಿ ನೀಡುತ್ತದೆ. ಹಾಗಾಗಿ, ಟಿಇಸಿ ನಿರ್ಧಾರದಲ್ಲಿ ನ್ಯಾಯಾಲಯ ಮಧ್ಯಪ್ರವೇಶ ಮಾಡುವುದಿಲ್ಲ' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

ಆಕ್ಷೇಪ ಬದಿಗೆ: 'ಕಮಾಂಡೊ ಆಸ್ಪತ್ರೆ ವಿಸ್ತರಣೆಗಾಗಿ ಬಿಬಿಎಂಪಿಯ ಮರ ಅಧಿಕಾರಿ 530 ಮರಗಳನ್ನು ಕತ್ತರಿಸಲು ಅನುಮತಿ ನೀಡಿದ್ದಾರೆ. ಆದರೆ, ಅದಕ್ಕೆ ಪರ್ಯಾಯವಾಗಿ ಎಷ್ಟು ಮರಗಳನ್ನು ನೆಡಲಾಗುತ್ತಿದೆ ಎಂಬ ವಿವರಗಳನ್ನು ಉಲ್ಲೇಖಿಸಿಲ್ಲ. ಅಂತೆಯೇ, ಇದೇ ನ್ಯಾಯಪೀಠ ಈ ಹಿಂದೆ ನೀಡಿರುವ ಆದೇಶದಂತೆ ಮರಗಳನ್ನು ಕತ್ತರಿಸುವ ಬಗ್ಗೆ ನ್ಯಾಯಾಲಯ ನೇಮಕ ಮಾಡಿರುವ ತಜ್ಞರ ಸಮಿತಿಯು ಅದನ್ನೂ ಪರಿಶೀಲಿಸಿಲ್ಲ' ಎಂಬ ಅರ್ಜಿದಾರರ ಆಕ್ಷೇಪಣೆಯನ್ನು ನ್ಯಾಯಪೀಠ ತಳ್ಳಿಹಾಕಿದೆ.

ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿಗಳ ಒಟ್ಟು ಸಂಖ್ಯೆ 50ಕ್ಕೆ ಏರಿಕೆ

ನ್ಯಾಯಮೂರ್ತಿಯಾಗಿ ನದಾಫ್ ಪ್ರಮಾಣ

ಪ್ರಜಾವಾಣಿ ವಾರ್ತೆ

ಟಿ.ಎಂ. ನದಾಫ್

ಬೆಂಗಳೂರು: ಹೈಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕಗೊಂಡಿರುವ ಹೈಕೋರ್ಟ್ ವಕೀಲ ಟಿ.ಎಂ.ನದಾಫ್ ಅವರಿಗೆ ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಸೋಮವಾರ ಪ್ರಮಾಣ ವಚನ ಬೋಧಿಸಿದರು.

ಇದರೊಂದಿಗೆ ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿಗಳ ಒಟ್ಟು ಸಂಖ್ಯೆ 50ಕ್ಕೆ ಏರಿಕೆಯಾಗಿದೆ. ಹೈಕೋರ್ಟ್‌ನ ಒಟ್ಟು ಮಂಜೂರಾತಿ ಸಂಖ್ಯೆ 62.

ನ್ಯಾಯಮೂರ್ತಿ ನದಾಫ್ ಅವರು 1976ರ ಜುಲೈ 7ರಂದು ಹಾವೇರಿ ಜಿಲ್ಲೆಯ ಶಿಗ್ಗಾವಿ ಪಟ್ಟಣದಲ್ಲಿ ಜನಿಸಿದ್ದಾರೆ. ತಂದೆ ಮೌಲಾಸಾಬ್ ನದಾಫ್ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿದ್ದರು.

ಕಾರವಾರ ಜಿಲ್ಲೆಯ ಪೊಲೀಸ್ ಪ್ರಧಾನ ಕಚೇರಿ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ಬೆಂಗಳೂರಿನ ಚಾಮರಾಜಪೇಟೆಯ ಸೇಂಟ್ ಜೋಸೆಫ್ ಶಾಲೆಯಲ್ಲಿ ಪ್ರೌಢಶಿಕ್ಷಣ, ಕೆಎಲ್‌ಇ ಸೊಸೈಟಿಯ ನಿಜಲಿಂಗಪ್ಪ ಕಾಲೇಜಿನಲ್ಲಿ ಪಿಯು ವಿದ್ಯಾಭ್ಯಾಸ ಹಾಗೂ ರಾಜಾಜಿನಗರದಲ್ಲಿರುವ ವಿವೇಕಾನಂದ ಕಾನೂನು ಕಾಲೇಜಿನಲ್ಲಿ ಕಾನೂನು ಪದವಿ ಪೂರೈಸಿದ್ದಾರೆ. ಹೈಕೋರ್ಟ್ ವಕೀಲರಾದ ಕೆ.ಅಪ್ಪಾರಾವ್, ಅಶೋಕ್ ಆರ್. ಕಲ್ಯಾಣಶೆಟ್ಟಿ ಅವರ ಕಚೇರಿಯಲ್ಲಿ ವಕೀಲಿಕೆ ಆರಂಭಿಸಿದ ನಂತರ ಪಿ.ಕೆ. ಪೊನ್ನಪ್ಪ ಅವರ ಮಾರ್ಗದರ್ಶನದಲ್ಲಿ ವಿಚಾರಣಾ ನ್ಯಾಯಾಲಗಳಲ್ಲಿ ವೃತ್ತಿ ಅನುಭವ ಸಂಪಾದಿಸಿದ್ದಾರೆ.

ಐ.ಟಿ ಉದ್ಯೋಗಿಗಳಿಗೆ ಕುತ್ತಿನ ಕಾಯ್ದೆ: ಆಕ್ಷೇಪಣೆಗೆ ಗಡುವು

'ಐ.ಟಿ ಉದ್ಯೋಗಿಗಳಿಗೆ ಸೇವಾ ಷರತ್ತುಗಳನ್ನು ವಿಧಿಸುವ ಮತ್ತು ಅವುಗಳನ್ನು ತೆಗೆದುಹಾಕುವ ಅಧಿಕಾರವನ್ನು ರಾಜ್ಯ ಸರ್ಕಾರಗಳಿಗೆ ಏಕಪಕ್ಷೀಯವಾಗಿ ನೀಡಲಾಗಿದೆ ಎಂಬ ಅರ್ಜಿಗೆ ಸಂಬಂಧಿಸಿದಂತೆ ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶ ನೀಡಬೇಕು' ಎಂದು ಕೇಂದ್ರ ಸರ್ಕಾರ, ಹೈಕೋರ್ಟ್‌ಗೆ ಮನವಿ ಮಾಡಿದೆ.

ಈ ಸಂಬಂಧ, 'ಕರ್ನಾಟಕ ರಾಜ್ಯ ಐ.ಟಿ–ಐಟಿಇಎಸ್ ನೌಕರರ ಒಕ್ಕೂಟ' ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಅನಂತ ರಮಾನಾಥ ಹೆಗಡೆ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ಹೈಕೋರ್ಟ್ ವಕೀಲ ಎಲ್. ಮುರಳೀಧರ ಪೇಶ್ವೆ, 'ಐ.ಟಿ ಉದ್ಯೋಗಿಗಳಿಗೆ ಸೇವಾ ಷರತ್ತುಗಳನ್ನು ವಿಧಿಸುವ ಮತ್ತು ಅವುಗಳನ್ನು ತೆಗೆದುಹಾಕುವ ಬಗ್ಗೆ ಕಾನೂನಿನಲ್ಲಿ ರಾಜ್ಯ ಸರ್ಕಾರಗಳಿಗೆ ಅನಿಯಂತ್ರಿತ ಮತ್ತು ಏಕಪಕ್ಷೀಯ ಅಧಿಕಾರ ನೀಡಲಾಗಿದೆ. ಇದರಿಂದ 20 ಲಕ್ಷ ಐ.ಟಿ ಉದ್ಯೋಗಿಗಳು ತೊಂದರೆ ಎದುರಿಸಲಿದ್ದಾರೆ. ಆದ್ದರಿಂದ, ಕಲಂ 14 ಅನ್ನು ಸಂವಿಧಾನಬಾಹಿರ ಎಂದು ಘೋಷಿಸಬೇಕು ಮತ್ತು ಕಲಂ 14ನ್ನು ಜಾರಿಗೊಳಿಸಿ ರಾಜ್ಯ ಸರ್ಕಾರ 2024ರ ಜೂನ್ 10ರಂದು ಹೊಡಿಸಿರುವ ಅಧಿಸೂಚನೆ ರದ್ದುಪಡಿಸಬೇಕು' ಎಂದು ಕೋರಿದರು.

ಇದಕ್ಕೆ ಪ್ರತಿಕ್ರಿಯಿಸಿದ ಕೇಂದ್ರ ಸರ್ಕಾರದ ಪರ ವಕೀಲರು, 'ಅರ್ಜಿಯಲ್ಲಿ ಕೈಗಾರಿಕಾ ಉದ್ಯೋಗ (ಸ್ಥಾಯಿ ಆದೇಶಗಳು) ಕಾಯ್ದೆ-1964ರ ಕಲಂ14ರ ಕಾನೂನು ಸಿಂಧುತ್ವವನ್ನು ಪ್ರಶ್ನಿಸಲಾಗಿದೆ. ಈ ಕುರಿತಂತೆ ಆಕ್ಷೇಪಣೆ ಸಲ್ಲಿಸಲು ಒಂದಷ್ಟು ಕಾಲಾವಕಾಶ ನೀಡಬೇಕು' ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ವಿಚಾರಣೆಯನ್ನು ಮಾರ್ಚ್ 3ಕ್ಕೆ ಮುಂದೂಡಿತು.

ಹೈಕೋರ್ಟ್ ಸುದ್ದಿಗಳು

ನಟ ಸಂಬರಗಿ ವಿರುದ್ಧದ ಪ್ರಕರಣಕ್ಕೆ ತಡೆ

ಪ್ರಶಾಂತ್ ಸಂಬರಗಿ

ಬೆಂಗಳೂರು: 'ನಟ ಪ್ರಕಾಶ್ ರಾಜ್ ಮಹಾ ಕುಂಭಮೇಳದಲ್ಲಿ ಮಿಂದೆದ್ದಿದ್ದಾರೆ' ಎಂದು ಅವರು ನೀರಿನಲ್ಲಿ ಮುಳುಗಿ ನಮಸ್ಕಾರ ಹಾಕುತ್ತಿರುವ ಚಿತ್ರವೊಂದನ್ನು ಪ್ರಕಟಿಸಿ; 'ಪ್ರಕಾಶ್ ರಾಜ್ ಅವರ ಎಲ್ಲಾ ಪಾಪಗಳನ್ನು ಕ್ಷಮಿಸಲಾಗಿದೆ' ಎಂಬ ಶೀರ್ಷಿಕೆ ನೀಡಿದ್ದ ಆರೋಪದಡಿ ನಟ ಪ್ರಶಾಂತ್ ಸಂಬರಗಿ ವಿರುದ್ಧ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣದ ನ್ಯಾಯಿಕ ವಿಚಾರಣೆಗೆ ಹೈಕೋರ್ಟ್ ತಡೆ ನೀಡಿದೆ.

ಪ್ರಕರಣ ರದ್ದುಪಡಿಸುವಂತೆ ಕೋರಿ ಪ್ರಶಾಂತ ಸಂಬರಗಿ ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಆರ್.ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸಂಬರಗಿ ಪರ ಹೈಕೋರ್ಟ್ ವಕೀಲ ಶಿವಪ್ರಸಾದ್ ಶಾಂತನಗೌಡರ್ ಅವರ ವಾದ ಆಲಿಸಿದ ನ್ಯಾಯಪೀಠ, ಪ್ರಕರಣಕ್ಕೆ ತಡೆ ನೀಡಿತು. ಪ್ರತಿವಾದಿಗಳಾದ ಲಕ್ಷ್ಮಿಪುರಂ ಪೊಲೀಸ್ ಠಾಣೆ ಅಧಿಕಾರಿ ಮತ್ತು ಪ್ರಕಾಶ್ ರಾಜ್‌ಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಮಾರ್ಚ್ 4ಕ್ಕೆ ಮುಂದೂಡಿತು.

ಸಮಯಕ್ಕೆ ಸಿಗದ 'ಗ್ಯಾರಂಟಿ' ಹಣ: ಛಲವಾದಿ

ಪ್ರಜಾವಾಣಿ ವಾರ್ತೆ

ಛಲವಾದಿ ನಾರಾಯಣಸ್ವಾಮಿ

ಬೆಂಗಳೂರು: 'ಗ್ಯಾರಂಟಿ' ಫಲಾನುಭವಿಗಳ ಖಾತೆಗೆ ಸಮಯಕ್ಕೆ ಸರಿಯಾಗಿ ರಾಜ್ಯ ಸರ್ಕಾರ ಹಣ ಜಮೆ ಮಾಡುತ್ತಿಲ್ಲ. ಹಾಗಾದರೆ ಬಜೆಟ್‌ನಲ್ಲಿ ಮೀಸಲಿಟ್ಟ ₹52 ಸಾವಿರ ಕೋಟಿ ಎಲ್ಲಿ ಹೋಗುತ್ತಿದೆ ಎಂದು ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಪ್ರಶ್ನಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, 'ಗ್ಯಾರಂಟಿ ಯೋಜನೆ ಬಗ್ಗೆ ಕಾಂಗ್ರೆಸ್ ನಾಯಕರಲ್ಲೇ ಗೊಂದಲಗಳಿವೆ. ಕೆಲವರು ಯೋಜನೆಗಳನ್ನು ಸ್ಥಗಿತಗೊಳಿಸುವಂತೆ ಬಹಿರಂಗವಾಗಿ ಹೇಳುತ್ತಿದ್ದಾರೆ. ಇತ್ತ ಸರ್ಕಾರ ಹಣ ನೀಡಲು ವಿಳಂಬ ಮಾಡುತ್ತಿದೆ' ಎಂದರು.

ಇಂತಹ ನಡೆಗಳು ಅನುಮಾನಕ್ಕೆ ಕಾರಣವಾಗಿವೆ. ಅಕ್ಕಿ ವಿತರಣೆ ಸ್ಥಗಿತಗೊಳಿಸಲಾಗಿದೆ. ಗೃಹ ಲಕ್ಷ್ಮಿಯರ ಖಾತೆಗೆ ಹಣ ಬಂದಿಲ್ಲ. ಯುವನಿಧಿಯ ಹಣವೂ ಇಲ್ಲ. ಪರಿಶಿಷ್ಟರಿಗೆ ಮೀಸಲಿಟ್ಟ ಹಣವನ್ನೂ ಗ್ಯಾರಂಟಿ ಹೆಸರಲ್ಲಿ ಕಬಳಿಸಿದ್ದಾರೆ' ಎಂದು ದೂರಿದರು.

ವಿಧಾನಪರಿಷತ್ ಸದಸ್ಯ ಎನ್.ರವಿಕುಮಾರ್ ಮಾತನಾಡಿ, 'ರಾಜ್ಯ ಸರ್ಕಾರದ ಖಜಾನೆ ಸಂಪೂರ್ಣ ಖಾಲಿಯಾಗಿದೆ. ಅದಕ್ಕಾಗಿ ದರ ಏರಿಕೆ ಮಾಡುತ್ತಿದೆ. ಮೆಟ್ರೊ ಪ್ರಯಾಣ ದರ, ವಿದ್ಯುತ್ ದರದ ನಂತರ ಹಾಲಿನ ದರವನ್ನು ಪ್ರತಿ ಲೀಟರಿಗೆ ₹5 ಹೆಚ್ಚಳಕ್ಕೆ ಚಿಂತನೆ ನಡೆಸಿದೆ' ಎಂದು ದೂರಿದರು.

ಮೈಸೂರಿನ ಉದಯಗಿರಿ ಘಟನೆಯಲ್ಲಿ ಆರ್‌ಎಸ್‌ಎಸ್ ಕೈವಾಡವಿದೆ ಎಂಬ ಬಿ.ಕೆ. ಹರಿಪ್ರಸಾದ್ ಹೇಳಿಕೆ ಆಧಾರರಹಿತ. ಅಲ್ಪ ಸಂಖ್ಯಾತರು ಗೂಂಡಾಗಳಂತೆ ವರ್ತಿಸಲು ಕಾಂಗ್ರೆಸ್ ಕಾರಣ ಎಂದು ಆರೋಪಿಸಿದರು.

ಕ್ಷೇಮ ಕುಶಲ

ಪ್ಲಾಸ್ಟಿಕ್ ಸರ್ಜರಿ ಎಂಬ ಸುರೂಪಿ ಚಿಕಿತ್ಸೆ

ಡಾ. ಕಿರಣ್ ವಿ. ಎಸ್.

ಎಲ್ಲ ಪ್ರಾಚೀನ ನಾಗರಿಕತೆಗಳಲ್ಲೂ ಮೂಗು ಎನ್ನುವುದು ಪ್ರತಿಷ್ಠೆಯ ಸಂಕೇತವಾಗಿತ್ತು. ತಪ್ಪು ಮಾಡಿದವರ ಮೂಗನ್ನು ಕತ್ತರಿಸುವ ಪದ್ಧತಿ ಭಾರತ, ಈಜಿಪ್ಟ್, ಮೆಸೆಪೆಟೊಮಿಯಾ ನಾಗರಿಕತೆಗಳಲ್ಲಿ ನಾಲ್ಕು ಸಾವಿರ ವರ್ಷಗಳಿಂದ ದಾಖಲಾಗಿದೆ. ತಮ್ಮ ಪ್ರತಿಷ್ಠೆಗೆ ಭಂಗವಾದಾಗ ಸಿರಿವಂತರು ಏನಾದರೂ ಪರಿಹಾರ ಹುಡುಕುವುದು ಸಾಮಾನ್ಯ. ಈ ನಿಟ್ಟಿನಲ್ಲಿ ಬೆಳೆದದ್ದು ಕತ್ತರಿಸಿದ ಮೂಗನ್ನು ಸರಿಪಡಿಸುವ ಸುರೂಪಿ ಚಿಕಿತ್ಸೆ. ಸುಮಾರು ನಾಲ್ಕು ಸಾವಿರ ವರ್ಷಗಳ ಹಿಂದೆಯೇ ಭಾರತದಲ್ಲಿ ಕುಂಬಾರರು ಮಣ್ಣಿನಿಂದ ಮಾಡಿದ ಆಕೃತಿಗಳನ್ನು ಬಳಸಿ ಕತ್ತರಿಸಿದ ಮೂಗನ್ನು ಸಾಮಾನ್ಯವಾಗಿ ಕಾಣುವಂತೆ ಮಾಡುತ್ತಿದ್ದರು ಎನ್ನುವ ದಾಖಲೆಗಳಿವೆ. ಇದು ಮುಂದೆ ಅಭಿವೃದ್ಧಿಯಾಗಿ ಹಣೆಯ ಮೇಲಿನ ಚರ್ಮವನ್ನು ಹೆರೆದು, ಅದನ್ನು ಕತ್ತರಿಸಿದ ಮೂಗಿನ ಭಾಗಕ್ಕೆ ಜೋಡಿಸುವ ಕಲೆಯಾಗಿ ಮಾರ್ಪಾಡಾಯಿತು. ಇದನ್ನು ಸಾಧಿಸಿದವರು ಸಣ್ಣ ಚಾಕುಗಳ ಬಳಕೆ, ನಿಖರವಾದ ಕೈಚಲನೆಯಲ್ಲಿ ಪಳಗಿದ್ದ ಕ್ಷೌರಿಕರು. ಕತ್ತರಿಸಿದ ಮೂಗನ್ನು ಸರಿಪಡಿಸುತ್ತಿದ್ದ ಕ್ಷೌರಿಕನ ಪ್ರಸ್ತಾಪವನ್ನು 11ನೆಯ ಶತಮಾನದ ಕಾಶ್ಮೀರದ ಕವಿ ಕ್ಷೇಮೇಂದ್ರ ತನ್ನ 'ಸಮಯಮಾತೃಕಾ' ಎನ್ನುವ ಕೃತಿಯಲ್ಲಿ ಮಾಡಿದ್ದಾನೆ.

ಶತಮಾನಗಳ ಕಾಲ ಜಗತ್ತಿನ ಗಮನಕ್ಕೆ ಬಾರದಂತೆ ಈ ಪದ್ಧತಿ ಭಾರತದಲ್ಲಿ ನಡೆಯುತ್ತಲೇ ಇತ್ತು. 1794ರಲ್ಲಿ ಮಿ. ಅರ್ಬನ್ ಮತ್ತು ಜನರಲ್ ಲ್ಯುಕಸ್ ಎಂಬ ಬ್ರಿಟಿಷ್ ಅಧಿಕಾರಿಗಳು ಇಂಗ್ಲೆಂಡಿನ ಪತ್ರಿಕೆಯೊಂದರಲ್ಲಿ ಮೈಸೂರು ಸಂಸ್ಥಾನದಲ್ಲಿ ಕಂಡುಬಂದ ಕತ್ತರಿಸಿದ ಮೂಗಿನ ಸುರೂಪಿ ಶಸ್ತ್ರಚಿಕಿತ್ಸೆಯ ಪ್ರಸಂಗವೊಂದನ್ನು ವರದಿ ಮಾಡಿ, ಜಗತ್ತಿಗೆ ಅಚ್ಚರಿ ಮೂಡಿಸಿದ್ದರು.

ಇಂದು ಪ್ಲಾಸ್ಟಿಕ್ ಸರ್ಜರಿ ಎಂದು ಕರೆಯಲ್ಪಡುವ ಸುರೂಪಿ ಶಸ್ತ್ರಚಿಕಿತ್ಸೆ ಬಹಳ ಪ್ರಗತಿ ಸಾಧಿಸಿದೆ. ಊನವಾದ ಅಂಗಗಳನ್ನು ಮೊದಲಿನಂತೆ ಸರಿಪಡಿಸುವುದು, ಬೇರೆ ವಿಧಾನಗಳಿಂದ ಅವುಗಳನ್ನು ಮತ್ತೆ ನಿರ್ಮಿಸುವುದು, ವಕ್ರವಾಗಿ ಬೆಳೆದಿರುವ ಅಂಗಗಳನ್ನು ಚಂದವಾಗಿ ಕಾಣುವಂತೆ ಸರಿಪಡಿಸುವುದು ಪ್ಲಾಸ್ಟಿಕ್ ಸರ್ಜರಿಯ ಧ್ಯೇಯಗಳು. ಇದರಲ್ಲಿ 'ಪ್ಲಾಸ್ಟಿಕ್' ಎನ್ನುವ ಪದ ಗ್ರೀಕ್ ಮೂಲದ್ದು. ಅದರ ಅರ್ಥ 'ಬೇಕಾದಂತಹ ಆಕೃತಿಗೆ ತರುವುದು'. ಶಸ್ತ್ರಚಿಕಿತ್ಸೆಯಲ್ಲಿ ಈ ಪದದ ಬಳಕೆ ಬಂದದ್ದು 1816ರಲ್ಲಿ. ನಾವು ಇಂದು ಬಳಸುವ ಪೆಟ್ರೋಲಿಯಂ ಮೂಲದ ಪ್ಲಾಸ್ಟಿಕ್ ಎನ್ನುವ ವಸ್ತು ಆವಿಷ್ಕಾರವಾದದ್ದು 1908ರಲ್ಲಿ. ಪ್ಲಾಸ್ಟಿಕ್ ಸರ್ಜರಿಗೂ, ಸಾಮಾನ್ಯ ಬಳಕೆಯ ಪ್ಲಾಸ್ಟಿಕ್‌ಗೂ ಯಾವ ಸಂಬಂಧವೂ ಇಲ್ಲ.

ಮೊದಲನೆಯ ಮಹಾಯುದ್ಧದ ವೇಳೆ ಅಂಗಚ್ಛೇದಗಳಿಗೆ ಒಳಗಾಗಿದ್ದ ಸೈನಿಕರ ವಿಕೃತವಾದ ಅಂಗಗಳನ್ನು ಶಸ್ತ್ರಚಿಕಿತ್ಸೆಯ ಮೂಲಕ ಸರಿಪಡಿಸಿದ ನ್ಯೂಜಿಲೆಂಡ್‌ನ ವೈದ್ಯ ಸರ್ ಹೆರಾಲ್ಡ್ ಗಿಲ್ಲೆಸ್ ಆಧುನಿಕ ಪ್ಲಾಸ್ಟಿಕ್ ಸರ್ಜರಿಯ ಜನಕ ಎನಿಸಿಕೊಂಡಿದ್ದಾರೆ. ಇಂದು ಪ್ಲಾಸ್ಟಿಕ್ ಸರ್ಜರಿ ಅಗಾಧವಾಗಿ ಬೆಳೆದಿದೆ. ನಟರ ಸೊಟ್ಟ ಮೂಗುಗಳನ್ನು ನೆಟ್ಟಗಾಗಿಸುವ, ನಟಿಯರ ಸ್ತನಗಳ ಗಾತ್ರಗಳನ್ನು ಹಿಗ್ಗಿಸುವ ವಿಧಾನಗಳು ಇದರ ಅಲ್ಪಭಾಗ ಮಾತ್ರ. ಸುಟ್ಟಗಾಯಗಳ ಚರ್ಮದ ಪುನರ್ ನಿರ್ಮಾಣ; ಮಕ್ಕಳ ಸೀಳು-ತುಟಿ, ಸೀಳು-ಅಂಗಳಗಳನ್ನು ಕೂಡಿಸುವಿಕೆ; ಕ್ಯಾನ್ಸರ್ ಮೂಲಕ ಗಾಸಿಗೊಂಡಿರುವ ಮುಖದ ಮೂಳೆಗಳ ಮರುನಿರ್ಮಾಣ; ಜನ್ಮಜಾತವಾಗಿಯೋ ಅಥವಾ ಅವಘಡಗಳ ಮೂಲಕವೋ ಸಂಭವಿಸಿದ ಕೈಬೆರಳುಗಳ ವಿಕೃತಿಗಳನ್ನು ತಿದ್ದುವಿಕೆ; ಕ್ಯಾನ್ಸರ್ ಮೂಲಕ ಶಸ್ತ್ರಚಿಕಿತ್ಸೆಗೆ ಒಳಗಾಗಿರುವ ಸ್ತನಗಳ ಕೃತಕ ನಿರ್ಮಿತಿ; ತೀರಾ ಸಣ್ಣಗಾತ್ರದ, ಆದರೆ ಬಹಳ ಮಹತ್ವದ ಕಾರ್ಯ ನಿರ್ವಹಿಸುವ ರಕ್ತನಾಳಗಳು ಮತ್ತು ನರಗಳ ಜೋಡಣೆ ಮೊದಲಾದುವುಗಳು ಪ್ಲಾಸ್ಟಿಕ್ ಸರ್ಜರಿಯ ವ್ಯಾಪ್ತಿಗೆ ಬರುತ್ತವೆ.

ಸುರೂಪಿ ಚಿಕಿತ್ಸೆಯ ಅತ್ಯಂತ ಮಹತ್ವದ ಅಂಶ ಚರ್ಮದ ರಕ್ಷಣೆ. ರೂಪ ಎನ್ನುವುದು ಮುಖ್ಯವಾಗಿ ಚರ್ಮದ ಆರೋಗ್ಯ ಮತ್ತು ಕಾಂತಿಯನ್ನು ಆಧರಿಸುತ್ತದೆ. ಹೀಗಾಗಿ, ಸಫಲ ಪ್ಲಾಸ್ಟಿಕ್ ಸರ್ಜರಿಯಲ್ಲಿ ಆಯಾ ಅಂಗದ ಮೇಲಿನ ಚರ್ಮವನ್ನು ಸಹಜವಾಗಿ ಕಾಣುವಂತೆ ಮಾಡುವುದು ಬಹಳ ಮುಖ್ಯ. ಬಹುತೇಕ ಸುಟ್ಟ ಗಾಯಗಳ ಚಿಕಿತ್ಸೆಯಲ್ಲಿ ಚರ್ಮದ ಶಸ್ತ್ರಚಿಕಿತ್ಸೆಯೇ ಪ್ರಮುಖ ಭಾಗ. ಒಂದು ಭಾಗದ ಚರ್ಮವನ್ನು ಮತ್ತೊಂದು ಭಾಗಕ್ಕೆ ಜೋಡಿಸುವ ಪ್ರಕ್ರಿಯೆ ಸುರೂಪಿ ಶಸ್ತ್ರಚಿಕಿತ್ಸೆಯ ಅಂಗಭಾಗ. ಇದು ಆಯಾ ರೋಗಿಯ ಚರ್ಮವನ್ನೇ ಬಳಸಿ ಮಾಡಬಹುದು. ರೋಗಿಯ ತೊಡೆಯ ಚರ್ಮವು ಮುಖದ ಶಸ್ತ್ರಚಿಕಿತ್ಸೆಯಲ್ಲಿ ನೆರವಾಗುತ್ತದೆ. ಕೆಲವೊಮ್ಮೆ ಇತರ ದಾನಿಗಳ ಚರ್ಮದ ಬಳಕೆಯೂ ಆಗುತ್ತದೆ. ಈಚೆಗೆ ಮೃತದೇಹಗಳಿಂದ ಚರ್ಮವನ್ನು ತೆಗೆದು ಸಂರಕ್ಷಿಸಿ, ರೋಗಿಗಳಿಗೆ ಬಳಕೆ ಮಾಡುವ ಚರ್ಮದ ಬ್ಯಾಂಕ್ ನಿರ್ಮಾಣವಾಗಿದೆ. ಇದು ರೋಗಿಗಳ ಪಾಲಿಗೆ, ಅದರಲ್ಲೂ ಸುಟ್ಟ ಗಾಯಗಳ ಸಂತ್ರಸ್ತರಿಗೆ ವರದಾನವಾಗಿದೆ. ಕೆಲವು ವಿಶೇಷ ಸಂದರ್ಭಗಳಲ್ಲಿ ಪ್ರಾಣಿಗಳ ಚರ್ಮದ ಬಳಕೆಯೂ ಆಗುತ್ತದೆ.

ಚರ್ಮದ ಮೇಲೆ ಕಲೆಗಳು ಕಾಣದಂತೆ ನಡೆಸುವ ಶಸ್ತ್ರಚಿಕಿತ್ಸೆಗಳಿಗೆ ಮಹತ್ವವಿದೆ. ಇದಕ್ಕಾಗಿ ಶಸ್ತ್ರಚಿಕಿತ್ಸೆಯ ವೇಳೆ ಚರ್ಮವನ್ನು ಯಾವ ರೀತಿಯಲ್ಲಿ, ಯಾವ ಕೋನದಲ್ಲಿ, ಯಾವ ಹಾದಿಯಲ್ಲಿ ವಿಂಗಡಿಸಬೇಕು ಎನ್ನುವ ಕರಾರುವಾಕ್ ಅಧ್ಯಯನಗಳಿವೆ. ಚರ್ಮದ ಸಹಜ ಅಂಗಾಂಶಗಳ ನಿರ್ಮಿತಿಯ ದಾರಿಯನ್ನು ಅನುಸರಿಸುವ ಈ ವಿಧಾನದಲ್ಲಿ ಶಸ್ತ್ರಚಿಕಿತ್ಸೆಯ ನಂತರ ಚರ್ಮ ಬಹಳ ಸಹಜವಾಗಿ ಕೂಡಿಕೊಳ್ಳುತ್ತದೆ. ಇದಕ್ಕೆ ಪೂರಕವಾಗುವಂತೆ ಅತ್ಯಂತ ಸಪೂರ ಹೊಲಿಗೆ ದಾರಗಳ ಬಳಕೆ, ಚರ್ಮದ ಆಂತರ್ಯದಲ್ಲೇ ಹಾಕುವ ಸೂಕ್ಷ್ಮ ಹೊಲಿಗೆಗಳು, ಬಹಳ ನಾಜೂಕಾಗಿ ಚರ್ಮದ ಪದರಗಳನ್ನು ಒಟ್ಟುಗೂಡಿಸುವ ವಿಧಾನ, ಚರ್ಮದ ಸಹಜ ಬಣ್ಣವನ್ನು ಏರುಪೇರು ಮಾಡದ ವಿಶಿಷ್ಟ ಔಷಧಗಳ ಬಳಕೆ ಮೊದಲಾದುವುಗಳು ಸಹಕಾರಿ.

ಸುರೂಪಿ ಶಸ್ತ್ರಚಿಕಿತ್ಸೆ ಎಷ್ಟು ಪ್ರಾಚೀನವೋ ಅಷ್ಟೇ ನವೀನ. ಸಾಮಾನ್ಯ ಜೀವನ ಸಹಜವಾಗಿಯೂ ಸುಂದರವಾಗಿಯೂ ಇರಬೇಕೆನ್ನುವುದು ಎಲ್ಲರ ಬಯಕೆ. ಸುರೂಪಿ ಶಸ್ತ್ರಚಿಕಿತ್ಸೆಯ ಧ್ಯೇಯವೂ ಜೀವನದ ಈ ಆಶಯವನ್ನೇ ಬಿಂಬಿಸುವ ಪ್ರಯತ್ನ.

ಕಫಕ್ಕೂ ಚರ್ಮಕ್ಕೂ ಇದೆ ನಂಟು!

ಡಾ. ಸತ್ಯನಾರಾಯಣ ಭಟ್ ಪಿ.

ಏಳು ಧಾತುಗಳ ಪೈಕಿ ಮೊದಲನೆಯ ಧಾತು ರಸ. ಅದು ಒಂಟಿಯಾಗಿ ಇರದು. ಸಂಗಡ ಕಫವನ್ನೂ ಸೇರಿಕೊಂಡು ಚರ್ಮದ ಆರೋಗ್ಯ ಮತ್ತು ಸಹಜ ಸ್ಥಿತಿಯನ್ನು ಕಾಪಾಡಿಕೊಳ್ಳುತ್ತದೆ. ಕಫವು ಅತಿರೇಕಾವಸ್ಥೆಗೆ ಹೋದರೆ ಅದು ರಸಧಾತುವನ್ನೂ ಕೆಡಿಸುತ್ತದೆ. ಪ್ರಸಿದ್ಧ ನುಡಿಗಟ್ಟಿನ ಮಾತಿದೆಯಲ್ಲ; ಕೋತಿ ತಾನೊಂದೇ ಕೆಡುವುದಲ್ಲ, ವನವನೆಲ್ಲಾ ಕೆಡಿಸಿತು. ಅಂಥ ನುಡಿಗಟ್ಟು ಖಂಡಿತ ರಸಧಾತು ಮತ್ತು ಕಫ ದೋಷದ ಆಶ್ರಯ ಆಶ್ರಯೀ ಭಾವಕ್ಕೆ ಅತಿ ಸುಂದರ ಉಪಮೆ. ರಸಧಾತುವಿನ ಉತ್ಪತ್ತಿಗೆ ಮೂಲಭೂತ ಕಾರಣ ನಾವುಣ್ಣುವ ಆಹಾರ. ಅದು ನಿಯಮಿತ ರೂಪದ್ದಾಗಿರಲಿ. ನಮ್ಮ ಆಚರಣೆಗಳು ಸಹಜವಾಗಿರಲಿ. ಆಗ ರಸಧಾತು ಮತ್ತು ಕಫದ ಸಮಸ್ಥಿತಿಗೆ ಅನುಕೂಲ; ಚರ್ಮರೋಗಗಳಿಗೂ ಇಂಬಾಗದು.

ಮೊಸರನ್ನು ತಿಂದರೆ ರಸಧಾತು ಹೆಚ್ಚಳ. ಅದು ಅತಿಯಾದರೆ ಕಫದ ಹೆಚ್ಚಳಕ್ಕೆ ಕಾರಣ. ಮೊಸರಿನ ಸಂಗಡ ಬೆಲ್ಲ, ಸಕ್ಕರೆ ಕೂಡಿಸಿ ಸವಿಯುವವರೂ ಇದ್ದಾರೆ. ಅಂತಹ ಆಚರಣೆಯಿಂದ ಕಫ ಮತ್ತು ರಸಧಾತು ಸ್ಥಿತಿಯು ವಿಕೋಪಕ್ಕೆ ತಿರುಗೀತು. ಮೊಸರು ಬಿಡಿರಿ. ಬೆಣ್ಣೆ ತೆಗೆದ ತಾಜಾ ಮಜ್ಜಿಗೆ ಬಳಸಿರಿ. ಕೊಂಚ ನೀರು ಬೆರಸಿಯೋ, ಪುಡಿಮಾಡಿದ ಕಾಳು ಮೆಣಸು, ಹಸಿ ಶುಂಠಿಗೂಡಿಸಿಯೋ ಸೇವಿಸಿದರಾಯಿತು. ಮಜ್ಜಿಗೆಯ ಶೀತಗುಣ ಸಹ ನಿವಾರಣೆ. ಚರ್ಮದ ಸಹಜ ಬಣ್ಣಕ್ಕೆ ಕಳೆ. ಬಿರಿಯುವ, ಸೀಳುವ ತೊಂದರೆ ಕಾಣದು. ನವೆ, ಗಾದರಿಯಂತಹ ಕಾಯಿಲೆಗಳಿಗೆ ತಡೆ. ಸೈಂದುಪ್ಪು ಕೂಡಿಸಿದ ಮಜ್ಜಿಗೆ ಅಮೃತತುಲ್ಯ. ಶಿವರಾತ್ರಿಯ ಉಪವಾಸದ ಸಂದರ್ಭಕ್ಕೆ ಖಂಡಿತ ಇಂತಹ 'ರೀ-ಹೈಡ್ರೇಷನ್' ವಿಧಾನ ಸೂಕ್ತ. ಲಭ್ಯವಾಗುವ ಒಂದಿನಿತು ಕೊಬ್ಬಿನಂಶ ಶಕ್ತಿಯಾಗಿ ಪರಿವರ್ತಿತ.

ದಿವಾಸ್ವಪ್ನ, ಅಂದರೆ ಹಗಲಿನ ನಿದ್ದೆ; ಜಡತನದ ಮೂಲವಿದು. ಕಫ ಎಂಬುದು ಜಡತನದ ತಾಯಿಬೇರು. ಸ್ಥಿರತೆಯ ಪರ್ಯಾಯ ಸಹ. ಸೌಮ್ಯತನದ ಸ್ಥಿರತೆ ಖಂಡಿತ ನಮಗಿರಲಿ. ಅದು ಅತಿಯಾದರೆ ಜಡತನದ ಹೆಚ್ಚಳ. ಹೊಸ ಹೊಸ ಕಾಯಿಲೆಗಳಿಗಿದು ಹೆದ್ದಾರಿ. ಮಿದುಳೆಂಬ ಬ್ಯಾಟರಿಗೆ ರೀಚಾರ್ಜು ಮಾಡುವ ದೈವಕೃತ ವಿಧಾನ ನಿದ್ದೆ. ಸಕಾಲಿಕ ನಿದ್ದೆಯಿಂದ ಮಿದುಳೆಂಬ ಸಾಫ್ಟ್‌ವೇರ್ ನೂರಕ್ಕೆ ನೂರರಷ್ಟು ಚಾರ್ಜ್ ಆಗಿಬಿಡುತ್ತದೆ. ಅಕಾಲಿಕ, ಅಸಹಜ ವಿಧಾನದಿಂದ ಮಿದುಳೆಂಬ ಬ್ಯಾಟರಿಯ ಸವಕಳಿಯೋ ಜೀವಿತಾವಧಿಯೋ ಇಳಿಮುಖ. ನಿಮ್ಮ ಮೊಬೈಲ್ ಬ್ಯಾಟರಿಯ ಲೈಫ್ ಅಷ್ಟೆ ಎಂಬ ಪದ ಮೊಬೈಲ್ ರಿಪೇರಿ ಅಂಗಡಿಯಾತ ತಿಳಿಸುವುದಿಲ್ಲವೇ? ಹಾಗೆಯೇ ದೇಹವೆಂಬ ಯಂತ್ರದ ನಮೂನೆ ಕೂಡ. ಮೊಬೈಲ್ ಬ್ಯಾಟರಿ ಬದಲಾಯಿಸಲಾದೀತು. ಆದರೆ ನಿಮ್ಮ ಮಿದುಳೆಂಬ ಬ್ಯಾಟರಿ ಬದಲಾಯಿಸಲಾದೀತೆ?

ಹಗಲು ವೇಳೆಯ ಅನಿಯಮಿತ ನಿದ್ದೆಯಿಂದ ಮಿದುಳಿನ ಅಸಹಜ ಸ್ಥಿತಿಯ ವ್ಯಾಪಾರ; ಹಲವು ಅಂಗಗಳ ಜಡತ್ವಕ್ಕೆ ಕಾರಣ. ಜೀರ್ಣಾಂಗಗಳಲ್ಲಿ ಕೆಲಸದ ಪಾಳಿಯ ಏರುಪೇರು. ಉಂಡ ಅನ್ನ ಅರಗದು. ಮಲಪ್ರವೃತ್ತಿಗೆ ಕಠಿಣ ಸಮಸ್ಯೆ. ಮಲಗಿದಾಗ ದೇಹದ ಅಂಗಾಂಗಗಳ ಚಟುವಟಿಕೆಗಳಿಗೆ ವಿಶ್ರಾಂತಿಯೇನೋ ದೊರಕೀತು. ಆದರೆ ಅದು ವಿಪರೀತವಾದರೆ ಎಲ್ಲ ಅಂಗಗಳೂ ಮುಷ್ಕರ ಹೂಡಲಾರಂಭ. ಒಟ್ಟಿನಲ್ಲಿ ಜಡತ್ವದ ಇನ್ನೊಂದು ಹೆಸರಾದ ಕಫದೋಷದ ಪಾರಮ್ಯ; ರಸಧಾತುವಿಗೆ ಕೆಡಲು ವಿಪುಲ ಅವಕಾಶ. ಹಿರಿಯರಿಗೆ ಮತ್ತು ಎಳವೆಯ ಹಸುಳೆಗಳಿಗಿದೆ ಹಗಲು ನಿದ್ದೆಯ ಸೌಭಾಗ್ಯ. ಏಕೆಂದರೆ ಅವರಿಗೆ ಕಫ ಮತ್ತು ರಸಧಾತುವಿನ ಆರೋಗ್ಯದಾಯಕ ಸವಲತ್ತುಗಳು ತೀರಾ ಅಗತ್ಯ! ಆದರೆ ಚರ್ಮದ ಕಾಯಿಲೆಗಳಿದ್ದವರು ಮಾತ್ರ ಕುಳಿತ ಭಂಗಿಯ ವಿಶ್ರಾಂತಿ ರೂಪದ ನಿದ್ದೆ ಕೈಗೊಳ್ಳಲು ಆಸ್ಪದವಿದೆ.

ಶಿವರಾತ್ರಿಯ ಸಂದರ್ಭದ ಉಪವಾಸ ಮತ್ತು ಜಾಗರಣೆಯ ಸಂಗತಿ ಗಮನಿಸಿರಿ. ಹೆಸರುಬೇಳೆಯಂತಹ ಲಘು ಆಹಾರಸೇವನೆಯಿಂದ ನಮಗಿದೆ ಲಾಭ. ಹೆಸರುಬೇಳೆಯನ್ನು ಎಲ್ಲ ಸಂದರ್ಭಗಳಲ್ಲೂ ನಾವು ಅತ್ಯಂತ ಪಥ್ಯತಮ ಆಹಾರ ಎಂದು ಸೇವಿಸಬಹುದು. ಕೋಸಂಬರಿಯಲ್ಲಿದೆ ಅತ್ಯಂತ ಹೆಚ್ಚಿನ ಸಸಾರಜನಕ. ಅದು ಚರ್ಮದ ಆರೋಗ್ಯಕ್ಕೆ ಪೂರಕ. ಲಿಂಬೆ ಬೆರೆಸಿದರೆ 'ಸಿ 'ಅನ್ನಾಂಗವೂ ಲಭ್ಯ. ಶಿವರಾತ್ರಿಯ ಜಾಗರಣೆಯಲ್ಲಿದೆ ಭಜನೆ, ದೇವತಾರ್ಚನೆಯ ಸಂಭ್ರಮ. ಇದು ಮಿದುಳಿಗೆ ಚೇತೋಹಾರಿ; ಒತ್ತಡವನ್ನು ನೀಗುವ ರಹದಾರಿ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ಗಣಿತ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

16) ಕೊಟ್ಟಿರುವ ಚಿತ್ರದಲ್ಲಿ, BCಯು ವ್ಯಾಸವಾದರೆ, Xನ ಬೆಲೆಯನ್ನು ಕಂಡುಹಿಡಿಯಿರಿ.



ಉತ್ತರ:- $x = 90^0$

17) $P(A) = 80\%$ ಆದರೆ, 'A' ಅಲ್ಲದ ಘಟನೆಯ ಸಂಭವನೀಯತೆ $\frac{1}{5}$ ಎಂದು ತೋರಿಸಿ.

ಪರಿಹಾರ:-

$$P(A) + P(\overline{A}) = 1$$
$$80\% + P(\overline{A}) = 100\%$$
$$P(\overline{A}) = 100 - 80$$
$$P(\overline{A}) = 20\%$$
$$P(A) = \frac{1}{5}$$

18) ತ್ರಿಜ್ಯ r ಮಾನಗಳನ್ನು ಹೊಂದಿರುವ ಗೋಳದ ಘನಫಲವನ್ನು ಕಂಡುಹಿಡಿಯುವ ಸೂತ್ರ ಬರೆಯಿರಿ

ಉತ್ತರ:-

$$\frac{4}{3}\pi r^3$$

19) cosec $(90^\circ - \theta) \times \cos\theta$ ದ ಬೆಲೆಯನ್ನು ಕಂಡುಹಿಡಿಯಿರಿ.

ಉತ್ತರ:-

$$\text{cosec}\,(90 - \theta) \times \cos\theta$$
$$\sec\theta \times \cos\theta$$
$$\frac{1}{\cos\theta} \times \cos\theta$$
$$= 1$$

20) $\sin\theta = 1$ ಆದರೆ, $\cos\theta$ ದ ಬೆಲೆಯನ್ನು ಕಂಡುಹಿಡಿಯಿರಿ.

ಉತ್ತರ:-

$$\cos\theta = \sqrt{1 - \sin^2\theta}$$
$$= \sqrt{1 - (1)^2}$$
$$= \sqrt{1 - 1}$$
$$= \sqrt{0}$$
$$\cos\theta = 0$$

21) ಸ್ಪರ್ಶ ಬಿಂದುವಿನಲ್ಲಿ ಸ್ಪರ್ಶಕಕ್ಕೆ ಎಳೆದ ಲಂಬವು ವೃತ್ತದ ಕೇಂದ್ರದ ಮೂಲಕ ಹಾದು ಹೋಗುತ್ತದೆ ಎಂದು ಸಾಧಿಸಿ.

ಪರಿಹಾರ:-



ಮೇಲಿನ ವೃತ್ತಕ್ಕೆ O ಕೇಂದ್ರವಾಗಿದೆ. PR ವೃತ್ತ ಸ್ಪರ್ಶಕವಾಗಿದೆ, ಇದು P ಬಿಂದುವಿನಲ್ಲಿ ವೃತ್ತವನ್ನು ಸ್ಪರ್ಶಿಸಿದೆ

QP ಯನ್ನು RP ಗೆ ಲಂಬವಾಗುವಂತೆ ರಚನೆ ಮಾಡಿ

ಆದ್ದರಿಂದ $QP \perp RP$

$\angle OPR = 90^\circ$ (radius ⊥ tangent)

, $\angle QPR = 90^\circ$ (ದತ್ತ)

$\therefore \angle OPR = \angle QPR$

ಮೇಲೆ ತಿಳಿಸಿದ ಅಂಶಗಳು ಸಾಧ್ಯವಾಗುವುದು QP ಯು O ಕೇಂದ್ರದ ಮೂಲಕ ಹಾದುಹೋದಾಗ ಮಾತ್ರ ಸಾಧ್ಯ

ಆದ್ದರಿಂದ

ಸ್ಪರ್ಶ ಬಿಂದುವಿನಲ್ಲಿ ಸ್ಪರ್ಶಕಕ್ಕೆ ಎಳೆದ ಲಂಬವು ವೃತ್ತದ ಕೇಂದ್ರದ ಮೂಲಕ ಹಾದು ಹೋಗುತ್ತದೆ ಎಂದು ಸಾಧಿಸಲಾಗಿದೆ.

22) 3, 8 ಮತ್ತು 15 ರ ಮ.ಸಾ.ಅ. ಮತ್ತು ಲ.ಸಾ.ಅ. ಕಂಡುಹಿಡಿಯಿರಿ.

ಉತ್ತರ:-

$$\begin{array}{r|l} 2 & 8 \\ 2 & 4 \\ 2 & 2 \\ & 1 \end{array} \qquad \begin{array}{r|l} 3 & 15 \\ & 5 \end{array}$$

$3 = 3$

$8 = 2^3$

$15 = 3 \times 5$

∴ 3, 8 ಮತ್ತು 15 ರ ಮ.ಸಾ.ಅ. 1

∴ 3, 8 ಮತ್ತು 15 ರ ಲ.ಸಾ.ಅ. $= 3 \times 8 \times 5 = 120$

23) ಒಂದು ಸಮಾಂತರ ಶ್ರೇಢಿಯಲ್ಲಿ ಮೊದಲ ಪದ 5, ಕೊನೆಯ ಪದ 45 ಮತ್ತು ಮೊತ್ತ 400 ಆದರೆ ಅದರ ಪದಗಳ ಸಂಖ್ಯೆ ಮತ್ತು ಸಾಮಾನ್ಯ ವ್ಯತ್ಯಾಸ ಕಂಡುಹಿಡಿಯಿರಿ.

ಪರಿಹಾರ: ಇಲ್ಲಿ $a = 5$ $\quad l = 45$ $\quad S = 400$

ನಮಗೆ ಗೊತ್ತಿರುವಂತೆ

$$S = \frac{n}{2}[a + l]$$
$$400 = \frac{n}{2}[5 + 45]$$
$$400 = \frac{n}{2}[50]$$
$$400 = 25n$$
$$n = \frac{400}{25}$$
$$n = 16$$

ಒಂದು ಸಮಾಂತರ ಶ್ರೇಢಿಯಲ್ಲಿ ಮೊದಲ ಪದ 5, ಕೊನೆಯ ಪದ 45 ಮತ್ತು ಮೊತ್ತ 400 ಆದರೆ ಅದರ ಪದಗಳ ಸಂಖ್ಯೆ 16

ನಮಗೆ ಗೊತ್ತಿರುವಂತೆ

$$l = a + (n-1)d$$
$$45 = 5 + (16 - 1)d$$
$$45 - 5 = 15d$$
$$15d = 40$$
$$d = 40/15$$
$$d = 8/3$$

ಒಂದು ಸಮಾಂತರ ಶ್ರೇಢಿಯಲ್ಲಿ ಮೊದಲ ಪದ 5, ಕೊನೆಯ ಪದ 45 ಮತ್ತು ಮೊತ್ತ 400 ಆದರೆ ಅದರ ಸಾಮಾನ್ಯ ವ್ಯತ್ಯಾಸ = 8/3

24) $f(x) = 2x^2 - 3x + k$ ಬಹುಪದೋಕ್ತಿಯ ಶೂನ್ಯತೆಗಳ ಗುಣಲಬ್ಧವು 3 ಆದರೆ k ಯ ಬೆಲೆಯನ್ನು ಕಂಡುಹಿಡಿಯಿರಿ

ಉತ್ತರ:-

$a = 2, \quad b = -3, \quad c = k$

$$\alpha\beta = \frac{c}{a}$$
$$3 = \frac{k}{2}$$
$$\boxed{k = 6}$$

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

II PUC PHYSICS

REVISION: MODEL QUESTIONS

13. The minimum energy required to free the electron from the ground state of a hydrogen atom is

(A) 0.85 eV (B) 3.4 eV
(C) 13.6 eV (D) 1.51 eV

Ans:- (C) 13.6 eV

14. The radioactive decay in which a helium nucleus is emitted is called ________

(A) gamma decay (B) alpha decay
(C) negative β decay (D) positive β decay

Ans:- (B) alpha decay

15. In the figure, EV and EC are the valence band and conduction band corresponding to an extrinsic semiconductor. E is the energy state corresponding to the impurity present in it. The impurity present in it can be



(A) arsenic . (B) indium
(C) phosphorous (D) antimony

Ans:- (B) indium

II. Fill in the blanks by choosing appropriate answer given in the bracket for ALL the following questions

(maximum, decrease, thermonuclear fusion, generator, increase, cell)

16. A convenient way to increase the current sensitivity of a galvanometer is to ________ the number of turns of the coil.

Ans:- **increase**

17. The device used to convert mechanical energy into electrical energy is called a ________

Ans:- **generator**

18. If two waves coming from two coherent sources superpose at a point in phase, then the intensity of light at that point is ________.

Ans:- **maximum**

19. The source of energy output in the interior of stars is ________.

Ans:- **thermonuclear fusion**

20. The width of depletion region of a pn-junction diode will________ on increasing the forward bias voltage.

Ans:- **decrease**

PART – B

III. Answer any FIVE of the following questions:

21. Mention any two basic properties of electric charges.

Ans:- The basic properties of electric charges are as follows:

*Charges are additive in nature.
*Charge is a conserved quantity.
*Quantization of charge.

22. State and explain Gauss's law in magnetism.

Ans:- The net magnetic flux through any closed surface is always zero

Consider a Gaussian surface enclosed in a magnetic field. Since the total magnetic field flux entering the Gaussian surface is equal to total flux leaving, total flux through the Gaussian surface is always zero.

23. Mention any two factors on which self inductance of a long solenoid depends.

Ans:- Self inductance of a Coil depends.
1.Number of turns per unit length of the coil
2. Permaebility of the medium inside the coil

24. Briefly explain the construction of a transformer.

Ans:- A transformer is a device which is used to transfer electrical energy from one circuit to another. Its working is based on the mutual induction of two coils placed in vicinity of each other.

A transformer is an electrical device which is used to couple one circuit to another. The transformer transforms the electrical energy from one circuit to another.

A transformer is constructed using two coils wound around a laminated steel core. All the components are electrically insulated from one another

The basic working principle of a transformer is mutual inductance between the coils of the transformer. In a transformer, we have a primary coil and a secondary coil. An input signal is fed to the primary coil. The change in flux in secondary coil due to flow of current in primary coil induces an e.m.f in secondary coil. The amount of e.m.f produced in the coils depends on the number of windings of the coils. On the basis of windings, we have two types of transformers:

Step-down transformer: The primary coil has more windings than the secondary coil. It decreases or steps down the voltage.



Step-down transformer

Step-up transformer: The secondary coil has more windings than the primary coil. It increases or steps up the voltage.



Step-up transformer

Note: We use a laminated steel core in a transformer because it reduces losses due to eddy currents. Eddy currents are currents which are set up in a conductor due to changing magnetic fields around it. They are not useful and lead to loss of energy.

(Contd………..)

ಅಧಿಕಾರಿಗಳ ವಿಚಾರಣೆಗೆ ಅನುಮತಿ ಕೋರಿ ಕಾರ್ಯದರ್ಶಿಗೆ ಪತ್ರ

ಕೋವಿಡ್ ಅಕ್ರಮ: ತನಿಖೆ ಚುರುಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ನಿರ್ವಹಣೆ ವೇಳೆ ಎನ್–95 ಮಾಸ್ಕ್, ಪಿಪಿಇ ಕಿಟ್ ಹಾಗೂ ಇತರೆ ವೈದ್ಯಕೀಯ ಉಪಕರಣಗಳ ಖರೀದಿಯಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳ ಕುರಿತ ತನಿಖೆಯನ್ನು ಸಿಐಡಿ ಚುರುಕುಗೊಳಿಸಿದೆ.



ಅಕ್ರಮದಲ್ಲಿ ಶಾಮೀಲಾಗಿರುವ ಅಧಿಕಾರಿಗಳನ್ನು ವಿಚಾರಣೆ ನಡೆಸಲು ಅನುಮತಿ ಕೋರಿ ಆರೋಗ್ಯ ಇಲಾಖೆ ಕಾರ್ಯದರ್ಶಿಗೆ ಪತ್ರ ಬರೆಯಲಾಗಿದ್ದು, ಅನುಮತಿ ದೊರೆತ ಬಳಿಕ ಕೋವಿಡ್ ಅವಧಿಯಲ್ಲಿ ಆರೋಗ್ಯ ಇಲಾಖೆಯಲ್ಲಿ ಕಾರ್ಯನಿರ್ವಹಿಸಿದ್ದ ಅಧಿಕಾರಿಗಳನ್ನು ವಿಚಾರಣೆಗೆ ಒಳಪಡಿಸಲಾಗುವುದು ಎಂದು ಸಿಐಡಿ ಮೂಲಗಳು ತಿಳಿಸಿವೆ.

ಕೋವಿಡ್ ಅಕ್ರಮಕ್ಕೆ ಸಂಬಂಧಿಸಿದಂತೆ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಡಿಸೆಂಬರ್ 13ರಂದು ಪ್ರಕರಣ ದಾಖಲಾಗಿತ್ತು. ಪ್ರಕರಣದ ತನಿಖೆಯನ್ನು ಸರ್ಕಾರ ಸಿಐಡಿಗೆ ವರ್ಗಾವಣೆ ಮಾಡಿತ್ತು. ಸಿಐಡಿ ಎಸ್.ಪಿ. ರಾಘವೇಂದ್ರ ಹೆಗಡೆ ನೇತೃತ್ವದಲ್ಲಿ ಮೂವರು ಡಿವೈಎಸ್‌ಪಿಗಳನ್ನು ಒಳಗೊಂಡ ತನಿಖಾ ತಂಡ, ದಾಖಲೆಗಳನ್ನು ಕಲೆ ಹಾಕುತ್ತಿದೆ.

'ವಿಧಾನಸೌಧ ಠಾಣೆಯ ಪೊಲೀಸರು ನಡೆಸಿದ್ದ ಪ್ರಾಥಮಿಕ ತನಿಖೆಯ ದಾಖಲೆಗಳನ್ನು ಪಡೆದುಕೊಳ್ಳುತ್ತಿದ್ದು, ಮೊದಲು ಅವುಗಳ ಪರಿಶೀಲನೆ ನಡೆಸಬೇಕು. ಬಳಿಕ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಸಿಐಡಿ ಮೂಲಗಳು ಹೇಳಿವೆ.

'ವೈದ್ಯಕೀಯ ಉಪಕರಣಗಳ ಖರೀದಿಯಲ್ಲಿ ₹167 ಕೋಟಿ ಅಕ್ರಮ ನಡೆದಿದೆ' ಎಂದು ಆರೋಪಿಸಿ, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದ (ಡಿಎಂಇ) ಮುಖ್ಯ ಲೆಕ್ಕಾಧಿಕಾರಿ ಎಂ.ವಿಷ್ಣು ಪ್ರಸಾದ್ ಅವರು ದೂರು ನೀಡಿದ್ದರು.

ದೂರು ಆಧರಿಸಿ, ಡಿಎಂಇಯ ಅಂದಿನ ನಿರ್ದೇಶಕ ಪಿ.ಜಿ.ಗಿರೀಶ್, ಲೆಕ್ಕ ಪತ್ರ ಇಲಾಖೆ ಜಂಟಿ ನಿಯಂತ್ರಕ ಜಿ.ಪಿ. ರಘು, ಆರೋಗ್ಯ ಸಲಕರಣಾಧಿಕಾರಿ ಮುನಿರಾಜು, ಲಾಜ್ ಎಕ್ಸ್‌ಪೋರ್ಟ್, ಎಎಸ್ ಪ್ರೂಡೆಂಟ್ ಮ್ಯಾನೇಜ್‌ಮೆಂಟ್ ಸಲ್ಯೂಷನ್, ರಾಜ್ಯದ ಜನಪ್ರತಿನಿಧಿಗಳು, ಸರ್ಕಾರದ ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು.

ಮುಳ್ಳಯ್ಯನಗಿರಿಯಲ್ಲಿ ಬೆಂಕಿ ನಂದಿಸಲು ಅರಣ್ಯ ಸಿಬ್ಬಂದಿ ಹರಸಾಹಸಪಟ್ಟರು

ಮುಳ್ಳಯ್ಯನಗಿರಿಯಲ್ಲಿ ಕಾಳ್ಗಿಚ್ಚು

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಮುಳ್ಳಯನಗಿರಿಯ ಹುಲ್ಲುಗಾವಲಿನಲ್ಲಿ ಕಾಳ್ಗಿಚ್ಚು ಕಾಣಿಸಿಕೊಂಡಿದ್ದು, ಬೆಂಕಿ ನಂದಿಸಲು ಅರಣ್ಯ ಇಲಾಖೆ ಸಿಬ್ಬಂದಿ ಹರಸಾಹಸಪಟ್ಟರು.

ಸೋಮವಾರ ಮಧ್ಯಾಹ್ನದಿಂದಲೇ ಬೆಂಕಿ ಹೊಗೆಯಾಡುತ್ತಿದ್ದು, ಸಂಜೆ ವೇಳೆಗೆ ಜಾಸ್ತಿಯಾಗಿದೆ. ಕವಿಕಲ್ ಗಂಡಿ ಬಳಿ ಮೊದಲಿಗೆ ಕಾಣಿಸಿಕೊಂಡ ಬೆಂಕಿ, ಅಲ್ಲಿಂದ ಇಳಿಜಾರು ಪ್ರದೇಶಕ್ಕೆ ಆವರಿಸಿಕೊಂಡಿದೆ. ಒಣಗಿರುವ ಹುಲ್ಲುಗಾವಲಿನಲ್ಲಿ ಬೆಂಕಿ ಜೋರಾಗಿ ಹೊತ್ತಿಕೊಂಡಿದೆ. ಗಾಳಿ ಕೂಡ ವೇಗವಾಗಿ ಬೀಸುತ್ತಿರುವುದರಿಂದ ಕಾಳ್ಗಿಚ್ಚು ಜೋರಾಗಿದೆ.

ಅಗ್ನಿಶಾಮಕ ವಾಹನಗಳು ಸ್ಥಳಕ್ಕೆ ಹೋಗಲು ಸಾಧ್ಯವಿಲ್ಲದ ಗಿರಿ ಪ್ರದೇಶ ಆಗಿರುವುದರಿಂದ ಬೆಂಕಿ ನಂದಿಸುವುದು ಕಷ್ಟವಾಗಿದೆ. ಮತ್ತೊಂದೆಡೆ ಸೀತಾಳಯ್ಯನಗಿರಿ ಬಳಿ ಕಾಣಿಸಿಕೊಂಡು ಬೆಂಕಿ ಕೊಂಚ ಹತೋಟಿಗೆ ಬಂದಿದೆ.

ಸಂರಕ್ಷಿತ ಅರಣ್ಯವಾಗಿದ್ದು, ಕಿಡಿಗೇಡಿಗಳು ಬೆಂಕಿ ಹಚ್ಚಿದ್ದಾರೆ. ಬೆಂಕಿ ನಂದಿಸುವ ಕಾರ್ಯವನ್ನು ಅರಣ್ಯ ಸಿಬ್ಬಂದಿ ನಿರಂತರವಾಗಿ ಮಾಡುತ್ತಿದ್ದಾರೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದರು.

ಪರೀಕ್ಷೆಗೆ ವಿಳಂಬ; ಪ್ಯಾರಾಗ್ಲೈಡಿಂಗ್ ಮೊರೆಹೋದ ವಿದ್ಯಾರ್ಥಿ

ಪುಣೆ (ಪಿಟಿಐ): ಘಾಟ್ ಪ್ರದೇಶದ ಮೂಲಕ ಪರೀಕ್ಷಾ ಕೇಂದ್ರಕ್ಕೆ ತೆರಳಲು ವಿಳಂಬವಾಗಿದ್ದರಿಂದ ವಿದ್ಯಾರ್ಥಿಯೊಬ್ಬ ಪ್ಯಾರಾಗ್ಲೈಡಿಂಗ್ ಬಳಸಿ ಕಾಲೇಜಿಗೆ ತಲುಪಿದ ಘಟನೆ ಮಹಾರಾಷ್ಟ್ರದ ಸತಾರಾ ಜಿಲ್ಲೆಯಲ್ಲಿ ವರದಿಯಾಗಿದೆ. ಸಾಮಾಜಿಕ ಜಾಲತಾಣದಲ್ಲಿ ಈ ವಿಡಿಯೊ ಹರಿದಾಡಿದೆ.

ಇಲ್ಲಿನ ಪಸರಾನಿ ಗ್ರಾಮದ ಬಿ.ಕಾಂ ಓದುತ್ತಿದ್ದ ಮೊದಲ ವರ್ಷದ ವಿದ್ಯಾರ್ಥಿ ಸಮರ್ಥ್ ಮಹಾಗಡೆಯು ಡಿ.15ರಂದು ಮೊದಲ ಸೆಮಿಸ್ಟರ್ ಪರೀಕ್ಷೆ ನಿಗದಿಯಾಗಿತ್ತು. ರಸ್ತೆ ಮಾರ್ಗದಲ್ಲಿ ತೆರಳಿದರೆ, ವಾಹನಗಳ ಸಂಚಾರ ದಟ್ಟಣೆಯಿಂದ ಕೇಂದ್ರಕ್ಕೆ ತಲುಪುವುದು ವಿಳಂಬವಾಗಬಹುದು ಎಂದು ಗೊತ್ತಾಗಿ, ಸನಿಹದಲ್ಲಿದ್ದ ಪ್ಯಾರಾಗ್ಲೈಡಿಂಗ್ ಸೇವೆ ಬಳಸಿಕೊಂಡು ಕಾಲೇಜಿಗೆ ತಲುಪಿದ್ದಾರೆ.

'ಸತಾರಾ ಘಾಟ್‌ನಲ್ಲಿರುವ ಕಬ್ಬಿನ ಹಾಲು ಕೇಂದ್ರದಲ್ಲಿ ನಾನು ಕೆಲಸ ಮಾಡುತ್ತಿದ್ದೆ. ಸಮೀಪದಲ್ಲೇ ಪ್ಯಾರಾಗ್ಲೈಡಿಂಗ್ ಸೇವೆ ಒದಗಿಸುವ 'ಹ್ಯಾರಿಸನ್ಸ್ ಫೊಲ್ಲಿ' ಕೇಂದ್ರವಿದೆ. ಅದರ ನಿರ್ವಾಹಕರು ಮೊದಲಿನಿಂದಲೂ ನನಗೆ ಪರಿಚಿತರು. ಪರೀಕ್ಷಾ ದಿನ 2 ಗಂಟೆ ವೇಳೆ 2.15ಕ್ಕೆ ಪರೀಕ್ಷೆ ಇರುವುದು ನನ್ನ ನೆನಪಿಗೆ ಬಂತು. ಘಾಟ್ ರಸ್ತೆಯಲ್ಲಿ ಕಾಮಗಾರಿ ನಡೆಯುತ್ತಿದ್ದು, ಭಾನುವಾರ ಆಗಿದ್ದರಿಂದ ಹೆಚ್ಚಿನ ವಾಹನ ಸಂಚಾರವಿತ್ತು. ಹೀಗಾಗಿ, 12 ಕಿ.ಮೀ.

ದೂರದ ಕಿಸಾನ್‌ವೀರ್ ಕಾಲೇಜಿಗೆ ಸರಿಯಾದ ಸಮಯಕ್ಕೆ ತಲುಪಲು ಸಾಧ್ಯ ಆಗುತ್ತಿರಲಿಲ್ಲ. ಆಗ ಪ್ಯಾರಾಗ್ಲೈಡಿಂಗ್ ಪೈಲಟ್ ಗೋವಿಂದ್ ಯೆವಲೆ ನೆರವಿನೊಂದಿಗೆ ಐದೇ ನಿಮಿಷದಲ್ಲಿಯೇ ಕಾಲೇಜು ಸಮೀಪವಿರುವ ಮೈದಾನಕ್ಕೆ ಬಂದಿಳಿದೆನು. ಸ್ನೇಹಿತರು ಮುಂಚಿತವಾಗಿ ಹಾಲ್ ಟಿಕೆಟ್ ಪಡೆದಿದ್ದರಿಂದ, ಸೀದಾ ಕೊಠಡಿಗೆ ಹೋಗಿ ಪರೀಕ್ಷೆ ಬರೆದೆ' ಎಂದು ಸಮರ್ಥ್ ವಿವರಿಸಿದ್ದಾರೆ.

'ಅಂದು ಕಾಲೇಜಿನಲ್ಲಿ ಪರೀಕ್ಷೆ ನಡೆದಿದ್ದು, ಸಮರ್ಥ್ ಅಂದು ಹಾಜರಾಗಿದ್ದ' ಎಂದು ಕಿಸಾನ್‌ವೀರ್ ಕಾಲೇಜಿನ ಆಡಳಿತ ಮಂಡಳಿ ಖಚಿತಪಡಿಸಿದೆ. ಆದರೆ, ಪ್ಯಾರಾಗ್ಲೈಡಿಂಗ್ ಬಳಸಿ ಬಂದಿರುವುದು ಗೊತ್ತಿಲ್ಲ ಎಂದು ತಿಳಿಸಿದ್ದಾರೆ.

'ಎನ್‌ಇಪಿ ರಾಷ್ಟ್ರದಾದ್ಯಂತ ಜಾರಿಗೆ ಬದ್ಧ: ಕೇಂದ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: 'ರಾಷ್ಟ್ರೀಯ ಶಿಕ್ಷಣ ನೀತಿಯನ್ನು (ಎನ್‌ಇಪಿ) ದೇಶದಾದ್ಯಂತ ಜಾರಿಗೊಳಿಸಲು ಕೇಂದ್ರ ಸರ್ಕಾರ ಬದ್ಧವಾಗಿದೆ' ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಸ್ಪಷ್ಟಪಡಿಸಿದರು.

ಧರ್ಮೇಂದ್ರ ಪ್ರಧಾನ್

ನವದೆಹಲಿಯಲ್ಲಿ ಪತ್ರಕರ್ತರ ಜತೆ ಸೋಮವಾರ ಮಾತನಾಡಿದ ಅವರು, 'ಎನ್‌ಇಪಿ ಹಾಗೂ ತ್ರಿಭಾಷಾ ಸೂತ್ರ ಜಾರಿ ವಿಚಾರವಾಗಿ, ತಮಿಳುನಾಡಿನ ಕೆಲವು ಸ್ನೇಹಿತರು ರಾಜಕೀಯ ಮಾಡುತ್ತಿದ್ದಾರೆ. ಹಿಂದಿ ಸೇರಿದಂತೆ ಯಾವುದೇ ಭಾಷೆಯನ್ನು ಯಾವ ರಾಜ್ಯದ ಮೇಲೂ ಹೇರುತ್ತಿಲ್ಲ. ಎನ್‌ಇಪಿ ಜಾರಿಗೆ ತರಲು ಕೇಂದ್ರ ಸರ್ಕಾರವು ಬದ್ಧವಾಗಿದೆ. ಆದರೆ, ಕೆಲವು ಷರತ್ತುಗಳಿವೆ' ಎಂದರು.

'ತ್ರಿಭಾಷಾ ಸೂತ್ರ ನೀತಿಯನ್ನು ಅಳವಡಿಸಿಕೊಳ್ಳುವ ತನಕ ರಾಜ್ಯದ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ಅನುದಾನ ನೀಡದೇ, ಕೇಂದ್ರ ಸರ್ಕಾರವು ಬ್ಲ್ಯಾಕ್‌ಮೇಲ್ ಮಾಡುತ್ತಿದೆ' ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಆರೋಪಿಸಿದ್ದರು.

ಈ ಆರೋಪಕ್ಕೆ ಉತ್ತರಿಸಿದ ಅವರು, 'ಎನ್‌ಇಪಿ ಎಂಬುದು ಹೊಸ ಮಹತ್ವಾಕಾಂಕ್ಷೆಯ ಸಾಮಾನ್ಯ ವೇದಿಕೆಯಾಗಿದೆ. ನಾನು ಎಲ್ಲ ಭಾಷೆಗಳನ್ನೂ ಗೌರವಿಸುತ್ತೇನೆ. ಮಾತೃಭಾಷೆಯಲ್ಲಿ ಶಿಕ್ಷಣ ನೀಡಬೇಕು ಎಂಬ ಪ್ರಧಾನಿ ನರೇಂದ್ರ ಮೋದಿ ಅವರ ಕನಸಿನಂತೆ ಎನ್‌ಇಪಿ ಜಾರಿಗೆ ತರಲಾಗುತ್ತಿದೆ. ನಮ್ಮ ಸಂಸ್ಕೃತಿಯಲ್ಲಿ ತಮಿಳು ಅತ್ಯಂತ ಪುರಾತನ ಭಾಷೆಯಾಗಿದೆ' ಎಂದರು.

ದೆಹಲಿ: ನೂತನ ಸಿ.ಎಂ 20ಕ್ಕೆ ಪ್ರಮಾಣ?

ನವದೆಹಲಿ (ಪಿಟಿಐ): ದೆಹಲಿಯ ನೂತನ ಮುಖ್ಯಮಂತ್ರಿ ಮತ್ತು ಸಚಿವರು ಇದೇ 20ರಂದು ರಾಮಲೀಲಾ ಮೈದಾನದಲ್ಲಿ ಪ್ರಮಾಣವಚನ ಸ್ವೀಕರಿಸುವ ಸಾಧ್ಯತೆ ಇದೆ.

ಗುರುವಾರ ಸಂಜೆ ಪ್ರಮಾಣವಚನ ಸಮಾರಂಭ ನಡೆಯುವ ಸಾಧ್ಯತೆಗಳಿವೆ.

ಸೋಮವಾರ ನಡೆಯಬೇಕಿದ್ದ ಬಿಜೆಪಿ ಶಾಸಕಾಂಗ ಪಕ್ಷದ ಸಭೆಯನ್ನು ಬುಧವಾರಕ್ಕೆ ಮುಂದೂಡಲಾಗಿದೆ. ಈ ಸಭೆಯಲ್ಲಿ ಮುಖ್ಯಮಂತ್ರಿ ಆಯ್ಕೆ ನಡೆಯಲಿದೆ. ಪ್ರಮಾಣವಚನ ಸಮಾರಂಭದ ಬಗ್ಗೆಯೂ ಚರ್ಚೆ ನಡೆಯಲಿದೆ ಎನ್ನಲಾಗಿದೆ.

ಹೆಚ್ಚುವರಿ ತಂಬಾಕು ಮಾರಾಟಕ್ಕೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಭಾರಿ ಮಳೆಯಿಂದ ಹಾನಿಗೊಳಗಾದ ಕರ್ನಾಟಕದ 70 ಸಾವಿರ ತಂಬಾಕು ಬೆಳೆಗಾರರಿಗೆ ಹೆಚ್ಚುವರಿ ಶುಲ್ಕವಿಲ್ಲದೆ ಹೆಚ್ಚುವರಿ ಮತ್ತು ಅನಧಿಕೃತ ತಂಬಾಕನ್ನು ತಂಬಾಕು ಮಂಡಳಿಯ ಹರಾಜಿನಲ್ಲಿ ಮಾರಾಟ ಮಾಡಲು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಸೋಮವಾರ ಒಪ್ಪಿಗೆ ನೀಡಿದೆ.

ಕೇಂದ್ರ ಸರ್ಕಾರದ ಈ ಕ್ರಮವು ರೈತರು ನಷ್ಟ ಕಡಿಮೆ ಮಾಡಿಕೊಳ್ಳಲು ಮತ್ತು ಹೆಚ್ಚುತ್ತಿರುವ ವೆಚ್ಚಗಳನ್ನು ನಿರ್ವಹಿಸಲು ಸಹಾಯ ಮಾಡಲಿದೆ. ಇದು ನಮ್ಮ ರಾಜ್ಯದ ತಂಬಾಕು ಬೆಳೆಗಾರರಿಗೆ ಅಗತ್ಯವಾದ ಬೆಂಬಲ ಒದಗಿಸಿದೆ' ಎಂದು ರಾಜ್ಯಸಭಾ ಸದಸ್ಯ ಲಹರ್ ಸಿಂಗ್ ಸಿರೋಯಾ 'ಎಕ್ಸ್' ಮಾಡಿದ್ದಾರೆ.

ಕಂದಾಯ ಇಲಾಖೆ
ಅಟಲ್‌ಜೀ ಜನಸ್ನೇಹಿ ನಿರ್ದೇಶನಾಲಯ,
ಎಸ್.ಎಸ್.ಎಲ್.ಆರ್ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು–560001.
ಸಂ: ಎಜೆಎಸ್‌ಕೆ/ಟೆಂಡರ್/ಆಡಳಿತ–2/2025/ಇ–1676226 ದಿನಾಂಕ: 17.02.2025

ಇ–ಟೆಂಡರ್ ಅಧಿಸೂಚನೆ

ಅಟಲ್‌ಜೀ ಜನಸ್ನೇಹಿ ನಿರ್ದೇಶನಾಲಯಕ್ಕೆ ಹೊರಗುತ್ತಿಗೆ ಆಧಾರದ ಮೇಲೆ ಜಿಲ್ಲಾ ಸಮಾಲೋಚಕರ ಸೇವೆಯನ್ನು ಪಡೆಯಲು ಆಸಕ್ತಿ ಇರುವ ಸಂಸ್ಥೆಗಳಿಂದ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ದಾಖಲಾತಿಗಳು ಹಾಗೂ ಇದಕ್ಕೆ ಸಂಬಂಧಿಸಿದ ಇತರೆ ಮಾಹಿತಿಯನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ನಲ್ಲಿ ದಿನಾಂಕ: 18.02.2025 ರಿಂದ 06.03.2025 ರವರೆಗೆ ಪಡೆಯಬಹುದಾಗಿದೆ.

ಸಹಿ/– ಉಪ ನಿರ್ದೇಶಕರು,
ಅಟಲ್‌ಜೀ ಜನಸ್ನೇಹಿ ನಿರ್ದೇಶನಾಲಯ, ಬೆಂಗಳೂರು
DIPR/CP/SPAN/5122/24-25

KENDRIYA VIDYALAYA, RAIL WHEEL FACTORY
Under the Ministry of Education, Govt. of India
YELAHANKA NEW TOWN, BENGALUGU - 560 064.
Phone : 080-28460979 (O), Fax No.: 080-28566968
E-Mail : kvrwf123@gmail.com, Website : https://wapyelahanka.kvs.ac.in

WALK - IN INTERVIEW

Walk - In Interview for the following posts on purely Part Time / Contractual basis for the academic Year 2025-26.
Reporting Time : 10.00 a.m.

DATE	POST
24.02.2025	PGT (Hindi), PGT (Chem), PGT (Eng), PGT (Phy), PGT (Maths), PGT (Bio), PGT (CS), Computer Instructor, PGT (Yoga), TGT (Hindi), TGT (Eng), TGT (SST), TGT (Maths), TGT (Sc), TGT (Sanskrit)
27.02.2025	PRTs, Sports Coach (Male & Female), Staff Nurse, Kannada Teacher, Education Counsellor, Special Educator, Dance Teacher, Balvatika Teacher & Balvatika Care Giver and Yoga Teacher.

For detail of eligibility, educational qualifications and application form, kindly log on to the Website of **Kendriya Vidyalaya, Rail Wheel Factory at https://wapyelahanka.kvs.ac.in.** Candidates should report to the **Venue at 10:00 am** for the Interview with Original and a set of Photocopies of all necessary document.
No TA / DA will be paid by the Vidyalaya for Walk-in-Interview
Sd/- PRINCIPAL

ಕಮಾಂಡೆಂಟ್‌ರವರ ಕಚೇರಿ,
ಕೆ.ಎ.ಆರ್.ಪಿ. ಮೌಂಟೆಡ್ ಕಂಪನಿ, ಮೈಸೂರು.
ಸಂಖ್ಯೆ: ಸಂಗ್ರಹ/ಅ.ಆ.ಟೆಂ./34/ಕೆಎಆರ್‌ಪಿ/2024–25 ದಿನಾಂಕ:14.02.2025

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್)

ಕೆ.ಎ.ಆರ್.ಪಿ. ಮೌಂಟೆಡ್ ಕಂಪನಿ, ಮೈಸೂರು ಘಟಕದಲ್ಲಿನ ಅಶ್ವಗಳಿಗೆ 2025–26ನೇ ಸಾಲಿಗೆ (ದಿನಾಂಕ:01.04.2025 ರಿಂದ 31.03.2026 ರವರೆಗೆ) ಅವಶ್ಯವಿರುವ 09 ಬಗೆಯ ಅಶ್ವಗಳ ಆಹಾರ ಪದಾರ್ಥಗಳಾದ ಹುರುಳಿಕಾಳು, ಗೋಧಿತೌಡು, ಡಿ.ಸಿ.ಓಟ್ಸ್, ಒಣ ಹರಿಯಾಲಿ ಹುಲ್ಲು, ಭತ್ತದ ಹುಲ್ಲು, ಅಗಸೇಬೀಜ, ಲೂಸರ್ನ್, ಕಾಡುಸೌದೆ ಮತ್ತು ಕುದುರೆಲಾಳ ಹಾಗೂ ಲಾಳದ ಮೊಳೆ ಇವುಗಳನ್ನು ಪರಿಮಾಣಕ್ಕನುಗುಣವಾಗಿ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅಲ್ಪಾವಧಿ ಟೆಂಡರ್ ಆಹ್ವಾನಿಸಿದ್ದು, ಟೆಂಡರ್ ದಾಸ್ತಾವೇಜುಗಳನ್ನು ಸರ್ಕಾರದ ವೆಬ್‌ಸೈಟ್ https://eproc.karnataka.gov.in (Version-2) ನಿಂದ ಪಡೆದುಕೊಂಡು ಸಲ್ಲಿಸಬಹುದಾಗಿದೆ.

ವಿಶೇಷ ಸೂಚನೆ: ಹೆಚ್ಚಿನ ವಿವರಗಳಿಗೆ ವೆಬ್‌ಸೈಟ್ https://eproc.karnataka.gov.in (Version-2) ಅನ್ನು ಅಥವಾ ಕಮಾಂಡೆಂಟ್‌ರವರ ಕಚೇರಿ, ಕೆ.ಎ.ಆರ್.ಪಿ. ಮೌಂಟೆಡ್ ಕಂಪನಿ, ಲಲಿತಮಹಲ್ ರಸ್ತೆ, ಮೈಸೂರು ರವರ ಕಚೇರಿ ದೂರವಾಣಿ ಸಂಖ್ಯೆ:0821–2472853ರ ಮುಖಾಂತರ ಸಂಪರ್ಕಿಸಿ ವಿವರಗಳನ್ನು ಪಡೆದುಕೊಳ್ಳುವುದು.

ಸಹಿ/– ಟೆಂಡರ್ ಆಹ್ವಾನ ಪ್ರಾಧಿಕಾರ ಮತ್ತು ಕಮಾಂಡೆಂಟ್,
ಕೆ.ಎ.ಆರ್.ಪಿ. ಮೌಂಟೆಡ್ ಕಂಪನಿ, ಮೈಸೂರು.
DIPR/DDMYS/1297/KSMCA/927/2024-25

ನಗರಸಭೆ ಕಾರ್ಯಾಲಯ, ಬೀದರ,
ಸಂ: .ಬಿಎಂಸಿ/ಇಎನ್‌ಜಿ/ಸಿಆರ್–251/2024–25 ದಿನಾಂಕ: 14–02–2025

ಟೆಂಡರ್ ಪ್ರಕಟಣೆ

1) ಕಾಮಗಾರಿ / ಸರಕು / ಸೇವೆಯ ವಿವರ: Construction of Proposed 48 TPD MRF Centre Material Recovery Facility) of PEB Structure Primary and Secondary Shed at Bidar (DMA/2024-25/OW/WORK_INDENT26236/Call-2), 2) ಕಾಮಗಾರಿ/ಸರಕು/ಸೇವೆಯ ಅಂದಾಜು ಮೊತ್ತ : KPPP-portal ನಲ್ಲಿ ನಮೂದಿಸಿದಂತೆ, 3) ಗುತ್ತಿಗೆದಾರರ ಅರ್ಹತೆ ವಿವರ: KPPP-portal ನಲ್ಲಿ ನಮೂದಿಸಿದಂತೆ, 4) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ KPPP-portal ನಲ್ಲಿ ನಮೂದಿಸಿದಂತೆ, 5) ಪ್ರಿ ಬಿಡ್ ಮೀಟಿಂಗ್ : 11-03-2025 at 11.00 AM, 6) ಟೆಂಡರ ಫಾರಂ ಪಡೆಯಲು ಅಂತಿಮ ದಿನಾಂಕ & ಭರ್ತಿ ಮಾಡಿ ಸಲ್ಲಿಸಲು: 17–03–2025 upto 04.00 PM, 7) ಟೆಂಡರ ತೆರೆಯುವ ದಿನಾಂಕ: 18–03–2025 at 04.30 PM, 8) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ ಕಛೇರಿ ವಿಳಾಸ, ದೂರವಾಣಿ ಸಂಖ್ಯೆ: ಪೌರಾಯುಕ್ತರು, ನಗರಸಭೆ ಬೀದರ ಇ–ಮೇಲ್: ka.bidar.cmc@gmail.com, 08482–240432, 9) ಅಂತರಜಾಲ ತಾಣದ ವಿಳಾಸ: https://kppp.karnataka.gov.in/

ಸಹಿ/–ಪೌರಾಯುಕ್ತರು
ನಗರಸಭೆ ಬೀದರ
ವಾ.ಸಾ.ಸಂ.ಇ/ಬೀದರ/408/ಕೆಎಸ್‌ಎಂಸಿ&ಎ/2024–25

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್ ಪ್ರಕಟಣೆ (ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಮುಖ್ಯ ಅಭಿಯಂತರರ ಕಛೇರಿ (ದಕ್ಷಿಣ), 7ನೇ ಮಹಡಿ, ಕಾವೇರಿ ಭವನ, ಕೆ.ಜಿ ರಸ್ತೆ, ಬೆಂಗಳೂರು–560009.

ಕ್ರ ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ / ಇಎಂಡಿ (ರೂ. ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
1	ದಕ್ಷಿಣ–ಪಶ್ಚಿಮ –2	ಬೆಂಜಮಂ/ಕಾನಿಅ(ದ.ಪ–2)/ತಾಂಅ/ಪಿಬಿ/4101/2024–25 ದಿನಾಂಕ: 17.02.2025 (ಪ್ರವರ್ಗ 2 (ಎ) ಗೆ ಮೀಸಲು)	ರೂ. 92,39,660/– / ರೂ. 1,84,800/–	27.02.2025ರ ಸಂಜೆ 5.00 ಗಂಟೆಯವರೆಗೆ	01.03.2025ರ ಬೆಳಗ್ಗೆ 10.30 ಗಂಟೆಯ ನಂತರ
2		ಬೆಂಜಮಂ/ಕಾನಿಅ(ದ.ಪ–2)/ತಾಂಅ/ಪಿಬಿ/4101/2024–25 ದಿನಾಂಕ: 17.02.2025	ರೂ. 87,76,396/– / ರೂ. 1,75,528/–		
3		ಬೆಂಜಮಂ/ಕಾನಿಅ(ದ.ಪ–2)/ತಾಂಅ/ಪಿಬಿ/4101/2024–25 ದಿನಾಂಕ: 17.02.2025 (ಪರಿಶಿಷ್ಟ ಜಾತಿಗೆ ಮೀಸಲು)	ರೂ. 79,42,488/– / ರೂ. 79,500/–		
4		ಬೆಂಜಮಂ/ಕಾನಿಅ(ದ.ಪ–2)/ತಾಂಅ/ಪಿಬಿ/4101/2024–25 ದಿನಾಂಕ: 17.02.2025	ರೂ. 61,46,148/– / ರೂ. 1,23,000/–		
5		ಬೆಂಜಮಂ/ಕಾನಿಅ(ದ.ಪ–2)/ತಾಂಅ/ಪಿಬಿ/4101/2024–25 ದಿನಾಂಕ: 17.02.2025	ರೂ. 82,76,131/– / ರೂ. 1,65,600/–		
6		ಬೆಂಜಮಂ/ಕಾನಿಅ(ದ.ಪ–2)/ತಾಂಅ/ಪಿಬಿ/4101/2024–25 ದಿನಾಂಕ: 17.02.2025 (5ನೇ ಕರೆ)	ರೂ. 6,41,601/– / ರೂ. 16,000/–		
7		ಬೆಂಜಮಂ/ಕಾನಿಅ(ದ.ಪ–2)/ತಾಂಅ/ಪಿಬಿ/4101/2024–25 ದಿನಾಂಕ: 17.02.2025	ರೂ. 3,53,505/– / ರೂ. 8,900/–		

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ದಕ್ಷಿಣ–ಪಶ್ಚಿಮ–2)

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು https://kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೇಲಿನ ಸಹಿದಾರರ ಕಛೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.
DIPR/CP/5106/Zen/2024-25

ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ನಂ. 16 ಡಿ, 5ನೇ ಮಹಡಿ, ದೇವರಾಜ ಅರಸು ಭವನ, ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560 052.
ಸಂಖ್ಯೆ: ಕಉಅನಿನಿ/ಸಿ.ಆರ್–61/2024–25 ದಿನಾಂಕ: 17/02/2025

ಇ–ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ ನಿಯಮಿತವು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಹೊರಸಂಪನ್ಮೂಲ ಏಜೆನ್ಸಿಯಿಂದ ಮಾನವ ಸೇವೆಯನ್ನು ಒದಗಿಸಲು ಇ–ಟೆಂಡರ್ ಆಹ್ವಾನಿಸಿದೆ.

ವಿವರಗಳಿಗೆ https://kppp.karnataka.gov.in ವೆಬ್‌ಸೈಟ್ ವಿಳಾಸವನ್ನು ನೋಡಬಹುದಾಗಿದೆ.

KPP PORTAL TENDER NUMBER: KUDCL/2024-25/SE0001
ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ: 03/03/2025, 17.30 ಗಂಟೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 05/03/2025, 11.00 ಗಂಟೆ. ಆರ್ಥಿಕ ಬಿಡ್ ತೆರೆಯುವ ದಿನಾಂಕ: 14/03/2025, 11.00 ಗಂಟೆ. ಹೆಚ್ಚಿನ ವಿವರಗಳಿಗೆ ಕೆಳಕಂಡ ದೂರವಾಣಿ ಸಂಖ್ಯೆಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸತಕ್ಕದ್ದು ಸಂಖ್ಯೆ: 080–22252555.

ಸಹಿ/– ವ್ಯವಸ್ಥಾಪಕ ನಿರ್ದೇಶಕರು
ಕಉಅನಿನಿ
ವಾ.ಸಾ.ಸಂ.ಇ/ವಾಪ್ರ/5113/ಆಕಾರ್/2024–25

ಗ್ಯಾಸ್ಟ್ರೋಎಂಟ್ರಾಲಜಿ ಸೈನ್ಸಸ್ ಅಂಡ್ ಆರ್ಗನ್ ಟ್ರಾನ್ಸ್‌ಪ್ಲಾಂಟ್ ಸಂಸ್ಥೆ
(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ) (ನೋ.ಸಂಖ್ಯೆ .DRB-2/SOR/54/2017-18)
ಹಳೇ ನರ್ಸಿಂಗ್ ಶಾಲೆ ಕಟ್ಟಡ, ವಿಕ್ಟೋರಿಯಾ ಆಸ್ಪತ್ರೆ ಆವರಣ, ಬೆಂಗಳೂರು–560 002
ದೂರವಾಣಿ: 080–26707727 ಇ–ಮೇಲ್: igotinstitute@gmail.com
ಸಂಖ್ಯೆ: ಐಜಿಓಟಿ/ಟಿಎನ್‌ಡಿ/17/2024–25 ದಿನಾಂಕ:17.02.2025

ಸಂಕ್ಷಿಪ್ತ ಇ–ಟೆಂಡರ್ ಅಧಿಸೂಚನೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಇನ್ಸ್ಟಿಟ್ಯೂಟ್ ಆಫ್ ಗ್ಯಾಸ್ಟ್ರೋಎಂಟ್ರಾಲಜಿ ಸೈನ್ಸಸ್ ಅಂಡ್ ಆರ್ಗನ್ ಟ್ರಾನ್ಸ್‌ಪ್ಲಾಂಟ್ ಸಂಸ್ಥೆಯ ಟೆಂಡರ್ ಆಹ್ವಾನಿಸುವ ಪ್ರಾಧಿಕಾರವು **ಕೆಳಕಂಡ ವೈದ್ಯಕೀಯ ಉಪಕರಣಗಳನ್ನು ಪಡೆಯುವ ಸಲುವಾಗಿ** ಎರಡು ಲಕೋಟೆ ಪದ್ಧತಿ ಅನುಸರಿಸಿ ಅರ್ಹ ಟೆಂಡರ್‌ದಾರರಿಂದ ಇ–ಟೆಂಡರ್ ಆಹ್ವಾನಿಸಲಾಗಿದೆ.

Sl. No.	Tender No.	Description
1	IGOT/TND/USD/18/2024-25	Ultrasound Machine
2	IGOT/TND/ME/19/2024-25	Medical Equipments
3	IGOT/TND/VASC/17/2024-25	Vascular Instruments (Lumpsum)

Tender Period:**19.02.2025 to 06.03.2025.** Date of Pre-Bid: **25.02.2025.** Date for Opening of Technical Bid: **10.03.2025.** ಟೆಂಡರ್‌ದಾರರು:**https://kppp.karnataka.gov.in** ವೀಕ್ಷಿಸಿ ಟೆಂಡರ್ ದಸ್ತಾವೇಜುಗಳನ್ನು ಇ–ಪೋರ್ಟಲ್ ಮುಖಾಂತರ ಸಲ್ಲಿಸಬಹುದಾಗಿದೆ. ಟೆಂಡರ್ ಬಗೆಗಿನ ಮುಂದಿನ ತಿದ್ದುಪಡಿಗಳೇನಾದರೂ ಇದ್ದಲ್ಲಿ ಇ–ಪೋರ್ಟಲ್‌ನಲ್ಲಿ ಮಾತ್ರ ಪಡೆಯಬಹುದು.

ಸಹಿ/–ಮುಖ್ಯ ಆಡಳಿತಾಧಿಕಾರಿಗಳು, ಐಜಿಓಟಿ, ಬೆಂಗಳೂರು–02

ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ,
(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ಇರ್ವಿನ್‌ರಸ್ತೆ, ಮೈಸೂರು–570001
Ph: +91-0821-2520512 (Off.), 2520803 (Fax)
Website : www.mmcri.karnataka.gov.in/
E-mail : mmcrimysore@yahoo.com
ಸಂಖ್ಯೆ : ಉಪಕರಣ/36/2024–25 ದಿನಾಂಕ : 11.02.2025

ಟೆಂಡರ್ ಅಧಿಸೂಚನೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 – ನಿಯಮ 2000 ರಂತೆ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು ಇಲ್ಲಿನ ಟ್ರಾಮಾ ಕೇರ್ ಸೆಂಟರ್‌ನ ರಕ್ತನಿಧಿ ಕೇಂದ್ರ ವಿಭಾಗಕ್ಕೆ ಅವಶ್ಯವಿರುವ ವೈದ್ಯಕೀಯ ಉಪಕರಣಗಳನ್ನು ಖರೀದಿಸಲು ವಿದ್ಯುನ್ಮಾನ ವೇದಿಕೆ ಮುಖಾಂತರ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಯನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in ಮೂಲಕ ದಿ: 14.02.2025 ರಿಂದ ಪಡೆಯಬಹುದಾಗಿದ್ದು, ದಿ: 15.03.2025 ರಂದು ಅಪರಾಹ್ನ 5.00 ರೊಳಗಾಗಿ ಸಲ್ಲಿಸಬಹುದಾಗಿರುತ್ತದೆ. ಇ.ಎಂ.ಡಿ. ಸಲ್ಲಿಸದ ಟೆಂಡರ್ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಒಂದು ವೇಳೆ ಸಾರ್ವಜನಿಕ ರಜೆಯೆಂದು ಘೋಷಿಸಲ್ಪಟ್ಟರೆ, ಮುಂದಿನ ಕೆಲಸದ ದಿನಾಂಕವನ್ನು ಕೊನೆಯ ದಿನಾಂಕವೆಂದು ಪರಿಗಣಿಸತಕ್ಕದ್ದು. ಈ ಬಗ್ಗೆ ಯಾವುದೇ ಅಧಿಸೂಚನೆ ಹೊರಡಿಸಲಾಗುವುದಿಲ್ಲ.

ಸಹಿ/– ನಿರ್ದೇಶಕರು ಮತ್ತು ಡೀನ್, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು
DIPR/DDMYS/1305/KSMCA/933/2024-25

ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್, ಬೆಂಗಳೂರು ವಿಭಾಗ,
2ನೇ ಮಹಡಿ, ಲೋ.ಇ.ಪೂರಕ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು–01.
ದೂರವಾಣಿ: 080–22133370, ವೆಬ್‌ಸೈಟ್: www.kpwd.karnataka.gov.in

ಟೆಂಡರ್ ಪ್ರಕಟಣೆ ಸಂಖ್ಯೆ: 40/2024–25
ದಿನಾಂಕ: 15.02.2025

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರು ರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ. 2000 ರನ್ವಯ ಮತ್ತು ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ. ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಬೆಂಗಳೂರು ವಿಭಾಗ ವ್ಯಾಪ್ತಿಯಲ್ಲಿನ **ನಂ.1 ದಕ್ಷಿಣ & ಹೊಸಕೋಟೆ ಉಪವಿಭಾಗಕ್ಕೆ** ಸಂಬಂಧಿಸಿದಂತೆ 21 ಸಂಖ್ಯೆಯ (ರೂ. 98.00 ರಿಂದ 498.00 ಲಕ್ಷಗಳ) ಕಾಮಗಾರಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಕಾಮಗಾರಿಯ ವಿವರಗಳನ್ನು ಮೇಲ್ಕಂಡ ಕಛೇರಿಯ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗದಿಪಡಿಸಲಾಗಿದೆ.

ಕಾಮಗಾರಿಯ ಇ.ಎಂ.ಡಿ ಮೊತ್ತವನ್ನು ಮತ್ತು ಟೆಂಡರ್ ಪ್ರೊಸಸಿಂಗ್ ಶುಲ್ಕವನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ.

1. ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಕೆ.ಪಿ.ಪಿ.ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ: **03.03.2025 ಸಂಜೆ 4.00 ಗಂಟೆಯವರೆಗೆ.**
2. ಟೆಂಡರ್‌ಗಳನ್ನು ಕೆ.ಪಿ.ಪಿ.ಪೋರ್ಟಲ್ ಮೂಲಕ ತೆರೆಯುವ ದಿನಾಂಕ **04.03.2025 ಸಂಜೆ 4.30 ಗಂಟೆಗೆ** ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ.

ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು
ವಾಸಸಂಇ/ಯುನಿ–ಪಿ.ಪಿ/5096/ಕೆಎಸ್‌ಎಂಸಿಎ/2024–25

ಸಾರಿಗೆ ಇಲಾಖೆ
ಸಾರಿಗೆ ಆಯುಕ್ತರ ಕಛೇರಿ, ಕರ್ನಾಟಕ, 1ನೇ ಮಹಡಿ, ಟಿ.ಟಿ.ಎಂ.ಸಿ ಕಟ್ಟಡ, ಬಿಎಂಟಿಸಿ ಸಂಕೀರ್ಣ, ಶಾಂತಿನಗರ, ಬೆಂಗಳೂರು.
ಸಂ: ಸಾಆ/ಪೀಕ–3/ಪಿಆರ್–48/2024–25 ದಿನಾಂಕ: 14.02.2025

ಇ–ಟೆಂಡರ್ ಪ್ರಕಟಣೆ

ಕೋಲಾರದಲ್ಲಿ ಸ್ಥಾಪಿಸಲಾಗಿರುವ ಗಣಕೀಕೃತ ಚಾಲನಾ ಪರೀಕ್ಷಾ ಪಥದ ಕಾರ್ಯಾಚರಣೆ ಮತ್ತು ನಿರ್ವಹಣೆ ಸಂಬಂಧ ಅರ್ಹ ಸಂಸ್ಥೆಗಳಿಂದ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆಗಳು ಟೆಂಡರ್ ವಿವರಗಳನ್ನು ಅಂತರ್‌ಜಾಲದ ಮೂಲಕ ವೆಬ್‌ಸೈಟ್ ವಿಳಾಸ kppp.karnataka.gov.in ಸಂಪರ್ಕಿಸಿ ಪಡೆಯಬಹುದಾಗಿದೆ. ಸಂಸ್ಥೆಗಳು ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿಯ ದೂರವಾಣಿ ಸಂಖ್ಯೆ: +91–8046010000/+91–8068948777 ಮೂಲಕ ಸಂಪರ್ಕಿಸಿ ಸಹಾಯವನ್ನು ಪಡೆಯಬಹುದು.

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **15–03–2025 ರ ಅಪರಾಹ್ನ 5.00 ಗಂಟೆ ಆಗಿರುತ್ತದೆ.** ಹೆಚ್ಚಿನ ಮಾಹಿತಿಗಾಗಿ ಈ ದೂರವಾಣಿ ಸಂಖ್ಯೆ: 080–22235176 ಯನ್ನು ಸಂಪರ್ಕಿಸಬಹುದು.
Tender No. TD/2024-25/SE0074.

ಸಹಿ/–
ಸಾರಿಗೆ ಆಯುಕ್ತರ ಪರವಾಗಿ,
ಬೆಂಗಳೂರು
ವಾಸಾಸಂಇ/ವಾ.ಪ್ರ/5102/ಎಂಎಎ/24–25

ನಗರಸಭಾ ಕಾರ್ಯಾಲಯ, ಉಡುಪಿ
ಉಡುಪಿ ಜಿಲ್ಲೆ–576101
Web: www.udupicity.mrc.gov.in, e-mail: itstaff_ulb_udupi@yahoo.com
Photo: 0820-2520446 / 2520306, Fax: 0820-2524236
NO:UCMC/HS/DC/CR-100/2024-25, Date: 17/02/2025

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಸಾರ್ವಜನಿಕ ಪಾರದರ್ಶಕತೆ ಅದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಸಿ–8ರ ನಿಯಮದನ್ವಯ ಕೆಪಿಪಿಪಿ ಪೋರ್ಟಲ್ ಮುಖಾಂತರ ಈ ಕೆಳಗೆ ಸೂಚಿಸಿರುವ ಕಾಮಗಾರಿಯನ್ನು ನಿರ್ವಹಿಸುವ ಬಗ್ಗೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 04.03.2025 ಸಮಯ 5.00 ಗಂಟೆವರೆಗೆ ಅರ್ಹ ಗುತ್ತಿಗೆದಾರರು ಹೆಚ್ಚಿನ ವಿವರಗಳಿಗೆ ಕೆಪಿಪಿಪಿ ಪೋರ್ಟಲ್ ವೆಬ್‌ಸೈಟ್‌ನಲ್ಲಿ (https://kppp.karnataka.gov.in) ಅಪ್‌ಲೋಡ್ ಮಾಡಿರುವ ಟೆಂಡರ್ ಡಾಕ್ಯುಮೆಂಟ್‌ನಲ್ಲಿ ಪಡೆಯಬಹುದು.

ಕ್ರ.ಸಂ. 1 ಕೆಲಸದ ಹೆಸರು: Tenders for the work of Providing The Manpower Services To city Muncipal Council, Udupi on out source basis for the drain cleaning activity for four months (Total 50 Members), ಟೆಂಡರ್ ಸಂಖ್ಯೆ: DMA/2024-25/SE4635, ಟೆಂಡರ್‌ಗಿಟ್ಟ ಮೊತ್ತ ರೂ. 49.47 ಲಕ್ಷ. ಇ.ಎಂ.ಡಿ ಮೊತ್ತ: ರೂ. 98,942,00/–

ಸಹಿ/– ಪೌರಾಯುಕ್ತರು, ನಗರಸಭಾ ಕಾರ್ಯಾಲಯ, ಉಡುಪಿ–576101

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು.

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 27/2024–25 ದಿನಾಂಕ: 15–02–2025

ಮೇಲ್ಕಂಡ ಟೆಂಡರ್ ಪ್ರಕಟಣೆಯಲ್ಲಿ ಚಿಕ್ಕಮಗಳೂರು ಜಿಲ್ಲೆ ಲೋಕೋಪಯೋಗಿ ಇಲಾಖೆ ಉಪವಿಭಾಗಗಳಿಗೆ ಒಳಪಡುವ ಲೆಕ್ಕ ಶೀರ್ಷಿಕೆ:8443 ಠೇವಣಿ ವಂತಿಕೆ, 5054–03–101–0–02–132 ಪ್ರಮುಖ ಜಿಲ್ಲಾ ರಸ್ತೆ ಸೇತುವೆಗಳ ನಿರ್ವಹಣೆ, 5054–04–337–0–01–154 ರಾಜ್ಯ ಹೆದ್ದಾರಿ – ಸುಧಾರಣೆಗಳು, 5054–04–337–0–01–154 ಜಿಲ್ಲಾ ಮತ್ತು ಇತರ ರಸ್ತೆಗಳು – ಸುಧಾರಣೆಗಳು, 5054–04–337–0–01–160 ಜಿಲ್ಲಾ ಮುಖ್ಯ ರಸ್ತೆ ಮತ್ತು ಇತರೆ ರಸ್ತೆಗಳು ನವೀಕರಣ, 5054–03–337–0–16–154 ರಾಜ್ಯ ಹೆದ್ದಾರಿ ಸೇತುವೆ ನಿರ್ವಹಣೆ, ಅಡಿಯಲ್ಲಿನ ಒಟ್ಟು 11 ಕಾಮಗಾರಿಗಳಿಗೆ ಕೆಪಿಪಿ ಪೋರ್ಟಲ್ ಮೂಲಕ ಹಾಗೂ 05 ಕಾಮಗಾರಿಗಳಿಗೆ ಮ್ಯಾನ್ಯುಯಲ್ ಮೂಲಕ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಗಳನ್ನು ವಹಿಸಿಕೊಳ್ಳುವ ಅಥವಾ ನಿರ್ವಹಿಸಿರುವ ಸಾಮರ್ಥ್ಯದ ಬಗ್ಗೆ (Standard Tender Document KW-1,2 &4 ರಂತೆ) ವಿವರಗಳನ್ನು ಲಗತ್ತಿಸತಕ್ಕದ್ದು, ಗುತ್ತಿಗೆದಾರರಿಗೆ ಅಧಿನಿಯಮ 3ರಲ್ಲಿ ನಮೂದಿಸಿರುವ ಕನಿಷ್ಟ ಅರ್ಹತೆಗಳಿದ್ದರೆ ಮಾತ್ರ ಗುತ್ತಿಗೆಯನ್ನು ವಹಿಸಬಹುದಾಗಿರುತ್ತದೆ. ಕನಿಷ್ಟ ಅಂದಾಜು ಮೊತ್ತ ರೂ.1.80 ಲಕ್ಷಗಳು ಹಾಗೂ ಗರಿಷ್ಟ ಅಂದಾಜು ಮೊತ್ತ ರೂ.365.00 ಲಕ್ಷಗಳು ಆಗಿರುತ್ತವೆ.ಮ್ಯಾನ್ಯುಯಲ್ ಮೂಲಕ ಅರ್ಹ ಗುತ್ತಿಗೆದಾರರು ದಿನಾಂಕ: 24.02.2025 ರಿಂದ 27.02.2025 ರವರೆಗೆ ನಿಗಧಿತ ಶುಲ್ಕ ಪಾವತಿಸಿ ಖಾಲಿ ಟೆಂಡರ್ ಫಾರಂ ಕೋರಿ ಅರ್ಜಿ ಸಲ್ಲಿಸಬೇಕು. ದಿನಾಂಕ:05.03.2025 ರಂದು ಖಾಲಿ ಟೆಂಡರ್ ಫಾರಂ ಪಡೆದು, ದಿನಾಂಕ:10.03.2025 ರಂದು ಸಂಜೆ 5.00 ರವರೆಗೆ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಬೇಕು ಹಾಗೂ ಕೆಪಿಪಿ ಪೋರ್ಟಲ್ ಟೆಂಡರ್ ಸಲ್ಲಿಸಬೇಕಾಗಿರುವ 11 ಕಾಮಗಾರಿಗಳಿಗೆ (ಇ.ಸಂಖ್ಯೆ : 18612 (2ನೇ ಕರೆ), 19575, 19584, 19561, 18640, 18691, 19502, 19380, 18148 (2ನೇ ಕರೆ) ದಿನಾಂಕ :25.02.2025, ಇ.ಸಂಖ್ಯೆ : 18669, 19513 ದಿನಾಂಕ : 06.03.2025 ರಂದು) ಸಂಜೆ 4.30 ಗಂಟೆಯೊಳಗೆ ಟೆಂಡರ್ ಸಲ್ಲಿಸಬೇಕು. ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿಐಎನ್ : ಯು40109ಕೆಎ1999ಎಸ್‌ಜಿಸಿ025521)
ಸಂಖ್ಯೆ: ಮುಇಂವಿ/ಟಿಮತ್ತುಪಿ/ಅಇಂ(ವಿ)–2/ಕಾ.ಇಂ(ವಿ)–ಪಿ/2024–25/8844–62 ದಿನಾಂಕ: 17.02.2025

ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಈ ಕೆಳಕಂಡ ವಿಚಾರಣಾ ಸಂಖ್ಯೆಗಳ ಮೂಲಕ ಕೆಳಕಂಡ ಕಾಮಗಾರಿಗಳಿಗೆ **ಸಂಪೂರ್ಣ/ಭಾಗಶಃ ಟರ್ನ್ ಕೀ** ಆಧಾರದ ಮೇಲೆ ಎಲೆಕ್ಟ್ರಾನಿಕ್ ವಿಧಾನದ ಮೂಲಕ ಬಿಡ್‌ಗಳನ್ನು ಆಹ್ವಾನಿಸಿದೆ.

ಕ್ರ ಸಂ	ವಿಚಾರಣಾ ಸಂಖ್ಯೆ/ಕಾಮಗಾರಿಗಳ ವಿವರ
1.	**ಕವಿಪ್ರನಿನಿ/2024–25/ಎಸ್‌ಎಸ್/ವರ್ಕ್_ ಇಂಡೆಂಟ್1997** ಬೆಳಗಾವಿ ಜಿಲ್ಲೆ, ಸೌಂದತ್ತಿ ತಾಲ್ಲೂಕಿನ **ಇಂಚಲ ಗ್ರಾಮ**ದಲ್ಲಿ 1X20ಎಂವಿಎ, 110/33ಕೆವಿ ಮತ್ತು 2X20ಎಂವಿಎ, 110/11ಕೆವಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು, 110ಕೆವಿ ಹೊಸೂರು ಉಪಕೇಂದ್ರದಲ್ಲಿ 2 ಸಂಖ್ಯೆಯ 110ಕೆವಿ ಟರ್ಮಿನಲ್ ಬೇಗಳನ್ನು ಹಾಗೂ 110ಕೆವಿ ಹೊಸೂರು ಉಪಕೇಂದ್ರದಿಂದ **13.802ಕಿಮೀ** ಗಳ ಉದ್ದಕ್ಕೆ 110ಕೆವಿ ಡಿಸಿ (DC) ಪ್ರಸರಣ ಮಾರ್ಗವನ್ನು ಪ್ಯಾಂಥರ್ (Panther) ವಾಹಕದಿಂದ ನಿರ್ಮಿಸುವುದು.
2.	**ಕವಿಪ್ರನಿನಿ/2024–25/ಎಸ್‌ಎಸ್/ವರ್ಕ್_ ಇಂಡೆಂಟ್1999** ರಾಯಚೂರು ಜಿಲ್ಲೆ, ಲಿಂಗಸುಗೂರು ತಾಲ್ಲೂಕಿನ **ಅಮ್ಮಿಹಾಳ**ದಲ್ಲಿ 2X20 ಎಂವಿಎ, 110/11ಕೆವಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ 110ಕೆವಿ ಮುದಗಲ್–ಬಯ್ಯಾಪುರ ಮಾರ್ಗದಿಂದ ಪ್ರಸ್ತಾಪಿತ 110ಕೆವಿ ಅಮ್ಮಿಹಾಳ ಉಪಕೇಂದ್ರದವರೆಗೆ ಲಿಂಕ್ಸ್ (Lynx) ವಾಹಕದಿಂದ **6.64ಕಿಮೀ** ಉದ್ದಕ್ಕೆ 110ಕೆವಿ ಲಿಲೋ(LILO) ಪ್ರಸರಣ ಮಾರ್ಗವನ್ನು ನಿರ್ಮಿಸುವುದು.
3.	**ಕವಿಪ್ರನಿನಿ/2024–25/ಎಸ್‌ಎಸ್/ವರ್ಕ್_ ಇಂಡೆಂಟ್2000** ಹಾವೇರಿ ಜಿಲ್ಲೆ, ಹಾನಗಲ್ ತಾಲ್ಲೂಕಿನ **ಬೆಳಗಲಪೇಟೆ** ಯಲ್ಲಿ 2X5ಎಂವಿಎ, 33/11ಕೆವಿ ಉಪಕೇಂದ್ರವನ್ನು 2X20ಎಂವಿಎ, 110/11ಕೆವಿ ಉಪಕೇಂದ್ರಕ್ಕೆ ಉನ್ನತೀಕರಿಸುವುದು, 110ಕೆವಿ ಅಕ್ಕಿಆಲೂರು (ಬಾಳಂಬೀಡ) ಉಪಕೇಂದ್ರದಿಂದ ಪ್ರಸ್ತಾಪಿತ 110ಕೆವಿ ಬೆಳಗಲಪೇಟೆ ಉಪಕೇಂದ್ರದವರೆಗೆ **8.664ಕಿಮೀ** ಗಳ ಉದ್ದಕ್ಕೆ 110ಕೆವಿ ಡಿಸಿ (DC) ಪ್ರಸರಣ ಮಾರ್ಗವನ್ನು ಪ್ಯಾಂಥರ್ (Panther) ವಾಹಕದಿಂದ ನಿರ್ಮಿಸುವುದು ಹಾಗೂ ಪ್ರಗತಿಯಲ್ಲಿರುವ 110ಕೆವಿ ಅಕ್ಕಿಆಲೂರು (ಬಾಳಂಬೀಡ) ಉಪಕೇಂದ್ರದಲ್ಲಿ ಪ್ರಸ್ತಾವಿತ 110/11ಕೆವಿ ಬೆಳಗಲಪೇಟೆ ಉಪಕೇಂದ್ರದಿಂದ ಪ್ರಸ್ತಾಪಿತ 110ಕೆವಿ ಡಿಸಿ (DC) ಪ್ರಸರಣ ಮಾರ್ಗವನ್ನು ಹೊರಹಾಕುವ ಸಲುವಾಗಿ 2 ಸಂಖ್ಯೆಯ 110ಕೆವಿ ಟರ್ಮಿನಲ್ ಬೇ ಗಳನ್ನು ನಿರ್ಮಿಸುವುದು.
4.	**ಕವಿಪ್ರನಿನಿ/2024–25/ಎಸ್‌ಎಸ್/ವರ್ಕ್_ ಇಂಡೆಂಟ್2001** ಬೆಳಗಾವಿ ಜಿಲ್ಲೆ, ರಾಮದುರ್ಗ ತಾಲ್ಲೂಕಿನ **ಸಾಲಾಪುರ**ದಲ್ಲಿ 2X20 ಎಂವಿಎ, 110/11ಕೆವಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ 110ಕೆವಿ ಸಾಲಹಳ್ಳಿ–ಲೋಕಾಪುರ ಎಸ್.ಸಿ (SC) ಪ್ರಸರಣ ಮಾರ್ಗದಿಂದ ಪ್ರಸ್ತಾಪಿತ 110ಕೆವಿ ಸಾಲಾಪುರ ಉಪಕೇಂದ್ರದವರೆಗೆ ಲಿಂಕ್ಸ್ ವಾಹಕದಿಂದ **4.9ಕಿ.ಮೀ** ಗಳ ಉದ್ದಕ್ಕೆ 110ಕೆವಿ ಲಿಲೋ (LILO) ಪ್ರಸರಣ ಮಾರ್ಗವನ್ನು ನಿರ್ಮಿಸುವುದು.
5.	**ಕವಿಪ್ರನಿನಿ/2024–25/ಎಸ್‌ಎಸ್/ವರ್ಕ್_ ಇಂಡೆಂಟ್2002** ವಿಜಯಪುರ ಜಿಲ್ಲೆ, ತಿಕೋಟ ತಾಲ್ಲೂಕಿನ **ಘೋನಸಗಿ** ಯಲ್ಲಿ 2X20 ಎಂವಿಎ, 110/11ಕೆವಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ವಿಜಯಪುರ ಜಿಲ್ಲೆಯ ಪ್ರಸ್ತಾಪಿತ 110ಕೆವಿ ಕನಮಾಡಿ–ತಕ್ಕಲಕ್ಕಿ ಎಸ್.ಸಿ (SC) ಮಾರ್ಗದಿಂದ **3.425ಕಿ.ಮೀ** ಗಳ ಉದ್ದಕ್ಕೆ ಲಿಂಕ್ಸ್ (Lynx) ವಾಹಕದಿಂದ 110ಕೆವಿ ಲಿಲೋ (LILO) ಪ್ರಸರಣ ಮಾರ್ಗವನ್ನು ನಿರ್ಮಿಸುವುದು.

ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರಿಂಗ್ ವಿಧಾನದ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಇ–ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಕುರಿತಾದ ವಿವರಗಳನ್ನು ಕವಿಪ್ರನಿನಿಯ ವೆಬ್‌ಸೈಟ್ https://kptcl.karnataka.gov.in ನ ಹೈಪರ್‌ಲಿಂಕ್ 'ಇ ಪ್ರೊಕ್ಯೂರ್‌ಮೆಂಟ್ ಕವಿಪ್ರನಿನಿ' ಅಥವಾ https://kppp.karnataka.gov.in ನಲ್ಲಿ ಲಾಗಿನ್ ಆಗಿ **ದಿನಾಂಕ 20.02.2025 ರಂದು ಅಪರಾಹ್ನ 3:00 ಗಂಟೆ** ಅಥವಾ ನಂತರದಿಂದ ಪಡೆಯಬಹುದು. ಬಿಡ್ ಸಲ್ಲಿಕೆಗೆ ಕೊನೆಯ **ದಿನಾಂಕ 10.03.2025 ರಂದು ಅಪರಾಹ್ನ 3:00 ಗಂಟೆ. ಬಿಡ್ ಸಲ್ಲಿಕೆಯ ಕೊನೆಯ ದಿನಾಂಕವನ್ನು ವಿಸ್ತರಿಸಿದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ತಿಳಿಸಲಾಗುವುದು.** ಇದಕ್ಕೆ ಸಂಬಂಧಿಸಿದಂತೆ ಇತರೆ ಹೆಚ್ಚಿನ ಮಾಹಿತಿಗಳು ಬೇಕಾದಲ್ಲಿ ಕೆಳ ಸಹಿದಾರರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.

ಬಿಡ್ದುದಾರರು ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕದ ಮುನ್ನ ಪ್ರಕಟಿಸುವ ಎಲ್ಲಾ ತಿದ್ದುಪಡಿಗಳು/ಸೇರ್ಪಡೆಗಳನ್ನು ಗಮನಿಸತಕ್ಕದ್ದು.

ಸಹಿ/– ಮುಖ್ಯ ಇಂಜಿನಿಯರ್ (ವಿದ್ಯುತ್), ಟೆಂಡರಿಂಗ್ ಮತ್ತು ಪ್ರೊಕ್ಯೂರ್‌ಮೆಂಟ್,
ಕವಿಪ್ರನಿನಿ, 3ನೇ ಮಹಡಿ, ಕಾವೇರಿ ಭವನ, ಬೆಂಗಳೂರು–560009,
ದೂರವಾಣಿ: 080 – 22274744

4 ವರ್ಷದಲ್ಲಿ 3 ಲಕ್ಷ ಮಂದಿಗೆ ಕ್ಯಾನ್ಸರ್?

ಎನ್‌ಸಿಡಿ ಕಾರ್ಯಕ್ರಮದಡಿ ತಪಾಸಣೆ • 14 ಸಾವಿರಕ್ಕೂ ಅಧಿಕ ಮಂದಿಯಲ್ಲಿ ರೋಗ ದೃಢ

• ವರುಣ ಹೆಗಡೆ

ಬೆಂಗಳೂರು: ಕ್ಯಾನ್ಸರ್ ಕಾಯಿಲೆಯನ್ನು ಆರಂಭಿಕ ಹಂತದಲ್ಲಿಯೇ ಪತ್ತೆ ಮಾಡಿ, ಚಿಕಿತ್ಸೆ ಒದಗಿಸುವ ಉದ್ದೇಶದಿಂದ ರಾಜ್ಯದ ಆರೋಗ್ಯ ಇಲಾಖೆಯು ಸಾಂಕ್ರಾಮಿಕವಲ್ಲದ ರೋಗಗಳ (ಎನ್‌ಸಿಡಿ) ಕಾರ್ಯಕ್ರಮದಡಿ ತಪಾಸಣೆ ನಡೆಸುತ್ತಿದ್ದು, ನಾಲ್ಕು ವರ್ಷಗಳಲ್ಲಿ ಮೂರು ಲಕ್ಷಕ್ಕೂ ಅಧಿಕ ಮಂದಿಯಲ್ಲಿ ಕ್ಯಾನ್ಸರ್ ಇರಬಹುದೆಂಬ ಶಂಕೆ ವ್ಯಕ್ತವಾಗಿದೆ.

ಈ ಕಾರ್ಯಕ್ರಮದಡಿ ಸ್ತನ, ಬಾಯಿ ಹಾಗೂ ಗರ್ಭಕಂಠ ಕ್ಯಾನ್ಸರ್ ಪತ್ತೆಗೆ ಆದ್ಯತೆ ನೀಡಲಾಗಿದೆ. ಎನ್‌ಸಿಡಿ ಕ್ಲಿನಿಕ್‌ಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸೇರಿ ವಿವಿಧ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಈ ವಿಧದ ಕ್ಯಾನ್ಸರ್ ಪತ್ತೆಗೆ ತಪಾಸಣೆ ನಡೆಸಲಾಗುತ್ತಿದೆ. ಪ್ರಾಯೋಗಿಕವಾಗಿ ಕೋಲಾರದಲ್ಲಿ ಕಳೆದ ವರ್ಷ ಜಾರಿಯಾದ 'ಗೃಹ ಆರೋಗ್ಯ' ಯೋಜನೆಯಡಿಯೂ ಮನೆ ಬಾಗಿಲಿನಲ್ಲಿಯ ಕ್ಯಾನ್ಸರ್ ತಪಾಸಣೆ ನಡೆಸಲಾಗುತ್ತಿದೆ.

ಕಳೆದ ನಾಲ್ಕು ವರ್ಷಗಳಲ್ಲಿ ಕ್ಯಾನ್ಸರ್ ಪತ್ತೆ ಸಂಬಂಧ ಮೂರು ಕೋಟಿಗೂ ಹೆಚ್ಚು ಜನರನ್ನು ತಪಾಸಣೆ ಮಾಡಲಾಗಿದೆ. ಅವರಲ್ಲಿ 3.06 ಲಕ್ಷ ಮಂದಿಯಲ್ಲಿ ಸ್ತನ, ಬಾಯಿ ಹಾಗೂ ಗರ್ಭಕಂಠದ ಕ್ಯಾನ್ಸರ್ ಇರಬಹುದೆಂಬ ಶಂಕೆ ವ್ಯಕ್ತವಾಗಿತ್ತು. ಇವರಲ್ಲಿ ಕೆಲವರು ಸರ್ಕಾರಿ ಆಸ್ಪತ್ರೆಗಳಲ್ಲಿ ಎನ್‌ಸಿಡಿ ಕಾರ್ಯಕ್ರಮದಡಿ ಹೆಚ್ಚಿನ ಪರೀಕ್ಷೆಗೆ ಒಳಪಟ್ಟಿದ್ದರು. ಅವರಲ್ಲಿ 14,486 ಮಂದಿಯಲ್ಲಿ ಕಾಯಿಲೆ ದೃಢಪಟ್ಟಿದೆ.

ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಯಡಿ ಕಾರ್ಯನಿರ್ವಹಿಸುತ್ತಿರುವ ಜನಸಂಖ್ಯೆ ಆಧಾರಿತ ಕ್ಯಾನ್ಸರ್ ನೋಂದಣಿಯ (ಪಿಬಿಸಿಆರ್) ವಿಶ್ಲೇಷಣೆ ಪ್ರಕಾರ, ರಾಜ್ಯದಲ್ಲಿ ಕ್ಯಾನ್ಸರ್ ಪ್ರಕರಣಗಳ ಸಂಖ್ಯೆ ಪ್ರತಿ ವರ್ಷ ಶೇ 1ರಷ್ಟು ಹೆಚ್ಚಳವಾಗುತ್ತಿದೆ. ವಾರ್ಷಿಕ 87 ಸಾವಿರ ಹೊಸ ಪ್ರಕರಣಗಳು ವರದಿಯಾಗುತ್ತಿವೆ.

ಎನ್‌ಸಿಡಿ ಕಾರ್ಯಕ್ರಮದಡಿ ವರ್ಷವಾರು ತಪಾಸಣೆ

ವರ್ಷ	ತಪಾಸಣೆ	ಶಂಕೆ	ದೃಢ ಪ್ರಕರಣ
2021-22	46.46 ಲಕ್ಷ	49,190	2,122
2022-23	2.49 ಕೋಟಿ	1.63 ಲಕ್ಷ	3,296
2023-24	86.49 ಲಕ್ಷ	65,378	5,466
2024-25 (ನವೆಂಬರ್ ಅಂತ್ಯ)	47.32 ಲಕ್ಷ	27,665	3,962

ಕ್ಯಾನ್ಸರ್ ಪೀಡಿತರಿಗೆ ಚಿಕಿತ್ಸೆ

ಎನ್‌ಸಿಡಿ ಕಾರ್ಯಕ್ರಮದಡಿ ನಡೆಸಲಾದ ತಪಾಸಣೆಯಲ್ಲಿ ರೋಗ ದೃಢಪಟ್ಟವರಿಗೆ ಇಲಾಖೆಯು ವಿವಿಧ ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆಯನ್ನೂ ಉಚಿತವಾಗಿ ಒದಗಿಸುತ್ತಿದೆ. ನಾಲ್ಕು ವರ್ಷಗಳಲ್ಲಿ ಈ ಕಾರ್ಯಕ್ರಮದಡಿ ದೃಢ ಪ್ರಕರಣಗಳಲ್ಲಿ 5 ಸಾವಿರಕ್ಕೂ ಅಧಿಕ ಮಂದಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಕ್ಯಾನ್ಸರ್ ತೀವ್ರತೆಯನ್ನು ಆಧರಿಸಿ ಚಿಕಿತ್ಸೆ ಹಾಗೂ ಆಸ್ಪತ್ರೆಗಳನ್ನು ಗೊತ್ತುಪಡಿಸಲಾಗುತ್ತಿದ್ದು, ಹೆಚ್ಚಿನ ಚಿಕಿತ್ಸೆ ಅಗತ್ಯವಿದ್ದವರಿಗೆ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಗೆ ಶಿಫಾರಸು ಮಾಡಲಾಗುತ್ತಿದೆ.

ಗೃಹ ಆರೋಗ್ಯ ಯೋಜನೆಯಡಿಯೂ ಬಾಯಿ, ಗರ್ಭಕಂಠ ಹಾಗೂ ಸ್ತನ ಕ್ಯಾನ್ಸರ್‌ಗೆ ಸಂಬಂಧಿಸಿದಂತೆ ತಪಾಸಣೆ ನಡೆಸಿ, ದೃಢ ಪ್ರಕರಣಗಳನ್ನು ಜಿಲ್ಲಾ ಮಟ್ಟದ ಆಸ್ಪತ್ರೆಗಳಿಗೆ ಶಿಫಾರಸು ಮಾಡಲಾಗುತ್ತದೆ. ಅಗತ್ಯವಿದ್ದಲ್ಲಿ 'ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ'ಯಡಿ (ಎಬಿ–ಪಿಎಂಜೆಎವೈ) ತೃತೀಯ ಹಂತದ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಒದಗಿಸಲಾಗುತ್ತದೆ.

ಆರಂಭಿಕ ಹಂತದಲ್ಲಿಯೇ ಕ್ಯಾನ್ಸರ್ ಪತ್ತೆ ಮಾಡಿದಲ್ಲಿ ಚಿಕಿತ್ಸೆ ಸುಲಭವಾಗಲಿದೆ. ಆದ್ದರಿಂದ ಕ್ಯಾನ್ಸರ್ ತಪಾಸಣೆ ಮತ್ತು ಚಿಕಿತ್ಸೆಗೆ ಆದ್ಯತೆ ನೀಡಲಾಗಿದೆ

ದಿನೇಶ್ ಗುಂಡೂರಾವ್
ಆರೋಗ್ಯ ಸಚಿವ

ಪುರುಷರಲ್ಲಿ ಹೆಚ್ಚಾಗಿ ಪ್ರಾಸ್ಟೇಟ್ (ಮೂತ್ರನಾಳ) ಕ್ಯಾನ್ಸರ್, ಬಾಯಿ ಕ್ಯಾನ್ಸರ್, ಜಠರ ಮತ್ತು ಅನ್ನನಾಳದ ಕ್ಯಾನ್ಸರ್ ಕಾಣಿಸಿಕೊಳ್ಳುತ್ತಿದೆ. ಮಹಿಳೆಯರಲ್ಲಿನ ದೃಢ ಪ್ರಕರಣಗಳಲ್ಲಿ ಹೆಚ್ಚಿನವರು ಸ್ತನ ಕ್ಯಾನ್ಸರ್ ಎದುರಿಸುತ್ತಿದ್ದಾರೆ. ಅದೇ ರೀತಿ, ಗರ್ಭಕಂಠ ಮತ್ತು ಗರ್ಭಕೋಶದ ಕ್ಯಾನ್ಸರ್ ಸಹ ಅಧಿಕ ಸಂಖ್ಯೆಯಲ್ಲಿ ದೃಢಪಡುತ್ತಿದೆ. ಕ್ಯಾನ್ಸರ್ ತಪಾಸಣೆಗಾಗಿಯೇ ಕ್ಲಿನಿಕ್‌ಗಳು ಹಾಗೂ ಆಸ್ಪತ್ರೆಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಜನರು ಬರದ ಕಾರಣ, ವಿವಿಧ ಅನಾರೋಗ್ಯ ಸಮಸ್ಯೆ ಸಂಬಂಧ ಆರೋಗ್ಯ ಕೇಂದ್ರಗಳಿಗೆ ಭೇಟಿ ನೀಡುತ್ತಿರುವವರಿಗೂ ಉಚಿತವಾಗಿ ಈ ತಪಾಸಣೆ ನಡೆಸಲಾಗುತ್ತಿದೆ.

ಬಾಯಿ ಕ್ಯಾನ್ಸರ್ ಅಧಿಕ: ತಂಬಾಕು ಉತ್ಪನ್ನಗಳ ಸೇವನೆ ಸೇರಿ ವಿವಿಧ ಕಾರಣಗಳಿಂದ ಬಾಯಿ ಕ್ಯಾನ್ಸರ್ ಹೆಚ್ಚಿನವರಲ್ಲಿ ಕಾಣಿಸಿಕೊಳ್ಳುತ್ತಿದೆ. ಎನ್‌ಸಿಡಿ ಕಾರ್ಯಕ್ರಮದಡಿ ನಾಲ್ಕು ವರ್ಷಗಳಲ್ಲಿ ಕ್ಯಾನ್ಸರ್ ತಪಾಸಣೆಗೆ ಒಳಪಟ್ಟವರಲ್ಲಿ 1 ಲಕ್ಷಕ್ಕೂ ಅಧಿಕ ಮಂದಿಯಲ್ಲಿ ಬಾಯಿಯ ಕ್ಯಾನ್ಸರ್ ಶಂಕೆ ವ್ಯಕ್ತವಾಗಿತ್ತು. ಹೆಚ್ಚಿನ ಪರೀಕ್ಷೆಗೆ ಒಳಪಟ್ಟವರಲ್ಲಿ 6,595 ಮಂದಿಯಲ್ಲಿ ಈ ಮಾದರಿಯ ಕ್ಯಾನ್ಸರ್ ಖಚಿತಪಟ್ಟಿದೆ. 1.25 ಲಕ್ಷಕ್ಕೂ ಅಧಿಕ ಮಂದಿಯಲ್ಲಿ ಗರ್ಭಕಂಠ ಕ್ಯಾನ್ಸರ್ ಶಂಕೆ ವ್ಯಕ್ತವಾಗಿತ್ತು. ಹೆಚ್ಚಿನ ಪರೀಕ್ಷೆಗೆ ಒಳಪಟ್ಟವರ ಪೈಕಿ 5,763 ಮಂದಿಯಲ್ಲಿ ಈ ಕ್ಯಾನ್ಸರ್ ದೃಢಪಟ್ಟಿದೆ.

'ಕ್ಯಾನ್ಸರ್ ಕಾಯಿಲೆ ಹಾಗೂ ಚಿಕಿತ್ಸೆ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ಆರೋಗ್ಯ ಕೇಂದ್ರಗಳಲ್ಲಿ ನಡೆಸಲಾಗುವ ಪರೀಕ್ಷೆಗಳ ಜತೆಗೆ ಗೃಹ ಆರೋಗ್ಯ ಯೋಜನೆಯಡಿ ಮನೆಗಳ ಹಂತದಲ್ಲಿಯೇ ತಪಾಸಣೆಗೆ ಕ್ರಮ ಕೈಗೊಳ್ಳಲಾಗಿದೆ. ಕ್ಯಾನ್ಸರ್ ದೃಢಪಟ್ಟಲ್ಲಿ ಜಿಲ್ಲಾ ಆಸ್ಪತ್ರೆಗಳ ಜತೆಗೆ ವಿವಿಧ ಸರ್ಕಾರಿ ಆಸ್ಪತ್ರೆಗಳಲ್ಲಿ ಅಗತ್ಯ ಚಿಕಿತ್ಸೆ ಒದಗಿಸಲಾಗುತ್ತದೆ. ರೋಗದ ಬಗ್ಗೆ ಅನಗತ್ಯವಾಗಿ ಭಯಕ್ಕೆ ಒಳಪಡದೆ, ಶಂಕೆ ಇದ್ದಲ್ಲಿ ಪರೀಕ್ಷೆ ಮಾಡಿಸಿಕೊಳ್ಳಬೇಕು' ಎಂದು ಇಲಾಖೆಯ, ಸಾಂಕ್ರಾಮಿಕವಲ್ಲದ ರೋಗಗಳ ವಿಭಾಗದ ಉಪ ನಿರ್ದೇಶಕ ಡಾ.ಜಿ. ಶ್ರೀನಿವಾಸ್ ತಿಳಿಸಿದರು.

'ನಾಯ್ಡು ಪ್ರಧಾನಿ ಆಗಬಹುದು'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವೂ ಸಂಕಟದಲ್ಲಿದೆ. ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಬಿಜೆಪಿ ಸಚಿವರಲ್ಲಿ ಅಸಮಾಧಾನವಿದ್ದು, ಅವರ ಸ್ಥಾನಕ್ಕೆ ಆಂಧ್ರ ಪ್ರದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರನ್ನು ಕೂರಿಸಬಹುದು' ಎಂದು ಕಾರ್ಮಿಕ ಸಚಿವ ಸಂತೋಷ ಲಾಡ್ ಹೇಳಿದರು.

ಸಂತೋಷ ಲಾಡ್



ಚಂದ್ರಬಾಬು ನಾಯ್ಡು

ನಗರದಲ್ಲಿ ಸೋಮವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಮೋದಿ ಅವರೇ ಸುಪ್ರೀಂ ಎಂಬಂತೆ ಬಿಂಬಿಸಲಾಗುತ್ತಿದೆ. ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರ ಸಾಧನೆಗಳ ಬಗ್ಗೆ ಮಾಧ್ಯಮಗಳು ಮಾತನಾಡುತ್ತಿಲ್ಲ. ಕೇಂದ್ರದಲ್ಲಿ ಬಿಜೆಪಿಗೆ ಬಹುಮತ ಇಲ್ಲ. ಪ್ರಧಾನಿ ಮೋದಿ ಬದಲಾವಣೆ ಆಗಬಹುದು ಎಂಬ ಚರ್ಚೆ ಇದೆ' ಎಂದರು.

ಸುದ್ದಿ 2 ನಿಮಿಷ

'₹6 ಸಾವಿರ ಕೋಟಿ ವಿದ್ಯುತ್ ಬಿಲ್ ಬಾಕಿ'

ಹಾವೇರಿ: 'ರಾಜ್ಯದ ವಿವಿಧ ಇಲಾಖೆಗಳ ಕಚೇರಿಗಳಿಂದ ₹ 6 ಸಾವಿರ ಕೋಟಿ ವಿದ್ಯುತ್ ಬಿಲ್ ಪಾವತಿ ಬಾಕಿಯಿದ್ದು, ಅದರ ವಸೂಲಿಗೆ ಸಂಬಂಧಪಟ್ಟ ಸಚಿವರು ಹಾಗೂ ಅಧಿಕಾರಿಗಳ ಜೊತೆ ಚರ್ಚೆ ನಡೆದಿದೆ' ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ಹೇಳಿದರು.

'ರಾಜ್ಯದಲ್ಲಿ ಪ್ರಸಕ್ತ ವರ್ಷ ಬೇಡಿಕೆಗೆ ತಕ್ಕಷ್ಟು ವಿದ್ಯುತ್ ಪೂರೈಸಲು ಇಲಾಖೆ ಸನ್ನದ್ಧವಾಗಿದೆ. ಅದಕ್ಕೆ ಬೇರೆ ರಾಜ್ಯಗಳಿಂದ 19,500 ಮೆಗಾವಾಟ್ ವಿದ್ಯುತ್ ಖರೀದಿಸಲಾಗಿದೆ' ಎಂದು ಅವರು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು. 'ಕಳೆದ ವರ್ಷ ಬರಗಾಲ ಇದ್ದ ಕಾರಣ ರಾಜ್ಯದಲ್ಲಿ ಒಂದು ತಿಂಗಳು ವಿದ್ಯುತ್ ಕೊರತೆಯಾಗಿತ್ತು. ಉಳಿದ 11 ತಿಂಗಳು ಸಮರ್ಪಕವಾಗಿ ವಿದ್ಯುತ್ ಪೂರೈಸಲಾಗಿದೆ. ರಾಜ್ಯದಲ್ಲಿ ಈ ವರ್ಷ ವಿದ್ಯುತ್ ಸಮಸ್ಯೆ ಇರುವುದಿಲ್ಲ' ಎಂದರು.

ಅವಹೇಳನಕಾರಿ ಪೋಸ್ಟ್ ಆರೋಪಿಗೆ ಜಾಮೀನು

ಮೈಸೂರು: ಮುಸ್ಲಿಂ ಸಮುದಾಯವನ್ನು ಅವಹೇಳನ ಮಾಡಿದ ಪೋಸ್ಟ್ ಅನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹರಿಬಿಟ್ಟ ಪ್ರಕರಣದ ಆರೋಪಿ ಸತೀಶ್ (46) ಅವರಿಗೆ ಇಲ್ಲಿನ 2ನೇ ಹೆಚ್ಚುವರಿ ಜಿಲ್ಲಾ ಸಿವಿಲ್ ನ್ಯಾಯಾಲಯವು ಸೋಮವಾರ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

ಶನಿವಾರ ನಡೆದ ವಿಚಾರಣೆ ವೇಳೆ, ಜಾಮೀನು ನೀಡಬಾರದು ಎಂದು ಸರ್ಕಾರಿ ಅಭಿಯೋಜಕಿ ಸವಿತಾ ಆಕ್ಷೇಪಿಸಿದ್ದರಿಂದ ವಿಚಾರಣೆಯನ್ನು ಸೋಮವಾರಕ್ಕೆ ಮುಂದೂಡಲಾಗಿತ್ತು.

ಆರೋಪಿ ಪರ ವಕೀಲ ಅ.ಮಾ.ಭಾಸ್ಕರ್ ವಾದ ಮಂಡಿಸಿ, ಜಾಮೀನು ನೀಡಬೇಕು ಎಂದು ಒತ್ತಾಯಿಸಿದರು. ವಾದ–ಪ್ರತಿವಾದ ಆಲಿಸಿದ ನ್ಯಾಯಾಧೀಶೆ ಸರೋಜ, 'ಒಂದು ಶ್ಯೂರಿಟಿ ಒದಗಿಸಬೇಕು' ಎಂದು ತಿಳಿಸಿ ಜಾಮೀನು ಮಂಜೂರು ಮಾಡಿದರು.

ಇದೇ ಪ್ರಕರಣದ ವಿಚಾರದಲ್ಲಿ ಉದ್ರಿಕ್ತಗೊಂಡ ಮುಸ್ಲಿಂ ಸಮುದಾಯದ ಯುವಕರ ಗುಂಪು ಉದಯಗಿರಿ ಠಾಣೆಗೆ ಕಲ್ಲು ತೂರಾಟ ನಡೆಸಿತ್ತು. ಈ ಬಗ್ಗೆ ಪೊಲೀಸರು ಒಂದು ಸಾವಿರ ಜನರ ವಿರುದ್ಧ ಪ್ರಕರಣ ದಾಖಲಿಸಿ, 16 ಮಂದಿಯನ್ನು ಬಂಧಿಸಿದ್ದಾರೆ.

ಬಾಕಿ ಇರುವುದು ಗೊತ್ತಿರಲಿಲ್ಲ: ಸಿದ್ದರಾಮಯ್ಯ

'ಗೃಹಲಕ್ಷ್ಮಿ ಹಣ ತಕ್ಷಣ ಬಿಡುಗಡೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅನ್ನಭಾಗ್ಯ, ಗೃಹಲಕ್ಷ್ಮಿ ಸೇರಿದಂತೆ ಯಾವುದೇ ಯೋಜನೆಯನ್ನು ನಿಲ್ಲಿಸುವ ಪ್ರಶ್ನೆಯೇ ಇಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಅನ್ನ ಭಾಗ್ಯದ ಹಣ ಮೂರು ತಿಂಗಳುಗಳಿಂದ ಬಾಕಿ ಇರುವುದು ನನಗೆ ಗೊತ್ತಿಲ್ಲ. ತಕ್ಷಣ ಬಿಡುಗಡೆ ಮಾಡಲಾಗುವುದು' ಎಂದರು.

'ಫಲಾನುಭವಿಗಳ ಖಾತೆಗೆ ಅನ್ನಭಾಗ್ಯ, ಗೃಹಲಕ್ಷ್ಮಿ ಯೋಜನೆಯ ಹಣವನ್ನು ಇಲ್ಲಿಯವರೆಗೆ ಬಿಡುಗಡೆ ಮಾಡಿದ್ದೇವೆ ಅಂದಮೇಲೆ ಮುಂದೆಯೂ ಮಾಡುತ್ತೇವೆ' ಎಂದರು.

ಕೊಟ್ಟ ಮಾತಿನಂತೆ ನಡೆಯುತ್ತೇವೆ: 'ಅನ್ನಭಾಗ್ಯ ಯೋಜನೆಯಡಿ ಅಕ್ಕಿಯ ಹಣ ಮತ್ತು ಗೃಹಲಕ್ಷ್ಮಿ ಯೋಜನೆಯ ಹಣ ಮೂರು ತಿಂಗಳುಗಳಿಂದ ಫಲಾನುಭವಿಗಳ ಖಾತೆಗೆ ಹೋಗಿಲ್ಲ. ಈ ಹಣವನ್ನು ನಾವು ಹಾಕುತ್ತೇವೆ. ಕೊಟ್ಟ ಮಾತಿನಂತೆ ನಾವು ನಡೆಯುತ್ತೇವೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಅಕ್ಕಿ ಖರೀದಿಗೆ ರಾಜ್ಯ ಸರ್ಕಾರ ನಿರಾಸಕ್ತಿ: ಪ್ರಲ್ಹಾದ ಜೋಶಿ

ಹುಬ್ಬಳ್ಳಿ: 'ಕೇಂದ್ರ ಸರ್ಕಾರವು ಅಕ್ಕಿಯನ್ನು ಕೆಜಿಗೆ ₹ 22.50ರ ಕನಿಷ್ಠ ಬೆಲೆಗೆ ನೀಡಿದರೂ ರಾಜ್ಯ ಸರ್ಕಾರ ಖರೀದಿಸುತ್ತಿಲ್ಲ. ರಾಜ್ಯ ಸರ್ಕಾರವು ಕೆಜಿಗೆ ₹ 34ರ ದರದಲ್ಲಿ ಅಕ್ಕಿ ಖರೀದಿಸಬೇಕಾಗುತ್ತದೆ. ಕಡಿಮೆ ದರದಲ್ಲಿ ನಾವು ಕೊಡುತ್ತೇವೆ ಎಂದರೂ ರಾಜ್ಯ ಸರ್ಕಾರ ಆಸಕ್ತಿ ತೋರುತ್ತಿಲ್ಲ' ಎಂದು ಕೇಂದ್ರ ಆಹಾರ ಸಚಿವ ಪ್ರಲ್ಹಾದ ಜೋಶಿ ಆರೋಪಿಸಿದ್ದಾರೆ.

'ಕೇಂದ್ರ ಸರ್ಕಾರದಿಂದ ಕೆಜಿಗೆ ₹ 22.50ರ ದರದಲ್ಲಿ ಅಕ್ಕಿ ಖರೀದಿಸಿದಲ್ಲಿ ರಾಜ್ಯ ಸರ್ಕಾರಕ್ಕೆ ವಾರ್ಷಿಕ ₹ 2,280 ಕೋಟಿ ಉಳಿತಾಯ ಆಗುತ್ತದೆ. ಅಗತ್ಯವಿದ್ದಷ್ಟು ಅಕ್ಕಿ ಪೂರೈಸಲು ಸರ್ಕಾರ ಸಿದ್ಧವಿದೆ' ಎಂದು ಅವರು ಸೋಮವಾರ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪ್ರತಿಕ್ರಿಯಿಸಿದ್ದಾರೆ.

'ಗ್ಯಾರಂಟಿ ಯೋಜನೆಗಳ ಆಶ್ವಾಸನೆ ನೀಡಿ ಅಧಿಕಾರಕ್ಕೆ ಬಂದ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರವು ಜನರಿಗೆ ಯಾವುದನ್ನೂ ಸರಿಯಾಗಿ ಪೂರೈಸುತ್ತಿಲ್ಲ. ಮುಂದಾಲೋಚನೆಯಿಲ್ಲದೇ ಅವೈಜ್ಞಾನಿಕ ಯೋಜನೆಗಳನ್ನು ಘೋಷಿಸುವುದರ ಜೊತೆಗೆ ಸಮರ್ಪಕವಾಗಿ ಅನುಷ್ಠಾನವನ್ನೂ ಮಾಡುತ್ತಿಲ್ಲ' ಎಂದು ಅವರು ತಿಳಿಸಿದ್ದಾರೆ.

ಮಹಾರಥೋತ್ಸವ ಬಾಗಲಕೋಟೆ ಜಿಲ್ಲೆ ಕಮತಗಿಯ ಶ್ರೀಹೊಳೆ ಹುಚ್ಚೇಶ್ವರ ಸಂಸ್ಥಾನಮಠದ ಹುಚ್ಚೇಶ್ವರ ಅಜ್ಜನ ಮಹಾರಥೋತ್ಸವ ಸೋಮವಾರ ಅದ್ದೂರಿಯಾಗಿ ನಡೆಯಿತು

ಒಂದೇ ಕುಟುಂಬದ ನಾಲ್ವರ ಶವ ಪತ್ತೆ

ಮೈಸೂರು: ಇಲ್ಲಿನ ವಿಶ್ವೇಶ್ವರ ನಗರದ ಅಪಾರ್ಟ್‌ಮೆಂಟ್‌ನ ನಿವಾಸಿಗಳಾದ ಚೇತನ್ (45), ಅವರ ಪತ್ನಿ ರೂಪಾಲಿ (43), ತಾಯಿ ಪ್ರಿಯಂವದ (62) ಹಾಗೂ ಮಗ ಕುಶಾಲ್ (15) ಮೃತದೇಹಗಳು ಅವರ ಫ್ಲ್ಯಾಟ್‌ನಲ್ಲಿ ಸೋಮವಾರ ಕಂಡುಬಂದಿವೆ. 'ಚೇತನ್ ಅವರೇ ಮೂವರಿಗೂ ವಿಷ ಉಣಿಸಿ, ಆತ್ಮಹತ್ಯೆ ಮಾಡಿಕೊಂಡಿರಬಹುದು' ಎಂದು ಪೊಲೀಸರು ಶಂಕಿಸಿದ್ದಾರೆ.



ಕುಶಾಲ್, ಚೇತನ್ , ರೂಪಾಲಿ, ಪ್ರಿಯಂವದ

ಹಾಸನ ಜಿಲ್ಲೆಯ ಗೊರೂರು ಮೂಲದ ಚೇತನ್ ವಿದೇಶದಲ್ಲಿ ಉದ್ಯೋಗಿಯಾಗಿದ್ದರು. 2019 ರಲ್ಲಿ ಮೈಸೂರಿಗೆ ಬಂದು, ಪತ್ನಿ ಹೆಸರಿನಲ್ಲಿ ಕಂಪೆನಿ ತೆರೆದು, ಸೌದಿಗೆ ಕಾರ್ಮಿಕರನ್ನು ಕಳುಹಿಸುವ ಕೆಲಸವನ್ನು ಆನ್‌ಲೈನ್ ಮೂಲಕ ನಿರ್ವಹಿಸುತ್ತಿದ್ದರು. ಅದೇ ವರ್ಷ ಎರಡು ಫ್ಲ್ಯಾಟ್ ಖರೀದಿಸಿ, ಒಂದರಲ್ಲಿ ತಾವು ಪತ್ನಿ ಹಾಗೂ ಮಗನೊಂದಿಗೆ ವಾಸವಿದ್ದು, ಪಕ್ಕದ ಫ್ಲ್ಯಾಟ್‌ನಲ್ಲಿ ತಾಯಿಯ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಿದ್ದರು.

'ವಿದೇಶದಲ್ಲಿರುವ ಸಹೋದರ ಭರತ್ ಅವರಿಗೆ ಚೇತನ್ ಅವರು ನಾಲ್ವರೂ ಸತ್ತು ಹೋಗುವುದಾಗಿ ವಾಟ್ಸ್ಆ್ಯಪ್ ಮೂಲಕ ತಿಳಿಸಿದ್ದರು. ಭರತ್ ಸೋಮವಾರ ಮುಂಜಾನೆ ರೂಪಾಲಿ ಪೋಷಕರಿಗೆ ಕರೆ ಮಾಡಿ ಅಪಾರ್ಟ್‌ಮೆಂಟ್‌ಗೆ ತೆರಳುವಂತೆ ಸೂಚಿಸಿದ್ದರು. ಅವರು ಬಂದಾಗ ಚೇತನ್ ಮೃತದೇಹ ಫ್ಯಾನ್‌ಗೆ ನೇಣು ಬಿಗಿದುಕೊಂಡ ಸ್ಥಿತಿಯಲ್ಲಿತ್ತು. ಇನ್ನೊಂದು ಫ್ಲ್ಯಾಟ್‌ನಲ್ಲಿದ್ದ ತಾಯಿಯೂ ಮೃತಪಟ್ಟಿದ್ದರು' ಎಂದು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ತಿಳಿಸಿದರು.

'ಭಾನುವಾರ ಸಂಜೆ ಗೊರೂರಿನ ದೇವಾಲಯಕ್ಕೆ ಚೇತನ್ ಕುಟುಂಬವು ಭೇಟಿ ನೀಡಿದ್ದು, ಕುವೆಂಪು ನಗರದಲ್ಲಿರುವ ಮಾವನ ಮನೆಯಲ್ಲಿ ರಾತ್ರಿ ಊಟ ಮಾಡಿ ಫ್ಲ್ಯಾಟ್‌ಗೆ ಬಂದಿದ್ದರು. ಸಾವಿಗೆ ಕಾರಣ ತಿಳಿದಿಲ್ಲ. ಎಫ್‌ಎಸ್‌ಎಲ್, ಸೋಕೊ (ಸೀನ್ಸ್ ಆಫ್ ಕ್ರೈಂ ಆಫೀಸರ್ಸ್) ತಂಡವನ್ನು ಬಳಸಿ ತನಿಖೆ ಮುಂದುವರೆಸಿದ್ದೇವೆ' ಎಂದರು.

'ಚೇತನ್ ಕೊಠಡಿಯಲ್ಲಿ ಡೆತ್ ನೋಟ್ ಹಾಗೂ ವಾಯ್ಸ್ ನೋಟ್ ದೊರೆತಿದ್ದು, ಸಾವಿಗೆ ಯಾರೂ ಕಾರಣರಲ್ಲ, ನನಗೆ ಸಾಲದ ಸಮಸ್ಯೆಯಿದೆ. ನಾನು ಮೂವರನ್ನೂ ಕರೆದೊಯ್ಯುತ್ತಿದ್ದೇನೆ ಎಂದು ಬರೆಯಲಾಗಿದೆ. ಗೊರೂರು ಫ್ಯಾಮಿಲಿ ಎಂಬ ವಾಟ್ಸ್ಆ್ಯಪ್ ಗ್ರೂಪ್‌ಗೂ ಇದೇ ರೀತಿಯ ಸಂದೇಶ ಕಳಿಸಿದ್ದರು' ಎನ್ನಲಾಗಿದೆ. ವಿದ್ಯಾರಣ್ಯಪುರಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಾಷ್ಟ್ರೀಯ ಹೆದ್ದಾರಿಗೆ ಪರ್ಯಾಯ ರಸ್ತೆ ನಿರ್ಮಾಣ: ಚಿಂತನೆ

ಪ್ರಜಾವಾಣಿ ವಾರ್ತೆ

ಉಳ್ಳಾಲ (ದಕ್ಷಿಣ ಕನ್ನಡ): ಕೇರಳದ ಮಂಜೇಶ್ವರ ಪಂಚಾಯಿತಿ ವ್ಯಾಪ್ತಿಯ ಗಡಿನಾಡ ಕನ್ನಡಿಗರಿಗೆ ತಲಪಾಡಿ ಟೋಲ್ ಗೇಟ್‌ನಲ್ಲಿ ವಿನಾಯಿತಿ ನೀಡುವಂತೆ ಹಲವು ಸಮಯಗಳಿಂದ ಬೇಡಿಕೆ ಇದ್ದರೂ ಟೋಲ್ ಸಂಸ್ಥೆಗಳು ಸ್ಪಂದಿಸಿಲ್ಲ. ಇದನ್ನು ಖಂಡಿಸಿ ಗಡಿನಾಡ ಕನ್ನಡಿಗರು ರಾಷ್ಟ್ರೀಯ ಹೆದ್ದಾರಿಗೆ ಪರ್ಯಾಯ ಬೈಪಾಸ್ ರಸ್ತೆ ನಿರ್ಮಾಣಕ್ಕೆ ಮುಂದಾಗಿದ್ದಾರೆ.

ತಲಪಾಡಿ ಟೋಲ್‌ಗೇಟ್ ಸ್ಥಾಪಿಸಿದ ಆರಂಭದಲ್ಲಿ ಕರ್ನಾಟಕ ಮತ್ತು ಕೇರಳ ಭಾಗದ ಐದು ಕಿ.ಮೀ ವ್ಯಾಪ್ತಿಯ ಸ್ಥಳೀಯರಿಗೆ ಟೋಲ್‌ನಲ್ಲಿ ವಿನಾಯಿತಿ ನೀಡಲಾಗುತ್ತಿತ್ತು. ಬಳಿಕ ಕೇರಳ ಭಾಗದ ಜನರಿಗೆ ವಿನಾಯಿತಿ ರದ್ದು ಮಾಡಿತ್ತು. ಇದರ ವಿರುದ್ಧ ಸರ್ವ ಪಕ್ಷಗಳು ಹಾಗೂ ಸಮಾನ ಮನಸ್ಕರ ನೇತೃತ್ವದ ಮಂಜೇಶ್ವರ ಟೋಲ್ ಗೇಟ್ ಕ್ರಿಯಾ ಸಮಿತಿ ರಚಿಸಿ ಹೋರಾಟ ನಡೆಸಲಾಗಿತ್ತು.

ಮಂಜೇಶ್ವರ ಆಡಳಿತಾತ್ಮಕವಾಗಿ ಕೇರಳದಲ್ಲಿ ಇದ್ದರೂ ಈ ಭಾಗದ ಜನರು ಭಾವನಾತ್ಮಕವಾಗಿ ಮತ್ತು ಉದ್ಯೋಗ, ಶಿಕ್ಷಣಕ್ಕೆ ಮಂಗಳೂರನ್ನೇ ಆಶ್ರಯಿಸಿದ್ದಾರೆ. ಆದರೆ, ನಿತ್ಯ ಇಲ್ಲಿ ಟೋಲ್ ಪಾವತಿಸಿ ಬರುವ ಅನಿವಾರ್ಯತೆಯಿಂದ ಅವರಿಗೆ ಸಂಕಷ್ಟ ಉಂಟಾಗಿದೆ. ಹಲವು ಬಾರಿ ಮಂಜೇಶ್ವರ ಗ್ರಾ.ಪಂ ವ್ಯಾಪ್ತಿಯ ನಾಗರಿಕರು ಮತ್ತು ಹೋರಾಟ ಸಮಿತಿ ಮನವಿ ಮಾಡಿದರೂ ಟೋಲ್ ಗೇಟ್ ಸಂಸ್ಥೆ ಮತ್ತು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಸ್ಪಂದಿಸಿಲ್ಲ.

ಮಂಜೇಶ್ವರ ಶಾಸಕ ಅಶ್ರಫ್ ಅವರ ಸೂಚನೆಯಂತೆ ಕೇರಳ ಗಡಿಭಾಗದಲ್ಲಿ ಸರ್ವೆ ನಡೆಸಲಾಯಿತು

ಮಂಜೇಶ್ವರ ಪಂಚಾಯಿತಿ ಆಡಳಿತ ಸಭೆ ನಡೆಸಿದ್ದು, ರಾಷ್ಟ್ರೀಯ ಹೆದ್ದಾರಿಯ ಹಳೆಯ ರಸ್ತೆಗಳ ನಕ್ಷೆಗಳನ್ನು ಪರಿಶೀಲಿಸಿದೆ. ತಲಪಾಡಿ ಮರಿಯಾಶ್ರಮ ಚರ್ಚ್ ಹಿಂಭಾಗದ ಹಳೆಯ ರಾಷ್ಟ್ರೀಯ ಹೆದ್ದಾರಿ ಮೂಲಕ ಸಾಗಿ ನದಿಗೆ ಸೇತುವೆ ನಿರ್ಮಿಸಿ ಮಂಗಳೂರು ರಸ್ತೆಗೆ ಸಂಪರ್ಕಿಸುವ ಯೋಜನೆ ತಯಾರಿಸಲಾಗಿದೆ. ಹೊಳೆ ದಾಟಿದ ಬಳಿಕ 50 ಮೀ. ಮಂಜೇಶ್ವರ ಪಂಚಾಯಿತಿ ಅಧೀನದಲ್ಲೇ ಇದ್ದು, ಇದನ್ನೇ ಬಳಸಿ ಪರ್ಯಾಯ ರಸ್ತೆ ನಿರ್ಮಾಣಕ್ಕೆ ಯೋಜನೆ ರೂಪಿಸಲಾಗಿದೆ.

ಮಂಜೇಶ್ವರ ಪಂಚಾಯಿತಿ ಗ್ರಾಮಾಧಿಕಾರಿ ಪ್ರಕಾಶ್ ರಾಜೇಶ್ ನೇತೃತ್ವದಲ್ಲಿ ಪಂಚಾಯಿತಿ ಹಾಗೂ ಹೋರಾಟ ಸಮಿತಿ ತಂಡ ಸರ್ವೆ ನಡೆಸಿದೆ. 50 ವರ್ಷದ ಹಿಂದೆ ರಾಷ್ಟ್ರೀಯ ಹೆದ್ದಾರಿ ಇಲ್ಲಿಂದಲೇ ಹಾದು ಹೋಗುತ್ತಿತ್ತು. ಇಲ್ಲಿ ರಸ್ತೆ ನಿರ್ಮಿಸಿ ಮುಂದೆ ಹೊಳೆಗೆ ಸೇತುವೆ ನಿರ್ಮಿಸಿದರೆ ಪ್ರತ್ಯೇಕ ರಸ್ತೆ ನಿರ್ಮಾಣ ಆಗಲಿದೆ ಎಂದು ಮಂಜೇಶ್ವರ ಪಂಚಾಯಿತಿ ಅಧ್ಯಕ್ಷೆ ಜೀನ್ ಲವೀನಾ ಮೊಂತೆರೊ ತಿಳಿಸಿದ್ದಾರೆ.

ಮಂಜೇಶ್ವರ ಟೋಲ್ ಗೇಟ್ ಕ್ರಿಯಾ ಸಮಿತಿಯ ಸಿಪಿಎಂ ಅಬ್ದುಲ್ ರಝಾಕ್ ಚೆಕ್ಕೂರು, ಅಬ್ದುಲ್ ರಹೀಂ, ವಾರ್ಡ್ ಸದಸ್ಯ ಜಬ್ಬಾರ್ ಬಹರೈನ್, ತಲಪಾಡಿಯ ವಿನಯ, ಗ್ರಾ.ಪಂ ಮಾಜಿ ಅಧ್ಯಕ್ಷ ಅಬ್ದುಲ್ ಅಜೀಜ್, ಸೈಫಲ್ಲಾ ತಂಜಲ್, ಅಲಿಕುಟ್ಟಿ, ಸಂಜೀವ ಶೆಟ್ಟಿ, ಅಶ್ರಫ್ ಸಮೀಕ್ಷಾ ತಂಡದಲ್ಲಿದ್ದರು.

ಯೋಜನೆಯನ್ನು ಕರ್ನಾಟಕದ ತಲಪಾಡಿ, ಸೋಮೇಶ್ವರ ಪಂಚಾಯಿತಿಗಳು ಬೆಂಬಲಿಸಿವೆ. ಸಹಕಾರ ನೀಡುವುದಾಗಿ ಮಂಜೇಶ್ವರ ಶಾಸಕ ಎ.ಕೆ.ಎಂ.ಅಶ್ರಫ್ ತಿಳಿಸಿದ್ದು, ಅನುದಾನ ಕೊಡಿಸುವ ಭರವಸೆ ನೀಡಿದ್ದಾರೆ.

ಕಾನೂನಾತ್ಮಕವಾಗಿ ಈ ರೀತಿ ರಸ್ತೆ ನಿರ್ಮಾಣ ಸಾಧ್ಯವೇ ಎಂಬ ಪ್ರಶ್ನೆಯೂ ಎದ್ದಿದೆ. ಪ್ರತ್ಯೇಕ ರಸ್ತೆ ನಿರ್ಮಾಣ ಆದರೂ ಬಹುತೇಕ ಸಂಚಾರಕ್ಕೆ ರಾಷ್ಟ್ರೀಯ ಹೆದ್ದಾರಿಯನ್ನೇ ಬಳಸಬೇಕಿದೆ. ಹೀಗಾಗಿ ಪಂಚಾಯಿತಿ ನಿರ್ಮಿಸುವ ರಸ್ತೆಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮತ್ತೆ ಟೋಲ್‌ಗೇಟ್ ಹಾಕುವ ಸಾಧ್ಯತೆಗಳಿವೆ. ಟೋಲ್ ಗೇಟ್ ತಪ್ಪಿಸಲು ಪ್ರತ್ಯೇಕ ರಸ್ತೆ ನಿರ್ಮಿಸಿದರೂ ಬಹುತೇಕ ರಾಷ್ಟ್ರೀಯ ಹೆದ್ದಾರಿಯನ್ನೇ ಬಳಸಿ ಸಂಚರಿಸಬೇಕಿರುವುದರಿಂದ ಟೋಲ್ ಪಾವತಿಸಬೇಕು ಎಂಬ ವಾದವೂ ಇದೆ.

ಬಿ. ಫಾರ್ಮಾ ಕೋರ್ಸ್: ಹೆಚ್ಚುವರಿ ಶುಲ್ಕ ವಾಪಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿ. ಫಾರ್ಮಾ ಕೋರ್ಸ್‌ಗೆ ಪ್ರವೇಶ ಪಡೆದ ಎಂಟು ವಿದ್ಯಾರ್ಥಿಗಳಿಂದ ಕಟ್ಟಿಸಿಕೊಂಡಿದ್ದ ಹೆಚ್ಚುವರಿ ಶುಲ್ಕವನ್ನು ಎರಡು ಕಾಲೇಜುಗಳು ಹಿಂದಿರುಗಿಸಿವೆ.

ನಗರದ ಆಚಾರ್ಯ ಮತ್ತು ಬಿ.ಎಂ. ರೆಡ್ಡಿ ಫಾರ್ಮಸಿ ಕಾಲೇಜುಗಳು ಒಟ್ಟು ₹5.40 ಲಕ್ಷ ಹೆಚ್ಚುವರಿ ಶುಲ್ಕ ಕಟ್ಟಿಸಿಕೊಂಡಿದ್ದವು. ಈ ಕುರಿತು ಎಂಟು ವಿದ್ಯಾರ್ಥಿಗಳು ಸಮಿತಿ ಅಧ್ಯಕ್ಷರಾದ ನ್ಯಾಯಮೂರ್ತಿ ಬಿ. ಶ್ರೀನಿವಾಸಗೌಡ ಅವರ ಅಧ್ಯಕ್ಷತೆಯ ಶುಲ್ಕ ನಿಯಂತ್ರಣ ಸಮಿತಿಗೆ ದೂರು ನೀಡಿದ್ದರು. ಕಾಲೇಜಿನ ಆಡಳಿತ ಮಂಡಳಿಯ ಪ್ರತಿನಿಧಿಗಳು ಹಾಗೂ ವಿದ್ಯಾರ್ಥಿಗಳನ್ನು ಕರೆಸಿ, ವಿಚಾರಣೆ ನಡೆಸಿದ ನಂತರ ಹೆಚ್ಚುವರಿ ಶುಲ್ಕ ವಾಪಸ್ ನೀಡಲಾಗಿದೆ.

ವೈದ್ಯಕೀಯ ಶುಲ್ಕ 8 ಲಕ್ಷ ವರ್ಗಾವಣೆ: ಮಂಗಳೂರಿನ ಜಿ.ಆರ್. ವೈದ್ಯಕೀಯ ಕಾಲೇಜು ವಿದ್ಯಾರ್ಥಿಗಳಾದ ಪೂಜಿತಾ ಜೆ. ಅಂಗಡಿ ಅವರಿಗೆ ₹7 ಲಕ್ಷ, ತುಷಾರ್ ಬಿ.ಭಾಸ್ಮೆ ಅವರಿಗೆ ₹1 ಲಕ್ಷ ಶುಲ್ಕವನ್ನು ಸಮಿತಿ ವರ್ಗಾವಣೆ ಮಾಡಿಕೊಟ್ಟಿದೆ.

ಕಾಲೇಜಿನ ಮಾನ್ಯತೆ ರದ್ದಾದ ನಂತರ ಆ ಕಾಲೇಜಿನ ವಿದ್ಯಾರ್ಥಿಗಳನ್ನು ಬೇರೆ ಕಾಲೇಜುಗಳಿಗೆ ವರ್ಗಾಯಿಸಲಾಗಿತ್ತು. ಆದರೆ, ಶುಲ್ಕ ವರ್ಗಾವಣೆ ಆಗಿರಲಿಲ್ಲ. ಹಾಗಾಗಿ, ವಿದ್ಯಾರ್ಥಿಗಳು ಸಮಿತಿಗೆ ದೂರು ನೀಡಿದ್ದರು. ಎಂ.ಬಿ.ಎ.ಕೋರ್ಸ್ ಪ್ರವೇಶಕ್ಕಾಗಿ ಮೂವರು ವಿದ್ಯಾರ್ಥಿಗಳಿಂದ ಆಚಾರ್ಯ ಬೆಂಗಳೂರು ಬಿ-ಸ್ಕೂಲ್ ಸಂಗ್ರಹಿಸಿದ್ದ ಹೆಚ್ಚುವರಿ ಶುಲ್ಕವನ್ನೂ ಸಮಿತಿ ವಾಪಸ್ ಕೊಡಿಸಿದೆ. ಕೆಇಎ ನಿಗದಿಪಡಿಸಿದ ಶುಲ್ಕದ ಜತೆಗೆ ₹31 ಸಾವಿರ ಕಟ್ಟಿಸಿಕೊಳ್ಳಲು ಸೂಚಿಸಿದೆ.

'ಗ್ರಂಥಾಲಯಗಳಿಗೆ ಉಚಿತ ವಿದ್ಯುತ್'

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: 'ಸರ್ಕಾರಿ ಶಾಲೆಗಳ ರೀತಿಯಲ್ಲೇ ರಾಜ್ಯದ ಎಲ್ಲ ಸಾರ್ವಜನಿಕ ಗ್ರಂಥಾಲಯಗಳಿಗೂ ಉಚಿತವಾಗಿ ವಿದ್ಯುತ್ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ' ಎಂದು ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ ಸಚಿವ ಎಸ್. ಮಧು ಬಂಗಾರಪ್ಪ ಹೇಳಿದರು.

ಗ್ರಂಥಾಲಯ ಇಲಾಖೆಗೆ ಹೊಸ ಸ್ಪರ್ಶ ನೀಡಲು ನಿರ್ಧರಿಸಲಾಗಿದೆ. ಆ ನಿಟ್ಟಿನಲ್ಲಿ ಮೊದಲ ಬಾರಿಗೆ ಐಎಎಸ್ ದರ್ಜೆಯ ಅಧಿಕಾರಿಯನ್ನು ಇಲಾಖೆಯ ಮುಖ್ಯಸ್ಥರನ್ನಾಗಿ ನೇಮಕ ಮಾಡಲಾಗಿದೆ ಎಂದು ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಡಿಜಿಟಲ್ ಗ್ರಂಥಾಲಯ ವ್ಯವಸ್ಥೆ ಸಂಪೂರ್ಣ ಹಾಳಾಗಿದೆ. ಓದುಗರಿಂದ ಬಂದ ದೂರುಗಳನ್ನು ಅವಲೋಕಿಸಿದಾಗ ಅಲ್ಲಿ ಪುಸ್ತಕಗಳೇ ಇಲ್ಲದಿರುವುದು, ಇರುವ ತಂತ್ರಾಂಶ ಕೂಡ ಓದುಗ ಸ್ನೇಹಿಯಾಗಿಲ್ಲ ಎಂಬುದು ಸೇರಿ ಹಲವು ಲೋಪಗಳಿರುವುದು ಕಂಡುಬಂದಿದೆ. ಈ ಸಂಬಂಧ ಇಲಾಖೆಯ ಕೆಲವು ಅಧಿಕಾರಿಗಳು, ಸಿಬ್ಬಂದಿ ವಿರುದ್ಧ ಕ್ರಮಕ್ಕೆ ಶಿಫಾರಸು ಮಾಡಲಾಗಿದೆ ಎಂದರು.

ಡಿಜಿಟಲ್ ಗ್ರಂಥಾಲಯ ವ್ಯವಸ್ಥೆಯ ತಂತ್ರಾಂಶ ಬದಲಾವಣೆ, ಮೂಲ ಸೌಕರ್ಯ ಕಲ್ಪಿಸುವುದು, ಕಾಯಂ ಹಾಗೂ ಗುತ್ತಿಗೆ ಸಿಬ್ಬಂದಿ ನೇಮಕ ಸೇರಿದಂತೆ ಅಗತ್ಯ ಕ್ರಮಕ್ಕೆ ಮುಂದಾಗಿದ್ದೇವೆ. ಬಜೆಟ್ ಅಧಿವೇಶನಕ್ಕೆ ಮೊದಲೇ ಈ ಕುರಿತು ನಿರ್ದಿಷ್ಟ ರೂಪುರೇಷೆ ಸಿದ್ಧಪಡಿಸಲಾಗುವುದು ಎಂದು ಅವರು ಹೇಳಿದರು.

'ಸ್ಕಿಲ್ ಅಟ್ ಸ್ಕೂಲ್' ಆರಂಭಕ್ಕೆ ಸಿದ್ಧತೆ

ಮುಂಬರುವ ಶೈಕ್ಷಣಿಕ ವರ್ಷದಿಂದ 'ಸ್ಕಿಲ್ ಅಟ್ ಸ್ಕೂಲ್' ಹೆಸರಲ್ಲಿ 8ನೇ ತರಗತಿಯಿಂದಲೇ ವಿದ್ಯಾರ್ಥಿಗಳಿಗೆ ಕೌಶಲ ಆಧರಿತ ಶಿಕ್ಷಣ ನೀಡಲು ಸರ್ಕಾರ ನಿರ್ಧರಿಸಿದೆ ಎಂದು ಸಚಿವ ಮಧು ಬಂಗಾರಪ್ಪ ಹೇಳಿದರು.

ಎಸ್.ಮಧು ಬಂಗಾರಪ್ಪ

'ವಿದ್ಯಾರ್ಥಿಗಳು ಈವರೆಗೂ ಪಿಯುಸಿ ಹಂತದಲ್ಲಿ ಕಲೆ, ವಾಣಿಜ್ಯ ಮತ್ತು ವಿಜ್ಞಾನ ವಿಷಯದ ಕೋರ್ಸ್‌ಗಳನ್ನು ಮಾತ್ರ ಕಲಿಯುತ್ತಿದ್ದರು. ಈಗ 25 ಕೋರ್ಸ್ ಕಲಿಯಲು ಅವಕಾಶವಿದೆ. ಅದರಲ್ಲಿ ಕೆಲವು ಕೌಶಲ ಆಧರಿತ ಕೋರ್ಸ್‌ಗಳಿದ್ದು, 'ಸ್ಕಿಲ್ ಅಟ್ ಸ್ಕೂಲ್' ಕಾರ್ಯಕ್ರಮ ರೂಪಿಸಲಾಗಿದೆ. 8ನೇ ತರಗತಿಯಿಂದಲೇ ಇದನ್ನು ಆರಂಭಿಸಲಾಗುತ್ತಿದೆ. ಸರ್ಕಾರದ ಸಂಪನ್ಮೂಲ ಬಳಸಿ ಯೋಜನೆ ಅನುಷ್ಠಾನಕ್ಕೆ ತರಲಾಗುತ್ತಿದೆ' ಎಂದರು.

ಶಾಲಾ ಮಕ್ಕಳಿಗೆ ಚಿಕ್ಕಿ ವಿತರಣೆ ಇಲ್ಲ

ಒಂದನೇ ಪುಟದಿಂದ...

ರಾಜ್ಯದ ಅನುದಾನಿತ ಮತ್ತು ಸರ್ಕಾರಿಶಾಲೆಗಳ 1ರಿಂದ 10ನೇ ತರಗತಿ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟದ ಜತೆಗೆ ವಾರದ 6 ದಿನ ಮೊಟ್ಟೆ ವಿತರಿಸಲಾಗುತ್ತಿದೆ. ಮೊಟ್ಟೆ ತಿನ್ನದ ಮಕ್ಕಳಿಗೆ ಚಿಕ್ಕಿ ಅಥವಾ ಬಾಳೆಹಣ್ಣು ನೀಡಲಾಗುತ್ತಿತ್ತು.

ಬಹುತೇಕ ಶಾಲೆಗಳಲ್ಲಿ ಚಿಕ್ಕಿಯ ಗಾತ್ರ ಒಂದೇ ತೆರನಾಗಿ ಇಲ್ಲದಿರುವುದು, ಅವಧಿ ಮೀರಿದ ಸಂಗ್ರಹ ಮತ್ತಿತರ ಕಾರಣಗಳಿಂದಲೂ ಮಕ್ಕಳ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವ ಸಾಧ್ಯತೆ ಇದೆ. ಹಾಗಾಗಿ, ಚಿಕ್ಕಿ ವಿತರಣೆ ಮಾಡಬಾರದು ಎಂದು ಇಲಾಖೆ ಸೂಚಿಸಿದೆ. ಒಂದು ಮೊಟ್ಟೆ ಅಥವಾ ಬಾಳೆಹಣ್ಣಿಗೆ ₹6 ನಿಗದಿ ಮಾಡಲಾಗಿದೆ. 2024–25ನೇ ಸಾಲಿನಲ್ಲಿ 51.96 ಲಕ್ಷ ಮಕ್ಕಳು ಪ್ರಯೋಜನ ಪಡೆಯುತ್ತಿದ್ದಾರೆ.

ಕಲ್ಯಾಣ ಕರ್ನಾಟಕ ರಾಷ್ಟ್ರೀಯ ಸಾಹಿತ್ಯೋತ್ಸವದಲ್ಲಿ ಬರಗೂರು

'ಹೆಚ್ಚುತ್ತಿರುವ ಮತೀಯತೆ, ಉನ್ಮಾದ'

ಪ್ರಜಾವಾಣಿ ವಾರ್ತೆ

ಕಲಬುರಗಿ: 'ದೇಶದಲ್ಲಿ ಇಂದು ಸಾರ್ವಜನಿಕ ಬದುಕು ಕಲುಷಿತವಾಗಿರುವ ಸಂದರ್ಭದಲ್ಲಿ ನಾವಿದ್ದೇವೆ. ನಮ್ಮಲ್ಲಿ ವಿವೇಕದ ಜಾಗದಲ್ಲಿ ಉದ್ರೇಕ ಹೆಚ್ಚಾಗಿದೆ. ಸಂವಾದದ ಜಾಗವನ್ನು ಉನ್ಮಾದ ನುಂಗಿಹಾಕುತ್ತಿದೆ' ಎಂದು ಸಾಹಿತಿ ಪ್ರೊ.ಬರಗೂರು ರಾಮಚಂದ್ರಪ್ಪ ಕಳವಳ ವ್ಯಕ್ತಪಡಿಸಿದರು.

ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆ, ಪಾಲಿ ಮತ್ತು ಬೌದ್ಧ ಅಧ್ಯಯನ ಸಂಸ್ಥೆಯ ಕನ್ನಡ ಭಾಷಾಭಿವೃದ್ಧಿ ಯೋಜನೆಯಡಿ ವಿ.ವಿ.ಯ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಆಯೋಜಿಸಿದ್ದ ಎರಡು ದಿನಗಳ 'ಕಲ್ಯಾಣ ಕರ್ನಾಟಕ ರಾಷ್ಟ್ರೀಯ ಸಾಹಿತ್ಯೋತ್ಸವ'ಕ್ಕೆ ಸೋಮವಾರ ಚಾಲನೆ ನೀಡಿ ಅವರು ಮಾತನಾಡಿದರು.

'ನಾವು ಶತಶತಮಾನಗಳಿಂದ ಮಾನವೀಯ ಮೌಲ್ಯಗಳನ್ನು ಪ್ರತಿಪಾದಿ ಸುತ್ತಾ ಬಂದಿದ್ದೇವೆ. ಆದರೆ, ಮಾನವೀಯತೆಯ ಜಾಗವನ್ನು ಇಂದು ಮತೀಯತೆ ಆಕ್ರಮಿಸಿಕೊಂಡಿದೆ. ಇಂತಹ ವಿಪರ್ಯಾಸದ ಪಲ್ಲಟಗಳ ಮಧ್ಯೆ ಸಂವಾದ ಬಹಳ ಮುಖ್ಯವಾಗಿದೆ. ಸಾರ್ವಜನಿಕ ಜೀವನದಲ್ಲಿ ಮಾತು ತನ್ನ ಅರ್ಥ ಕಳೆದುಕೊಳ್ಳುತ್ತಿದೆ. ವಾಚ್ಯವೇ ವೇದವಾಕ್ಯ ಎಂಬ ಪರಿಸ್ಥಿತಿ ಬಂದಿದೆ. ಮಾತಿಗೊಂದು ಧ್ವನಿಶಕ್ತಿ, ವ್ಯಂಗ್ಯಾರ್ಥ ಇರುತ್ತದೆ. ಆದರೆ, ಸಂದರ್ಭವನ್ನು ತಪ್ಪಿಸಿ ಒಂದು ಮಾತನ್ನು ಹೇಗೆ ಬೇಕಾದರೂ ಅಪವ್ಯಾಖ್ಯಾನ ಮಾಡುವ ಪರಿಸ್ಥಿತಿಯಲ್ಲಿ ನಾವಿದ್ದೇವೆ' ಎಂದರು.

ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ಸೋಮವಾರ ನಡೆದ ಕಲ್ಯಾಣ ಕರ್ನಾಟಕ ರಾಷ್ಟ್ರೀಯ ಸಾಹಿತ್ಯೋತ್ಸಕ್ಕೆ ಸಾಹಿತಿ ಪ್ರೊ.ಬರಗೂರು ರಾಮಚಂದ್ರಪ್ಪ ಚಾಲನೆ ನೀಡಿದರು. ಗುಲಬರ್ಗಾ ವಿ.ವಿ. ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕ ಪ್ರೊ.ಎಚ್‌.ಟಿ.ಪೋತೆ, ಸಿಂಡಿಕೇಟ್ ಸದಸ್ಯ ಮಲ್ಲಣ್ಣ ಮಡಿವಾಳ, ಪ್ರಭಾರ ಕುಲಸಚಿವ ಪ್ರೊ.ರಮೇಶ ಲಂಡನಕರ್, ಪ್ರಭಾರ ಕುಲಪತಿ ಪ್ರೊ.ಜಿ.ಶ್ರೀರಾಮುಲು, ಸಾಹಿತಿ ಜ.ನಾ. ತೇಜಶ್ರೀ, ಮೌಲ್ಯಮಾಪನ ಕುಲಸಚಿವೆ ಪ್ರೊ.ಮೇಧಾವಿನಿ ಕಟ್ಟಿ ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ

'ಭಿನ್ನಾಭಿಪ್ರಾಯಗಳ ಮಧ್ಯೆಯೇ ಸಂವಾದ ನಡೆಸುವುದು ಸಾಧ್ಯ ಎನ್ನುವ ವಾತಾವರಣ ಸೃಷ್ಟಿಯಾಗಬೇಕು' ಎಂದು ಆಶಿಸಿದರು.

ಸಾಹಿತಿ ಜ.ನಾ.ತೇಜಶ್ರೀ ಮಾತನಾಡಿ,'ಮೂರು ದಶಕಗಳ ಹಿಂದೆ ನಡೆದ ದಲಿತ, ರೈತ ಚಳವಳಿಯನ್ನು ಹತ್ತಿರದಿಂದ ಗಮನಿಸಿದ್ದೆ. ಜಾತಿ ವ್ಯವಸ್ಥೆ ಹೊರಟು ಹೋಗಿದೆ ಎಂದುಕೊಂಡಿದ್ದೆ. ಆದರೆ, ಹಾಗೆ ಆಗಿಲ್ಲ. ಇತ್ತೀಚೆಗಷ್ಟೇ ಬುಲೆಟ್ ಬೈಕ್ ಓಡಿಸುತ್ತಿದ್ದ ದಲಿತ ಯುವಕನ ಕೈಯನ್ನು ಸವರ್ಣೀಯರು ಕತ್ತರಿಸಿ ಹಾಕಿದ ಘಟನೆ ನಡೆದಿದೆ. ದಿನೇ ದಿನೇ ಜಾತಿಯ ಸ್ವರೂಪಗಳು ಬದಲಾಗುತ್ತಿವೆ; ಬಿಗಿಯಾಗುತ್ತಿವೆ' ಎಂದು ಕಳವಳ ವ್ಯಕ್ತಪಡಿಸಿದರು.

ಸಾಮಾಜಿಕ ಸಮೂಹಸನ್ನಿಯು ಜನರಿಗೆ ಯೋಚನೆ ಮಾಡುವುದಕ್ಕೆ ಸಾಧ್ಯವಿಲ್ಲದ ವಾತಾವರಣ ಸೃಷ್ಟಿಸುತ್ತಿದೆ. ಮನುಷ್ಯ ಮನುಷ್ಯರ ನಡುವೆ ವಿಷಗೋಡೆಗಳನ್ನು ನಿರ್ಮಿಸುತ್ತಿದೆ

ಪ್ರೊ.ಬರಗೂರು ರಾಮಚಂದ್ರಪ್ಪ, ಸಾಹಿತಿ

'ಒಂದು ಸಣ್ಣ ಕವಿಗೋಷ್ಠಿಗೂ ಭಾರಿ ಲಾಬಿ ಮಾಡಿ ತಮ್ಮವರಿಗೆ ಅವಕಾಶ ಕೊಡಿ ಎಂದು ಗೋಗರೆಯುತ್ತಾರೆ. ಹೀಗೆ ಮಾಡುವುದು ತಪ್ಪಲ್ಲ. ಆದರೆ, ಅದನ್ನು ಮಾಡುವಾಗ ತಮ್ಮ ಆತ್ಮಗೌರವವನ್ನು ಒತ್ತೆ ಇಡುತ್ತೇನೆ ಎಂಬ ಪ್ರಜ್ಞೆ ಹೊಳೆಯುವುದಿಲ್ಲವೇ? ಚಿಕ್ಕ ಚಿಕ್ಕ ಲಾಬಿಗಳು ಸೇರಿ ದೊಡ್ಡ ಅಪಾಯಗಳನ್ನು ಮೈಮೇಲೆ ಎಳೆದುಕೊಳ್ಳುತ್ತಿದ್ದೇವೆ' ಎಂದರು.

ಸಮ್ಮೇಳನದ ಸಂಘಟಕರೂ ಆದ ಗುಲಬರ್ಗಾ ವಿ.ವಿ. ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕ ಪ್ರೊ.ಎಚ್‌.ಟಿ.ಪೋತೆ ಮಾತನಾಡಿ, 'ಸೂಫಿಗಳು, ಶರಣರು, ತತ್ವಪದಕಾರರು ನಡೆದಾಡಿದ, ಕವಿರಾಜಮಾರ್ಗ ಕೃತಿ ಸೃಷ್ಟಿಯಾದ ಕಲ್ಯಾಣ ಕರ್ನಾಟಕದಲ್ಲಿ ಹೊಸ ಸಾಹಿತ್ಯ ಚಿಂತನೆ ಮೂಡಲಿ ಎಂಬ ಉದ್ದೇಶದಿಂದ ಈ ಸಾಹಿತ್ಯೋತ್ಸವವನ್ನು ಸಂಘಟಿಸಲಾಗಿದೆ' ಎಂದು ಹೇಳಿದರು.

ಗುಲಬರ್ಗಾ ವಿ.ವಿ. ಪ್ರಭಾರ ಕುಲಪತಿ ಪ್ರೊ.ಜಿ.ಶ್ರೀರಾಮುಲು ಅಧ್ಯಕ್ಷತೆ ವಹಿಸಿದ್ದರು.

ಎನ್‌ಜಿಟಿಗೆ ವರದಿ ಸಲ್ಲಿಸಿದ ಕಂದಾಯ ಇಲಾಖೆ • 31,231 ಚ.ಕಿ.ಮೀ. ವ್ಯಾಪ್ತಿಯಲ್ಲಿ ಭೂಕುಸಿತದ ಆತಂಕ

ಭೂಕುಸಿತ: 8 ಜಿಲ್ಲೆಗಳಿಗೆ ಆಪತ್ತು

• ಮಂಜುನಾಥ್ ಹೆಬ್ಬಾರ್

ನವದೆಹಲಿ: ಕರ್ನಾಟಕದ ಪಶ್ಚಿಮ ಘಟ್ಟದ ತಪ್ಪಲಿನ ಎಂಟು ಜಿಲ್ಲೆಗಳ 31,231 ಚದರ ಕಿ.ಮೀ. ಪ್ರದೇಶವು ಭೂಕುಸಿತದ ಆಪತ್ತನ್ನು ಎದುರಿಸುತ್ತಿದೆ. ಈ ಜಿಲ್ಲೆಗಳ ಶೇ 53ರಷ್ಟು ಪ್ರದೇಶವು ಭೂಕುಸಿತದ ಸಂಭಾವ್ಯ ವಲಯದ ವ್ಯಾಪ್ತಿಯಲ್ಲಿದೆ.

ಭಾರತೀಯ ಭೂವೈಜ್ಞಾನಿಕ ಸರ್ವೇಕ್ಷಣೆ ಸಂಸ್ಥೆಯ ವಿವಿಧ ವರದಿಗಳನ್ನು ಆಧರಿಸಿ ಕಂದಾಯ ಇಲಾಖೆಯ ವಿಪತ್ತು ನಿರ್ವಹಣಾ ವಿಭಾಗವು ಈ ಬಗ್ಗೆ ವರದಿ ಸಿದ್ಧಪಡಿಸಿ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಗೆ (ಎನ್‌ಜಿಟಿ) ಸಲ್ಲಿಸಿದೆ. ಕಳೆದ ವರ್ಷ ಮಳೆಗಾಲದಲ್ಲಿ ಸಂಭವಿಸಿದ ಶಿರೂರು, ಮಂಗಳೂರು–ಬೆಂಗಳೂರು ಹೆದ್ದಾರಿಯಲ್ಲಿನ ಭೂಕುಸಿತಗಳೇನು ಕಾರಣಗಳೇನು, ರಾಜ್ಯ ಸರ್ಕಾರ ಕೈಗೆತ್ತಿಕೊಂಡಿರುವ ಅಲ್ಪಾವಧಿ ಹಾಗೂ ದೀರ್ಘಾವಧಿ ಪರಿಹಾರ ಕ್ರಮಗಳ ಬಗ್ಗೆ ವಿವರಣೆ ನೀಡಲಾಗಿದೆ. ಭೂಕುಸಿತದ ಬಗ್ಗೆ ನಡೆದಿರುವ ಹಲವು ಅಧ್ಯಯನಗಳು, ಗುಡ್ಡಗಳು ಕುಸಿದು ಬೀಳಲು ಕಾರಣಗಳೇನು ಎಂಬುದನ್ನು ಪಟ್ಟಿ ಮಾಡಿರುವುದಲ್ಲದೇ, ಅದಕ್ಕೆ ಪರಿಹಾರೋಪಾಯಗಳೇನು ಎಂಬುದರ ಬಗ್ಗೆ ಉಲ್ಲೇಖಿಸಲಾಗಿದೆ.

2024ರ ಜುಲೈ ತಿಂಗಳಲ್ಲಿ ಉತ್ತರ ಕನ್ನಡ ಜಿಲ್ಲೆಯ ಶಿರೂರಿನಲ್ಲಿ ಸಂಭವಿಸಿದ ಗುಡ್ಡ ಕುಸಿತದಲ್ಲಿ 11 ಮಂದಿ ಬಲಿಯಾಗಿದ್ದರು. ಮಾಧ್ಯಮ ವರದಿಗಳ ಆಧಾರದಲ್ಲಿ ಎನ್‌ಜಿಟಿ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿತ್ತು. ಕಂದಾಯ ಇಲಾಖೆಗೆ ನೋಟಿಸ್ ನೀಡಿದ್ದ ಪೀಠವು, ದುರ್ಘಟನೆ ಬಗ್ಗೆ ವರದಿ ಸಲ್ಲಿಸುವಂತೆ ತಾಕೀತು ಮಾಡಿತ್ತು.

ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ, ಕೊಡಗು ಸೇರಿದಂತೆ ಎಂಟು ಜಿಲ್ಲೆಗಳಲ್ಲಿ ಒಟ್ಟು ಪ್ರದೇಶ 58,766 ಚದರ ಕಿ.ಮೀ. ಇದೆ. ಇದರಲ್ಲಿ ಕೊಡಗಿನಲ್ಲಿ ಶೇ 96, ದಕ್ಷಿಣ ಕನ್ನಡದಲ್ಲಿ ಶೇ 94 ಹಾಗೂ ಉತ್ತರ ಕನ್ನಡದಲ್ಲಿ ಶೇ 81ರಷ್ಟು ಪ್ರದೇಶವು ಭೂಕುಸಿತದ ಸಂಭವನೀಯ ವಲಯದಲ್ಲಿದೆ. ರಾಜ್ಯದಲ್ಲಿ 2006ರಿಂದ 2023ರವರೆಗೆ 1,405 ಭೂಕುಸಿತ ಪ್ರಕರಣಗಳು ಸಂಭವಿಸಿದೆ. ರಾಷ್ಟ್ರೀಯ ಹೆದ್ದಾರಿಗಳಲ್ಲೇ 360 ಪ್ರಕರಣಗಳು ಘಟಿಸಿವೆ. ಈ ದುರ್ಘಟನೆಗಳಲ್ಲಿ 98 ಜನರು ಮೃತಪಟ್ಟಿದ್ದಾರೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಭೂಕುಸಿತದ ಅಪಾಯ ಎಲ್ಲೆಲ್ಲಿ

ಜಿಲ್ಲೆ	ವಿಸ್ತೀರ್ಣ (ಚದರ ಕಿ.ಮೀ)	ಭೂಕುಸಿತ ಸಂಭಾವ್ಯ ವಲಯ			ಒಟ್ಟು (ಚದರ ಕಿ.ಮೀ)	ಶೇ
		ಕಡಿಮೆ	ಸಾಧಾರಣ	ಗರಿಷ್ಠ		
ಉತ್ತರ ಕನ್ನಡ	10291	6413	1664	311	8390	81.53
ಶಿವಮೊಗ್ಗ	8,495	4033	705	59	4797	56.48
ದಕ್ಷಿಣ ಕನ್ನಡ	4,866	3767	704	146	4618	94.90
ಚಿಕ್ಕಮಗಳೂರು	7,201	3481	952	203	4637	64.40
ಕೊಡಗು	4,102	3008	671	277	3957	96.47
ಉಡುಪಿ	3,582	1592	404	84	2081	58.11
ಹಾಸನ	6,814	1216	165	53.6	1435	21.00
ಬೆಳಗಾವಿ	13,415	1169	116	26	1312	09.78
ಒಟ್ಟು	58,766	24,682	5,385	1,163	31,231	53.14

ಆಧಾರ: ಭಾರತೀಯ ಭೂವೈಜ್ಞಾನಿಕ ಸರ್ವೇಕ್ಷಣೆ ಸಂಸ್ಥೆ

ಭೂಕುಸಿತ ಘಟನೆಗಳು (2006ರಿಂದ)

ಒಟ್ಟು 1,403 ಘಟನೆ, 98 ಸಾವು

ಜಿಲ್ಲೆ	ಘಟನೆ	ಸಾವು
ಬೆಳಗಾವಿ	2	
ಚಿಕ್ಕಮಗಳೂರು	260	
ದಕ್ಷಿಣ ಕನ್ನಡ	166	11
ಹಾಸನ	30	
ಕೊಡಗು	188	53
ಶಿವಮೊಗ್ಗ	79	
ಉಡುಪಿ	69	
ಉತ್ತರ ಕನ್ನಡ	609	34

ಪ್ರವಾಗ್ರಾಫಿಕ್ಸ್: ಶಶಿಕಿರಣ್ ದೇಸಾಯಿ

ರಾಜ್ಯದಲ್ಲಿ ಭೂಕುಸಿತಕ್ಕೆ ಪ್ರಮುಖ ಕಾರಣಗಳು

- ಭಾರಿ ಪ್ರಮಾಣದಲ್ಲಿ ಹಾಗೂ ದೀರ್ಘಾವಧಿಗೆ ಸುರಿಯುವ ಮಳೆ
- ನೈಸರ್ಗಿಕ ಇಳಿಜಾರುಗಳ ಮಾರ್ಪಾಡು
- ಅವೈಜ್ಞಾನಿಕ ಅಭಿವೃದ್ಧಿ ಕಾಮಗಾರಿಗಳು
- ಅರಣ್ಯ ನಾಶ, ಭೂಸವಕಳಿ
- ನೀರಿನ ಸಹಜ ಹರಿವಿಗೆ ತಡೆ
- ಅಣೆಕಟ್ಟು ನಿರ್ಮಾಣದಿಂದಾಗಿ ನಾಲೆಗಳಲ್ಲಿ ತಾತ್ಕಾಲಿಕ ಹಠಾತ್ ಪ್ರವಾಹ
- ನದಿಗಳಿಗೆ ಅಡೆಚಣೆ
- ಇಳಿಜಾರಿನ ಒಳಭಾಗದಲ್ಲಿ ಅತಿ ವೇಗವಾಗಿ ನೀರು ಹರಿಯುವುದು
- ಭೂವಿಜ್ಞಾನಕ್ಕೆ ಸಂಬಂಧಿಸಿದ ಕಾರಣಗಳು

ಮೂರು ಜಿಲ್ಲೆಗಳಲ್ಲಿ ಗರಿಷ್ಠ

ದಕ್ಷಿಣ ಕನ್ನಡ : 2009, 2020, 2022

ಕೊಡಗು : 2006, 2011, 2018, 2019, 2020

ಉತ್ತರ ಕನ್ನಡ : 2009, 2010, 2021, 2022, 2024

ಹೆದ್ದಾರಿಯಲ್ಲಿ ಭೂಕುಸಿತ ಪ್ರಕರಣಗಳು

ಮಂಗಳೂರು–ಗೋವಾ (ಎನ್‌ಎಚ್ 66)	61
ಮಂಗಳೂರು–ಹಾಸನ (ಎನ್‌ಎಚ್ 75)	23
ಮಂಗಳೂರು–ಮೂಡಿಗೆರೆ (ಎನ್‌ಎಚ್ 73)	98
ಮಂಗಳೂರು–ಶಿವಮೊಗ್ಗ (ಎನ್‌ಎಚ್ 73)	30
ಹೊನ್ನಾವರ–ಶಿವಮೊಗ್ಗ (ಎನ್‌ಎಚ್ 69)	56
ಅಂಕೋಲಾ–ಯಲ್ಲಾಪುರ (ಎನ್‌ಎಚ್ 52)	19
ಮಂಗಳೂರು–ಮಡಿಕೇರಿ (ಎನ್‌ಎಚ್ 275)	82

ಬಿ.ಆರ್. ಪಾಟೀಲ ಯೋಜನಾ ಆಯೋಗದ ಉಪಾಧ್ಯಕ್ಷ

ಪ್ರಜಾವಾಣಿ ವಾರ್ತೆ

ಬಿ.ಆರ್. ಪಾಟೀಲ

ಬೆಂಗಳೂರು: ಮುಖ್ಯಮಂತ್ರಿಯ ರಾಜಕೀಯ ಸಲಹೆಗಾರ ಹುದ್ದೆಗೆ ರಾಜೀನಾಮೆ ನೀಡಿದ್ದ ಅಳಂದ ಕ್ಷೇತ್ರದ ಕಾಂಗ್ರೆಸ್ ಶಾಸಕ ಬಿ.ಆರ್. ಪಾಟೀಲ ಅವರನ್ನು ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷರನ್ನಾಗಿ ನೇಮಿಸಲಾಗಿದೆ.

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯು ಈ ಕುರಿತು ಸೋಮವಾರ ಅಧಿಸೂಚನೆ ಹೊರಡಿಸಿದೆ. ಬಿ.ಆರ್. ಪಾಟೀಲ ಅವರಿಗೆ ಸಚಿವ ಸಂಪುಟ ದರ್ಜೆಯ ಸ್ಥಾನಮಾನ ಮತ್ತು ಎಲ್ಲ ಸೌಲಭ್ಯಗಳನ್ನು ನೀಡಲಾಗುವುದು ಎಂದೂ ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ಹಿರಿಯ ಶಾಸಕರಾಗಿದ್ದರೂ ಸರ್ಕಾರದಲ್ಲಿ ಯಾವುದೇ ಸ್ಥಾನಮಾನ ಸಿಕ್ಕಿಲ್ಲ ಎಂಬ ಕಾರಣಕ್ಕೆ ಬಿ.ಆರ್. ಪಾಟೀಲ ಅಸಮಾಧಾನಗೊಂಡಿದ್ದರು. ಹೀಗಾಗಿ ಅವರಿಗೆ ಮುಖ್ಯಮಂತ್ರಿ ರಾಜಕೀಯ ಸಲಹೆಗಾರ (ನೀತಿ ಮತ್ತು ಕಾರ್ಯಕ್ರಮ) ಹುದ್ದೆ ನೀಡಲಾಗಿತ್ತು.

ಆ ಹುದ್ದೆಗೆ ಫೆ. 1ರಂದು ರಾಜೀನಾಮೆ ನೀಡಿದ್ದ ಅವರು, 'ರಾಜ್ಯದಲ್ಲಿನ ನಮ್ಮ ಸರ್ಕಾರದ ಆಡಳಿತ ವೈಖರಿಯಿಂದ ಬೇಸರವಾಗಿದ್ದು, ಶಾಸಕಾಂಗ ಸಭೆಯಲ್ಲಿಯೂ ಮಾತನಾಡಲು ಅವಕಾಶ ಸಿಗುತ್ತಿಲ್ಲ. ಇದರಿಂದಾಗಿ ಕಾಟಾಚಾರಕ್ಕೆ ಇರುವ ಹುದ್ದೆಗೆ ರಾಜೀನಾಮೆ ಸಲ್ಲಿಸಿದ್ದೇನೆ' ಎಂದಿದ್ದರು.

ಕೆಪಿಎಸ್‌ಸಿ ರದ್ದತಿಗೆ ಆಗ್ರಹ

ಪ್ರಜಾವಾಣಿ ವಾರ್ತೆ


ಡಿ.ವಿ. ಸದಾನಂದ ಗೌಡ

ಬೆಂಗಳೂರು: ಈಗ ಇರುವ ಕರ್ನಾಟಕ ಲೋಕಸೇವಾ ಆಯೋಗವನ್ನೇ (ಕೆಪಿಎಸ್‌ಸಿ) ರದ್ದುಗೊಳಿಸಿ, ಪಾರದರ್ಶಕ ಮತ್ತು ಜವಾಬ್ದಾರಿಯುತ ಹೊಸ ಆಯೋಗ ರಚಿಸಬೇಕು ಎಂದು ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದ ಗೌಡ ಒತ್ತಾಯಿಸಿದ್ದಾರೆ.

ಆಯೋಗ ನಡೆಸುವ ನೇಮಕಾತಿ ಪರೀಕ್ಷೆಗಳ ಅವ್ಯವಸ್ಥೆ, ಅಕ್ರಮಗಳ ಫಲವಾಗಿ ಪ್ರತಿಭಾವಂತ ವಿದ್ಯಾರ್ಥಿಗಳ ಭವಿಷ್ಯಕ್ಕೆ ಪೆಟ್ಟು ಬೀಳುತ್ತಿದೆ. ಕನ್ನಡ ಅನುವಾದದ ದೋಷಗಳಿಂದಾಗಿ ಈಚೆಗೆ ನಡೆದ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಯ ಪೂರ್ವಭಾವಿ ಪರೀಕ್ಷೆಯಲ್ಲಿ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳಿಗೆ ಅನ್ಯಾಯವಾಗಿದೆ. ಹಿಂದೆ ನಡೆದ ಹಲವು ಪರೀಕ್ಷೆಗಳ ಅಕ್ರಮದಿಂದಾಗಿ ಪ್ರತಿಭಾವಂತರು ಅವಕಾಶ ವಂಚಿತರಾಗಿದ್ದಾರೆ ಎಂದು ದೂರಿದ್ದಾರೆ.

ಈ ಎಲ್ಲ ಗೊಂದಲಗಳಿಗೆ ಸರ್ಕಾರವೇ ಹೊಣೆ. ಕೆಪಿಎಸ್‌ಸಿ ದೋಷಗಳನ್ನು ತಿದ್ದುತ್ತೇವೆ. ಸರಿಪಡಿಸುತ್ತೇವೆ ಎನ್ನುವ ಭರವಸೆಗಳನ್ನು ಈಡೇರಿಸುವ ಪ್ರಯತ್ನವನ್ನು ಸರ್ಕಾರ ಮಾಡಿಲ್ಲ. ಅವ್ಯವಸ್ಥೆ, ಆಡಳಿತ ವೈಫಲ್ಯ ಸರಿಯಾಗುತ್ತಿಲ್ಲ. ಆಯೋಗವನ್ನು ಮುಂದುವರಿಸುವುದರಲ್ಲಿ ಅರ್ಥವೇ ಇಲ್ಲ. ರಾಜಕೀಯ ನೆಲೆಯ ಆಧಾರದಲ್ಲಿ ನೇಮಕವಾಗುವವರಿಂದ ಇಂತಹ ವಿಫಲತೆ ಸಹಜ ಎಂದು ಆರೋಪಿಸಿದ್ದಾರೆ.

ಪರೀಕ್ಷಾ ವ್ಯವಸ್ಥೆಯಲ್ಲಿ ಲೋಪ ಎಸಗುವ, ಅಕ್ರಮ ನಡೆಸುವ ಪ್ರಕರಣಗಳನ್ನು ನ್ಯಾಯಾಂಗ ತನಿಖೆಗೆ ಒಳಪಡಿಸಬೇಕು. ವೈಫಲ್ಯಕ್ಕೆ ಕಾರಣರಾದವರನ್ನು ಪತ್ತೆ ಹಚ್ಚಿ ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಪಂಚಾಯಿತಿ ಮೀಸಲು ಮೇ ಅಂತ್ಯಕ್ಕೆ ಸಿದ್ಧ

ಒಂದನೇ ಪುಟದಿಂದ...

ಇದಕ್ಕೆ ಪ್ರತಿಕ್ರಿಯಿಸಿದ ಚುನಾವಣಾ ಆಯೋಗದ ಪರ ಪದಾಂಕಿತ ಹಿರಿಯ ವಕೀಲ ಕೆ.ಎನ್.ಫಣೀಂದ್ರ, 'ಸರ್ಕಾರ ತನ್ನ ವಾಗ್ದಾನಕ್ಕೆ ತಕ್ಕಂತೆ ನಡೆದುಕೊಳ್ಳದೇ ಇದ್ದರೆ ನ್ಯಾಯಾಂಗ ನಿಂದನೆ ಅರ್ಜಿ ಮುಂದುವರಿಸುವ ಸ್ವಾತಂತ್ರ್ಯವನ್ನು ಆಯೋಗಕ್ಕೆ ನೀಡಬೇಕು' ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

ವಾದ-ಪ್ರತಿವಾದ ದಾಖಲಿಸಿಕೊಂಡ ನ್ಯಾಯಪೀಠ, 'ಸರ್ಕಾರ ಈಗ ನೀಡಿರುವ ಮೌಖಿಕ ಮುಚ್ಚಳಿಕೆ ಅನುಸಾರ ನಡೆದುಕೊಳ್ಳದೇ ಹೋದರೆ, ಚುನಾವಣಾ ಆಯೋಗವು ನ್ಯಾಯಾಂಗ ನಿಂದನೆ ಅರ್ಜಿ ಮುಂದುವರಿಸುವ ಸ್ವಾತಂತ್ರ್ಯ ಹೊಂದಿರುತ್ತದೆ' ಎಂಬ ಅಭಿಪ್ರಾಯ ವ್ಯಕ್ತಪಡಿಸಿ ಅರ್ಜಿಗಳನ್ನು ವಿಲೇವಾರಿ ಮಾಡಿತು.

₹5 ಲಕ್ಷ ದಂಡ: 'ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿ ಕ್ಷೇತ್ರಗಳಿಗೆ 12 ವಾರಗಳಲ್ಲಿ ಮೀಸಲಾತಿ ಪ್ರಕಟಿಸಲಾಗುವುದು' ಎಂದು ಸರ್ಕಾರ 2023ರ ಡಿಸೆಂಬರ್ 19ರಂದು ಹೈಕೋರ್ಟ್‌ಗೆ ಭರವಸೆ ನೀಡಿತ್ತು. 'ಇದನ್ನು ಪಾಲನೆ ಮಾಡಿಲ್ಲ' ಎಂದು ರಾಜ್ಯ ಚುನಾವಣಾ ಆಯೋಗವು ರಾಜ್ಯ ಸರ್ಕಾರದ ವಿರುದ್ಧ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸಿತ್ತು.

ಇದಕ್ಕೂ ಮೊದಲು ಹೈಕೋರ್ಟ್, 'ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಗಳಿಗೆ ಚುನಾವಣೆ ನಡೆಸುವುದಕ್ಕೆ ಕ್ಷೇತ್ರಗಳ ಪುನರ್ ವಿಂಗಡಣೆ ಮತ್ತು ಹಿಂದುಳಿದ ವರ್ಗಗಳೂ ಸೇರಿದಂತೆ ಇತರೆ ಸಮುದಾಯಗಳಿಗೆ ಕಾಲಮಿತಿಯಲ್ಲಿ ಮೀಸಲಾತಿ ನಿಗದಿಪಡಿಸಲು ವಿಫಲವಾಗಿದೆ' ಎಂದು ರಾಜ್ಯ ಸರ್ಕಾರಕ್ಕೆ 2020ರ ಡಿಸೆಂಬರ್‌ನಲ್ಲಿ ₹5 ಲಕ್ಷ ದಂಡ ವಿಧಿಸಿತ್ತು.

2021ರ ಏಪ್ರಿಲ್, ಮೇ ಮತ್ತು ಜೂನ್ ತಿಂಗಳಲ್ಲಿ ಅವಧಿ ಪೂರ್ಣಗೊಂಡ ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿಗಳಿಗೆ ಚುನಾವಣೆ ನಡೆಸಲು ಸಿದ್ಧತೆ ಆರಂಭಿಸಿದ್ದ ಚುನಾವಣಾ ಆಯೋಗವು ಕ್ಷೇತ್ರ ಪುನರ್‌ವಿಂಗಡಣೆ ಮಾಡಿ ಮತದಾರರ ಅಂತಿಮ ಪಟ್ಟಿ ಹಾಗೂ ಮೀಸಲಾತಿ ಕರಡನ್ನು ಪ್ರಕಟಿಸಿತ್ತು. ಆದರೆ, ಸರ್ಕಾರ ಏಕಾಏಕಿ ಕ್ಷೇತ್ರ ಪುನರ್ ವಿಂಗಡಣೆ ಮತ್ತು ಮೀಸಲಾತಿ ಅಧಿಕಾರವನ್ನು ಚುನಾವಣಾ ಆಯೋಗದಿಂದ ಹಿಂಪಡೆದಿತ್ತು. ಇದಕ್ಕಾಗಿ ಪ್ರತ್ಯೇಕ ಸೀಮಾ ನಿರ್ಣಯ ಆಯೋಗ ರಚಿಸಿ ಅದಕ್ಕೆ ಹೊಣೆ ವಹಿಸಿತ್ತು. ಆಯೋಗವು ಈ ಕ್ರಮವನ್ನು ಪ್ರಶ್ನಿಸಿತ್ತು.

ಎರಡು ಅರ್ಜಿಗಳು ಸಲ್ಲಿಕೆ

'ಸರ್ಕಾರ ನಿಗದಿತ ಅವಧಿಯಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಕ್ಷೇತ್ರ ಪುನರ್ ವಿಂಗಡಣೆ ಹಾಗೂ ಮೀಸಲಾತಿ ಪ್ರಕಟಿಸಲು ವಿಫಲವಾಗಿದೆ' ಎಂದು ಆರೋಪಿಸಿ ರಾಜ್ಯ ಚುನಾವಣಾ ಆಯೋಗವು ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸಿತ್ತು. ಅಂತೆಯೇ, 'ನಗರ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನದ ಮೀಸಲಾತಿ ಪ್ರಕಟಿಸಲು ಏಕಸದಸ್ಯ ನ್ಯಾಯಪೀಠದ ಆದೇಶ ಪಾಲಿಸುವಲ್ಲಿಯೂ ಸರ್ಕಾರ ವಿಫಲವಾಗಿದೆ' ಎಂದು 2023ರಲ್ಲಿ ಮತ್ತೊಂದು ಅರ್ಜಿ ಸಲ್ಲಿಸಲಾಗಿತ್ತು.

'ಡಿಕೆಶಿಯಿಂದ ಎಐಸಿಸಿ ಹೆಸರು ದುರ್ಬಳಕೆ'

ನಾನು ಯಾರಿಂದಲೂ ಶಿಸ್ತಿನ ಪಾಠ ಹೇಳಿಸಿಕೊಳ್ಳಬೇಕಿಲ್ಲ: ಸಹಕಾರ ಸಚಿವ ಕೆ.ಎನ್. ರಾಜಣ್ಣ ತಿರುಗೇಟು

ಪ್ರಜಾವಾಣಿ ವಾರ್ತೆ

ಕೆ.ಎನ್. ರಾಜಣ್ಣ

ಬೆಂಗಳೂರು: 'ಎಐಸಿಸಿ ಹೆಸರನ್ನು ಡಿ.ಕೆ. ಶಿವಕುಮಾರ್ ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ' ಎಂದು ಸಹಕಾರ ಸಚಿವ ಕೆ.ಎನ್. ರಾಜಣ್ಣ ಹೇಳಿದರು.

'ಸಿದ್ದರಾಮಯ್ಯನವರ ಹೆಸರನ್ನು ಕೆಲವರು ದುರ್ಬಳಕೆ ಮಾಡಿಕೊಳ್ಳುವುದು ಬೇಡ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭಾನುವಾರ ಹೇಳಿದ್ದರು.

ಅದಕ್ಕೆ ಸೋಮವಾರ ಪ್ರತಿಕ್ರಿಯಿಸಿದ ರಾಜಣ್ಣ, 'ನಾವು ಯಾರ ಹೆಸರನ್ನೂ ದುರ್ಬಳಕೆ ಮಾಡಿಕೊಂಡಿಲ್ಲ. ಅವರು ಎಲ್ಲದಕ್ಕೂ ಎಐಸಿಸಿ ಹೇಳಿದೆ ಎನ್ನುತ್ತಾ ಎಐಸಿಸಿ ಹೆಸರು ದುರ್ಬಳಕೆ ಮಾಡಿಕೊಳ್ಳಬಾರದು' ಎಂದರು.

'ಮುಖ್ಯಮಂತ್ರಿ ಹೆಸರನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ ಎನ್ನುವುದು ಉಪ ಮುಖ್ಯಮಂತ್ರಿಯ ಹೇಳಿಕೆಯಷ್ಟೆ. ಅದು ಎಚ್ಚರಿಕೆ ಅಲ್ಲ. ಎಚ್ಚರಿಕೆ ಗಿಚ್ಚರಿಕೆ ನಡೆಯುವುದಿಲ್ಲ. ನಾನು ಯಾರಿಂದಲೂ ಶಿಸ್ತಿನ ಪಾಠ ಮಾಡಿಸಿಕೊಳ್ಳಬೇಕಿಲ್ಲ. ಆದರೆ, ಎಐಸಿಸಿ ಹೆಸರನ್ನು ಡಿ.ಕೆ. ಶಿವಕುಮಾರ್ ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ ಎಂಬುದು ಆರೋಪ ಅಲ್ಲ, ವಾಸ್ತವ' ಎಂದರು.

ಹೈಕಮಾಂಡ್‌ನಿಂದ ಅಂತಿಮ ನಿರ್ಧಾರ: 'ನಾನು ಸತ್ಪರಿಣಾಮ ಬೀರುವ ವಿಷಯ ಮಾತನಾಡುತ್ತೇನೆಯೇ ಹೊರತು, ದುಷ್ಪರಿಣಾಮ ಬೀರುವುದನ್ನು ಮಾತನಾಡುವುದಿಲ್ಲ. ಪೂರ್ಣಾವಧಿ ಮುಖ್ಯಮಂತ್ರಿ ವಿಚಾರದಲ್ಲಿ ನಾನೇನು ಹಟಕ್ಕೆ ಬಿದ್ದಿಲ್ಲ. ಅಂತಿಮ ನಿರ್ಧಾರ ಹೈಕಮಾಂಡ್ ಮಾಡಲಿದೆ' ಎಂದರು.



ಈಗಷ್ಟೇ ಅಲ್ಲ; ಮುಂದಿನ ಅವಧಿಯಲ್ಲೂ ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿಯಾಗಿ ಇರಬಹುದು. ಮುಖ್ಯಮಂತ್ರಿ ವಿಷಯ ಭವಿಷ್ಯ ನುಡಿಯುವಂಥದ್ದಲ್ಲ. ಎಲ್ಲವೂ ಪಕ್ಷದ ಹೈಕಮಾಂಡ್ ನಿರ್ಧರಿಸುತ್ತದೆ

ಶಿವಾನಂದ ಪಾಟೀಲ, ಸಕ್ಕರೆ ಸಚಿವ

'ಲೋಕಸಭೆ ಚುನಾವಣೆವರೆಗೆ ಡಿ.ಕೆ. ಶಿವಕುಮಾರ್ ಅಧ್ಯಕ್ಷ ಸ್ಥಾನದಲ್ಲಿ ಮುಂದುವರಿಯಲಿದ್ದಾರೆ ಎಂದು ಹೈಕಮಾಂಡ್ ಹೇಳಿತ್ತು. ಆ ಕಾರಣಕ್ಕೆ ಕೇಳಿದ್ದೇವೆ. ಹೆಚ್ಚುವರಿ ಉಪ ಮುಖ್ಯಮಂತ್ರಿ ಹುದ್ದೆ ಸೃಷ್ಟಿಸುತ್ತಿದ್ದರೆ ಲೋಕಸಭೆ ಚುನಾವಣೆಯಲ್ಲಿ ಸಹಾಯ ಆಗುತ್ತಿತ್ತು. ಈಗ ಹೆಚ್ಚುವರಿ ಉಪ ಮುಖ್ಯಮಂತ್ರಿ ಸ್ಥಾನ ಕೇಳುವುದಿಲ್ಲ' ಎಂದರು.

ವೈಯಕ್ತಿಕವಾಗಿ ಏನೂ ಇಲ್ಲ: 'ನನಗೂ ಶಿವಕುಮಾರ್ ಗೂ ವೈಯಕ್ತಿಕವಾಗಿ ಏನೂ ಇಲ್ಲ. ವಿಚಾರ ಭೇದ ಇರಬಹುದು ಅಷ್ಟೆ. ವಿಧಾನಸೌಧಕ್ಕೆ ಒಂದು ರಸ್ತೆಯಲ್ಲಿ ಹೋಗೋಣವೆಂದು ನಾನು ಹೇಳಿದರೆ, ಅವರು ಮತ್ತೊಂದು ರಸ್ತೆಯಲ್ಲಿ ಹೋಗೋಣ ಎನ್ನಬಹುದು. ನಾನು ಅವರು ಸಾಕಷ್ಟು ವರ್ಷಗಳಿಂದ ಸ್ನೇಹಿತರು. ಒಟ್ಟಿಗೆ ವಿದೇಶ ಪ್ರವಾಸ ಮಾಡಿದ್ದೇವೆ' ಎಂದರು.

ಮುಖ್ಯಮಂತ್ರಿ ಬದಲಾವಣೆ ವಿಚಾರವಾಗಿ ಪ್ರತಿಕ್ರಿಯಿಸಿದ ರಾಜಣ್ಣ, 'ಎಲ್ಲರ ಅಭಿಪ್ರಾಯವನ್ನು ಹೈಕಮಾಂಡ್ ಸಂಗ್ರಹಿಸಲೇಬೇಕು. ಏಕಪಕ್ಷೀಯವಾಗಿ ಏನೂ ಮಾಡುವುದಿಲ್ಲ. ನಾವು ತಪ್ಪು ಮಾಡಿದರೆ ಎಚ್ಚರಿಕೆ ಕೊಡಬೇಕು. ನಾವೇನೂ ತಪ್ಪು ಮಾಡಿಲ್ಲ. ಹೈಕಮಾಂಡ್‌ಗೆ ವಿರುದ್ಧವಾಗಿ ಹೋಗುವುದಿಲ್ಲ' ಎಂದರು.

ನಂತರ ಮಾತನಾಡುತ್ತೇನೆ– ಡಿಕೆಶಿ

'ರಾಜಸ್ಥಾನದಲ್ಲಿ ಸಚಿವರ ಸಭೆಗೆ ಅಧಿಕಾರಿಗಳ ಜೊತೆ ಹೋಗುತ್ತಿದ್ದೇನೆ. ಅಲ್ಲಿಂದ ಬಂದ ನಂತರ ಮಾತನಾಡುತ್ತೇನೆ' ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

'ಎಐಸಿಸಿಯನ್ನು ನೀವು ದುರ್ಬಳಕೆ ಮಾಡಿಕೊಳ್ಳುತ್ತಿದ್ದೀರಿ' ಎಂಬ ರಾಜಣ್ಣ ಹೇಳಿಕೆಯ ಬಗ್ಗೆ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಶಿವಕುಮಾರ್, 'ಆ ವಿಷಯದ ಬಗ್ಗೆ ಈಗ ಚರ್ಚೆ ಬೇಡ. ರಾಜಸ್ಥಾನ ಪ್ರವಾಸ ಮುಗಿಸಿ ಬಂದು ಮಾತನಾಡುತ್ತೇನೆ' ಎಂದರು.

ಡಿ.ಕೆ. ಶಿವಕುಮಾರ್

ಜಿ.ಸಿ. ಚಂದ್ರಶೇಖರ್ ವಿರುದ್ಧ ವಾಗ್ದಾಳಿ: 'ಜಿ.ಸಿ. ಚಂದ್ರಶೇಖರ್ ಯಾರು? ಅವರ ಶಕ್ತಿ ಏನಿದೆಯೊ ಅದನ್ನು ಮೀರಿ ಅವರು ಅಧಿಕಾರ ಅನುಭವಿಸುತ್ತಿದ್ದಾರೆ. ಎರಡು ಬಾರಿ ಸಂಸದರಾಗಿ ಪಕ್ಷಕ್ಕೆ ಅವರು ಏನು ಶಕ್ತಿ ಕೊಟ್ಟಿದ್ದಾರೆ. ಏನು, ಎತ್ತ ಎಂದು ಆತ್ಮವಿಮರ್ಶೆ ಮಾಡಿಕೊಂಡು ಅವರು ಮಾತನಾಡಬೇಕು' ಎಂದು ಹೇಳಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿರುವ ಚಂದ್ರಶೇಖರ್ ಅವರು, 'ಬಹಿರಂಗವಾಗಿ ಟೀಕೆ ಮಾಡುವುದು ಸರಿಯಲ್ಲ. ವೇದಿಕೆಯಲ್ಲಿ ಚರ್ಚೆ ಮಾಡಬೇಕು ಶಿಶುಪಾಲ ತಪ್ಪು ಮಾಡುವವರಿಗೆ ಕೃಷ್ಣ ಕಾದಿದ್ದ. ಯಾರೂ ತಪ್ಪು ಮಾಡಬಾರದು' ಎಂದು ಹೇಳಿಕೆ ನೀಡಿದ್ದರು. ಇದಕ್ಕೆ ಪ್ರತಿಕ್ರಿಯಿಸಿದ ರಾಜಣ್ಣ, ಶಿಶುಪಾಲ– ಕೃಷ್ಣ ಪುರಾಣವನ್ನೆಲ್ಲ ನಾನು ನಂಬುವುದಿಲ್ಲ. ಅವೆಲ್ಲ ಕತೆ ಅಷ್ಟೆ. ನಾನೇ ಕೃಷ್ಣ, ಅವರೇ ಶಿಶುಪಾಲ' ಎಂದು ಟೀಕಿಸಿದರು.

ಕಾರವಾರ: ಎನ್‌ಐಎ ತಂಡ ಭೇಟಿ

ಕಾರವಾರ: ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ಹೈದರಾಬಾದ್ ಘಟಕದ 6 ಜನರ ತಂಡವು ಸೋಮವಾರ ಇಲ್ಲಿನ ನಗರ ಪೊಲೀಸ್ ಠಾಣೆಗೆ ಭೇಟಿ ನೀಡಿ, ವಿಷಯ ಸಂಗ್ರಹಿಸಿತು.

'ತಂಡದ ಸದಸ್ಯರು ಠಾಣೆಯಲ್ಲಿ ತನಿಖೆಗೆ ಸಂಬಂಧಿಸಿದ ಮಾಹಿತಿ ಪಡೆದರು' ಎಂದು ಮೂಲಗಳು ತಿಳಿಸಿವೆ. ಆದರೆ, ಯಾವ ತನಿಖೆಯ ಕಾರಣಕ್ಕೆ ತಂಡವು ಭೇಟಿ ನೀಡಿದೆ ಎಂಬುದು ಸ್ಪಷ್ಟವಾಗಿಲ್ಲ.

'ಕದಂಬ ನೌಕಾನೆಲೆಯ ಕೆಲ ರಹಸ್ಯ ಮಾಹಿತಿ ಸೋರಿಕೆಯಾದ ಪ್ರಕರಣಕ್ಕೆ ಸಂಬಂಧಿಸಿ ಕಳೆದ ವರ್ಷದ ಆಗಸ್ಟ್ 28 ರಂದು ತಾಲ್ಲೂಕಿನ ಮುದಗಾ, ತೊಡೂರು ಮತ್ತು ಅಂಕೋಲಾದ ಮೂವರು ಯುವಕರನ್ನು ವಿಚಾರಣೆ ನಡೆಸಿದ್ದ ಎನ್‌ಐಎ ಈಗ ಅದೇ ಪ್ರಕರಣಕ್ಕೆ ಸಂಬಂಧಿಸಿ ತನಿಖೆಗೆ ಬಂದಿರುವ ಸಾಧ್ಯತೆ ಇದೆ' ಎಂದು ಮೂಲಗಳು ತಿಳಿಸಿವೆ.

ಶಕ್ತಿ ಪ್ರದರ್ಶನ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರದಲ್ಲಿ ಸೋಮವಾರ ಬಾಲಕಿ ಲಹರಿ, ಕೂರ್ಮಾಸನದಲ್ಲಿ 200 ಕೆ.ಜಿ ಭಾರದ ಮೂಟೆಗಳನ್ನು ಹೊತ್ತು ನೋಡುಗರನ್ನು ನಿಬ್ಬೆರಗಾಗಿಸಿದಳು – ಪ್ರಜಾವಾಣಿ ಚಿತ್ರ

49 ಕಂಪನಿಗಳು ಬಂದ್?

ಒಂದನೇ ಪುಟದಿಂದ...

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಆರ್ಥಿಕ ಇಲಾಖೆಯ ಕಾರ್ಯದರ್ಶಿ (ವಿತ್ತೀಯ ಸುಧಾರಣೆ) ಆರ್. ವಿಶಾಲ್, 'ನಷ್ಟದಲ್ಲಿರುವ ಮತ್ತು ನಷ್ಟದ ಕಡೆಗೆ ಸಾಗಿರುವ ಉದ್ಯಮಗಳನ್ನು ಲಾಭದ ಕಡೆಗೆ ಕೊಂಡೊಯ್ಯಲು ಅಗತ್ಯವಾದ ಕ್ರಮಗಳನ್ನು ಈಗಾಗಲೇ ತೆಗೆದುಕೊಂಡಿದ್ದರೂ ಕೆಲವು ಉದ್ಯಮಗಳು ಯಶಸ್ಸು ಕಂಡಿಲ್ಲ.

ಲಾಭರಹಿತ ಕಂಪನಿಗಳನ್ನು ಲಾಭದ ಕಡೆಗೆ ಕೊಂಡೊಯ್ಯಲು ರಚನಾತ್ಮಕ ಆಡಳಿತ ಚೌಕಟ್ಟು, ಹಣಕಾಸು ವ್ಯವಸ್ಥೆ ಒದಗಿಸುವ ನಿಟ್ಟಿನಲ್ಲಿ ಸಂಬಂಧಿಸಿದ ಆಡಳಿತ ಇಲಾಖೆಗಳು ಮೇಲ್ವಿಚಾರಣೆ ನಡೆಸಬೇಕಿದೆ. ಈ ಕುರಿತಂತೆ ಮೌಲ್ಯಮಾಪನ ಮಾಡುವಂತೆ ಫೆ. 15ರಂದೇ ಆದೇಶ ಹೊರಡಿಸಲಾಗಿದೆ' ಎಂದರು.

'ಕೆಲವು ಕಂಪನಿಗಳು ತುಂಬ ಹಳೆಯವಾಗಿದ್ದು, ಸುದೀರ್ಘ ಅವಧಿಯಿಂದ ನಷ್ಟದಲ್ಲಿವೆ. ಎಲ್ಲ ಕಂಪನಿಗಳು ಕಂಪನಿ ಕಾಯ್ದೆಯಡಿ ನೋಂದಣಿಯಾಗಿವೆ. ಹೀಗಾಗಿ, ಅವುಗಳನ್ನು ಮುಚ್ಚುವ, ವಿಲೀನಗೊಳಿಸುವ ಮೊದಲು ಕಾಯ್ದೆಯಲ್ಲಿರುವ ನಿಯಮಗಳನ್ನು ಪಾಲಿಸಬೇಕಿದೆ.

ದಿವಾಳಿ ಕಂಪನಿಗಳಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿಯಲ್ಲಿ (ಎನ್‌ಸಿಎಲ್‌ಟಿ) ಅರ್ಜಿ ಸಲ್ಲಿಸಬೇಕಾಗುತ್ತದೆ. ಈ ಕ್ರಮಗಳಿಂದ ಮಾನವ ಸಂಪನ್ಮೂಲ ಮತ್ತು ಕಂಪನಿ ಹೊಂದಿರುವ ಆಸ್ತಿಯ ಸಮರ್ಪಕ ಬಳಕೆ ಸಾಧ್ಯ. ನಿಷ್ಕ್ರಿಯ ಮತ್ತು ಲಾಭದ ಹಳಿಗೆ ತರಲು ಸಾಧ್ಯವೇ ಇಲ್ಲದ ತುಂಬಾ ನಷ್ಟದಲ್ಲಿರುವ ಕಂಪನಿಗಳನ್ನು ಮುಚ್ಚಲು, ಸ್ವಲ್ಪ ಪ್ರಮಾಣದ ನಷ್ಟ ಅಥವಾ ಲಾಭವೂ ಇಲ್ಲದ ನಷ್ಟವೂ ಇಲ್ಲದ ಕಂಪನಿಗೆ ದೊಡ್ಡ ಬಂಡವಾಳ ಹಾಕದೆ ಉತ್ತೇಜನ ನೀಡಲು, ಉತ್ತಮವಾಗಿ ನಡೆಯುವ ಕಂಪನಿಗಳನ್ನು ಇನ್ನಷ್ಟು ಸದೃಢಗೊಳಿಸುವ ಕ್ರಮಗಳನ್ನು ತೆಗೆದುಕೊಳ್ಳಲು ಉದ್ದೇಶಿಸಲಾಗಿದೆ' ಎಂದೂ ಅವರು ವಿವರಿಸಿದರು.

ನಷ್ಟದಲ್ಲಿರುವ 33 ಕಂಪನಿಗಳು

1. ಬೆಸ್ಕಾಂ, **2.** ಚೆಸ್ಕಾಂ, **3.** ಮೈಸೂರು ಕಾಗದ ಕಾರ್ಖಾನೆ, **4.** ಹೆಸ್ಕಾಂ, **5.** ರಾಯಚೂರು ಪವರ್ ಕಾರ್ಪೊರೇಷನ್ ಲಿಮಿಟೆಡ್, **6.** ಕೆಎಸ್‌ಆರ್‌ಟಿಸಿ, **7.** ಬಿಎಂಟಿಸಿ, **8.** ರಾಜೀವ್ ಗಾಂಧಿ ವಸತಿ ನಿಗಮ, **9.** ಜೆಸ್ಕಾಂ **10.** ಕರ್ನಾಟಕ ರಾಜ್ಯ ಜವಳಿ ಮೂಲಸೌಲಭ್ಯ ಅಭಿವೃದ್ಧಿ ನಿಗಮ, **11.** ಆಹಾರ ಕರ್ನಾಟಕ ನಿಯಮಿತ, **12.** ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ನಿಯಮಿತ, **13.** ಶ್ರೀ ಕಂಠೀರವ ಸ್ಟುಡಿಯೊ ನಿಯಮಿತ, **14.** ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್ **15.** ಬೆಂಗಳೂರು ಸಂಯೋಜಿತ ರೈಲು ಮೂಲಸೌಲಭ್ಯ ಅಭಿವೃದ್ಧಿ ಉದ್ಯಮ ನಿಯಮಿತ **16.** ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ **17.** ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, **18.** ಬಾಬು ಜಗಜೀವನ್ ರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ, **19.** ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, **20.** ಮೈಸೂರು ಸಕ್ಕರೆ ಕಂಪನಿ ನಿಯಮಿತ, **21.** ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ, **22.** ಹುಬ್ಬಳ್ಳಿ– ಧಾರವಾಡ ಬಿಆರ್‌ಟಿಎಸ್ ಕಂಪನಿ ಲಿಮಿಟೆಡ್, **23.** ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮ, **24.** ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ, **25.** ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ, **26.** ಎನ್‌ಜಿಇಎಫ್ (ಹುಬ್ಬಳ್ಳಿ), **27.** ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ, **28.** ಕರ್ನಾಟಕ ಗೇರು ಅಭಿವೃದ್ಧಿ ನಿಗಮ, **29.** ದಿ ಮೈಸೂರು ಇಲೆಕ್ಟ್ರಿಕಲ್ ಇಂಡಸ್ಟ್ರೀಸ್ ಲಿಮಿಟೆಡ್, **30.** ಮೆಸ್ಕಾಂ, **31.** ಕರ್ನಾಟಕ ರಾಜ್ಯ ನಿರ್ಮಾಣ ನಿಗಮ, **32.** ಡಿ. ದೇವರಾಜ ಅರಸು ಟ್ರಕ್ ಟರ್ಮಿನಲ್ಸ್ ಲಿಮಿಟೆಡ್. **33.** ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತ

ನಿಷ್ಕ್ರಿಯಗೊಂಡಿರುವ 16 ಕಂಪನಿಗಳು

1. ಕರ್ನಾಟಕ ರಾಜ್ಯ ಆಗ್ರೊ ಕಾರ್ನ್ ಪ್ರಾಡಕ್ಟ್ಸ್, **2.** ಕರ್ನಾಟಕ ಕೃಷಿ ಕೈಗಾರಿಕೆಗಳ ನಿಗಮ ನಿಯಮಿತ, **3.** ಬೆಂಗಳೂರು ವಿಮಾನ ನಿಲ್ದಾಣ ರೈಲು ಸಂಪರ್ಕ ನಿಯಮಿತ, **4.** ಬೆಂಗಳೂರು ಪಿಆರ್‌ಆರ್ ಅಭಿವೃದ್ಧಿ ನಿಗಮ ನಿಯಮಿತ, **5.** ಮೈಸೂರು ತಂಬಾಕು ಕಂಪನಿ ನಿಯಮಿತ, **6.** ಕರ್ನಾಟಕ ಪಲ್ಪ್‌ವುಡ್ ಲಿಮಿಟೆಡ್, **7.** ಕರ್ನಾಟಕ ರಾಜ್ಯ ವೀವರ್ಸ್ ಲಿಮಿಟೆಡ್, **8.** ಮೈಸೂರು ಮ್ಯಾಚ್ ಕಂಪನಿ ಲಿಮಿಟೆಡ್, **9.** ದಿ ಮೈಸೂರು ಲ್ಯಾಂಪ್ ವರ್ಕ್ಸ್ ಲಿಮಿಟೆಡ್, **10.** ಮೈಸೂರು ಕಾಸ್ಮೆಟಿಕ್ಸ್ ಲಿಮಿಟೆಡ್, **11.** ದಿ ಮೈಸೂರು ಕ್ರೋಮ್ ಟ್ಯಾನಿಂಗ್ ಕಂಪನಿ ಲಿಮಿಟೆಡ್, **12.** ಎನ್‌ಜಿಇಎಫ್ ಲಿಮಿಟೆಡ್ (ಬೆಂಗಳೂರು), **13.** ಕರ್ನಾಟಕ ಟೆಲಿಕಾಂ ಲಿಮಿಟೆಡ್, **14.** ದಿ ಮೈಸೂರು ಅಸಿಟೆಡ್ ಆ್ಯಂಡ್ ಕೆಮಿಕಲ್ಸ್ ಕಂಪನಿ ಲಿಮಿಟೆಡ್, **15.** ವಿಜಯನಗರ ಸ್ಟೀಲ್ ಲಿಮಿಟೆಡ್, **16.** ಬೆಂಗಳೂರು ಉಪ ನಗರ ರೈಲು ಕಂಪನಿ ಲಿಮಿಟೆಡ್

ಬಿಡದಿ ಬಳಿಯ ಕೇತಗಾನಹಳ್ಳಿಯಲ್ಲಿ ಸರ್ಕಾರಿ ಜಮೀನು ಒತ್ತುವರಿ ಆರೋಪ

ಎಚ್‌ಡಿಕೆ, ಸಂಬಂಧಿಕರ ಜಮೀನು ಸರ್ವೆ ಶುರು

ಪ್ರಜಾವಾಣಿ ವಾರ್ತೆ

ಬಿಡದಿ (ರಾಮನಗರ): ಇಲ್ಲಿಗೆ ಸಮೀಪದ ಕೇತಗಾನಹಳ್ಳಿಯಲ್ಲಿ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹಾಗೂ ಅವರ ಸಂಬಂಧಿಕರು ಸರ್ಕಾರಿ ಜಮೀನು ಒತ್ತುವರಿ ಮಾಡಿಕೊಂಡಿದ್ದಾರೆ ಎಂಬ ಆರೋಪದ ಬೆನ್ನಲ್ಲೇ ಕಂದಾಯ ಇಲಾಖೆ ಹಾಗೂ ಮಾಪನ ಮತ್ತು ಭೂ ದಾಖಲೆಗಳ ಇಲಾಖೆ ಅಧಿಕಾರಿಗಳು ಸೋಮವಾರ ಜಮೀನಿಗೆ ತೆರಳಿ ಸರ್ವೆ ಕೆಲಸ ಶುರು ಮಾಡಿದರು.

ಕಂದಾಯ ಇಲಾಖೆ, ಮಾಪನ ಮತ್ತು ಭೂ ದಾಖಲೆಗಳ ಇಲಾಖೆ ಹಾಗೂ ವಿಶೇಷ ತನಿಖಾ ತಂಡದ (ಎಸ್‌ಐಟಿ) ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಒಳಗೊಂಡ 10ಕ್ಕೂ ಹೆಚ್ಚು ಮಂದಿಯ ತಂಡ ಕೇತಗಾನಹಳ್ಳಿಗೆ ತೆರಳಿ ಸರ್ವೆ ಕಾರ್ಯ ಆರಂಭಿಸಿದೆ.

'ಮೊದಲಿಗೆ ಡಿ.ಸಿ. ತಮ್ಮಣ್ಣ ಅವರಿಗೆ ಸೇರಿದ ಜಮೀನಿನ ಸರ್ವೆ ಮಾಡಲಾಗುತ್ತಿದೆ. ನಂತರ, ಕುಮಾರಸ್ವಾಮಿ ಹಾಗೂ ಇತರರ ಜಮೀನಿನ ಸರ್ವೆ ಕಾರ್ಯ ನಡೆಯಲಿದೆ' ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

ರಾಮನಗರ ತಾಲ್ಲೂಕಿನ ಬಿಡದಿ ಹೋಬಳಿಯ ಕೇತಗಾನಹಳ್ಳಿಯಲ್ಲಿ ಕಂದಾಯ ಇಲಾಖೆ ಹಾಗೂ ಮಾಪನ ಮತ್ತು ಭೂ ದಾಖಲೆಗಳ ಇಲಾಖೆ ಅಧಿಕಾರಿಗಳು ಸೋಮವಾರ ಸರ್ವೆ ಕೆಲಸ ನಡೆಸಿದ್ದಾರೆ

ಕುಮಾರಸ್ವಾಮಿ ಹಾಗೂ ಅವರ ಸಂಬಂಧಿ ಮಾಜಿ ಸಚಿವ ಡಿ.ಸಿ. ತಮ್ಮಣ್ಣ ಮತ್ತಿತರರು ಕೇತಗಾನಹಳ್ಳಿ ಸುತ್ತಮುತ್ತ 14 ಎಕರೆ ಸರ್ಕಾರಿ ಜಮೀನು ಒತ್ತುವರಿ ಮಾಡಿದ್ದಾರೆ ಎಂದು ಆರೋಪಿಸಿ ಸಮಾಜ ಪರಿವರ್ತನಾ ಸಮುದಾಯದ ಎಸ್.ಆರ್. ಹಿರೇಮಠ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ನ್ಯಾಯಮೂರ್ತಿ ಕೆ.ಸೋಮಶೇಖರ್ ನೇತೃತ್ವದ ವಿಭಾಗೀಯ ಪೀಠ ಜ. 29ರಂದು ಸಿವಿಲ್ ನ್ಯಾಯಾಂಗ ನಿಂದನೆ ಅರ್ಜಿ ವಿಚಾರಣೆ ನಡೆಸಿತ್ತು.

'ಭೂ ಒತ್ತುವರಿ ತೆರವಿಗೆ ಕ್ರಮ ವಹಿಸುವಲ್ಲಿ ನಿರ್ಲಕ್ಷ್ಯ ತೋರುತ್ತಿದ್ದೀರಿ' ಎಂದು ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಠಾರಿಯಾ ಅವರನ್ನು ನ್ಯಾಯಮೂರ್ತಿ ತರಾಟೆಗೆ ತೆಗೆದುಕೊಂಡಿದ್ದರು.

'ಕುಮಾರಸ್ವಾಮಿ ಉನ್ನತ ಹುದ್ದೆಯಲ್ಲಿದ್ದಾರೆ ಎಂದು ನೀವು ಏನೂ ಮಾಡಿಲ್ಲ ತಾನೆ? ನಿಮ್ಮನ್ನು 15 ದಿನ ಜೈಲಿಗೆ ಕಳುಹಿಸಿದರೆ ಎಲ್ಲವೂ ಸರಿ ಹೋಗುತ್ತದೆ' ಎಂದು ಎಚ್ಚರಿಕೆ ನೀಡುವ ಜೊತೆಗೆ, ಕೂಡಲೇ ಸರ್ವೆ ನಡೆಸಿ ಒತ್ತುವರಿ ತೆರವು ಮಾಡುವಂತೆ ಸೂಚಿಸಿದ್ದರು.

ಕೋರ್ಟ್ ತರಾಟೆಯ ಕಾರಣದಿಂದ ಜಮೀನು ಒತ್ತುವರಿ ತನಿಖೆಗೆ ರಾಜ್ಯ ಸರ್ಕಾರವು ಬೆಂಗಳೂರು ವಿಭಾಗ ಪ್ರಾದೇಶಿಕ ಆಯುಕ್ತ ಅಮ್ಲಾನ್ ಆದಿತ್ಯ ಬಿಸ್ವಾಸ್ ನೇತೃತ್ವದಲ್ಲಿ ಉನ್ನತ ಅಧಿಕಾರಿಗಳನ್ನು ಒಳಗೊಂಡ ವಿಶೇಷ ತನಿಖಾ ತಂಡ ರಚಿಸಿತ್ತು. ಫೆ.21ರೊಳಗಾಗಿ ತನಿಖಾ ವರದಿಯನ್ನು ಕೋರ್ಟ್‌ಗೆ ಸಲ್ಲಿಸಲಾಗುವುದು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದ್ದರು.

ಪಾಕ್ ಪ್ರಜೆ ಅಲಿ ವಿರುದ್ಧ ಎಫ್‌ಐಆರ್

ಗುವಾಹಟಿ (ಪಿಟಿಐ): ಭಾರತದ ಆಂತರಿಕ ವಿಚಾರಗಳ ಬಗ್ಗೆ ಸಾಮಾಜಿಕ ಜಾಲತಾಣಗಳ ಮೂಲಕ ಅಭಿಪ್ರಾಯ ದಾಖಲಿಸಿದ್ದ ಪಾಕಿಸ್ತಾನಿ ಪ್ರಜೆ ಅಲಿ ತೌಕೀರ್ ಶೇಖ್ ಅವರ ವಿರುದ್ಧ ಅಸ್ಸಾಂ ಪೊಲೀಸರು ಸೋಮವಾರ ಎಫ್‌ಐಆರ್ ದಾಖಲಿಸಿದ್ದಾರೆ.

ಶೇಖ್ ಅವರು ಕಾಂಗ್ರೆಸ್ ಸಂಸದ ಗೌರವ್ ಗೊಗೊಯಿ ಅವರ ಪತ್ನಿ ಎಲಿಜಬೆತ್ ಕೋಲ್‌ಬರ್ನ್ ಅವರ ಮಾಜಿ ಸಹೋದ್ಯೋಗಿ. ಅಲ್ಲದೆ, ಪಾಕಿಸ್ತಾನದ ಯೋಜನಾ ಆಯೋಗದ ಸಲಹೆಗಾರ ಕೂಡ ಹೌದು. ಇವರ ವಿರುದ್ಧ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) ಮತ್ತು ಅಕ್ರಮ ಚಟುವಟಿಕೆಗಳ ತಡೆ ಕಾಯ್ದೆ ಅಡಿ ಪ್ರಕರಣ ದಾಖಲಿಸಲಾಗಿದೆ.

ಭಾರತದ ಆಂತರಿಕ ವಿಚಾರಗಳ ಬಗ್ಗೆ ಶೇಖ್ ಅವರ ಅಭಿಪ್ರಾಯಗಳು ಇಲ್ಲಿನ ಕೋಮುಸೌಹಾರ್ದವನ್ನು ಹಾಳು ಮಾಡುವಂತೆ ಮತ್ತು ದೇಶದ ಹಿತಾಸಕ್ತಿಗಳಿಗೆ ಧಕ್ಕೆ ಉಂಟುಮಾಡುವಂತೆ ಇದ್ದವು ಎಂಬ ಕಾರಣಕ್ಕೆ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮ ಅವರು ಎಕ್ಸ್ ಮೂಲಕ ತಿಳಿಸಿದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in
ಪ್ರಜಾವಾಣಿ ಮಂಗಳವಾರ • ಫೆಬ್ರುವರಿ 18, 2025

ಅಭಿಮತ

❦ ಸುಭಾಷಿತ ❦

ವಿಶ್ವಕ್ಕೂ ವ್ಯಕ್ತಿಗೂ ಸಂಬಂಧವನ್ನು ಉಂಟುಮಾಡುವ ಲೋಕೋಕ್ತಿ ಹೆದ್ದಾರಿಯೇ ಅನುಭವ.

-ಶಿವರಾಮ ಕಾರಂತ

ಜಾಗತಿಕ ಹೂಡಿಕೆದಾರರ ಸಮಾವೇಶ ಒಪ್ಪಂದಗಳು ಉದ್ಯಮ ರೂಪ ತಳೆಯಲಿ

ರಾಜ್ಯ ಸರ್ಕಾರ ಆಯೋಜಿಸಿದ್ದ ಜಾಗತಿಕ ಹೂಡಿಕೆದಾರರ ಸಮಾವೇಶವು ₹10.27 ಲಕ್ಷ ಕೋಟಿ ಹೂಡಿಕೆ ಒಪ್ಪಂದ ಹಾಗೂ ಆರು ಲಕ್ಷ ಉದ್ಯೋಗ ಸೃಷ್ಟಿಯ ಭರವಸೆಯೊಂದಿಗೆ ಸಮಾಪ್ತಿಗೊಂಡಿದೆ. '₹6.23 ಲಕ್ಷ ಕೋಟಿ ಮೊತ್ತದ ಹೂಡಿಕೆಯ ಒಪ್ಪಂದಗಳಾಗಿವೆ. ₹4.03 ಲಕ್ಷ ಕೋಟಿ ಹೂಡಿಕೆ ಮಾಡುವುದಾಗಿ ಪ್ರತಿಷ್ಠಿತ ಕಂಪನಿಗಳು ಘೋಷಿಸಿದ್ದು, ಈ ಸಂಬಂಧದ ಒಪ್ಪಂದಗಳಿಗೆ ಶೀಘ್ರ ಸಹಿಬೀಳಲಿದೆ. ಒಟ್ಟು ಮೊತ್ತದಲ್ಲಿ ಉತ್ತರ ಕರ್ನಾಟಕದಲ್ಲಿ ಶೇಕಡ 45ರಷ್ಟು ಹೂಡಿಕೆ ಮಾಡುವ ಪ್ರಸ್ತಾವಗಳು ಇವೆ. ಮುಕ್ಕಾಲು ಪಾಲು ಹೂಡಿಕೆಯು ಬೆಂಗಳೂರಿನಿಂದ ಆಚೆಗೆ ಆಗಲಿದೆ' ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರು ಸಮಾವೇಶದ ಕೊನೆಯ ದಿನ ಹೇಳಿದ್ದಾರೆ. ಹೂಡಿಕೆದಾರರನ್ನು ಆಕರ್ಷಿಸಲು ರಾಜ್ಯಗಳ ನಡುವೆ ಸ್ಪರ್ಧೆ ಏರ್ಪಟ್ಟಿದೆ. ಇಂತಹ ಸನ್ನಿವೇಶದಲ್ಲಿ ಉದ್ಯಮ ಸ್ಥಾಪನೆ ಹಾಗೂ ಉದ್ಯೋಗ ಅವಕಾಶಗಳ ಸೃಷ್ಟಿಯು ಯಾವುದೇ ರಾಜ್ಯಕ್ಕೆ ಸವಾಲು ಇದ್ದಂತೆ. ಕರ್ನಾಟಕದ ಮಟ್ಟಿಗೆ ಈ ರೀತಿಯ ಸಮಾವೇಶಗಳು ಹೊಸತೇನಲ್ಲ. ಎಸ್.ಎಂ. ಕೃಷ್ಣ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಹೂಡಿಕೆದಾರರನ್ನು ಸೆಳೆಯುವ ಇಂತಹ ಪ್ರಯತ್ನಗಳು ಶುರುವಾದವು. ಇದು, ಆರನೆಯ ಸಮಾವೇಶ. 25 ವರ್ಷಗಳಲ್ಲಿ ನಡೆದ ಇಂತಹ ಸಮಾವೇಶಗಳಲ್ಲಿ ಹೂಡಿಕೆಯಾಗಲಿದೆ ಎಂದು ಘೋಷಿಸಲಾದ ಒಟ್ಟು ಮೊತ್ತವೇ ಅಂದಾಜು ₹25 ಲಕ್ಷ ಕೋಟಿ ದಾಟುತ್ತದೆ. ಆದರೆ, ನಿಜವಾಗಿ ಅನುಷ್ಠಾನಗೊಂಡ ಯೋಜನೆಗಳ ಒಟ್ಟು ಮೊತ್ತ ₹5 ಲಕ್ಷ ಕೋಟಿ ಮೀರಿಲ್ಲ ಎಂಬ ಮಾತಿದೆ. ಆ ಪರಿಪಾಟ ಪುನರಾವರ್ತನೆ ಆಗಬಾರದು. ಹೂಡಿಕೆ ಒಪ್ಪಂದಗಳು ಕಾಲಮಿತಿಯಲ್ಲಿ ಅನುಷ್ಠಾನಕ್ಕೆ ಬರುವಂತೆ ಮಾಡಲು ದಕ್ಷ ಅಧಿಕಾರಿಗಳ ನೇತೃತ್ವದಲ್ಲಿ ಮೇಲುಸ್ತುವಾರಿ ಸಮಿತಿ ರಚಿಸಿ, ಕಾಲಕಾಲಕ್ಕೆ ಯೋಜನೆಯ ಪ್ರಗತಿಯ ಮೇಲೆ ನಿಗಾ ಇಡುವಂತೆ ನೋಡಿಕೊಳ್ಳಬೇಕು. ಮೂರು ತಿಂಗಳಿಗೊಮ್ಮೆಯಾದರೂ ಸಚಿವರೇ ಪ್ರಗತಿ ಪರಿಶೀಲನೆ ನಡೆಸಬೇಕು. ಯೋಜನೆಗಳ ಅನುಷ್ಠಾನದಲ್ಲಿ ಏನಾದರೂ ತೊಡಕುಗಳು ಎದುರಾದರೆ, ಅವುಗಳನ್ನು ನಿವಾರಿಸಬೇಕು.

ಹೂಡಿಕೆ ಒಪ್ಪಂದಗಳು ಕಾಲಮಿತಿಯಲ್ಲಿ ಅನುಷ್ಠಾನಕ್ಕೆ ಬರುವಂತೆ ಸರ್ಕಾರ ನೋಡಿಕೊಳ್ಳಬೇಕು

ಸಮಾವೇಶದಲ್ಲಿ ಉದ್ಯಮಿಗಳ ಜತೆ ಒಪ್ಪಂದ ಮಾಡಿಕೊಳ್ಳುವ ಹಂತದಲ್ಲೇ ಬೆಂಗಳೂರು ಮಹಾನಗರದಿಂದ ಹೊರಗೆ ಹೂಡಿಕೆ ಮಾಡಿದರೆ ಹೆಚ್ಚಿನ ಉತ್ತೇಜನ ನೀಡುವಂತಹ ಪ್ರಸ್ತಾವವನ್ನು ಮುಂದಿಡಲಾಗಿತ್ತು. ಎರಡು ಮತ್ತು ಮೂರನೇ ಹಂತದ ನಗರಗಳ ಅಭಿವೃದ್ಧಿಗೆ ಈ ನಡೆ ಪೂರಕ. ಇದು ಕಾರ್ಯಗತಗೊಂಡರೆ, ಒಂದೇ ಪ್ರದೇಶದ ಮೇಲಿನ ಒತ್ತಡ ತಪ್ಪುತ್ತದೆ. ಹಿಂದುಳಿದ ಪ್ರದೇಶಗಳು ಆರ್ಥಿಕವಾಗಿ ಸಬಲೀಕರಣಗೊಂಡು, ಪ್ರಾದೇಶಿಕ ಅಸಮತೋಲನ ನಿವಾರಣೆಗೂ ದಾರಿಯಾಗುತ್ತದೆ. ಈ ಬಾರಿಯ ಸಮಾವೇಶದಲ್ಲಿ ನೂತನ ಕೈಗಾರಿಕಾ ನೀತಿಯನ್ನು ಘೋಷಿಸಿದ ಸರ್ಕಾರ, ಅದಕ್ಕೆ ಪೂರಕವಾಗಿ ಹಲವು ಉಪಕ್ರಮಗಳನ್ನು ಕೈಗೊಳ್ಳುವುದಾಗಿ ಹೇಳಿದೆ. ಮುಂದಿನ ಐದು ವರ್ಷಗಳಲ್ಲಿ ರಾಜ್ಯದಾದ್ಯಂತ ₹7.5 ಲಕ್ಷ ಕೋಟಿ ಹೂಡಿಕೆ ಹಾಗೂ 20 ಲಕ್ಷ ಉದ್ಯೋಗ ಸೃಷ್ಟಿಯ ಗುರಿಯನ್ನು ನೀತಿಯಲ್ಲಿ ಪ್ರಸ್ತಾಪಿಸಲಾಗಿದೆ. ಇದರ ಜತೆಗೆ, ಕೈಗಾರಿಕೆಗಳ ಸ್ಥಾಪನೆ ಮತ್ತು ಕಾರ್ಯನಿರ್ವಹಣೆಗೆ ಸಂಬಂಧಿಸಿದ 150ಕ್ಕೂ ಹೆಚ್ಚು ಅನುಮೋದನೆ ಹಾಗೂ ಅನುಮತಿಗಳಿಗೆ ಒಂದೇ ಕಡೆ ಅರ್ಜಿ ಸಲ್ಲಿಸಲು ಅವಕಾಶವಿರುವ ಏಕಗವಾಕ್ಷಿ ವ್ಯವಸ್ಥೆಯನ್ನು ಜಾರಿಗೊಳಿಸಿದೆ. ರಾಷ್ಟ್ರ ಮಟ್ಟದ ಏಕಗವಾಕ್ಷಿ ವ್ಯವಸ್ಥೆಯೊಂದಿಗೆ ಕರ್ನಾಟಕದ ವ್ಯವಸ್ಥೆಯನ್ನು ಬೆಸೆಯಲಾಗಿದೆ. ಉದ್ಯಮಸ್ನೇಹಿ ವಾತಾವರಣ ಸೃಷ್ಟಿಗೆ ಈ ನಡೆ ಪೂರಕವಾಗಿದೆ. ಈ ಸಮಾವೇಶಕ್ಕೆ ಕೇಂದ್ರದ ಸಚಿವರನ್ನು ಆಮಂತ್ರಿಸಿ, ಆ ಮೂಲಕ ಅಭಿವೃದ್ಧಿ ವಿಷಯದಲ್ಲಿ ಪಕ್ಷ ರಾಜಕೀಯ ಸಲ್ಲದು ಎಂಬ ಸಂದೇಶವನ್ನು ರಾಜ್ಯ ಸರ್ಕಾರ ನೀಡಿರುವುದು ಸರಿಯಾದ ನಡೆ. ಕೇಂದ್ರ ಸಚಿವರಾದ ರಾಜನಾಥ ಸಿಂಗ್, ಪೀಯೂಷ್ ಗೋಯಲ್, ಪ್ರಲ್ಹಾದ ಜೋಶಿ, ವಿ. ಸೋಮಣ್ಣ, ಶೋಭಾ ಕರಂದ್ಲಾಜೆ ಸಮಾವೇಶದಲ್ಲಿ ಭಾಗಿಯಾಗಿದ್ದುದು ಸಕಾರಾತ್ಮಕ ಬೆಳವಣಿಗೆ. ಎಲ್ಲ ಅನುಕೂಲಗಳನ್ನೂ ಬಳಸಿಕೊಂಡು ಸಮಾವೇಶದ ಗರಿಷ್ಠ ಪ್ರಯೋಜನ ನಾಡಿಗೆ ದಕ್ಕುವಂತೆ ರಾಜ್ಯ ಸರ್ಕಾರ ನೋಡಿಕೊಳ್ಳಬೇಕು. ಸ್ಥಳೀಯರಿಗೆ ಹೆಚ್ಚು ಉದ್ಯೋಗ ಕೊಡಿಸಲು ಮುತುವರ್ಜಿ ವಹಿಸಬೇಕು. ಕೈಗಾರಿಕೆಗಳಿಗೆ ಫಲವತ್ತಾದ ಕೃಷಿ ಜಮೀನು ಸ್ವಾಧೀನಪಡಿಸಿಕೊಂಡು ರೈತರಿಗೆ ತೊಂದರೆ ಕೊಟ್ಟಿರುವ ಕೆಲವು ಪ್ರಕರಣಗಳು ವರದಿಯಾಗಿವೆ. ಉದ್ಯಮಿ–ಕಾರ್ಮಿಕರ ಹಿತ ಕಾಪಾಡುವುದರ ಜತೆಗೆ ರೈತರ ಹಿತಕ್ಕೂ ಧಕ್ಕೆ ಆಗದಂತೆ ಎಚ್ಚರ ವಹಿಸಬೇಕಾದುದು ಸರ್ಕಾರದ ಕರ್ತವ್ಯ.

ದಿನದ ಟ್ವೀಟ್

ಕೆಪಿಎಸ್‌ಸಿ ಶುದ್ಧೀಕರಿಸಿ

ನೇಮಕಾತಿ ಪರೀಕ್ಷೆಯನ್ನು ಬದ್ಧತೆಯಿಂದ, ಜಾಗರೂಕತೆಯಿಂದ, ಅಭ್ಯರ್ಥಿಸ್ನೇಹಿಯಾಗಿ ನಡೆಸಬೇಕಾಗಿದ್ದ ಕರ್ನಾಟಕ ಲೋಕಸೇವಾ ಆಯೋಗವು ಭ್ರಷ್ಟಾಚಾರ, ಸ್ವಜನಪಕ್ಷಪಾತಕ್ಕೆ ಹೆಸರುವಾಸಿಯಾಗಿದೆ. ಆಯೋಗದಲ್ಲಿನ ಭ್ರಷ್ಟಾಚಾರವನ್ನು ಮುಖ್ಯಮಂತ್ರಿಯವರು ಗಂಭೀರವಾಗಿ ಪರಿಗಣಿಸಬೇಕು.

ಬಸನಗೌಡ ಪಾಟೀಲ ಯತ್ನಾಳ, ಬಿಜೆಪಿ ಶಾಸಕ

ಕಿಡಿನುಡಿ

ನಮಗೆ ಎಚ್ಚರಿಕೆ ನೀಡಲು ಜಿ.ಸಿ. ಚಂದ್ರಶೇಖರ್ ಯಾರು? ಕೆಪಿಸಿಸಿ ಕಾರ್ಯಾಧ್ಯಕ್ಷರಾದರೆ ಅವರಿಗೇನು ಎರಡು ಕೊಂಬು ಇದೆಯೇ?

ಕೆ.ಎನ್. ರಾಜಣ್ಣ, ಸಚಿವ

---

25 ವರ್ಷಗಳ ಹಿಂದೆ

ಶುಕ್ರವಾರ, 18-2-2000

• ಕೃಷ್ಣಾ: ಹೊಸ ನ್ಯಾಯಮಂಡಳಿಗೆ ಕೇಂದ್ರ ಒಲವು

ನವದೆಹಲಿ, ಫೆ. 17– ಬಚಾವತ್ ನ್ಯಾಯಮಂಡಳಿ ಸೂಚಿಸಿರುವ ಸ್ಕೀಂ 'ಬಿ' ಅದೊಂದು ಯೋಜನೆಯಲ್ಲ. ಅದು ತೀರ್ಮಾನವೂ ಅಲ್ಲ ಎಂದು ತಮ್ಮ ವಾದವನ್ನು ಪುನರುಚ್ಚರಿಸಿದ ಸಾಲಿಸಿಟರ್ ಜನರಲ್ ಹರೀಶ್ ಸಾಳ್ವೆ, ಕರ್ನಾಟಕ, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಗಳ ನಡುವೆ ಉಂಟಾಗಿರುವ ಈಗಿನ ವಿವಾದವನ್ನು ಬಗೆಹರಿಸಲು ಮತ್ತೊಂದು ನ್ಯಾಯಮಂಡಲಿಯೇ ಅವಶ್ಯ ಎಂದು ಹೇಳಿ ಇಂದು ತಮ್ಮ ವಾದವನ್ನು ಮುಕ್ತಾಯಗೊಳಿಸಿದರು.

ಕೃಷ್ಣಾ ಜಲ ವಿವಾದ ಕುರಿತಂತೆ ಸ್ಕೀಂ 'ಬಿ' ಜಾರಿಗೆ ತರಬೇಕೆನ್ನುವ ಕರ್ನಾಟಕದ ದಾವೆಯ ಮೇಲೆ ಸುಪ್ರೀಂ ಕೋರ್ಟಿನ ಸಂವಿಧಾನ ಪೀಠದ ಮುಂದೆ ನಡೆದ ವಿಚಾರಣೆಯಲ್ಲಿ ಕೇಂದ್ರದ ನಿಲುವನ್ನು ಸಾಲಿಸಿಟರ್ ಜನರಲ್ ಸಾಳ್ವೆ ಸ್ಪಷ್ಟಪಡಿಸಿದರು.

• ಬಿಹಾರದಲ್ಲಿ ಹಿಂಸೆ: 10 ಸಾವು

ನವದೆಹಲಿ, ಫೆ. 17 (ಯುಎನ್‌ಐ, ಪಿಟಿಐ)– ಬಿಹಾರದಲ್ಲಿ ಇಂದು ನಡೆದ ಎರಡನೇ ಹಂತದ ಮತದಾನದ ಸಂದರ್ಭದಲ್ಲಿಯೂ ಭಾರಿ ಹಿಂಸಾಚಾರ ನಡೆದಿದ್ದು ಕನಿಷ್ಠ 10 ಮಂದಿ ಸತ್ತಿದ್ದಾರೆ ಮತ್ತು 19 ಮಂದಿ ಗಾಯಗೊಂಡಿದ್ದಾರೆ.

ಮಾಲ್ಕನಗಿರಿ ಜಿಲ್ಲೆಯ ಕಲಿಮೇಲಾದಲ್ಲಿ ನಡೆದ ಘಟನೆಯೊಂದನ್ನು ಬಿಟ್ಟರೆ ಒರಿಸ್ಸಾದಲ್ಲಿ ಮೊದಲ ಹಂತದ ಮತದಾನ ಶಾಂತಿಯುತವಾಗಿತ್ತು.

ಬಿಹಾರದ 108 ಕ್ಷೇತ್ರಗಳಲ್ಲಿ ಇಂದು ನಡೆದ ಚುನಾವಣೆಯಲ್ಲಿ ಶೇ 60ರಷ್ಟು ಹಾಗೂ ಒರಿಸ್ಸಾದಲ್ಲಿ ಮೊದಲ ಹಂತವಾಗಿ 70 ಕ್ಷೇತ್ರಗಳಲ್ಲಿ ನಡೆದ ಚುನಾವಣೆಯಲ್ಲಿ ಶೇ 60ರಷ್ಟು ಮತದಾನವಾಗಿದೆ.

50 ವರ್ಷಗಳ ಹಿಂದೆ

ಮಂಗಳವಾರ, 18-2-1975

• 'ಹಣದುಬ್ಬರ ವಿರುದ್ಧ ಕ್ರಮ ಯಶಸ್ವಿ'

ನವದೆಹಲಿ, ಫೆ. 17– ಹಣದುಬ್ಬರದ ವಿರುದ್ಧ ಸರ್ಕಾರ ಕೈಗೊಂಡಿರುವ ಸಂಘಟಿತ ಕ್ರಮಗಳಿಂದ ಬೆಲೆಗಳು ಇಳಿಯಲಾರಂಭಿಸಿವೆ ಎಂದು ರಾಷ್ಟ್ರಪತಿ ಫಕ್ರುದ್ದೀನ್ ಅಲಿ ಅಹಮದ್ ಇಂದು ತಿಳಿಸಿದರು.

ಅಗತ್ಯ ವಸ್ತುಗಳು ಸಲೀಸಾಗಿ ಸಿಗುವ ಪರಿಸ್ಥಿತಿ ಸಹ ಉತ್ತಮಗೊಂಡಿದೆಯೆಂದೂ ಅವರು ಸಂಸತ್ತಿನ ಜಂಟಿ ಅಧಿವೇಶನವನ್ನು ಉದ್ಘಾಟಿಸುತ್ತಾ ಹೇಳಿದರು.

ಹಿಂಗಾರು ಬೆಳೆ ಉತ್ತಮವಾಗಿದೆ. ವಿದ್ಯುತ್ ಉತ್ಪಾದನೆ ಕಳೆದ ವರ್ಷಕ್ಕಿಂತ ಶೇ 14ರಷ್ಟು ಹೆಚ್ಚಿದೆ. ಆದರೂ ಇನ್ನೂ ಕೆಲವು ರಾಜ್ಯಗಳು ವಿದ್ಯುತ್ ಅಭಾವದಿಂದ ನರಳುತ್ತಿರುವ ಕಾರಣ ವಿದ್ಯುತ್ ಉತ್ಪಾದನಾ ಯೋಜನೆಗಳನ್ನು ಪೂರೈಸಲು ಆದ್ಯತೆ ನೀಡಲಾಗಿದೆ ಎಂದೂ ರಾಷ್ಟ್ರಪತಿಗಳು ಹೇಳಿದರು.

• ಬೆಂಬಲಿಸಿದರೆ ಹಣ, ತಿರುಗಿಬಿದ್ದರೆ ಸಲಾಕಿ, ಸೈಕಲ್ ಚೈನು ಹೊಡೆತ

ಬೆಂಗಳೂರು, ಫೆ. 17– 'ಸರ್ಕಾರದ ಬೆಂಬಲಿಗರಿಗೆ ಹಣದ ಚೀಲ– ವಿರೋಧಿಸಿದವರಿಗೆ ಕಬ್ಬಿಣದ ಸಲಾಕಿ, ಸೈಕಲ್ ಚೈನಿನ ಹೊಡೆತ' ಎಂದು ನುಡಿದ ವಿರೋಧ ಪಕ್ಷದ ನಾಯಕ ಎಚ್.ಡಿ. ದೇವೇಗೌಡ ಅವರು ವಿದ್ಯಾರ್ಥಿಗಳ ಮೇಲೆ ನಾನಾ ಕಡೆ ಹಲ್ಲೆ ನಡೆದಿದೆಯೆಂದು ಇಂದು ವಿಧಾನಸಭೆಯಲ್ಲಿ ಟೀಕಿಸಿದರು.

ಬೆಂಗಳೂರು, ಶಿವಮೊಗ್ಗ, ಭದ್ರಾವತಿ, ಮೈಸೂರು ಮೊದಲಾದ ಕಡೆ ನಡೆದ ಘಟನೆಗಳನ್ನು ಪ್ರಸ್ತಾಪಿಸಿದ ಅವರು 'ಎಷ್ಟು ಮಂದಿಯನ್ನು ಬಂಧಿಸಿದ್ದೀರಿ? ಪೊಲೀಸರು ಏನು ಮಾಡುತ್ತಿದ್ದಾರೆ? ಎಷ್ಟು ದಿನ ಅಧಿಕಾರ ದುರುಪಯೋಗ ಮಾಡಿ ಆಡಳಿತ ನಡೆಸಬೇಕೆಂದಿದ್ದೀರಿ? ಎಂದು ಸರ್ಕಾರವನ್ನು ಕೇಳಿದರು.

ಆದಾಯ ತೆರಿಗೆಯಲ್ಲಿ ರಿಯಾಯಿತಿ: ನಿರೀಕ್ಷಿತ ಫಲ ಸಿಗುವುದೇ?

ಶ್ರೀಸಾಮಾನ್ಯ ಮತ್ತು ತೆರಿಗೆ ಲೆಕ್ಕಾಚಾರ

ವಿಶ್ಲೇಷಣೆ

ಟಿ.ಎಸ್.ವೇಣುಗೋಪಾಲ್

ಮಧ್ಯಮ ವರ್ಗದವರನ್ನು ಕೇಂದ್ರ ಸರ್ಕಾರ ಕಡೆಗಣಿಸುತ್ತಿದೆ ಅನ್ನುವ ಕೂಗು ಇತ್ತೀಚಿನ ದಿನಗಳಲ್ಲಿ ಜೋರಾಗಿ ಕೇಳುತ್ತಿತ್ತು. ಅದಕ್ಕೆ ಸ್ಪಂದನವೋ ಎಂಬಂತೆ 2025–26ನೇ ಸಾಲಿನ ಬಜೆಟ್‌ನಲ್ಲಿ, ವಾರ್ಷಿಕ ₹ 12 ಲಕ್ಷದವರೆಗೆ ಆದಾಯ ಇರುವವರಿಗೆ ಆದಾಯ ತೆರಿಗೆಯಲ್ಲಿ ವಿನಾಯಿತಿ ಘೋಷಿಸಲಾಗಿದೆ. ಇದರಿಂದ ಅನುಕೂಲ ಪಡೆದವರು ಸಹಜವಾಗಿಯೇ ಸಂಭ್ರಮಿಸಿದ್ದಾರೆ.

ಹಣಕಾಸು ಸಚಿವರ ಪ್ರಕಾರ, 'ತೆರಿಗೆ ಕಡಿಮೆಯಾದರೆ ತೆರಿಗೆ ಪಾವತಿದಾರರಲ್ಲಿ ಹಣ ಉಳಿಯುತ್ತದೆ, ಅವರು ಹೆಚ್ಚೆಚ್ಚು ಕೊಳ್ಳುತ್ತಾರೆ, ಬೇಡಿಕೆ ಹೆಚ್ಚುತ್ತದೆ. ಪರಿಣಾಮವಾಗಿ ಉತ್ಪಾದನೆ, ಹೂಡಿಕೆ ಹೆಚ್ಚುತ್ತದೆ. ಆರ್ಥಿಕ ಅಭಿವೃದ್ಧಿಯ ಮುಖ್ಯ ಚಾಲಕಶಕ್ತಿ ಸಕ್ರಿಯಗೊಳ್ಳುತ್ತದೆ'. ಹೂಡಿಕೆಯನ್ನು ಹೆಚ್ಚಿಸುವ ದಿಸೆಯಲ್ಲಿ ಹಲವು ವರ್ಷಗಳಿಂದ ಪ್ರಯತ್ನಗಳು ನಡೆಯುತ್ತಲೇ ಇವೆ. ಕೆಲ ವರ್ಷಗಳ ಹಿಂದೆ ಖಾಸಗಿ ಹೂಡಿಕೆಯನ್ನು ಹೆಚ್ಚಿಸುವುದಕ್ಕೆ ಕಾರ್ಪೊರೇಟ್ ತೆರಿಗೆಯಲ್ಲಿ ಕಡಿತ ಮಾಡಲಾಗಿತ್ತು. ಆದರೆ ಅದು ಫಲಕಾರಿಯಾಗಲಿಲ್ಲ. ಬೃಹತ್ ಉದ್ಯಮಿಗಳ ಲಾಭ ಹೆಚ್ಚಿದರೂ ಅವರು ಹೂಡಿಕೆಯನ್ನು ಹೆಚ್ಚಿಸುವ ಮನಸ್ಸು ಮಾಡಲಿಲ್ಲ. ಈಗ ಆರ್ಥಿಕತೆಯಲ್ಲಿ ಬೇಡಿಕೆಯನ್ನು ಹೆಚ್ಚಿಸುವ ಮೂಲಕ ಖಾಸಗಿ ಹೂಡಿಕೆಯನ್ನು ಹೆಚ್ಚಿಸುವ ಪ್ರಯತ್ನ ನಡೆದಿದೆ. ಮಧ್ಯಮ ವರ್ಗದವರನ್ನು ಒಲಿಸಿಕೊಳ್ಳುವ ರಾಜಕೀಯ ಉದ್ದೇಶವೂ ಇದರಲ್ಲಿ ಇದ್ದಿರಬಹುದು.

ಭಾರತದಲ್ಲಿ ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸುತ್ತಿರುವವರ ಸಂಖ್ಯೆ ಬರೀ 8 ಕೋಟಿ. ಆ ಪೈಕಿ ತೆರಿಗೆ ಕಟ್ಟುವವರ ಸಂಖ್ಯೆ 3.1 ಕೋಟಿ ಮಾತ್ರ. ಹಾಗಾಗಿ ಮೇಲಿನ ಸ್ತರದ ಶೇಕಡ 10ರಷ್ಟು ಶ್ರೀಮಂತರ ಗುಂಪಿಗೆ ಸೇರುವ ಇವರನ್ನು ಮಧ್ಯಮ ವರ್ಗದವರು ಎಂದು ಕರೆಯುವುದು ತಪ್ಪು ಎನ್ನುವುದು ಹಲವರ ಅಭಿಪ್ರಾಯ. ಮಧ್ಯಮ ವರ್ಗದವರು ಎಂದರೆ ಯಾರು ಅನ್ನುವ ಬಗ್ಗೆಯೇ ಸ್ಪಷ್ಟತೆ ಇಲ್ಲ. ಪ್ರತಿ ಕುಟುಂಬದಲ್ಲಿ ನಾಲ್ಕು ಜನ ಇರುತ್ತಾರೆ ಅಂದುಕೊಂಡರೆ ಸರ್ಕಾರದ ಈ ಕ್ರಮದಿಂದ ದೇಶದ ಅತ್ಯಂತ ಶ್ರೀಮಂತರೂ ಸೇರಿದಂತೆ ಸುಮಾರು 12.4 ಕೋಟಿ ಜನರಿಗೆ ಅನುಕೂಲವಾಗುತ್ತದೆ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ಆಗುವ ವರಮಾನ ನಷ್ಟ ಸುಮಾರು ₹ 1 ಲಕ್ಷ ಕೋಟಿ.

ಇನ್ನು ಈ ಕ್ರಮದಿಂದ ಒಟ್ಟಾರೆ ಬೇಡಿಕೆಯ ಮೇಲೆ ಎಂತಹ ಪರಿಣಾಮ ಆಗಬಹುದು ಅನ್ನುವುದು ತೆರಿಗೆ ರಿಯಾಯಿತಿಯಿಂದ ಉಳಿತಾಯವಾಗಲಿರುವ ಈ ಒಂದು ಲಕ್ಷ ಕೋಟಿ ರೂಪಾಯಿ ಹೇಗೆ ಬಳಕೆಯಾಗುತ್ತದೆ ಅನ್ನುವುದನ್ನು ಅವಲಂಬಿಸಿರುತ್ತದೆ. ಅಷ್ಟೇ ಅಲ್ಲ, ಉಳಿದವರ ಮೇಲೆ ಈ ಕ್ರಮದಿಂದ ಯಾವ ರೀತಿಯ ಪರಿಣಾಮ ಆಗುತ್ತದೆ ಅನ್ನುವುದು ಮುಖ್ಯವಾಗುತ್ತದೆ.

ಅನುಕೂಲಸ್ಥರಲ್ಲಿ ತಮ್ಮ ಅವಶ್ಯಕತೆಯನ್ನು ಪೂರೈಸಿಕೊಳ್ಳುವುದಕ್ಕೆ ಬೇಕಾಗುವಷ್ಟು ಹಣ ಇರುತ್ತದೆ. ಹಾಗಾಗಿ, ತೆರಿಗೆ ವಿನಾಯಿತಿಯಿಂದ ಮಿಕ್ಕ ಹಣದ ಬಹುಪಾಲು ಉಳಿತಾಯಕ್ಕೆ ಹೋಗುತ್ತದೆ. ಅದೇ ಬಡವರು ಹೆಚ್ಚುವರಿ ದುಡ್ಡು ಸಿಕ್ಕರೆ ಬಹುಪಾಲನ್ನು ಖರ್ಚು ಮಾಡುತ್ತಾರೆ. ಈ ತರ್ಕವನ್ನು ಒಪ್ಪಿಕೊಂಡರೆ ತೆರಿಗೆ ವಿನಾಯಿತಿಯಿಂದ ಬೇಡಿಕೆ ಹೆಚ್ಚುವ ಸಾಧ್ಯತೆ ಕಡಿಮೆ. ಒಂದೊಮ್ಮೆ ಹೆಚ್ಚಿದರೂ ಅವರು ಬಹುತೇಕ ಕೊಳ್ಳುವುದು ಆಮದು ಮಾಡಿಕೊಂಡ ಸರಕುಗಳನ್ನು ಅಥವಾ ಬೃಹತ್ ಉದ್ದಿಮೆಗಳ ಉತ್ಪನ್ನಗಳನ್ನು. ಅದರಿಂದ ಸಣ್ಣ, ಕಿರು, ಅನೌಪಚಾರಿಕ ವಲಯಕ್ಕೆ ಬಹುಶಃ ಅನುಕೂಲ ಆಗುವುದಿಲ್ಲ. ಭಾರತದಲ್ಲಿ ನಿಖರವಾದ ಅಂಕಿಅಂಶ ಹಾಗೂ ಸಮೀಕ್ಷೆಗಳ ಕೊರತೆ ಇರುವುದರಿಂದ ಇಂತಹ ಊಹೆಗಳನ್ನಷ್ಟೇ ಮಾಡಬಹುದು.

ಸರ್ಕಾರದ ಒಟ್ಟು ತೆರಿಗೆ ಸಂಗ್ರಹ ಪ್ರಮಾಣ ಇತ್ತೀಚಿನ ವರ್ಷಗಳಲ್ಲಿ ಕಡಿಮೆಯಾಗುತ್ತಿದೆ. ಜಿಎಸ್‌ಟಿ ಕೂಡ ನಿರೀಕ್ಷಿತ ಪ್ರಮಾಣದಲ್ಲಿ ಸಂಗ್ರಹವಾಗುತ್ತಿಲ್ಲ. ಒಟ್ಟಾರೆ ತೆರಿಗೆಯಲ್ಲಿ ನೇರ ತೆರಿಗೆಯ ಪ್ರಮಾಣ ಅದರಲ್ಲೂ ಕಾರ್ಪೊರೇಟ್ ಆದಾಯ ತೆರಿಗೆಯ ಪ್ರಮಾಣ ಕಡಿಮೆ ಆಗುತ್ತಿದೆ. ಹೆಚ್ಚುತ್ತಿರುವುದು ವೈಯಕ್ತಿಕ ಆದಾಯ ತೆರಿಗೆ ಪ್ರಮಾಣ. ಸರ್ಕಾರದ ಕ್ರಮದಿಂದಾಗಿ ಅದೂ ಕಡಿಮೆಯಾಗಬಹುದು. ಹಾಗಾಗದೆ ಹಿಂದಿನಷ್ಟೇ ಅಥವಾ ಅದಕ್ಕಿಂತ ಹೆಚ್ಚು ಸಂಗ್ರಹ ಆಗಬೇಕಾದರೆ ಇರುವುದು ಎರಡು ಸಾಧ್ಯತೆಗಳು. ಒಂದು, ವಾರ್ಷಿಕ ₹ 12 ಲಕ್ಷಕ್ಕಿಂತ ಹೆಚ್ಚು ಸಂಪಾದಿಸುತ್ತಿರುವವರ ಸಂಪಾದನೆ ಇನ್ನೂ ಹೆಚ್ಚಬೇಕು. ಇಲ್ಲವೆಂದರೆ ₹ 12 ಲಕ್ಷಕ್ಕಿಂತ ಹೆಚ್ಚು ವಾರ್ಷಿಕ ಆದಾಯ ಪಡೆಯುವವರ ಸಂಖ್ಯೆ ಹೆಚ್ಚಬೇಕು. ಇವೆರಡೂ ಸಾಧ್ಯತೆಗಳು ಕಡಿಮೆ. ಜೊತೆಗೆ ಬೇರೆ ಮೂಲಗಳಿಂದ ಹೆಚ್ಚಿನ ಬಂಡವಾಳ ಸಂಗ್ರಹ ಸಾಧ್ಯತೆಗಳೂ ಕಡಿಮೆ. 2025ರ ಆರ್ಥಿಕ ಸಮೀಕ್ಷೆಯ ಪ್ರಕಾರವೇ ಜಾಗತಿಕ ಬೇಡಿಕೆ ಅಷ್ಟೊಂದು ಆಶಾದಾಯಕವಾಗಿಲ್ಲ. ಹಾಗಾಗಿ ರಫ್ತಾಗಲಿ, ಕಾರ್ಪೊರೇಟ್ ಸಂಸ್ಥೆಗಳಿಂದ ಹೂಡಿಕೆ ಆಗಲಿ ಹೆಚ್ಚುವ ಸಾಧ್ಯತೆ ಕಡಿಮೆ. ಆಮದು ಸುಂಕವನ್ನು ಹೆಚ್ಚಿಸುವ ಮೂಲಕ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪ್ರಾರಂಭಿಸಿರುವ ವ್ಯಾಪಾರ ಸಮರದ ಪರಿಣಾಮವೂ ನಮ್ಮನ್ನು ಕಾಡಲಿದೆ.

ಇದರ ನಡುವೆ ವಿತ್ತೀಯ ಕೊರತೆಯನ್ನು ಅಂದರೆ ಒಟ್ಟು ಖರ್ಚು ಹಾಗೂ ವರಮಾನದ ನಡುವಿನ ಅಂತರವನ್ನು ತಗ್ಗಿಸುವ ನೀತಿಗೆ ಸರ್ಕಾರ ಬದ್ಧವಾಗಿದೆ. ಈ ವರ್ಷ ವಿತ್ತೀಯ ಕೊರತೆಯನ್ನು ಜಿಡಿಪಿಯ ಶೇ 4.8ರಿಂದ 4.4ಕ್ಕೆ ಇಳಿಸಲು ನಿರ್ಧರಿಸಿದೆ. ಹಾಗಾಗಿ, ಸರ್ಕಾರಕ್ಕೆ ವರಮಾನವನ್ನು ಹೆಚ್ಚಿಸಿಕೊಳ್ಳುವುದಕ್ಕೆ ಆಗದಿದ್ದರೆ ಖರ್ಚಿನಲ್ಲಿ ಕಡಿತ ಮಾಡಿಕೊಳ್ಳುವುದು ಅನಿವಾರ್ಯ ಆಗುತ್ತದೆ. ಸಾಮಾನ್ಯವಾಗಿ ಇಂತಹ ಸಮಯದಲ್ಲಿ ಹೊಡೆತ ಬೀಳುವುದೇ ಬಡವರಿಗೆ ದೊರೆಯುತ್ತಿರುವ ಸೇವೆಗಳಿಗೆ ಹಾಗೂ ಜನಕಲ್ಯಾಣ ಕಾರ್ಯಕ್ರಮಗಳಿಗೆ. ಪ್ರತಿ ಬಜೆಟ್‌ನಲ್ಲೂ ಈ ಮೊತ್ತದಲ್ಲಿ ಕಡಿತ ಆಗುತ್ತಿರುವುದನ್ನು ಗಮನಿಸಬಹುದು. ಅಷ್ಟೇ ಅಲ್ಲ, ಬಜೆಟ್‌ನಲ್ಲಿ ಘೋಷಿಸಿದ ಮೊತ್ತವನ್ನೂ ವಾಸ್ತವದಲ್ಲಿ ಖರ್ಚು ಮಾಡುತ್ತಿಲ್ಲ. ಕಳೆದ ವರ್ಷದ ಬಜೆಟ್‌ನಲ್ಲಿ ಈ ಬಾಬ್ತಿಗೆ ಘೋಷಿಸಿದ್ದ ಮೊತ್ತದಲ್ಲಿ₹ 1 ಲಕ್ಷ ಕೋಟಿಯಷ್ಟನ್ನು ಅಂತಿಮವಾಗಿ ಕಡಿತ ಮಾಡಲಾಗಿದೆ. ಕಡಿತವಾಗಿರುವುದೆಲ್ಲಾ ಜನಸಾಮಾನ್ಯರಿಗೆ ಅನುಕೂಲವಾಗುತ್ತಿದ್ದ ಗ್ರಾಮೀಣ ಅಭಿವೃದ್ಧಿ, ನಗರಾಭಿವೃದ್ಧಿ, ಶಿಕ್ಷಣ, ಕೃಷಿ, ಆಹಾರ ಸಬ್ಸಿಡಿ, ಆರೋಗ್ಯ ಇಂತಹ ಬಾಬ್ತುಗಳಲ್ಲೇ. ಈ ವರ್ಷದ ಬಜೆಟ್‌ನಲ್ಲಿ ಈ ಯೋಜನೆಗಳಿಗೆ ನಿಗದಿಪಡಿಸಿರುವ ಮೊತ್ತದಲ್ಲಿ ಇನ್ನೂ ಕಡಿತವಾಗಿದೆ. ಹಣದುಬ್ಬರವನ್ನು ಗಣನೆಗೆ ತೆಗೆದುಕೊಂಡರೆ, ಒಟ್ಟು ಜಿಡಿಪಿಗೆ ಹೋಲಿಸಿ ನೋಡಿದರೆ ಕಡಿತ ಹೆಚ್ಚು ಢಾಳಾಗಿ ಕಾಣಿಸುತ್ತದೆ. ಈ ವರ್ಷವೂ ಇದನ್ನು ಪೂರ್ಣವಾಗಿ ಬಳಸದೇ ಇರುವ ಸಾಧ್ಯತೆ ಇದೆ. ಅಂದರೆ ಪ್ರತಿವರ್ಷ ಸಬಲರಿಗೆ ರಿಯಾಯಿತಿ ನೀಡುವುದಕ್ಕೆ ಸಾಮಾನ್ಯರ ಸೌಲಭ್ಯದಲ್ಲಿ ಕಡಿತ ಮಾಡಲಾಗುತ್ತಿದೆ. ಹಿಂದೆ ಕಾರ್ಪೊರೇಟ್ ತೆರಿಗೆಯಲ್ಲಿ ಕಡಿತ ಮಾಡಿದಾಗಲೂ ಹೀಗೆಯೇ ಆಗಿತ್ತು. ಇದರಿಂದ ಸಾಮಾನ್ಯರ ಸ್ಥಿತಿ ಇನ್ನಷ್ಟು ಬಿಗಡಾಯಿಸುತ್ತದೆ. ಅಷ್ಟೇ ಅಲ್ಲ, ಸರ್ಕಾರದ ನೀತಿಯಿಂದ ನಿರೀಕ್ಷಿತ ಫಲವೂ ಸಿಗುವುದಿಲ್ಲ.

ಯಾವುದೇ ನೀತಿಯು ಬಹುಸಂಖ್ಯಾತ ಸಾಮಾನ್ಯರ ಒಳಿತನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು. ಭಾರತ ಜಗತ್ತಿನ ಐದನೇ ಅತಿಶ್ರೀಮಂತ ರಾಷ್ಟ್ರವಾಗಿ ಬೆಳೆದರೂ ಜನಸಾಮಾನ್ಯರ ಸ್ಥಿತಿಯಲ್ಲಿ ಸುಧಾರಣೆಯಾಗಿಲ್ಲ. ಆರ್ಥಿಕ ಸಮೀಕ್ಷೆಯೇ ಹೇಳುವಂತೆ ಸ್ವ-ಉದ್ಯೋಗಿಗಳ ನೈಜ ಆದಾಯದಲ್ಲಿ, ನೌಕರರ ಸಂಬಳದಲ್ಲಿ ಇಳಿಕೆ ಆಗಿದೆ. ಜೊತೆಗೆ ಅವಶ್ಯಕ ಪದಾರ್ಥಗಳ ಬೆಲೆ ಅದರಲ್ಲೂ ಆಹಾರ ಪದಾರ್ಥಗಳ ಬೆಲೆ ತೀವ್ರವಾಗಿ ಏರುತ್ತಿದೆ. ಸರ್ಕಾರವು ಕಲ್ಯಾಣ ಕಾರ್ಯಕ್ರಮಗಳಲ್ಲಿ ಕಡಿತ ಮಾಡಿದರೆ ಅವರ ಕೊಳ್ಳುವ ಶಕ್ತಿ ಇನ್ನಷ್ಟು ಕಡಿಮೆಯಾಗುತ್ತದೆ. ಅವರು ಸಾಮಾನ್ಯವಾಗಿ ಬಳಸುತ್ತಿದ್ದ ಪದಾರ್ಥಗಳ ಬೇಡಿಕೆ ಹಾಗೂ ಉತ್ಪಾದನೆಗೆ ಹೊಡೆತ ಬೀಳುತ್ತದೆ. ಅಂದರೆ ಅನೌಪಚಾರಿಕ ಕ್ಷೇತ್ರಗಳ ಉತ್ಪಾದನೆಗೆ ಇನ್ನಷ್ಟು ಹೊಡೆತ ಬೀಳುತ್ತದೆ.

ಬೃಹತ್ ಉದ್ದಿಮೆಗಳ ಲಾಭ ಒಂದೇ ಸಮ ಏರುತ್ತಿದ್ದರೂ ಅವರ ತೆರಿಗೆಯಲ್ಲಿ ಕಡಿತ ಮಾಡಿದರೂ ಅವರು ಹೂಡಿಕೆಯನ್ನು ಹೆಚ್ಚಿಸುವ ಯೋಚನೆ ಮಾಡಲಿಲ್ಲ. ತೆರಿಗೆ ಸಂಗ್ರಹದಲ್ಲಿ ಕಾರ್ಪೊರೇಟ್ ತೆರಿಗೆಯ ಪಾಲು ಇಳಿಯುತ್ತಲೇ ಇದೆ. ಅದರ ಭಾರವೆಲ್ಲಾ ಬಹುಸಂಖ್ಯಾತ ಸಾಮಾನ್ಯರ ಮೇಲೆ ಬೀಳುತ್ತಿದೆ. ಅವರನ್ನು ಆರ್ಥಿಕವಾಗಿ ಇನ್ನಷ್ಟು ಸಂಕಷ್ಟಕ್ಕೆ ದೂಡುವ ಬದಲು ಸರ್ಕಾರ ತನ್ನ ಮಾರ್ಗವನ್ನು ಬದಲಿಸಿಕೊಂಡು ಬೃಹತ್ ಉದ್ಯಮಿಗಳ ಮೇಲಿನ ತೆರಿಗೆಯನ್ನು ಕ್ರಮೇಣ ಏರಿಸುವ ಕಡೆ ಗಮನ ಕೊಡಬೇಕು. ಹಾಗೆಯೇ ತೆರಿಗೆ ಕಡಿತ ಮಾಡುವ ಮೂಲಕ ಬೇಡಿಕೆಯನ್ನು ಹೆಚ್ಚಿಸುವ ಯೋಜನೆ ಇದ್ದರೆ ಬಹುಪಾಲು ಜನರಿಗೆ ಅನುಕೂಲವಾಗುವ ಜಿಎಸ್‌ಟಿ ಅಂತಹ ತೆರಿಗೆಯಲ್ಲಿ ಕಡಿತ ಮಾಡುವುದು ಹೆಚ್ಚು ಪರಿಣಾಮಕಾರಿ ಆಗಬಹುದು. ಬಹುಸಂಖ್ಯಾತರ ಅಭಿವೃದ್ಧಿಯಿಂದಷ್ಟೆ ಎಲ್ಲಾ ಕ್ಷೇತ್ರಗಳ ಸಮತೋಲಿತ ಅಭಿವೃದ್ಧಿ ಸಾಧ್ಯ. ಸರ್ಕಾರಗಳು ಯೋಜನೆಗಳನ್ನು, ನೀತಿಗಳನ್ನು ನಿಖರವಾದ ಅಂಕಿಅಂಶಗಳನ್ನು ಆಧರಿಸಿ, ಅಧ್ಯಯನಗಳನ್ನು ನಡೆಸುತ್ತಾ ಪರೀಕ್ಷಿಸಿಕೊಳ್ಳುತ್ತಾ ಮುನ್ನಡೆಯಬೇಕಾಗಿದೆ. ಇಲ್ಲದಿದ್ದರೆ ಜೋರುಧ್ವನಿಯ ಪ್ರಬಲ ಶಕ್ತಿಗಳ ಹಿತಾಸಕ್ತಿಯನ್ನೇ ಗಮನಿಸುತ್ತಾ, ಧ್ವನಿ ಅಡಗಿದವರನ್ನು ಕಡೆಗಣಿಸುತ್ತಾ ಸಾಗುವ ಹಾದಿಯನ್ನೇ ಸವೆಸುತ್ತಿರುತ್ತೇವೆ.

ಚುರುಮುರಿ

ಕ್ರೆಡಿಟ್ ಸ್ಕೋರ್

• ಡಿ.ಎಸ್. ಲಿಂಗರಾಜು

'ಸಾ... ಕ್ರೆಡಿಟ್ ಸ್ಕೋರ್ ಅಂದ್ರೇನು?' ಅಂತ ತುರೇಮಣೆಗೆ ಕೇಳಿದೆ.

'ಯಾರು ಕ್ರೆಡಿಟ್ ಅಂದ್ರ ಸಾಲ ಜಾಸ್ತಿ ತಕ್ಕಂದು ತೀರಿಸಿರತನೋ ಅವನ ಆರ್ಥಿಕ ಯೇಗ್ತೇನ ಅಳೆಯೋ ತಕ್ಕಡಿಗೆ ಕ್ರೆಡಿಟ್ ಸ್ಕೋರ್ ಅಂತರೆ ಕಲಾ. ಇದು ದುಡ್ಡು–ಕಾಸಿನ ತಾಕತ್ತು ಅಳೆಯೋ ಥರ್ಮಾಮೀಟರ್ ಕಯ್ಯ' ಎನ್ನುತ್ತಾ ಸಾಲ ಜಗತ್ತಿನ ರಹಸ್ಯದ ವಿವರ ಕೊಟ್ಟರು.

'ಹಂಗಾದ್ರೆ ಬರೀ ಕ್ಯಾಷಲ್ಲೆ ಯವಾರ ಮಾಡಿಕ್ಯಂದು ಕ್ರೆಡಿಟ್ಟು–ಡೆಬಿಟ್ಟು ಕಾರ್ಡು ಇಲ್ಲದೆ ಕ್ರೆಡಿಟ್ ಸ್ಕೋರ್ ಏನೂ ಅಂತೂ ಅರೀದ ನನ್ನಂತಾ ಮುಕ್ಕ ಏನು ಮಾಡಬಕು? ಮಹಾರಾಷ್ಟ್ರದೇಲಿ ವರನ ಕ್ರೆಡಿಟ್ ಸ್ಕೋರ್ ಕಮ್ಮಿ ಅದೆ ಅಂತ ಮದುವೆ ನಿಂತೋತಂತೆ'.

'ದಿಟ ಕಲಾ. ಹೆಂಡತಿಗೆ ಕಣ್ಣಿಗೆ ಬೇಕಾದ್ದು ಕೊಡಿಸಕ್ಕೆ ಕಾಸು ಬೇಕಲ್ಲ. ಆ ಯೇಗ್ತೆ ಗಂಡಿಗದ ಅಂತ ತಿಳಕಣಕೆ ಕ್ರೆಡಿಟ್ ಸ್ಕೋರ್ ಕೇಳಿರದು' ಅಂತಂದ್ರು.

'ಸಾ, ಕ್ರೆಡಿಟ್ ಸ್ಕೋರು ಇನ್ನೆಲ್ಲೆಲ್ಲಿ ಕೌಂಟ್ ಆಯ್ತದೆ?'

'ಕ್ರೆಡಿಟ್ ಸ್ಕೋರು ರಾಜಕೀಯದೇಲಿ ಬೇಕೇಬೇಕು. ಕಾಸು ಖರ್ಚು ಮಾಡಿ ಪಕ್ಸ ಕಟ್ಟಿ ಶಾಸಕರನ್ನ ಗೆಲ್ಲಿಸಿಕ್ಯಬಂದ್ರೆ ಅವನ ಕ್ರೆಡಿಟ್ ಸ್ಕೋರು ಜಾಸ್ತಿ ಆಗಿರತದೆ'.

'ರಾಜಕೀಯದೇಲಿ ವೋಟು ಬೇಟೆ ನಡೀವಾಗ ರಾಜಪಾಲು, ಬಲೆಪಾಲು, ನಾಯಿಪಾಲು ಇರತವೆ ಕನೋ. ಈ ಪಾಲು-ಪಾರೀಕತ್ತು ಇಚಾರವ ಮುಂದಾಗೇ ಸೆಟಲ್ ಮಾಡಿಕ್ಯಂದು ಕ್ರೆಡಿಟ್ ಸ್ಕೋರ್ ಹೆಚ್ಚಿಸಿಕ್ಯಬಕು. ಇಲ್ಲದೇ ಹೋದ್ರೆ ಅಧಿಕಾರ ಪಾಲಾಕುವಾಗ ಎಲ್ಲಾರು ಕಾವಿನ ಕೋಳಿ ಥರ ಕೊರಗುಟ್ಟಿಕ್ಯಂದು ಬಂದು ಕೆಡಿಸಣ್ಣನ ಆಟ ಆಡತರೆ' ಅಂತ ಯಂಟಪ್ಪಣ್ಣ ಟಾಂಗ್ ಕೊಟ್ಟಿತು.

'ಸತುವಾದ ಮಾತು. ಪಕ್ಸದಿಂದ ಪಕ್ಸಕ್ಕೆ ಹಾರಿ ಕೊಚ್ಚೆ ನೀರಲ್ಲಿ ಮೀನು ಹಿಡಿಯೋರು ತಮ್ಮ ಕ್ರೆಡಿಟ್ ಸ್ಕೋರ್ ಜಾಸ್ತಿ ಅದೆ ಅಂತ ತಿಳಕಂದಿರತರೆ. ಜನಕ್ಕೆ ಇವರ ತೆವಲು ಗೊತ್ತಿರತದಲ್ಲವಾ ಎಲೆಕ್ಸನ್ನಲ್ಲಿ ಎಡಿಟ್ ಮಾಡಿ ಗಾವು ಸಿಗೀತರೆ' ಅಂತ ತುರೇಮಣೆ ನಕ್ಕರು.

ಸಂಗತ

'ಪರೋಪಜೀವಿ'ಗಳು ಯಾರು?

ಉಚಿತ ಕೊಡುಗೆಗಳ ಮೂಲಕ ಕರ್ನಾಟಕ ಮತ್ತು ಇತರ ರಾಜ್ಯಗಳು ಮಾಡುತ್ತಿರುವುದು ಸಂವಿಧಾನ ಹೇಳುವ ಕರ್ತವ್ಯವನ್ನೇ

• ಸಿ.ಎನ್.ರಾಮಚಂದ್ರನ್

'ಉಚಿತ ಕೊಡುಗೆ'ಗಳು ಅಥವಾ 'ಗ್ಯಾರಂಟಿ'ಗಳು ಎಂಬ ಪದಗಳು ಚಲಾವಣೆಗೆ ಬಂದುದು ಎರಡು ವರ್ಷಗಳ ಹಿಂದೆ ಕರ್ನಾಟಕದಲ್ಲಿ ನಡೆದ ಚುನಾವಣೆಯ ಸಂದರ್ಭದಲ್ಲಿ. ಅಂದಿನಿಂದ ಇಂದಿನವರೆಗೂ ಅಧಿಕಾರವನ್ನು ಕಳೆದುಕೊಂಡ ಪಕ್ಷಗಳು ಈ ಕೊಡುಗೆಗಳನ್ನು ತಿರಸ್ಕಾರದಿಂದಲೇ ಕಾಣುತ್ತಿವೆ ಮತ್ತು 'ಅವುಗಳಿಂದಲೇ ಅಧಿಕಾರಕ್ಕೆ ಬಂದಿರುವ ಸರ್ಕಾರ'ವನ್ನೂ ತೆಗಳುತ್ತಿವೆ. ಇನ್ನೂ ಮೊದಲೇ ದೆಹಲಿಯಲ್ಲಿ ಎಎಪಿ ನೇತೃತ್ವದ ಸರ್ಕಾರವು ಉಚಿತ ವಿದ್ಯುತ್ ಕೊಟ್ಟಿದ್ದರೂ ಅದೇಕೋ ಆಗ ಆ ಉಚಿತ ಕೊಡುಗೆಯ ಬಗ್ಗೆ ಇಷ್ಟು ಟೀಕೆಗಳು ಬಂದಿರಲಿಲ್ಲ.

ರಾಜಕೀಯ ಕ್ಷೇತ್ರದಲ್ಲಿ ಯಾವ ಯೋಜನೆಯ ಬಗ್ಗೆಯಾದರೂ ಸಮರ್ಥನೆ ಹಾಗೂ ಟೀಕೆಗಳು ಸಹಜ. ಆದರೆ ಸುಪ್ರೀಂ ಕೋರ್ಟ್ ಆ ಕೊಡುಗೆಗಳ ಬಗ್ಗೆ ಕೆಳಗೆ ಕೊಟ್ಟಿರುವ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದೆ (ಇದೇ 12ರಂದು ಪತ್ರಿಕೆಗಳಲ್ಲಿ ಬಂದಿರುವುದು ಸತ್ಯದೂರವಲ್ಲದಿದ್ದರೆ) ಎಂಬುದು ದುರದೃಷ್ಟಕರ. ಅದು, ಉಚಿತ ಕೊಡುಗೆಗಳ ಬಗ್ಗೆ 'ಇವು ಕೆಲಸ ಮಾಡಲು ಇಚ್ಛಿಸುವವರ ಉತ್ಸಾಹವನ್ನು ಕುಗ್ಗಿಸುತ್ತವೆ. ಜನರಿಗೆ ಉಚಿತ ಕೊಡುಗೆಗಳು ಸಿಗುವಾಗ ಅವರು ಏಕೆ ಕೆಲಸ ಮಾಡುತ್ತಾರೆ? ಇವು ರಾಷ್ಟ್ರದ, ರಾಜ್ಯದ ಸರ್ಕಾರಿ ಖಜಾನೆಗಳ ಮೇಲೆ ದೊಡ್ಡ ಹೊರೆಯಾಗುತ್ತವೆ. ಉಚಿತ ಕೊಡುಗೆಗಳು ಪರೋಪಜೀವಿಗಳನ್ನು ಸೃಷ್ಟಿಸುತ್ತಿವೆ' ಎಂದು ಅವುಗಳನ್ನು ಟೀಕಿಸಿದೆ. 'ಪ್ಯಾರಸೈಟ್' ಪದವಂತೂ ಇನ್ನೂ ದುರದೃಷ್ಟಕರ.

ಇಂದು ಕರ್ನಾಟದಲ್ಲಿ ಮಾತ್ರವಲ್ಲದೆ ಹೆಚ್ಚು ಕಮ್ಮಿ ದೇಶದ ಎಲ್ಲ ರಾಜ್ಯಗಳಲ್ಲಿಯೂ ಈ ಬಗೆಯ ಉಚಿತ ಕೊಡುಗೆಗಳು ಇವೆ ಅಥವಾ ಅವುಗಳನ್ನು ಕೊಡುವ ಆಶ್ವಾಸನೆಯನ್ನು ಆಯಾ ರಾಜ್ಯಗಳ ಸರ್ಕಾರಗಳು ಪ್ರಜೆಗಳಿಗೆ ಕೊಟ್ಟಿವೆ. ಉಚಿತ ಕೊಡುಗೆಗಳು ಜಾರಿಯಾಗಿರುವ ದೇಶದ ಯಾವ ಭಾಗದಲ್ಲಿ ಅಥವಾ ರಾಜ್ಯದಲ್ಲಿ ಜನ ಕೆಲಸ ಮಾಡುತ್ತಿಲ್ಲ?

ಕೃಷಿಕರು ಕೆಲಸ ಮಾಡದಿದ್ದರೆ ನಮಗೆ ಆಹಾರವೇ ಸಿಗುತ್ತಿರಲಿಲ್ಲ, ಬಸ್, ಆಟೊ ಚಾಲಕರು ಕೆಲಸ ಮಾಡದಿದ್ದರೆ ನಾವು ಮನೆಯಿಂದ ಹೊರಗೆ ಹೋಗಲೇ ಸಾಧ್ಯವಿರಲಿಲ್ಲ. ಹೀಗೆಯೇ, ತಳ್ಳುಗಾಡಿಗಳಲ್ಲಿ ತರಕಾರಿ-ಹಣ್ಣುಗಳನ್ನು ಮಾರುವವರು, ಮನೆಕೆಲಸ ಮಾಡುವವರು, ಕೂಲಿ ಕಾರ್ಮಿಕರು, ದರ್ಜಿಗಳು, ಹೋಟೆಲ್– ಮಾಲ್‌ಗಳಲ್ಲಿ ಕೆಲಸ ಮಾಡುವವರು, ಕಚೇರಿಗಳಲ್ಲಿ ಕೆಲಸ ಮಾಡುವವರು, ಹಮಾಲರು... ಹೀಗೆ ನೂರಾರು ಕ್ಷೇತ್ರಗಳಲ್ಲಿ ಕೆಲಸ ಮಾಡುವ, ಒಟ್ಟು ಜನಸಂಖ್ಯೆಯಲ್ಲಿ ಶೇಕಡ 85ರಷ್ಟಿರುವ, ಬಡತನದ ರೇಖೆಯ ಕೆಳಗಿರುವವರು (ಮತ್ತು ಉಚಿತ ಕೊಡುಗೆಗಳ ಫಲಾನುಭವಿಗಳು) ಯಾರೂ 'ಪರೋಪಜೀವಿ'ಗಳಲ್ಲ. ಒಂದು ದಿನ ಅವರು ಕೆಲಸ ಮಾಡದಿದ್ದರೆ ಅವರಿಗೆ ಅಂದಿನ ಊಟಕ್ಕೇ ಗತಿಯಿರುವುದಿಲ್ಲ ಹಾಗೂ ಇತರರಿಗೆ ಬೇಕಾದ ಸೌಲಭ್ಯ ಸಿಗುವುದಿಲ್ಲ.

'ಉಚಿತ ಕೊಡುಗೆ'ಗಳ ಬಗ್ಗೆ ಮತ್ತೆ ಮತ್ತೆ ಕೇಳಿಬರುವ ಒಂದು ಟೀಕೆಯೆಂದರೆ 'ಇವುಗಳಿಂದಾಗಿ ಅಭಿವೃದ್ಧಿ ಕಾರ್ಯಗಳಿಗೆ ಹಣವಿರುವುದಿಲ್ಲ. ಆದ್ದರಿಂದ ಯಾವ ಅಭಿವೃದ್ಧಿಯೂ ಆಗುವುದಿಲ್ಲ'. ಅಭಿವೃದ್ಧಿ ಎಂದರೇನು? ಕಲ್ಯಾಣ ರಾಜ್ಯ ಅಥವಾ ವೆಲ್‌ಫೇರ್ ಸ್ಟೇಟ್ ಎಂದರೆ 'ತನ್ನ ಪ್ರಜೆಗಳ, ವಿಶೇಷವಾಗಿ ಆರ್ಥಿಕ-ಸಾಮಾಜಿಕ ಅವಶ್ಯಕತೆ ಇರುವ ಜನರಿಗೆ ಕೊಡುಗೆ, ನಿವೃತ್ತಿ ವೇತನ ಮತ್ತು ಇತರ ರೀತಿಗಳಿಂದ, ಅವರ ಆರೋಗ್ಯ ಮತ್ತು ಗೌರವಪೂರ್ಣ ಬದುಕು ಇವುಗಳನ್ನು ರಕ್ಷಿಸುವ, ರಾಜ್ಯ, ರಾಷ್ಟ್ರವನ್ನು 'ಕಲ್ಯಾಣರಾಜ್ಯ, ರಾಷ್ಟ್ರ' ಎಂದು ಕರೆಯಬಹುದು. ಈ ತತ್ವವನ್ನೇ- ಎಂದರೆ ಆರೋಗ್ಯ ವಿಮೆ, ಸರ್ಕಾರಿ ಆಸ್ಪತ್ರೆ, ಶಿಕ್ಷಣ, ವಸತಿಗಾಗಿ ಅನುದಾನಗಳು, ಬಡವರಿಗೆ ಆರ್ಥಿಕ ವರ್ಗಾವಣೆ, ಉಚಿತ ಬಸ್ ಅಥವಾ ಮೆಟ್ರೊ ಪ್ರಯಾಣ, ನಿರುದ್ಯೋಗ ಭತ್ಯೆಯೆಲ್ಲ ಸರ್ಕಾರಗಳ ಕರ್ತವ್ಯ ಎಂದು ಹೇಳುವ-ನಮ್ಮ ಸಂವಿಧಾನದ ನಾಲ್ಕನೆಯ ಭಾಗ (ನಿರ್ದೇಶಿತ ತತ್ವಗಳು) ಮಂಡಿಸುತ್ತದೆ. ಉಚಿತ ಕೊಡುಗೆ, ನಿವೃತ್ತಿ ವೇತನ, ಅನುದಾನದಂತಹವನ್ನು ಅವಶ್ಯಕತೆ ಇರುವವರಿಗೆ ಕೊಡುವುದು ಸರ್ಕಾರದ ಕರ್ತವ್ಯ. ಯಾವ ದೃಷ್ಟಿಯಿಂದಲೂ ಅವು 'ಲಂಚ'ವಲ್ಲ.

ಕರ್ನಾಟಕವು ಚುನಾವಣೆಯ ಸಂದರ್ಭದಲ್ಲಿ ಘೋಷಿಸಿದ ಮತ್ತು ಆನಂತರ ಕಾರ್ಯಗತಗೊಳಿಸಿರುವ 'ಗ್ಯಾರಂಟಿ'ಗಳೆಂದರೆ ಶಕ್ತಿ (ಮಹಿಳೆಯರಿಗೆ ಉಚಿತ ಪ್ರಯಾಣ), ಅನ್ನಭಾಗ್ಯ, ಗೃಹಜ್ಯೋತಿ (200 ಯುನಿಟ್‌ವರೆಗೆ ಉಚಿತ ವಿದ್ಯುತ್), ಗೃಹಲಕ್ಷ್ಮಿ (ಮನೆಯ ಯಜಮಾನಿಗೆ ಮಾಹೆಯಾನ ₹ 2,000) ಮತ್ತು ಯುವನಿಧಿ (ಕೆಲಸ ಸಿಗದಿರುವ ಯುವಕ-ಯುವತಿಯರಿಗೆ ಕೊಡುವ ಸಹಾಯಧನ). ಈ 'ಗ್ಯಾರಂಟಿ'ಗಳ ಮೂಲಕ ಕರ್ನಾಟಕ ಮತ್ತು ಇತರ ರಾಜ್ಯಗಳು ಮಾಡುತ್ತಿರುವುದು ಸಂವಿಧಾನ ಹೇಳುವ ಕರ್ತವ್ಯವನ್ನೇ.

ಇನ್ನೂ ಮುಂದುವರಿದು ಹೇಳಬೇಕಾದರೆ, ಅಭಿವೃದ್ಧಿ ಎಂದರೆ ಬರೀ ಬುಲೆಟ್ ಟ್ರೇನ್‌ಗಳಲ್ಲ, ಬೃಹತ್ ಪ್ರತಿಮೆಗಳಲ್ಲ, ಲಕ್ಷುರಿ ಕಾರುಗಳಲ್ಲ; ಆರ್ಥಿಕ ನೆಲೆಯಲ್ಲಿ ಕಟ್ಟಕಡೆಯ ಪ್ರಜೆಗೂ ಗೌರವಪೂರ್ಣ ಬಾಳೊಂದನ್ನು ಕಟ್ಟಿಕೊಡುವುದು ನಿಜವಾದ ಅಭಿವೃದ್ಧಿ. ಹಾಗೆಯೇ, ಯಾರು ಪರೋಪಜೀವಿಗಳು, ಯಾರು ಅಲ್ಲ ಎಂದು ನಾಮನಿರ್ದೇಶನ ಮಾಡುವುದು ಎಲ್ಲರಿಗೂ ಸಮಾನ ಅವಕಾಶ ಹಾಗೂ ಸಂಪತ್ತಿನ ಸಮಾನ ವಿತರಣೆ ಇರುವಾಗ ಸಾಧ್ಯ. ಅನೇಕ ಸಂದರ್ಭಗಳಲ್ಲಿ, ಮುಖ್ಯವಾಗಿ ಚುನಾವಣಾ ಬಾಂಡ್‌ಗಳನ್ನು ನಿಷೇಧಿಸಿದಾಗ, ಮತ್ತೆ ಮತ್ತೆ ಸುಪ್ರೀಂ ಕೋರ್ಟ್ ಹೇಳಿದ್ದು 'ಎಲ್ಲರಿಗೂ ಸಮಾನ ಸ್ಥಿತಿಯ ಮೈದಾನವಿರಬೇಕು' (ಲೆವೆಲ್ ಫೀಲ್ಡ್). ಅಂತಹ ಪರಿಸ್ಥಿತಿ ನಿರ್ಮಾಣವಾಗುವವರೆಗೆ ಉಚಿತ ಕೊಡುಗೆಗಳು, ಮೀಸಲಾತಿಯಂತಹವು ಮುಂದುವರಿಯುತ್ತವೆ, ಮುಂದುವರಿಯಬೇಕು.

ವಾಚಕರ ವಾಣಿ

ಭ್ರಷ್ಟಾಚಾರದ ಪೋಷಕರು ಯಾರು?

'ಪ್ರಾದೇಶಿಕ ಸಾರಿಗೆ ಕಚೇರಿಗಳು ಭ್ರಷ್ಟಾಚಾರದ ಕೂಪಗಳಾಗಿವೆ' ಎಂದು ಸುಮಿತ್ ಪಂತ್ (ಕಿಡಿನುಡಿ, ಫೆ. 17) ಆರೋಪಿಸಿದ್ದಾರೆ. ನಾನು, ಕಳೆದ ವರ್ಷ ವಾಹನ ಚಾಲನಾ ಪರವಾನಗಿಯನ್ನು ನವೀಕರಿಸಬೇಕಾಗಿತ್ತು. ಸಾರಿಗೆ ಕಚೇರಿಗಳಲ್ಲಿನ ಭ್ರಷ್ಟಾಚಾರದ ಬಗ್ಗೆ ಕೇಳಿ ತಿಳಿದಿದ್ದ ನಾನು, ಮಧ್ಯವರ್ತಿಗಳ ಬಳಿ ಮಾಡಿಸಿಕೊಡುವಂತೆ ಕೇಳಿದೆ. ಆಗ ಅವರು ಕೇಳಿದ ಹಣ ಭಾರಿ ಅನಿಸಿತು. ಅಷ್ಟು ಕೊಡಕ್ಕೆ ಆಗುವುದಿಲ್ಲ ಎಂದಾಗ 'ಲಂಚ ಕೊಡದೆ ಏನೂ ನಡೆಯುವುದಿಲ್ಲ. ಅಲೆದಾಡಬೇಕಾಗುತ್ತೆ...' ಅಂತೆಲ್ಲಾ ಹೆದರಿಸಿದರು.

ನಾನು, ನೋಡೋಣ ಅಂದುಕೊಂಡು ನೇರವಾಗಿ ಆ ಕಚೇರಿಗೆ (ಮೈಸೂರು) ವಿಚಾರಿಸಲು ಹೋದೆ. 'ವಿಚಾರಣೆ' ವಿಭಾಗದಲ್ಲಿದ್ದ ಸಿಬ್ಬಂದಿಯ ಬಳಿ ನನ್ನ ಅಗತ್ಯದ ಕುರಿತು ಹೇಳಿದೆ. ತಕ್ಷಣ ಅವರು ಸಂಬಂಧಪಟ್ಟ ದಾಖಲೆಗಳ ಒಂದು ಪಟ್ಟಿ ಕೊಟ್ಟು, ಅವುಗಳೊಂದಿಗೆ ವಾಹನಸಮೇತ ಒಂದು ದಿನ ಬರಲು ತಿಳಿಸಿದರು. ಅದರಂತೆ ನಾನು ದಾಖಲೆ ಮತ್ತು ವಾಹನದೊಂದಿಗೆ ಹೋದೆ. ದಾಖಲೆಗಳನ್ನು ಪರಿಶೀಲಿಸಿದ ಅವರು, ನಿಗದಿತ ಶುಲ್ಕ ಪಾವತಿಸುವಂತೆ ತಿಳಿಸಿದರು. ಈ ಮೊತ್ತವು ಮಧ್ಯವರ್ತಿ ಕೇಳಿದ ಹಣದ ಮೂರನೇ ಒಂದು ಭಾಗವಾಗಿತ್ತು.

ಶುಲ್ಕ ಪಾವತಿಸಿದ ನಂತರ, ಸಾರಿಗೆ ಅಧಿಕಾರಿ ಪರಿಶೀಲಿಸಿದರು. ಅದಕ್ಕೆ ಸ್ವಲ್ಪ ಸಮಯ ಕಾಯಬೇಕಾಯಿತು. ಅದು ತೊಡಕಿಲ್ಲದೆ ಮುಗಿಯಿತು. ನಂತರ, ನವೀಕರಿಸಿದ ಪರವಾನಗಿಯನ್ನು ಅಂಚೆ ಮೂಲಕ ಮನೆಗೆ ತಲುಪಿಸಲಾಗುವುದು ಎಂದು ಹೇಳಿದರು. ಹಾಗೆಯೇ ಆಯಿತು. ಇಲ್ಲಿ ಭ್ರಷ್ಟರು ಯಾರು? ಏಕೆ? ಎರಡು ಕೈ ಸೇರಿದರೆ ತಾನೆ ಚಪ್ಪಾಳೆ! ಭ್ರಷ್ಟಾಚಾರವನ್ನು ಪೋಷಿಸುತ್ತಿರುವವರು ಯಾರು?

ಶಿವರಾಮ್ ಎಚ್.ಎಸ್., ಮೈಸೂರು

ವಲಸಿಗರಿಗೆ ಕೋಳ: ಇದು ಯಾವ ನಾಗರಿಕತೆ?

ಅಮೆರಿಕದಿಂದ ಗಡೀಪಾರು ಮಾಡಲಾದ ಅಕ್ರಮ ವಲಸಿಗರ ಮತ್ತೊಂದು ತಂಡ ಭಾರತಕ್ಕೆ ಮರಳಿದೆ. ಈ ಬಾರಿಯೂ ಭಾರತೀಯ ವಲಸಿಗರ ಕೈಗಳು ಮತ್ತು ಕಾಲುಗಳಿಗೆ ಬೇಡಿ ಹಾಕಿ ಅಮಾನವೀಯ ಮತ್ತು ಅವಮಾನಕರ ವರ್ತನೆ ತೋರಿಸಿದ್ದು ಖಂಡನೀಯ. ಅವರ ದೇಶದ ಕಾನೂನು ಏನೇ ಇರಲಿ, ಈ ವಲಸಿಗರನ್ನು ಭಯೋತ್ಪಾದಕರಂತೆ ನಡೆಸಿಕೊಂಡಿರುವುದನ್ನು ಪ್ರಜ್ಞಾವಂತರೇಕೆ, ಜನಸಾಮಾನ್ಯರೂ ಸಹಿಸಿಕೊಳ್ಳುತ್ತಿಲ್ಲ.

ನಮ್ಮ ಪ್ರಧಾನಿಯವರು, ಆ ದೇಶದ ಪ್ರವಾಸದಲ್ಲಿ ಇದ್ದಾಗಲೇ ವಲಸಿಗರನ್ನು ಈ ರೀತಿ ಗಡೀಪಾರು ಮಾಡಿದ್ದು ಅಕ್ಷಮ್ಯ. ಮೋದಿಯವರ ಆಪ್ತಮಿತ್ರ ಎಂದು ಕರೆಯಲ್ಪಡುವ ಟ್ರಂಪ್ ಈ ವಿಷಯವನ್ನು ಸೂಕ್ಷ್ಮವಾಗಿ ನಿಭಾಯಿಸಬೇಕಿತ್ತು. ಒಂದು ವೇಳೆ ಕಾಂಗ್ರೆಸ್ ಪಕ್ಷವು ಅಧಿಕಾರದಲ್ಲಿದ್ದಾಗ ಇಂಥ ಘಟನೆ ನಡೆದಿದ್ದರೆ, ದೇಶದಾದ್ಯಂತ ಬಿಜೆಪಿ ಬೀದಿಗಿಳಿದು ಪ್ರತಿಭಟಿಸುತ್ತಿತ್ತು. ಇದೀಗ ಅಧಿಕಾರದಲ್ಲಿ ಇರುವುದರಿಂದ ಜಾಣ ಮೌನ ವಹಿಸಿದೆ.

ರಮಾನಂದ ಎಸ್., ಬೆಂಗಳೂರು

ನುಗ್ಗುವ ದುರಭ್ಯಾಸದ ಪರಿಣಾಮ...

ನಮ್ಮಲ್ಲಿ ಕಾಲ್ತುಳಿತದಿಂದ, ನೂಕುನುಗ್ಗಲಿನಿಂದ ಸಾವು– ನೋವು ಸಂಭವಿಸುವಂತಹ ದುರಂತಗಳು ಆಗಿಂದಾಗ್ಗೆ ವರದಿಯಾಗುತ್ತಲೇ ಇರುತ್ತವೆ. ತಿರುಪತಿ, ಪ್ರಯಾಗ್‌ರಾಜ್, ದೆಹಲಿ ರೈಲು ನಿಲ್ದಾಣ ಇವೆಲ್ಲ ಇತ್ತೀಚಿನ ಉದಾಹರಣೆಗಳು. ಈ ದುರ್ಘಟನೆಗಳಿಗೆ ಮುಖ್ಯ ಕಾರಣವೆಂದರೆ ನಮ್ಮಲ್ಲಿ ಸರದಿ ಪದ್ಧತಿಯನ್ನು ಪಾಲಿಸದೆ, ತಾ ಮುಂದು, ನಾ ಮುಂದು ಎಂದು ಒಮ್ಮೆಲೇ ನುಗ್ಗುವ ದುರಭ್ಯಾಸ.

ವಾಹನ ಚಲಾಯಿಸುವವರಿಗೂ ಇದೇ ಬಗೆಯ ಅವಸರ, ಇನ್ನೊಂದು ವಾಹನವನ್ನು ಹಿಂದಿಕ್ಕುವ ಧಾವಂತ. ತಾಳ್ಮೆ ಎನ್ನುವುದು ಎಲ್ಲಿಯವರೆಗೆ ನಮಗೆ ಮುಖ್ಯವೆಂದು ಕಾಣಿಸುವುದಿಲ್ಲವೋ ಅಲ್ಲಿಯವರೆಗೆ ತಪ್ಪಿಸಬಹುದಾದ ಇಂತಹ ದುರ್ಘಟನೆಗಳನ್ನು ತಪ್ಪಿಸಲಾಗದು.

ಬಿ.ಎನ್. ಭರತ್, ಬೆಂಗಳೂರು

ಬೇಸಿಗೆಯ ಝಳ: ಇರಲಿ ಎಚ್ಚರ

ಇನ್ನೂ ಮಾರ್ಚ್ ಆರಂಭವಾಗಿಲ್ಲ. ಆದರೆ, ಈಗಲೇ ನೆತ್ತಿ ಸುಡುವಷ್ಟು ಬಿಸಿಲಿನ ಅನುಭವ. ಈ ಬಾರಿ ಬಿಸಿಲಿನ ತೀವ್ರತೆ ಹೆಚ್ಚಾಗಲಿದೆ ಎಂದು ಹವಾಮಾನ ಇಲಾಖೆಯು ಎಚ್ಚರಿಸಿದೆ. ಅದರಲ್ಲೂ ಉತ್ತರ ಕರ್ನಾಟಕದಲ್ಲಿ ಬಿಸಿಲಿನ ಪ್ರತಾಪ ವಿಪರೀತಕ್ಕೆ ಹೋಗುವ ಸಾಧ್ಯತೆ ಇದೆ. ಬಿಸಿಲಿನ ಝಳ ಬಾಧಿಸದಂತೆ ಜನಸಾಮಾನ್ಯರು ಎಚ್ಚರ ವಹಿಸಬೇಕು. ಬೇಸಿಗೆಯಲ್ಲಿ ನಿಂಬೆಹಣ್ಣಿನ ಪಾನೀಯ, ಮಜ್ಜಿಗೆ, ಎಳನೀರು ಸೇವಿಸುವುದು ಉತ್ತಮ. ರಸ್ತೆ ಬದಿಯ ಆಹಾರ ಸೂಕ್ತವಲ್ಲ. ಬೇಸಿಗೆಯಲ್ಲಿ ಸಾಮಾನ್ಯವಾಗಿ ಕಾಡುವ ಕೆಲವು ಸೋಂಕುಗಳ ಬಗ್ಗೆ ಜನರಲ್ಲಿ ತಿಳಿವಳಿಕೆ ಮೂಡಿಸಬೇಕು. ಎಸ್‌ಎಸ್‌ಎಲ್‌ಸಿ, ಪಿಯುಸಿ ವಾರ್ಷಿಕ ಪರೀಕ್ಷೆಗಳು ಈ ಅವಧಿಯಲ್ಲೇ ನಡೆಯುವುದರಿಂದ ಮಕ್ಕಳ ಆರೋಗ್ಯದ ಕಡೆ ಪೋಷಕರು ನಿಗಾ ವಹಿಸಬೇಕು.

ಬಸವರಾಜ ಡಿಗ್ಗಿ, ಆಳಂದ

ಚಲನಚಿತ್ರೋತ್ಸವ: ಆತಂಕ ಮೂಡಿಸಿದ ಆಯ್ಕೆ

ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವವು ಮಾರ್ಚ್ 1ರಿಂದ ಆರಂಭಗೊಳ್ಳಲಿದ್ದು, ಗುಣಾತ್ಮಕ ಸಿನಿಮಾಗಳನ್ನು ನೋಡಲು ನಾವು ಕಾತರರಾಗಿದ್ದೇವೆ. ಆದರೆ, ಏಷ್ಯನ್ ಸಿನಿಮಾ ಸ್ಪರ್ಧಾ ವಿಭಾಗಕ್ಕೆ ಆಯ್ಕೆಯಾದ ಚಲನಚಿತ್ರಗಳ ಪಟ್ಟಿಯಲ್ಲಿ 'Reading Lolita in Tehran' ಎಂಬ ಸಿನಿಮಾ ಆಯ್ಕೆಯಾಗಿರುವುದು ನಮ್ಮನ್ನು ಆತಂಕಿತರನ್ನಾಗಿಸಿದೆ.

ಪ್ರಸ್ತುತ ಚಿತ್ರೋತ್ಸವಕ್ಕೆ 'ಸರ್ವ ಜನಾಂಗದ ಶಾಂತಿಯ ತೋಟ' ಎಂಬ ಶೀರ್ಷಿಕೆಯನ್ನು ಇಟ್ಟುಕೊಂಡಿರುವಾಗ ಇಂಥ ಪ್ರಮಾದ ಏಕಾಗಿದೆ? ಇಸ್ರೇಲ್ ಪ್ರಭುತ್ವವು ಪ್ಯಾಲೆಸ್ಟೀನ್‌ನ ಗಾಜಾಪಟ್ಟಿಯಲ್ಲಿ ನರಮೇಧ ನಡೆಸಿದೆ. ಅದರ ಘಾತುಕ ಯೋಜನೆಗಳ ಭಾಗವಾಗಿ ಕಟ್ಟಲಾಗಿರುವ, ಇಸ್ಲಾಮೋಫೋಬಿಯ ಬಿತ್ತುವ ಇರಾದೆಯ ಸಿನಿಮಾ ಇದಾಗಿದೆ! ಇಂಥ ಸಿನಿಮಾವನ್ನು ಸ್ಪರ್ಧೆ ಹಾಗೂ ಪ್ರದರ್ಶನಕ್ಕೆ ಆಯ್ಕೆ ಮಾಡುವ ಮೂಲಕ ಬೆಂಗಳೂರು ಅಂತರರಾಷ್ಟ್ರೀಯ ಸಿನಿಮೋತ್ಸವವು ಈ ಅಕೃತ್ಯವನ್ನು ಬೆಂಬಲಿಸುವುದನ್ನು ನಾವು ಖಂಡಿಸುತ್ತೇವೆ. ಪಟ್ಟಿಯಿಂದ ಈ ಸಿನಿಮಾವನ್ನು ಕೂಡಲೇ ತೆಗೆದುಹಾಕಬೇಕು.

ಕೆ.ಫಣಿರಾಜ್, ಚಂದ್ರಪ್ರಭ ಕಠಾರಿ, ಎಂ.ನಾಗರಾಜ ಶೆಟ್ಟಿ, ಮುರಳಿಕೃಷ್ಣ ರಮೇಶ್ ಶಿವಮೊಗ್ಗ, ಕೃಷ್ಣಪ್ರಸಾದ್

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಅಕ್ರಮ ವಲಸಿಗರನ್ನು ವಾಪಸ್ ಕಳುಹಿಸುತ್ತಿರುವ ಕೀರ್ ಸ್ಟಾರ್ಮರ್

ಅಮೆರಿಕದ ಡೊನಾಲ್ಡ್ ಟ್ರಂಪ್ ಸರ್ಕಾರದ ಹಾದಿಯಲ್ಲಿಯೇ ಬ್ರಿಟನ್‌ನ ಕೀರ್ ಸ್ಟಾರ್ಮರ್ ಸರ್ಕಾರ ಕೂಡ ಅಕ್ರಮ ವಲಸಿಗರ ವಿರುದ್ಧ ತೀವ್ರವಾದ ಕ್ರಮಗಳನ್ನು ಜರುಗಿಸುತ್ತಿದೆ. ಅಮೆರಿಕದ ರೀತಿಯಲ್ಲಿಯೇ ಬ್ರಿಟನ್‌ನಿಂದಲೂ ಅಕ್ರಮ ವಲಸಿಗರನ್ನು ವಿಮಾನಗಳಲ್ಲಿ ದೇಶದಿಂದ ಹೊರಕ್ಕೆ ಕಳುಹಿಸಲಾಗಿದೆ. ಮತ್ತೂ ಮುಂದುವರಿದು, ಅಮೆರಿಕದ ರೀತಿಯಲ್ಲಿಯೇ ಈ ಬಗ್ಗೆ ವಿಡಿಯೊಗಳನ್ನೂ ಬಿಡುಗಡೆ ಮಾಡಲಾಗಿದೆ. ಬ್ರಿಟನ್‌ನ ಲೇಬರ್ ಪಾರ್ಟಿಯ ಸರ್ಕಾರದ ಈ ಕ್ರಮದಿಂದ ಅಲ್ಲಿರುವ ಭಾರತ ಮೂಲದ ಸಾವಿರಾರು ಅಕ್ರಮ ವಲಸಿಗರಲ್ಲಿ ಆತಂಕ ಸೃಷ್ಟಿಯಾಗಿದೆ

6.83 ಕೋಟಿ
ಬ್ರಿಟನ್ ಜನಸಂಖ್ಯೆ

80 ಲಕ್ಷದಿಂದ **1.20** ಕೋಟಿ
ಬ್ರಿಟನ್‌ನಲ್ಲಿರುವ ಅಕ್ರಮ ವಲಸಿಗರ ಅಂದಾಜು ಸಂಖ್ಯೆ

17.64 ಲಕ್ಷ
ಬ್ರಿಟನ್‌ನಲ್ಲಿ ನೆಲಸಿರುವ ಒಟ್ಟು ಭಾರತೀಯರು

14.13 ಲಕ್ಷ
ಭಾರತ ಮೂಲದವರು

3.51 ಲಕ್ಷ
ಅನಿವಾಸಿ ಭಾರತೀಯರು

1.37 ಲಕ್ಷ
ಬ್ರಿಟನ್‌ನಲ್ಲಿ ಶಿಕ್ಷಣ ಪಡೆಯುತ್ತಿರುವ ಭಾರತದ ವಿದ್ಯಾರ್ಥಿಗಳು

‘ದೊಡ್ಡಣ್ಣ’ನ ಹಾದಿಯಲ್ಲಿ ಬ್ರಿಟನ್

ಪ್ರಜಾವಾಣಿ ವಾರ್ತೆ

ಅಮೆರಿಕದ ನಂತರ ಬ್ರಿಟನ್ ಸರ್ಕಾರವು ಅಕ್ರಮ ವಲಸೆ ಮತ್ತು ಅಕ್ರಮ ವಲಸಿಗರ ವಿರುದ್ಧ ಕಠಿಣ ಕ್ರಮಕ್ಕೆ ಮುಂದಾಗಿದೆ. ಅಕ್ರಮ ವಲಸಿಗರನ್ನು ಅವರ ಮೂಲದೇಶಗಳಿಗೆ ತಲುಪಿಸಲು ಸಜ್ಜಾಗಿರುವ ವಿಮಾನಗಳ ವಿಡಿಯೊ ಅನ್ನು ಫೆ.10ರಂದು ಅಲ್ಲಿನ ಗೃಹ ಇಲಾಖೆ ಹಂಚಿಕೊಂಡಿದೆ. ಅಕ್ರಮ ವಲಸೆಯ ವಿರುದ್ಧ ತಾನು ದೃಢ ನಿಲುವು ಹೊಂದಿರುವುದನ್ನು ಸಾಬೀತು ಪಡಿಸುವುದಕ್ಕಾಗಿ ಲೇಬರ್ ಪಾರ್ಟಿ ಸರ್ಕಾರವು ಈ ರೀತಿ ಮಾಡಿರುವುದಾಗಿ ಹೇಳಲಾಗುತ್ತಿದ್ದು, ಅಕ್ರಮ ವಲಸಿಗರ ವಿರುದ್ಧ ಕಠಿಣ ಕ್ರಮಗಳನ್ನು ಮುಂದುವರಿಸಲಾಗುವುದು ಎಂಬ ಸಂದೇಶವನ್ನೂ ಪ್ರಧಾನಿ ಕೀರ್ ಸ್ಟಾರ್ಮರ್ ಅವರು ಈ ಮೂಲಕ ರವಾನಿಸಿದ್ದಾರೆ.

ಜನವರಿ ತಿಂಗಳಲ್ಲಿ ಬ್ರಿಟನ್‌ನ ವಲಸೆ ವಿಭಾಗದ ಅಧಿಕಾರಿಗಳು ದೇಶದ 828 ಸ್ಥಳಗಳಲ್ಲಿ ದಾಳಿ ನಡೆಸಿ ಅಲ್ಲಿದ್ದವರ ವಲಸೆಯ ದಾಖಲೆಗಳನ್ನು ಪರಿಶೀಲಿಸಿದ್ದರು. ಅದರಲ್ಲಿ ಭಾರತ ಮೂಲದವರಿಗೆ ಸೇರಿದ ಒಂದು ರೆಸ್ಟೊರೆಂಟ್ ಕೂಡ ಇತ್ತು. ಈ ವೇಳೆ ಏಳು ಮಂದಿಯನ್ನು ಬಂಧಿಸಿ, ನಾಲ್ವರನ್ನು ವಶಕ್ಕೆ ಪಡೆದಿದ್ದರು.

ಐದು ವರ್ಷಗಳಲ್ಲಿ ಬ್ರಿಟನ್‌ನಲ್ಲಿ ಅಕ್ರಮ ವಲಸಿಗರ ವಿರುದ್ಧ ನಡೆಸಲಾದ ಅತಿ ದೊಡ್ಡ ಕಾರ್ಯಾಚರಣೆ ಇದು. ನಾಲ್ಕು ‘ದೊಡ್ಡ ವಿಮಾನಗಳ’ಲ್ಲಿ 850ಕ್ಕೂ ಹೆಚ್ಚು ಅಕ್ರಮ ವಲಸಿಗರನ್ನು ದೇಶದಿಂದ ಹೊರಹಾಕಲಾಗಿದೆ ಎಂದು ಕೀರ್ ಸ್ಟಾರ್ಮರ್ ಸರ್ಕಾರ ಹೇಳಿಕೊಂಡಿದೆ. 2024ರ ಜುಲೈನಲ್ಲಿ ಸ್ಟಾರ್ಮರ್ ಸರ್ಕಾರ ಬಂದ ನಂತರ, ಇಲ್ಲಿಯವರೆಗೆ ಸುಮಾರು 19 ಸಾವಿರ ಅಕ್ರಮ ವಲಸಿಗರನ್ನು ದೇಶದಿಂದ ಹೊರಕ್ಕೆ ಕಳುಹಿಸಲಾಗಿದೆ ಎಂದು ಗೃಹ ಸಚಿವಾಲಯ ಹೇಳಿದೆ. 2018ರ ನಂತರ ಇಷ್ಟು ದೊಡ್ಡ ಪ್ರಮಾಣದಲ್ಲಿ ಅಕ್ರಮವಾಗಿ ನೆಲಸಿದ್ದವರನ್ನು ಅವರ ದೇಶಕ್ಕೆ ಕಳುಹಿಸಿದ್ದು ಇದೇ ಮೊದಲು.

ಒಂದು ಕಡೆ ದೇಶದೊಳಗಿನ ಅಕ್ರಮ ವಲಸಿಗರನ್ನು ಹೊರಹಾಕಲಾಗುತ್ತಿದೆ. ಇನ್ನೊಂದು ಕಡೆ, ದೇಶದೊಳಗೆ ವಲಸಿಗರು ಅಕ್ರಮವಾಗಿ ಪ್ರವೇಶಿಸುವುದನ್ನು ತಡೆಯಲು ಕ್ರಮ ಕೈಗೊಳ್ಳಲಾಗುತ್ತಿದೆ. ಉದ್ಯೋಗದ ಆಸೆಯೊಂದಿಗೆ ಸಣ್ಣ ದೋಣಿಗಳ ಮೂಲಕ ಬ್ರಿಟನ್‌ಗೆ ಬರುತ್ತಿರುವ ಕಾರ್ಮಿಕರ ವಿರುದ್ಧ ಬಿಗಿ ನಿಲುವು ತಳೆಯುವುದಾಗಿಯೂ ಪ್ರಧಾನಿ ಸ್ಟಾರ್ಮರ್ ಹೇಳಿದ್ದಾರೆ.

ಚುನಾವಣಾ ವಿಷಯ: ಇಂಗ್ಲಿಷ್ ಕಡಲ್ಗಾಲುವೆಯನ್ನು ಸಣ್ಣ ದೋಣಿಗಳಲ್ಲಿ ದಾಟಿ ಬ್ರಿಟನ್ ಸೇರುವವರ ಸಂಖ್ಯೆ ಇತ್ತೀಚಿನ ವರ್ಷಗಳಲ್ಲಿ ಹೆಚ್ಚಾಗಿದೆ. ಅಮೆರಿಕಕ್ಕೆ ಕೆನಡಾ ಮತ್ತು ಮೆಕ್ಸಿಕೊ ಮೂಲಕ ಡಂಕಿ ಮಾರ್ಗಗಳಿದ್ದಂತೆ ಇದು ಬ್ರಿಟನ್ ಅನ್ನು ಅಕ್ರಮವಾಗಿ ಪ್ರವೇಶಿಸಲು ಬಯಸುವ ಹೆಚ್ಚಿನ ಜನ ಬಳಸುವ ದಾರಿಯಾಗಿದೆ. 2023ರಲ್ಲಿ ಬ್ರಿಟನ್‌ನ ಸಾರ್ವತ್ರಿಕ ಚುನಾವಣೆಯ ವೇಳೆ ಅಕ್ರಮ ವಲಸೆಯ ಪ್ರಮುಖ ವಿಷಯವಾಗಿತ್ತು. ಲೇಬರ್ ಪಾರ್ಟಿಯ ಎದುರು ಸೋಲುವ ಸೂಚನೆ ಸಿಕ್ಕಿದ್ದರಿಂದ ಆಗ ಪ್ರಧಾನಿಯಾಗಿದ್ದ ರಿಷಿ ಸುನಕ್ ಅವರು ತಮ್ಮ ಕನ್ಸರ್ವೇಟಿವ್ ಪಕ್ಷ ಮತ್ತೆ ಅಧಿಕಾರಕ್ಕೆ ಬಂದರೆ, ಇಂಗ್ಲಿಷ್ ಕಡಲ್ಗಾಲುವೆಯ ಮೂಲಕ ದೇಶದೊಳಗೆ ಪ್ರವೇಶಿಸುವ ದೋಣಿಗಳನ್ನು ನಿರ್ಬಂಧಿಸುವುದಾಗಿ ಭರವಸೆ ನೀಡಿದ್ದರು.

ಲೇಬರ್ ಪಾರ್ಟಿ ಅಧಿಕಾರಕ್ಕೆ ಬಂದ ನಂತರ ಅಕ್ರಮ ವಲಸಿಗರ ವಿರುದ್ಧ ಕಾರ್ಯಾಚರಣೆ ಚುರುಕುಗೊಂಡಿದೆ. ಸ್ಟಾರ್ಮರ್ ಸರ್ಕಾರವು ಏಳು ತಿಂಗಳಲ್ಲಿ ದೇಶದಿಂದ ಹೊರ ಹಾಕಲಾದ ಅಕ್ರಮ ವಲಸಿಗರಲ್ಲಿ ಏಷ್ಯಾ, ಯೂರೋಪ್, ಆಫ್ರಿಕಾ, ದಕ್ಷಿಣ ಅಮೆರಿಕ ರಾಷ್ಟ್ರದವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಇವರ ಪೈಕಿ ಬ್ಯೂಟಿ ಸಲೂನ್‌ಗಳಲ್ಲಿ ಕೆಲಸ ಮಾಡುವವರು, ಕಾರು ತೊಳೆಯುವವರು, ದಾಸ್ತಾನು ಮಳಿಗೆಗಳಲ್ಲಿ ಕೆಲಸ ಮಾಡುವವರು, ರೆಸ್ಟೊರೆಂಟ್‌ನಲ್ಲಿ ಕೆಲಸ ಮಾಡುವ ಕಾರ್ಮಿಕರೇ ಹೆಚ್ಚು.

ಅಕ್ರಮ ವಲಸಿಗರನ್ನು ಅವರ ದೇಶಗಳಿಗೆ ಕಳುಹಿಸಬೇಕು ಎಂಬ ನಿಲುವನ್ನು ಯುರೋಪ್‌ನ ಹಲವು ರಾಷ್ಟ್ರಗಳು ಹೊಂದಿವೆ. ಕೆಲವು ರಾಷ್ಟ್ರಗಳು ಅಕ್ರಮ ವಲಸಿಗರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುತ್ತಿವೆ. ಫ್ರಾನ್ಸ್ ಕಳೆದ ವರ್ಷ 22 ಸಾವಿರ ಅನಧಿಕೃತ ವಲಸಿಗರನ್ನು ದೇಶದಿಂದ ಕಳುಹಿಸಿತ್ತು. ಐರ್ಲೆಂಡ್ ಕೂಡ ಕಳೆದ ವರ್ಷದ ನವೆಂಬರ್ ಹೊತ್ತಿಗೆ ದಾಖಲೆಗಳನ್ನು ಹೊಂದಿರದ 2000 ವಲಸಿಗರನ್ನು ಹೊರಗೆ ಹಾಕಿತ್ತು. ಇಟಲಿ ಕೂಡ ಬಿಗಿ ಕ್ರಮ ಕೈಗೊಳ್ಳುತ್ತಿದೆ.



* ಸೆಪ್ಟೆಂಬರ್‌ವರೆಗೆ

ಭಾರತ ಮೂಲದವರಿಗೆ ಸಂಕಷ್ಟ

ಇತ್ತೀಚಿನ ವರ್ಷಗಳಲ್ಲಿ ಭಾರತದಿಂದ ಬ್ರಿಟನ್‌ಗೆ ಅಕ್ರಮ ಮಾರ್ಗಗಳ ಮೂಲಕ ಪ್ರವೇಶಿಸುವವರ ಸಂಖ್ಯೆ ಹೆಚ್ಚಾಗಿದೆ. ಅಲ್ಲಿನ ಗೃಹ ಇಲಾಖೆಯ ಅಂಕಿ ಅಂಶಗಳು ಇದನ್ನು ಹೇಳುತ್ತವೆ. 2023ರಲ್ಲಿ ಈ ಸಂಖ್ಯೆಯಲ್ಲಿ ಭಾರಿ ಹೆಚ್ಚಳ ಕಂಡುಬಂದಿತ್ತು. ಅದರ ಜತೆಗೆ, ಬ್ರಿಟನ್‌ನಲ್ಲಿ ಆಶ್ರಯ ಕೋರಿ ಅರ್ಜಿ ಸಲ್ಲಿಸುವ ಭಾರತ ಮೂಲದವರ ಸಂಖ್ಯೆಯಲ್ಲಿಯೂ ಹೆಚ್ಚಳವಾಗಿದೆ. 2023ರಲ್ಲಿ ಆಶ್ರಯಕ್ಕಾಗಿ ಅರ್ಜಿ ಸಲ್ಲಿಸಿದ ಭಾರತೀಯರ ಸಂಖ್ಯೆ ಮೊದಲ ಬಾರಿಗೆ 5,000 ಗಡಿ ತಲುಪಿತ್ತು.

ವಿಮಾನಗಳಲ್ಲಿ ದೇಶದಿಂದ ಹೊರಗೆ ಕಳುಹಿಸಲಾದ ಅಕ್ರಮ ವಲಸಿಗರ ಪೈಕಿ ಯಾವ ದೇಶದವರು ಎಷ್ಟು ಎನ್ನುವ ಮಾಹಿತಿ ಇನ್ನೂ ಬಹಿರಂಗಗೊಂಡಿಲ್ಲ. ಆದರೆ, ಈ ಹಿಂದಿನ ದತ್ತಾಂಶ ಪರಿಶೀಲಿಸಿದರೆ, ಬ್ರಿಟನ್‌ನಿಂದ ಹೊರಗೆ ಕಳಿಸಲಾದ ಆಶ್ರಯ ಕೋರಿ ಅರ್ಜಿ ಸಲ್ಲಿಸಿದ್ದ ವಲಸಿಗರ ಪೈಕಿ (2024ರ ಸೆಪ್ಟೆಂಬರ್ ಅಂತ್ಯದ ದತ್ತಾಂಶ) 118 ಮಂದಿ ಭಾರತೀಯರಿದ್ದು, ಎರಡನೇ ಸ್ಥಾನದಲ್ಲಿದ್ದಾರೆ. ಮೊದಲ ಸ್ಥಾನದಲ್ಲಿ ಅಲ್ಬೇನಿಯಾ ಮೂಲದವರಿದ್ದಾರೆ.

ಆಶ್ರಯ ಕೋರಿ ಅರ್ಜಿ ಸಲ್ಲಿಸದೇ ಇರುವವರ ವಿಭಾಗದಲ್ಲಿ ಮೊದಲ ಸ್ಥಾನದಲ್ಲಿ ರೊಮಾನಿಯಾದವರು ಇದ್ದರೆ, ಎರಡನೇ ಸ್ಥಾನದಲ್ಲಿ ಭಾರತ ಮೂಲದವರು ಇದ್ದಾರೆ (203). ಒಟ್ಟಾರೆ 321 ಮಂದಿ ಭಾರತ ಮೂಲದವರನ್ನು ಬ್ರಿಟನ್‌ನಿಂದ ವಾಪಸ್ ಕಳುಹಿಸಲಾಗಿದೆ.

ಜತೆಗೆ ಅಕ್ರಮವಾಗಿ ನೆಲಸಿದ್ದ, ಆಶ್ರಯ ಕೋರಿ ಅರ್ಜಿ ಸಲ್ಲಿಸದ 5,594 ಮಂದಿ ಭಾರತ ಮೂಲದವರು ಸ್ವಯಂಪ್ರೇರಿತರಾಗಿ ಬ್ರಿಟನ್‌ನಿಂದ ವಾಪಸ್ ಆಗಿದ್ದಾರೆ. ಇದೇ ವೇಳೆ ಆಶ್ರಯ ಕೋರಿ ಅರ್ಜಿ ಸಲ್ಲಿಸಿದ್ದ 504 ಮಂದಿ ಭಾರತೀಯರು ಬ್ರಿಟನ್‌ನಿಂದ ಭಾರತಕ್ಕೆ ತಾವಾಗಿಯೇ ಹಿಂದಿರುಗಿದ್ದಾರೆ.

ದೋಣಿಗಳಲ್ಲಿ ಹೋಗುವವರೇ ಅಧಿಕ



* ಸೆಪ್ಟೆಂಬರ್‌ವರೆಗೆ

ಬ್ರಿಟನ್‌ಗೆ ಅಕ್ರಮವಾಗಿ ವಲಸೆ ಹೋಗುವವರಲ್ಲಿ ಬಹುತೇಕ ಮಂದಿ ಆಯ್ಕೆ ಮಾಡಿಕೊಳ್ಳುವ ಮಾರ್ಗ ಇಂಗ್ಲಿಷ್ ಕಡಲ್ಗಾಲುವೆ. ವಿವಿಧ ರಾಷ್ಟ್ರಗಳ ಜನರು ತಂಡೋಪತಂಡವಾಗಿ ಯುರೋಪ್ ಖಂಡದಿಂದ ಪುಟ್ಟ ಪುಟ್ಟ ದೋಣಿಗಳಲ್ಲಿ ಇಂಗ್ಲಿಷ್ ಕಡಲು ಕಾಲುವೆಯನ್ನು ದಾಟಿ ಬ್ರಿಟನ್ ಪ್ರವೇಶಿಸುತ್ತಾರೆ. 2021ರಿಂದೀಚೆಗೆ ಈ ಮಾರ್ಗದಲ್ಲಿ ಬರುತ್ತಿರುವ ಅನಧಿಕೃತ ವಲಸಿಗರ ಸಂಖ್ಯೆಯಲ್ಲಿ ಗಣನೀಯ ಹೆಚ್ಚಳವಾಗಿರುವುದನ್ನು ಬ್ರಿಟನ್‌ನ ಗೃಹ ಇಲಾಖೆಯ ಅಂಕಿ ಅಂಶಗಳು ಹೇಳುತ್ತವೆ. ಅಫ್ಗಾನಿಸ್ತಾನ (2023ರಲ್ಲಿ 5,511 ಮಂದಿ), ವಿಯೆಟ್ನಾಂ (2024ರಲ್ಲಿ 3,132 ಜನರು), ಇರಾನ್ (2023ರಲ್ಲಿ 3,588 ಜನರು), ಸಿರಿಯಾ, ಸುಡಾನ್, ಎರಿಟ್ರಿಯಾ, ಇರಾಕ್, ಟರ್ಕಿ ಮುಂತಾದ ರಾಷ್ಟ್ರಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಜನರು ಅನಧಿಕೃತವಾಗಿ ವಲಸೆ ಹೋಗುತ್ತಾರೆ. ಇವರಲ್ಲಿ ಬಹುತೇಕರು ನಿರಾಶ್ರಿತರು.

ಮೂರು ವರ್ಷಗಳಿಂದ ಭಾರತದಿಂದಲೂ ಈ ಹಾದಿಯಲ್ಲಿ ಅಕ್ರಮವಾಗಿ ಬ್ರಿಟನ್ ಪ್ರವೇಶಿಸುತ್ತಿರುವ ಸಂಖ್ಯೆ ಜಾಸ್ತಿಯಾಗುತ್ತಿದೆ. ಉಳಿದಂತೆ, ಸಮರ್ಪಕ ದಾಖಲೆಗಳಿಲ್ಲದೆ ಅಥವಾ ನಕಲಿ ದಾಖಲೆಗಳನ್ನು ಸೃಷ್ಟಿಸಿ ವಿಮಾನದ ಮೂಲಕ ಬ್ರಿಟನ್‌ಗೆ ಬಂದಿಳಿರುವವರೂ ಇದ್ದಾರೆ. ಹಡಗುಗಳಲ್ಲಿ ಬಂದು ಬಂದರುಗಳ ಮೂಲಕ ಅಕ್ರಮವಾಗಿ ಪ್ರವೇಶಿಸುವ ವಲಸಿಗರೂ ಇದ್ದಾರೆ.

ಇನ್ನು ಪೌರತ್ವ ಸಿಗದು

ಅಕ್ರಮವಾಗಿ ವಲಸೆ ಹೋದವರಲ್ಲಿ ಹಲವರು ಬ್ರಿಟನ್‌ನ ಆಶ್ರಯಕ್ಕಾಗಿ, ಪೌರತ್ವಕ್ಕಾಗಿ ಮನವಿ ಮಾಡುತ್ತಾರೆ. ಭಾರತದಿಂದ ಅಕ್ರಮವಾಗಿ ವಲಸೆ ಹೋದವರ ಪೈಕಿ 2023ರಲ್ಲಿ 4,942 ಮಂದಿ ಮನವಿ ಮಾಡಿದ್ದರು. ಕಳೆದ ವರ್ಷ ಸೆಪ್ಟೆಂಬರ್ ತಿಂಗಳವರೆಗೆ 4,176 ಮಂದಿ ಅರ್ಜಿ ಹಾಕಿದ್ದರು. ಇದೇ ರೀತಿ ವಿವಿಧ ರಾಷ್ಟ್ರಗಳಿಂದ ಬಂದಿರುವ ನಿರಾಶ್ರಿತರೂ ಅರ್ಜಿ ಸಲ್ಲಿಸುತ್ತಾರೆ. ಬ್ರಿಟನ್ ಸರ್ಕಾರ ಪರಿಶೀಲನೆ ನಡೆಸಿ ನಿರ್ಧಾರ ಕೈಗೊಳ್ಳುತ್ತದೆ. ಆದರೆ, ಕೆಲವು ದಿನಗಳ ಹಿಂದೆಯಷ್ಟೇ ಅಕ್ರಮವಾಗಿ ವಲಸೆ ಬಂದವರಿಗೆ ಪೌರತ್ವ ನೀಡದಿರಲು ಸರ್ಕಾರ ನಿರ್ಧರಿಸಿದೆ. ಗೃಹ ಇಲಾಖೆಯು ವಾರದ ಹಿಂದೆಯಷ್ಟೇ ಹೊಸ ಮಾರ್ಗಸೂಚಿ ಹೊರಡಿಸಿದೆ.

ಆಧಾರ: ಪಿಟಿಐ, ಬಿಬಿಸಿ, ಬ್ರಿಟನ್ ಗೃಹ ಇಲಾಖೆಯ ವೆಬ್‌ಸೈಟ್

ಸಿನಿ ಬಿಟ್ಸ್

ಸ್ವಾಗತ ಕೋರಿದ ‘ಜಸ್ಟ್ ಮ್ಯಾರೀಡ್’ ಜೋಡಿ

‘ಬಿಗ್‌ಬಾಸ್’ ಖ್ಯಾತಿಯ ನಟ ಶೈನ್ ಶೆಟ್ಟಿ ಹಾಗೂ ಅಂಕಿತಾ ಅಮರ್ ನಟಿಸಿರುವ ‘ಜಸ್ಟ್ ಮ್ಯಾರೀಡ್’ ಸಿನಿಮಾದ ಮೊದಲ ಹಾಡು ಬಿಡುಗಡೆಯಾಗಿದೆ. ‘ಇದು ಮೊದಲನೇ ಸ್ವಾಗತಾನಾ...’ ಎಂಬ ಹಾಡನ್ನು ನಿರ್ಮಾಪಕಿ ಅಶ್ವಿನಿ ಪುನೀತ್ ರಾಜ್‌ಕುಮಾರ್ ರಿಲೀಸ್ ಮಾಡಿದರು.

ಎಬಿಬಿಎಸ್ ಸ್ಟುಡಿಯೊಸ್ ಲಾಂಛನದಲ್ಲಿ ಅಜನೀಶ್ ಲೋಕನಾಥ್ ಹಾಗೂ ಸಿ.ಆರ್ ಬಾಬಿ ಅವರು ನಿರ್ಮಿಸಿರುವ, ಸಿ.ಆರ್.ಬಾಬಿ ನಿರ್ದೇಶನದ ಈ ಚಿತ್ರವನ್ನು ಕೆ.ಆರ್.ಜಿ. ಸ್ಟುಡಿಯೋಸ್ ವಿತರಣೆ ಮಾಡುತ್ತಿದೆ. ಕೆ.ಕಲ್ಯಾಣ್ ಅವರು ಈ ಹಾಡನ್ನು ಬರೆದಿದ್ದು, ಜಸ್ಕರಣ್ ಸಿಂಗ್ ಹಾಡಿದ್ದಾರೆ. ‘ಈ ಹಾಡಿನ ಚಿತ್ರೀಕರಣ ಬೆಂಗಳೂರಿನಲ್ಲೇ ನಡೆದಿದೆ. ನಾನೇ ಈ ಹಾಡಿಗೆ ನೃತ್ಯ ನಿರ್ದೇಶನ ಮಾಡಿದ್ದೇನೆ. ಈಗಷ್ಟೇ ಮದುವೆಯಾದ ಜೋಡಿಗೆ ನಮ್ಮ ಈ ಚಿತ್ರ ಬಹಳ ಹತ್ತಿರವಾಗಲಿದೆ. ಒಂದೊಳ್ಳೆಯ ಪ್ರೇಮಕಥೆ ಇದಾಗಿದ್ದು, ತೆರೆಗೆ ಬರಲು ಚಿತ್ರ ಸಿದ್ಧವಾಗಿದೆ’ ಎನ್ನುತ್ತಾರೆ ನಿರ್ದೇಶಕಿ ಸಿ.ಆರ್.ಬಾಬಿ. ಬಾಬಿ ಅವರೇ ಈ ಚಿತ್ರಕ್ಕೆ ಕಥೆ ಬರೆದಿದ್ದು, ರಘು ನಿಡುವಳ್ಳಿ ಚಿತ್ರದ ಸಂಭಾಷಣೆ ಬರೆದಿದ್ದಾರೆ. ದೇವರಾಜ್, ಅಚ್ಯುತ್ ಕುಮಾರ್, ಮಾಳವಿಕ ಅವಿನಾಶ್, ಅನೂಪ್ ಭಂಡಾರಿ, ಶ್ರುತಿ ಹರಿಹರನ್ ಮತ್ತಿತರರು ತಾರಾಬಳಗದಲ್ಲಿದ್ದಾರೆ.

ನಿರ್ದೇಶಕನಿಂದ ನಾಯಕನಾದ ಶೂನ್ಯ


ಶೂನ್ಯ

‘ಹೆಡ್‌ಬುಷ್’ ಸಿನಿಮಾ ಮೂಲಕ ಚಂದನವನದಲ್ಲಿ ಗುರುತಿಸಿಕೊಂಡಿರುವ ನಿರ್ದೇಶಕ ಶೂನ್ಯ ಅವರು ಇದೀಗ ನಾಯಕನಾಗಿ ತೆರೆ ಮೇಲೆ ಕಾಣಿಸಿಕೊಳ್ಳಲಿದ್ದಾರೆ.

ಶೂನ್ಯ ಹೊಸ ಸಿನಿಮಾಗೆ ‘ಲಾರ್ಡ್ ಗಾಗಾ’ ಎಂಬ ಶೀರ್ಷಿಕೆ ಇಡಲಾಗಿದೆ. ಸದ್ಯ ‘ಲೂಸ್ ಮಾದ’ ಯೋಗಿ ಅವರ 50ನೇ ಸಿನಿಮಾ ‘ರೋಸಿ’ ನಿರ್ದೇಶನದಲ್ಲಿ ತೊಡಗಿಸಿಕೊಂಡಿರುವ ಶೂನ್ಯ, ಈ ಪ್ರಾಜೆಕ್ಟ್ ಬಳಿಕ ಹೀರೊ ಆಗಿ ಬಣ್ಣಹಚ್ಚಲಿದ್ದಾರೆ. ತಾರಕ್ ಪೊನ್ನಪ್ಪ ಹಾಗೂ ಚೈತ್ರಾ ಜೆ.ಆಚಾರ್ ನಟಿಸಿದ್ದ ‘ಗಿಲ್ಕಿ’ ಸಿನಿಮಾ ನಿರ್ದೇಶಿಸಿದ್ದ ವೈಕೆ ‘ಲಾರ್ಡ್ ಗಾಗಾ’ ಸಿನಿಮಾಗೆ ಆ್ಯಕ್ಷನ್ ಕಟ್ ಹೇಳಲಿದ್ದಾರೆ. ಈ ಸಿನಿಮಾದಲ್ಲಿ ಶೂನ್ಯ ಬಣ್ಣಹಚ್ಚುವುದರ ಜೊತೆಗೆ ಬಂಡವಾಳವನ್ನೂ ಹೂಡಿದ್ದಾರೆ. ಗೆಳೆಯ ಮುಖಿ ಜೊತೆಗೂಡಿ ತಮ್ಮದೇ ಝೀರೋ ಗ್ರಾವಿಟಿ ಫಿಲ್ಮಂ ಪ್ರೊಡಕ್ಷನ್ ಹೌಸ್ ಪ್ರಾರಂಭಿಸಿದ್ದಾರೆ ಶೂನ್ಯ. ಹೇಮಂತ್ ಕುಮಾರ್ ಸಂಗೀತ ನಿರ್ದೇಶನ, ಜೀವನ್ ಅವರ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ. ಮಾಸಾಂತ್ಯಕ್ಕೆ ಚಿತ್ರದ ಚಿತ್ರೀಕರಣ ಶುರುವಾಗಲಿದ್ದು, ಉಡುಪಿ, ಮಂಗಳೂರು ಸುತ್ತಮುತ್ತ ಶೂಟಿಂಗ್ ನಡೆಸಲು ಚಿತ್ರತಂಡ ಯೋಜನೆ ಹಾಕಿಕೊಂಡಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಸಾಮಾಜಿಕ ಜಾಲತಾಣಗಳಲ್ಲಿ ಉತ್ತರಾಖಂಡದ ಜ್ಯೋತಿಷ್ಯ ಪೀಠದ ಸ್ವಾಮಿ ಅವಿಮುಕ್ತೇಶ್ವರಾನಂದ ಸರಸ್ವತಿ ಅವರ ವಿಡಿಯೊ ಹರಿದಾಡುತ್ತಿದೆ. ಇತ್ತೀಚೆಗೆ ಅವರನ್ನು ಬೆನ್ನಟ್ಟಿ, ಹಲ್ಲೆ ನಡೆಸಲಾಗಿದೆ ಎಂದು ವಿಡಿಯೊ ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಅದು ಸುಳ್ಳು ಸುದ್ದಿ.

ವಿಡಿಯೊ ಅನ್ನು ಮೊದಲು ಇನ್‌ವಿಡ್ ಟೂಲ್ ಮೂಲಕ ಪರೀಕ್ಷೆಗೊಳಪಡಿಸಿ, ನಂತರ ಗೂಗಲ್ ಲೆನ್ಸ್ ಮೂಲಕ ಪರಿಶೀಲನೆ ನಡೆಸಿದಾಗ, ಹಲವರು ಒಂದೇ ವಿಡಿಯೊ ಅನ್ನು ಇದೇ ಪ್ರತಿಪಾದನೆಯೊಂದಿಗೆ ಹಂಚಿಕೊಂಡಿರುವುದು ಕಂಡುಬಂತು. ಗೂಗಲ್‌ನಲ್ಲಿ ನಿರ್ದಿಷ್ಟ ಪದಗಳ ಮೂಲಕ ಹುಡುಕಾಟ ನಡೆಸಿದಾಗ ಈ ಬಗ್ಗೆ ‘ಇಂಡಿಯಾ ಟುಡೆ’ ಪತ್ರಿಕೆಯಲ್ಲಿ 2015ರ ಸೆ.23ರಂದು ಪ್ರಕಟವಾಗಿರುವ ಸುದ್ದಿ ಕಂಡುಬಂತು. ಗಂಗಾ ನದಿಯಲ್ಲಿ ಗಣೇಶನ ವಿಗ್ರಹಗಳನ್ನು ವಿಸರ್ಜಿಸಲು ಅವಕಾಶ ನೀಡಬೇಕೆಂದು ಸ್ವಾಮಿ ಅವಿಮುಕ್ತೇಶ್ವರಾನಂದ ಸರಸ್ವತಿ ಸೇರಿದಂತೆ ಹಲವರು ಪ್ರತಿಭಟನೆ ನಡೆಸಿದಾಗ ಪೊಲೀಸರು ಅವರ ಮೇಲೆ ಲಾಠಿ ಚಾರ್ಜ್ ನಡೆಸಿದ್ದರು ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. 10 ವರ್ಷಗಳ ಹಳೆಯ ವಿಡಿಯೊ ಅನ್ನು ಕೆಲವರು ಇತ್ತೀಚಿನ ವಿಡಿಯೊ ಎಂದು ಹಂಚಿಕೊಳ್ಳುತ್ತಿದ್ದಾರೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಗುಂಡಣ್ಣ

ನಮ್ಮ ಬಯಕೆ, ನಿಸರ್ಗದ ಬಯಕೆ!

ನುಡಿ ಬೆಳಗು

ಗವಿಸಿದ್ಧೇಶ್ವರ ಸ್ವಾಮೀಜಿ,
ಗವಿಮಠ, ಕೊಪ್ಪಳ

134

ನಮ್ಮ ಬಯಕೆಗಳು ಇರುವುದು ನಾಲ್ಕೇ ನಾಕು. ಉಳಿದವೆಲ್ಲಾ ಅದರಲ್ಲೇ ಬರ್ತಾವೆ. ನಮ್ಮ ಶರೀರ ಸೊರಗಬಾರದು; ನಮ್ಮ ಮನೆ ಸಂಪತ್ತು ಕರಗಬಾರದು, ನಮ್ಮ ಸಂಬಂಧಗಳು ಮುರಿಯಬಾರದು, ನಮ್ಮ ಮನೆಯಲ್ಲಿ ಯಾರಿಗೂ ಸಾವು ಬರಬಾರದು. ಇವೇ ನಮ್ಮ ಇಚ್ಛೆಗಳು. ಆದರೆ, ಈ ಬಯಕೆಗಳು ಈಡೇರುತ್ತವೆಯೇ? ನಾನು ಬಹಳ ಶ್ರೀಮಂತ ಇದ್ದೇನೆ ಎಂದು ಕುಂಬಳಕಾಯಿಗೆ ಬಂಗಾರದ ಕವಚ ತೊಡಿಸಿದರೆ ಕುಂಬಳಕಾಯಿ ಕೊಳೆಯದೆ ಹಾಗೆಯೇ ಇರುತ್ತದೆಯೇ? ನಮ್ಮ ದೇಹ ಕೂಡಾ ಹಾಗೇ. ಬರೀ ಕುಂಬಳಕಾಯಿ ಅಷ್ಟೆ; ಕೆಡುವುದೇ ಅದರ ಗುಣಧರ್ಮ. ನೀನು ಬಂಗಾರದ ಕಟ್ಟಾದರೂ ಹಾಕಿಸು, ಹವಾನಿಯಂತ್ರಿತ ಕೋಣೆಯಲ್ಲಾದರೂ ಕುಳಿತಿರು. ನಮ್ಮ ದೇಹ ಸೊರಗುತ್ತದೆ. ನಮ್ಮ ದೇಹ ಸೊರಗಬಾರದು ಎಂದು ನಾವು ಬಯಸುತ್ತೀವಿ. ಆದರೆ ಸೊರಗುವುದು ಅದರ ಧರ್ಮ. ಏನೂ ಮಾಡಲು ಆಗುವುದಿಲ್ಲ.

ನಮ್ಮ ಬಯಕೆ ಮತ್ತು ನಿಸರ್ಗದ ಬಯಕೆ ಬೇರೆ ಬೇರೆ. ಅವುಗಳ ನಡುವೆ ನಿರಂತರ ಸಂಘರ್ಷ ನಡೀತೈತಿ. ನನ್ನ ಬಯಕೆಯಂತೆಯೇ ನಿಸರ್ಗ ನಡೀಬೇಕು ಎಂದು ಮನುಷ್ಯ ಬಯಸುತ್ತಾನೆ. ಆದರೆ, ಅದಕ್ಕೆ ನಿಸರ್ಗ ಒಪ್ಪುತ್ತಿಲ್ಲ. ದೇಹ ಸೊರಗತೈತಿ. ಮೊದಲು ನನ್ನ ಕಾಲ ಮೇಲೆ ನಾನು ನಿಲ್ಲುತ್ತೀನಿ. ಯಾರ ಹಂಗಿಲ್ಲ ಅನ್ನುತ್ತಿದ್ದವರಿಗೂ ಒಂದು ದಿನ ಕಾಲು ನಿಲ್ಲಲು ಕೋಲು ಬೇಕಾಗುತ್ತದೆ. ಮುಖದಲ್ಲಿ ಸುಕ್ಕುಗಳು ಬೀಳಬಾರದು ಎಂಬ ಬಯಕೆ ನಮಗೆ. ಆದರೆ, ಕಾಲ ಕಳೆದಂತೆ ಸುಕ್ಕು ಬಂದೇ ಬರುತ್ತದೆ. ಹಲ್ಲುಗಳು ಹೋಗುತ್ತವೆ. ಒಂದು ಕಾಲದಲ್ಲಿ ನಮ್ಮ ಕಣ್ಣುಗಳು ಕನ್ನಡಿ ಮೇಲೆ ಇದ್ದವು. ಈಗ ನಮ್ಮ ಕಣ್ಣಿನ ಮೇಲೆ ಕನ್ನಡಿ ಬಂದಿದೆ. ವಯಸ್ಸಾದ ಮೇಲೆ ನಮ್ಮ ಮಾತನ್ನೂ ಯಾರೂ ಕೇಳುವುದಿಲ್ಲ. ದೇಹಕ್ಕೆ ಮುಪ್ಪಾಗುತ್ತದೆ. ಅದನ್ನು ತಪ್ಪಿಸಲಾಗದು. ನಾವು ನಮ್ಮ ದೇಹ ಸೊರಗಬಾರದು ಎಂದು ಊಟ ಮಾಡ್ತೀವಿ, ಗುಳಿಗೆ ತೆಗೆದುಕೊಳ್ಳುತ್ತೇವೆ. ಆದರೆ ಒಂದು ತಿಳಕೋಬೇಕು, ಉಣ್ಣುವ ಅನ್ನ ಹಳಸತೈತಿ. ತೆಗೆದುಕೊಳ್ಳುವ ಗುಳಿಕ ಕಾಲ ಮುಗುದು ಹೋಗತೈತಿ. ಅಂದಮೇಲೆ ಅವುಗಳನ್ನು ತೆಗೆದುಕೊಂಡ ದೇಹ ಕೂಡಾ ಶಾಶ್ವತ ಅಲ್ಲ ಅನ್ನೋದನ್ನು ತಿಳಕೋಬೇಕು.

ಶರೀರ ಸೊರಗತೈತಿ. ಸಂಪತ್ತು ಕರಗತೈತಿ. ಅಲೆಗ್ಸಾಂಡರ್ ಇಡೀ ವಿಶ್ವ ಗೆದ್ದಿದ್ದ. ಆದರೆ, ಸಾಯುವ ಕಾಲಕ್ಕೆ ಯಾವುದೂ ಅವನ ಹಿಂದೆ ಬರಲಿಲ್ಲ. ಅದಕ್ಕೆ ಅವ, ‘ಶ್ರೀಮಂತ ರಾಜ್ಯದ ಬಡ ದೊರೆ ನಾನು’ ಎಂದು ಹೇಳಿದ್ದ. ನಿಸರ್ಗದ ನಿಯಮ ಏನು ಎಂದರೆ, ಬಡವನೂ ಬಡವನಾಗಿಯೇ ಸಾಯಬೇಕು, ಶ್ರೀಮಂತನೂ ಬಡವನಾಗಿಯೇ ಸಾಯಬೇಕು. ಯಾರೂ ಸಂಪತ್ತನ್ನು ತೆಗೆದುಕೊಂಡು ಹೋಗಲು ಆಗಲ್ಲ. ನಾವು ಬೇಕಾದಷ್ಟು ಶಿಲಾನ್ಯಾಸ ಮಾಡಬಹುದು. ಆದರೆ, ನೆನಪಿರಬೇಕು ಶಾಸನಗಳೇ ಹೋಗುತ್ತವೆ; ಇನ್ನು ಶಿಲಾನ್ಯಾಸಗಳು ಎಲ್ಲಿ ಉಳೀತಾವೆ? ಎಷ್ಟೇ ಹಣ ಆದರೂ ಪರವಾಗಿಲ್ಲ. ಭೂಮಿ ತೆಗೆದುಕೊಳ್ಳುತ್ತೇನೆ ಎಂದು ಮನುಷ್ಯ ಹೇಳುತ್ತಾನೆ. ಆದರೆ, ಭೂಮಿ ‘ಇವತ್ತು ಎಷ್ಟೇ ಹಣ ಕೊಟ್ಟು ನನ್ನ ಖರೀದಿ ಮಾಡಿದ್ರೂ ಒಂದು ದಿನ ಯಾವುದೇ ಕಿಮ್ಮತ್ತು ಇಲ್ಲದೆ ನಿನ್ನನ್ನು ನಾನು ತೆಗೆದುಕೊಳ್ಳುತ್ತೇನೆ’ ಎಂದು ಹೇಳುತ್ತದೆ. ಯಾವುದೂ ಇಲ್ಲಿ ಶಾಶ್ವತ ಅಲ್ಲ. ಕೀರ್ತಿ ಕೂಡಾ ಕಾಯಂ ಇರೋದಿಲ್ಲ. ಯಾರ ಕೀರ್ತಿ ವಾರ್ತೆ ಇಲ್ಲಿ ಉಳಿಯೋದಿಲ್ಲ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಫೆಬ್ರುವರಿ 18, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಕೃಷ್ಣ ಷಷ್ಠಿ ಅಹೋರಾತ್ರ ನಕ್ಷತ್ರ: ಚಿತ್ತಾ ಗಂ. 07-36 ಯೋಗ: ಗಂಡ ಗಂ. 09-52 ಕರಣ: ಗರ ಗಂ. 18-14, ಕುಂಭ ಮಾಸದ 06 ನೇ ದಿನ, ಮಳೆನಕ್ಷತ್ರ: ಧನಿಷ್ಠಾ 4.
ರಾಹುಕಾಲ: ಮಧ್ಯಾಹ್ನ 03-00 – 04-30
ಸೂರ್ಯೋದಯ: 06-55 **ಸೂರ್ಯಾಸ್ತ:** 06-33
ಮುಸ್ಲಿಂ ದಿನಾಂಕ: 19 ಶಬನ್
ಅದೃಷ್ಟ ಸಂಖ್ಯೆ: 1, 12

ಮೇಷ: ಮೇಲುಸ್ತುವಾರಿ ನೋಡುವ ಹುದ್ದೆಯಲ್ಲಿ ಇರುವವರಿಗೆ ಕೆಲಸಗಾರರ ಹೊಂದಾಣಿಕೆ ಸಮಸ್ಯೆ ಬರಬಹುದು. ವಾಣಿಜ್ಯ ಸಂಸ್ಥೆಯೊಂದರಲ್ಲಿ ಕೆಲಸ ಕೊಡಿಸಲು ಅಣ್ಣನ ಸಹಾಯ ಕೇಳಿದರೆ ಶುಭವಾಗುತ್ತದೆ.

ವೃಷಭ: ಆಲೋಚಿಸಿದ ರೀತಿಯಲ್ಲಿ ಕೆಲಸಗಳೆಲ್ಲವೂ ನಡೆದು ನೆಮ್ಮದಿ ಸಿಗಲಿದೆ. ಆಲಸ್ಯತನ ಕುಟುಂಬದ ಅಭಿವೃದ್ಧಿಯನ್ನು ಹಾಳು ಮಾಡುತ್ತದೆ. ಅವಶ್ಯಕತೆಗಿಂತ ಹೆಚ್ಚು ಖರ್ಚು ಮಾಡಬೇಡಿ.

ಮಿಥುನ: ಒದಗಿ ಬರಲಿರುವ ಅವಕಾಶ ಕೈತಪ್ಪಿ ಹೋಗದಂತೆ ನೋಡಿಕೊಳ್ಳುವುದು ಬುದ್ಧಿಮಟ್ಟಕ್ಕೆ ಬಿಟ್ಟಂಥ ವಿಚಾರ. ಗುರು ವಾಕ್ಯವನ್ನು ಅಕ್ಷರಶಃ ಪರಿಪಾಲನೆ ಮಾಡುವುದನ್ನು ಮರೆಯದಿರಿ.

ಕರ್ಕಾಟಕ: ಅಧ್ಯಾಪಕರಿಗೆ ಸಂಪನ್ಮೂಲ ವ್ಯಕ್ತಿಗಳಿಂದ ವಿಚಾರವನ್ನು ತಿಳಿದುಕೊಳ್ಳುವ ಅವಕಾಶ ಪ್ರಾಪ್ತಿ. ಮಕ್ಕಳ ಖುಷಿಗಾಗಿ ಆಟಿಕೆಯ ವಸ್ತು ಕೊಳ್ಳುವಿರಿ. ವಿರೋಧಗಳನ್ನು ಜಾಣ್ಮೆಯಿಂದ ನಿವಾರಿಸಿ.

ಸಿಂಹ: ಮನೆಯ ವ್ಯವಹಾರಗಳಲ್ಲಿ ಇದ್ದ ಹಲವು ತೊಡಕುಗಳು ಒಮ್ಮತದಿಂದ ದೂರಾಗಲಿವೆ. ಪ್ರಯತ್ನ ಪಟ್ಟ ಕೆಲಸಗಳು ಫಲ ನೀಡುವುದು. ಬಯಸಿದವರು ದೂರಾಗುವ ಆತಂಕ ಎದುರಾಗಬಹುದು.

ಕನ್ಯಾ: ವಿದ್ಯಾರ್ಥಿಗಳು ಪಠ್ಯೇತರ ಚಟುವಟಿಕೆಗಳಲ್ಲಿಯೂ ಹೆಚ್ಚಿನ ಉತ್ಸಾಹವನ್ನು ತೋರುವುದರಿಂದ ಮನೋಲ್ಲಾಸ ಹೆಚ್ಚುವುದು. ದಾಂಪತ್ಯ ಜೀವನದಲ್ಲಿ ಹೊಂದಾಣಿಕೆ ಮುಂದುವರಿಯುವುದು.

ತುಲಾ: ಕೌಟುಂಬಿಕ ಸಮಸ್ಯೆಗಳನ್ನು ಎಲ್ಲರೂ ಮೆಚ್ಚುವಂತೆ ಪರಿಹರಿಸಿಕೊಳ್ಳುವ ಸಾಮರ್ಥ್ಯ ಅಭಿವೃದ್ಧಿಯಾಗಲಿದೆ. ಯೋಜನೆಗಳನ್ನು ಮಂಡಿಸಿ ಅವರ ವಿಶ್ವಾಸ ಗಳಿಸುವಲ್ಲಿ ಯಶಸ್ವಿಯಾಗುವಿರಿ.

ವೃಶ್ಚಿಕ: ಬೇಡದ ವಿಷಯದಲ್ಲಿ, ಅಪರಿಚಿತ ವ್ಯಕ್ತಿಗಳಲ್ಲಿ, ಸಂಬಂಧವಿಲ್ಲದ ವಿಚಾರದಲ್ಲಿ ವಾದ ಮಾಡುವುದು ಸರಿಯಲ್ಲ. ಕುಟುಂಬಕ್ಕಾಗಿ ಕೈಗೊಳ್ಳುವ ನಿರ್ಧಾರಗಳು ಮನಸ್ಸಿಗೆ ನೆಮ್ಮದಿ ತರಲಿವೆ.

ಧನು: ಸಂಸ್ಕರಿತ ಆಹಾರ ಪದಾರ್ಥಗಳ, ಬೇಳೆ ಕಾಳುಗಳ ಮಾರಾಟದಿಂದ ಲಾಭ. ಬಾಕಿ ಇರುವ ಹಣ ವಸೂಲಿಯಾಗುವುದು. ಸಾಲದ ಹಣ ಕೈಸೇರುವುದರಿಂದ ಮನೆಯ ರಿಪೇರಿಗೆ ಖರ್ಚು ಮಾಡುವಿರಿ.

ಮಕರ: ಆಹಾರದ ಪದ್ಧತಿಯ ಮೂಲಕ ರಕ್ತದೊತ್ತಡ ಸ್ಥಿತಿಯನ್ನು ಸಮತೋಲನಕ್ಕೆ ಬರುವಂತೆ ಮಾಡಿಕೊಳ್ಳಿ. ಕಾನೂನಿಗೆ ವಿರುದ್ಧ ಕೆಲಸವನ್ನು ಮಾಡದಿರಿ. ಧಾರ್ಮಿಕ ಕೆಲಸಗಳಲ್ಲಿ ಆಸಕ್ತಿ ಹೆಚ್ಚಲಿದೆ.

ಕುಂಭ: ಅನಿರೀಕ್ಷಿತ ಸುತ್ತಾಟದಿಂದ ಆಯಾಸ ತೋರಿಬರಲಿದೆ. ಸಂಜೆ ವೇಳೆಗೆ ಅದರಿಂದ ಆಗುವ ಖುಷಿಯಿಂದ ಆಯಾಸ ಮಾಯವಾಗಲಿದೆ. ಧ್ಯಾನ, ಭಜನೆಯಿಂದ ಮನಸ್ಸಿಗೆ ನೆಮ್ಮದಿ ಸಿಗಲಿದೆ.

ಮೀನ: ಜವಾಬ್ದಾರಿಗಳತ್ತ ಹೆಚ್ಚಿನ ಗಮನ ಹರಿಸಿ, ಅದರ ಫಲವಾಗಿ ಆತಂಕವಿಲ್ಲದೆ ಕಾರ್ಯಗಳು ಸುಸೂತ್ರವಾಗಿ ನಡೆಯಲಿವೆ. ಕಿರುತೆರೆ ಕಲಾವಿದರಿಗೆ ಮಾರ್ಗದರ್ಶನ ಉಪಯೋಗಕ್ಕೆ ಬರುವುದು.

ಪದಬಂಧ 5957

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ವನದೊಳಗೇ ಮುಖವನ್ನು ತೂರಿಸಿದ್ದಾರಲ್ಲಾ? (3)
3.ಟಾಂಗಾವಾಲನ ಬಳಿಯಿರುವ ಪ್ರಾಣಿ (3)
5.ಅನುಗ್ರಹವೇ ಇಲ್ಲಿದೆ (3)
7.ಮನವು ಹೀಗೆ ಕೋತಿ ತರಹ! (3)
9.ರಾಗದಲ್ಲಿ ಕೊನೆಗೊಂಡಿರುವ ಪ್ರೀತಿ (4)
10.ಈ ಶೂರೆ ಗಣಿಯೊಳಗಿದ್ದಾಳಲ್ಲಾ? (4)
12.ಪರಚಲು ಬೇಕಾದ ನಖ (3)
14.ಈತ ಪೆದ್ದ (3)
16.ಕರದಲ್ಲಿರುವ ಚಿಪ್ಪು (3)
17.ಶುಕದ ಬಳಿ ಬಂದಿರುವ ನಾಯಿ (3)

ಮೇಲಿಂದ ಕೆಳಕ್ಕೆ
1.ಇದು ಉಲ್ಟಾಪಲ್ಟಾ ಆಗಿರುವ ಹೆರಿಗೆ (3)
2.ನೀರನ್ನು ತರುತ್ತಿರುವ ಸ್ತ್ರೀ (2)
3.ನ್ಯಾಯವಲ್ಲದ ತರ್ಕ (3)
4.ಮಣಿಹಾರ ಧರಿಸಿರುವ ಚಕ್ರವರ್ತಿನಿ (4)
6.ಸಬೂಬು ಹೇಳಿ ಹಚ್ಚಿಕೊಂಡಿರುವ ಸೋಪು (3)
7.ಹುಟ್ಟು ಇಲ್ಲಿ ಉಲ್ಟಾ ಆಗಿದೆ (3)
8.ಗುರುಗುಟ್ಟುತ್ತಿರುವ ಗಂಡುಕುರಿ (3)
9.ಅವನ ಸಾವು ಹೀಗೆ ಬಂದಿದೆಯಲ್ಲಾ? (4)
11.ಈತ ವಾದ್ಯ ನುಡಿಸುವವನು (3)
13.ಗೂಟದ ಬಳಿ ನಡೆದ ಜಗಳ (3)
15.ತರ್ಕ ಮಾಡುತ್ತಿರುವ ವ್ಯಾಪಾರಿ (3)
16.ಸುಂದರ ಹೆಣ್ಣಿನ ಮೇಲೆ ಬಿದ್ದ ನಯನ! (2)

5956ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
3.ತಡಸಲು 5.ಮಧುಕರಿ
6.ಶುಕ 7.ದಸ್ತಗಿರಿ
9.ಮೂಕ 11.ಜಲ್ಲೆ
12.ಕಟುನುಡಿ 14.ಕಾಷ್ಠ
16.ಉದಾಸೀನ
17.ಕಾರ್ಯಕ್ಷೇತ್ರ

ಮೇಲಿಂದ ಕೆಳಕ್ಕೆ:
1.ಗಮಕ 2.ಮಕರಂದ
3.ತರಾತುರಿ 4.ಲುಬ್ಧಕ
6.ಶುಕ್ತಿಜ 8.ಗಿಲೀಟು
10.ಕನಿಷ್ಠ 12.ಕಟಿಸೂತ್ರ
13.ಡಿಕ್ರಿದಾರ 14.ಕಾಯಕಾ
15.ಕನಸು

ಸುಡೊಕು 6342

	6				8			
1		3				8	9	4
			5		9			3
	9			7			5	
		5	9		3	4	7	
7				1				9
	7		8		1		4	
4		9				5		7
	3		4		7		1	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6341ಸುಡೊಕು

5	2	6	9	4	1	8	3	7
4	7	8	3	2	6	5	9	1
3	9	1	5	7	8	6	2	4
9	5	4	7	1	2	3	6	8
1	6	7	8	9	3	4	5	2
2	8	3	6	5	4	1	7	9
7	3	9	4	8	5	2	1	6
8	1	5	2	6	9	7	4	3
6	4	2	1	3	7	9	8	5

ರಿಲಯನ್ಸ್: 2ನೇ ಅತಿದೊಡ್ಡ ಬ್ರ್ಯಾಂಡ್

ನವದೆಹಲಿ (ಪಿಟಿಐ): ಉದ್ಯಮಿ ಮುಕೇಶ್ ಅಂಬಾನಿ ಒಡೆತನದ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್, 2024ರ ಫ್ಯೂಚರ್‌ಬ್ರ್ಯಾಂಡ್ ಸೂಚ್ಯಂಕದಲ್ಲಿ ಜಾಗತಿಕವಾಗಿ ಎರಡನೇ ಅತ್ಯುತ್ತಮ ಬ್ರ್ಯಾಂಡ್ ಸ್ಥಾನ ಪಡೆದಿದೆ.

ಕೊರಿಯಾದ ಕಂಪನಿ ಸ್ಯಾಮ್‌ಸಂಗ್ ಈ ಪಟ್ಟಿಯಲ್ಲಿ ಮೊದಲ ಸ್ಥಾನ ಗಳಿಸಿದೆ.

ರಿಲಯನ್ಸ್ 2023ರಲ್ಲಿ 13ನೇ ಸ್ಥಾನದಲ್ಲಿತ್ತು. ಆದರೆ, ಈಗ ಪಟ್ಟಿಯಲ್ಲಿ 2ನೇ ಸ್ಥಾನ ಪಡೆದಿದೆ. ಆ್ಯಪಲ್, ನೈಕ್, ವಾಲ್ಟ್ ಡಿಸ್ನಿ, ನೆಟ್‌ಫ್ಲಿಕ್ಸ್, ಮೈಕ್ರೊಸಾಫ್ಟ್, 'ಇಂಟೆಲ್' ಮತ್ತು ಟೊಯೊಟದಂತಹ ಜಾಗತಿಕ ಕಂಪನಿಗಳಿಗಿಂತ ರಿಲಯನ್ಸ್ ಮುಂದಿದೆ. ಪಟ್ಟಿಯಲ್ಲಿರುವ ಏಕೈಕ ಭಾರತೀಯ ಕಂಪನಿ ರಿಲಯನ್ಸ್ ಆಗಿದೆ.

ಈ ಸೂಚ್ಯಂಕವು ಪ್ರತಿ ವರ್ಷ ನಡೆಯುತ್ತದೆ. ಅಗ್ರ 100 ಜಾಗತಿಕ ಕಂಪನಿಗಳನ್ನು ಅವುಗಳ ಬ್ರ್ಯಾಂಡ್ ಆಧಾರದ ಮೇಲೆ ಮಾರುಕಟ್ಟೆ ಬಂಡವಾಳದ ಮೂಲಕ ಮೌಲ್ಯಮಾಪನ ಮಾಡಲಾಗುತ್ತದೆ ಎಂದು ಫ್ಯೂಚರ್‌ಬ್ರ್ಯಾಂಡ್ ಹೇಳಿದೆ.

Reliance Industries Limited

ಮುಂಬೈ ಧಾರಣೆ

ಶೇಂಗಾ — 17-02-2025

ಜಾವಾ 70/80(ಹೊಸ)	9800-9900
ಜಾವಾ 80/90(ಹೊಸ)	9300-9400
ದಪ್ಪ ಮಧ್ಯಪ್ರದೇಶ(ಹೊಸ)	7700-7800
ದಪ್ಪ ಗುಜರಾತ್(ಹೊಸ)	8000-8100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1440 (1445)
ಒಂದು ವಾರದ ಡೆಲಿವರಿ	1435 (1440)
ಪಾಮ್ ವಾರದ ಡೆಲಿವರಿ	1358 (1363)
ಸೂರ್ಯಕಾಂತಿ ಎಣ್ಣೆ ಕಚ್ಚಾ	1360 (1350)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿ)

ಅಪರಂಜಿ ಚಿನ್ನ 10ಗ್ರಾಂ	₹84,900 (84,500)
ಬೆಳ್ಳಿ ಕೆ.ಜಿ	₹95,900 (95,550)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,929
ಇಂದಿನ ಅಂತ್ಯ	22,959
▲	30
ದಿನದ ಗರಿಷ್ಠ	22,974

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು 100ಕ್ಕೆ	₹470
12 ಕ್ಕೆ	₹65
ಮೈಸೂರು 100ಕ್ಕೆ	₹470

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಪ್ರ.ಕೆ)	₹503-673
ದ್ವಿತಳಿ (ಪ್ರ.ಕೆ)	₹400-860

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹187
ಆರ್‌ಎಸ್‌ಎಸ್-5	₹182
ಗುಡ್ ಲಾಟ್	₹177

(ಪ್ರತಿ ಕೆಜಿಗೆ)

ಚಿನ್ನದ ದರ ₹1,200 ಬೆಳ್ಳಿ ₹1,800 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆ ಇಳಿಕೆ ಆಗಿದೆ.

10 ಗ್ರಾಂ ಚಿನ್ನದ ದರವು (ಶೇ 99.9 ಪರಿಶುದ್ಧತೆ) ₹1,200 ಇಳಿಕೆಯಾಗಿ, ₹88,200 ಆಗಿದೆ. ಆಭರಣ ಚಿನ್ನವು (ಶೇ 99.5 ಪರಿಶುದ್ಧತೆ) ಇಷ್ಟೇ ಪ್ರಮಾಣದಲ್ಲಿ ಕಡಿಮೆಯಾಗಿ, ₹87,800 ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಬೆಳ್ಳಿ ಧಾರಣೆಯು ಕೆ.ಜಿಗೆ ₹1,800 ಇಳಿಕೆಯಾಗಿ, ₹98,200ರಂತೆ ಮಾರಾಟವಾಗಿದೆ.

ದೇಶೀಯ ಮಾರುಕಟ್ಟೆಯಲ್ಲಿ ಆಭರಣ ತಯಾರಕರು ಮತ್ತು ಚಿಲ್ಲರೆ ಮಾರಾಟಗಾರರಿಂದ ಚಿನ್ನಕ್ಕೆ ಬೇಡಿಕೆ ಕಡಿಮೆಯಾಗಿದೆ. ಇದರಿಂದ ಹಳದಿ ಲೋಹದ ಧಾರಣೆಯಲ್ಲಿ ಇಳಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಸದ್ಯದ ವಿಮಾ ಮಿತಿ ₹5 ಲಕ್ಷ • ಗ್ರಾಹಕರ ಠೇವಣಿ ಭದ್ರತೆಗೆ ಈ ಕ್ರಮ

'ಠೇವಣಿ ವಿಮೆ ಹೆಚ್ಚಳಕ್ಕೆ ಚಿಂತನೆ'

ನವದೆಹಲಿ (ಪಿಟಿಐ): 'ಪ್ರಸ್ತುತ ಠೇವಣಿ ವಿಮಾ ಮಿತಿ ₹5 ಲಕ್ಷದವರೆಗೆ ಇದೆ. ಈ ಮಿತಿಯನ್ನು ಹೆಚ್ಚಿಸುವ ಬಗ್ಗೆ ಸರ್ಕಾರ ಚಿಂತನೆ ನಡೆಸುತ್ತಿದೆ' ಎಂದು ಕೇಂದ್ರ ಹಣಕಾಸು ಸೇವೆಗಳ ಇಲಾಖೆಯ ಕಾರ್ಯದರ್ಶಿ ಎಂ.ನಾಗರಾಜು ಸೋಮವಾರ ಹೇಳಿದ್ದಾರೆ.

ನ್ಯೂ ಇಂಡಿಯಾ ಕೋ-ಆಪರೇಟಿವ್ ಬ್ಯಾಂಕ್ ಹಗರಣ ಬೆಳಕಿಗೆ ಬಂದ ಕೆಲವೇ ದಿನಗಳ ನಂತರ, ಈ ಹೇಳಿಕೆ ನೀಡಿದ್ದಾರೆ.

ವಿಮೆಯನ್ನು ಹೆಚ್ಚಿಸುವ ಪ್ರಸ್ತಾವವನ್ನು ಸರ್ಕಾರ ಪರಿಗಣಿಸುತ್ತಿದೆ. ಸರ್ಕಾರ ಅನುಮೋದನೆ ನೀಡಿದ ಬಳಿಕ ಅಧಿಸೂಚನೆ ಹೊರಡಿಸಲಾಗುವುದು ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಪ್ರತಿ ಬ್ಯಾಂಕ್ ಕೂಡ ಪ್ರತಿಯೊಬ್ಬ ಗ್ರಾಹಕನ ಠೇವಣಿ ಮೇಲೆ ವಿಮೆ (ಡೆಪಾಸಿಟ್ ಇನ್ಶುರೆನ್ಸ್) ಮಾಡಿಸಿರುತ್ತದೆ. ಆರ್‌ಬಿಐನ ಅಂಗ ಸಂಸ್ಥೆಯಾಗಿರುವ ಠೇವಣಿ ವಿಮೆ ಮತ್ತು ಕ್ರೆಡಿಟ್ ಗ್ಯಾರಂಟಿ ಕಾರ್ಪೊರೇಷನ್‌ಗೆ (ಡಿಐಸಿಜಿಸಿ) ನಿರ್ದಿಷ್ಟ ಕಂತು ಪಾವತಿಸುವ ಮೂಲಕ ಬ್ಯಾಂಕ್‌ಗಳು ಗ್ರಾಹಕರ ಠೇವಣಿಗೆ ಭದ್ರತೆ ಒದಗಿಸಿರುತ್ತವೆ. ಅಂದರೆ ಬ್ಯಾಂಕ್‌ಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದಲ್ಲಿ ಅಥವಾ ದಿವಾಳಿಯಾದಲ್ಲಿ ಅಥವಾ ಠೇವಣಿದಾರರ ಹಣ ಮರಳಿಸಲು ವಿಫಲವಾದರೆ ಗ್ರಾಹಕರಿಗೆ ₹5 ಲಕ್ಷದ ವರೆಗಿನ ಠೇವಣಿ ಹಣವನ್ನು ಡಿಐಸಿಜಿಸಿ ಪಾವತಿಸುತ್ತದೆ. ₹1 ಲಕ್ಷವಿದ್ದ ವಿಮಾ ಮಿತಿಯ ಮೊತ್ತವನ್ನು 2020ರಲ್ಲಿ ₹5 ಲಕ್ಷಕ್ಕೆ ಹೆಚ್ಚಿಸಲಾಗಿತ್ತು.

ಲಾಭ ಗಳಿಕೆಗೆ ಷೇರು ಮಾರಾಟ: ನಿರ್ಮಲಾ

ಮುಂಬೈ (ಪಿಟಿಐ): ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಲಾಭ ಗಳಿಕೆಗಾಗಿ ದೇಶದ ಈಕ್ವಿಟಿ ಷೇರುಗಳ ಮಾರಾಟಕ್ಕೆ ಮುಂದಾಗಿದ್ದಾರೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇಂದಿನ ಭಾರತೀಯ ಮಾರುಕಟ್ಟೆ, ಭಾರತದ ಆರ್ಥಿಕತೆಯು ಹೂಡಿಕೆದಾರರಿಗೆ ಉತ್ತಮ ಆದಾಯ ನೀಡುತ್ತಿವೆ ಎಂದು ಹೇಳಿದರು.

ಕಳೆದ ವರ್ಷ ಅಕ್ಟೋಬರ್‌ನಿಂದ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹1.56 ಲಕ್ಷ ಕೋಟಿಗೂ ಹೆಚ್ಚು ಮೊತ್ತದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ಈ ಪೈಕಿ 2025ರ ಆರಂಭದಿಂದ ಇಲ್ಲಿಯವರೆಗೆ ಸುಮಾರು ₹1 ಲಕ್ಷ ಕೋಟಿ ಷೇರು ಮಾರಲಾಗಿದೆ. ಇದು ಷೇರು ಸೂಚ್ಯಂಕಗಳ ಇಳಿಕೆಗೆ ಮತ್ತು ಹೂಡಿಕೆದಾರರ ಸಂಪತ್ತು ಕರಗಲು ಕಾರಣವಾಗಿದೆ ಎಂದರು.

ಸರ್ಕಾರ ಮತ್ತು ಆರ್‌ಬಿಐ ದರ ನಿಯಂತ್ರಣ ಮಾಡುವ ಮೂಲಕ ಹಣದುಬ್ಬರ ಇಳಿಕೆಗೆ ಕ್ರಮ ಕೈಗೊಂಡಿದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಕೇಂದ್ರ ಹಣಕಾಸು ಕಾರ್ಯದರ್ಶಿ ತುಹಿನ್ ಕಾಂತ ಪಾಂಡೆ ಮಾತನಾಡಿ, ಜಾಗತಿಕ ಅನಿಶ್ಚಿತ ಸ್ಥಿತಿಯಿಂದಾಗಿ ಹೂಡಿಕೆದಾರರು ತಮ್ಮ ದೇಶದಲ್ಲಿ ಹೂಡಿಕೆ ಮಾಡಲು ಮುಂದಾಗಿದ್ದಾರೆ. ಈ ಬದಲಾವಣೆ ತಾತ್ಕಾಲಿಕ ಆಗಿರಬಹುದು. ಮುಂದಿನ ದಿನಗಳಲ್ಲಿ ಚೇತರಿಕೆ ಕಾಣಲಿದೆ ಎಂದು ಹೇಳಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

6ನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಮುದ್ದುಲಕ್ಷ್ಮಮ್ಮ
(ಲೇಟ್ ಜಿ.ಅಶ್ವಥಯ್ಯನವರ ಧರ್ಮಪತ್ನಿ)
ಯಲಹಂಕ, ಬೆಂಗಳೂರು–560064
ನೀವು ನಮ್ಮನ್ನಗಲಿ 6 ವರ್ಷ ಕಳೆಯಿತು.
ಆದರೆ ನಿಮ್ಮ ನೆನಪು
ನಮ್ಮ ಮನದಲ್ಲಿ ಸದಾ ಅಮರ.
ನಿಮ್ಮ ಆದರ್ಶಗಳೇ ನಮಗೆ ದಾರಿದೀಪ.
ಇಂತಿ ಶ್ರೀ ವೈ.ಎ.ಶ್ರೀನಿವಾಸಮೂರ್ತಿ ಮತ್ತು ಸಹೋದರರು.
ಮೊ.9845278780, 9845538678

18-02-2015
10ನೇ ವರ್ಷದ ಚಿರಸ್ಮರಣೆ
ದಿ॥ ಶ್ರೀನಿವಾಸ್‌ರವರು
ದಾಸರಹಳ್ಳಿ, ಬೆಂಗಳೂರು-24
ನಿಮ್ಮ ಆದರ್ಶಮಯ ಜೀವನ, ಪ್ರೀತಿ-ವಾತ್ಸಲ್ಯ ನಮ್ಮ ಮನಸ್ಸಿನಲ್ಲಿ ಸದಾ ಹಸಿರಾಗಿ ಉಳಿದಿದೆ.
ನಿಮ್ಮ ಸವಿನೆನಪಿನಲ್ಲಿ:
ಪತ್ನಿ, ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗ

LOOKING FOR JOB OPPORTUNITY
Refer Classifieds on Wednesday

'ಕಬ್ಬು ನುರಿಸುವಿಕೆ ಪ್ರಮಾಣ ಕುಸಿತ'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಈ ವರ್ಷ ರಾಜ್ಯದಾದ್ಯಂತ ಕಬ್ಬು ನುರಿಸುವಿಕೆ ಪ್ರಮಾಣ ಕಳೆದ ವರ್ಷಕ್ಕಿಂತ ಕಡಿಮೆ ಆಗಲಿದೆ. 5 ಲಕ್ಷ ಟನ್ ಕಬ್ಬು ನುರಿಸುವ ನಿರೀಕ್ಷೆಯಿದೆ' ಎಂದು ಸಕ್ಕರೆ ಸಚಿವ ಶಿವಾನಂದ ಪಾಟೀಲ ಹೇಳಿದರು.

'ಕೆಲ ಸಕ್ಕರೆ ಕಾರ್ಖಾನೆಗಳು ಶೇ 75ರಿಂದ ಶೇ 80ರವರೆಗೆ ಕಬ್ಬಿನ ಬಿಲ್ ಪಾವತಿಸಿವೆ. ಕೆಲ ಕಾರ್ಖಾನೆಗಳು ಶೇ 55ರಿಂದ ಶೇ 60ರಷ್ಟು ಪಾವತಿಸಿವೆ. ಎಲ್ಲಾ ಬಾಕಿ ಬಿಲ್‌ಗಳು ಶೀಘ್ರವೇ ಪಾವತಿಯಾಗುವ ವಿಶ್ವಾಸವಿದೆ' ಎಂದು ಅವರು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

ಶಿವಾನಂದ ಪಾಟೀಲ

'ರಾಜ್ಯದಲ್ಲಿ 72 ಸಕ್ಕರೆ ಕಾರ್ಖಾನೆಗಳಿದ್ದು, ಕಬ್ಬಿನ ತೂಕ ಮಾಡಲು ಅನಲಾಗ್ ತೂಕದ ಯಂತ್ರ ಬಳಸಲಾಗುತಿತ್ತು. ಈಗ ಡಿಜಿಟಲ್ ತೂಕದ ಯಂತ್ರ ಬಳಸಲಾಗುತ್ತಿದೆ. ಸಕ್ಕರೆ ಕಾರ್ಖಾನೆಗಳಲ್ಲಿ ಸರ್ಕಾರವೇ ತೂಕದ ಯಂತ್ರ ಅಳವಡಿಸಲಿದೆ. ಮೊದಲ ಹಂತದಲ್ಲಿ ಎರಡು ಮೊಬೈಲ್ ತೂಕದ ಯಂತ್ರಗಳನ್ನು ಅಳವಡಿಸುತ್ತೇವೆ. ಸ್ಥಳಾವಕಾಶದ ಲಭ್ಯತೆ ಆಧರಿಸಿ ನಂತರದ ದಿನಗಳಲ್ಲಿ ಕಾರ್ಖಾನೆಗಳಲ್ಲಿ ಐದ ರಿಂದ ಆರು ಯಂತ್ರಗಳನ್ನು ಅಳವಡಿಸುತ್ತೇವೆ' ಎಂದು ಅವರು ತಿಳಿಸಿದರು.

ಫಾಸ್ಟ್ಯಾಗ್: ಸಕಾಲದಲ್ಲಿ ರೀಚಾರ್ಜ್ ಮಾಡದಿದ್ದರೆ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಹೆದ್ದಾರಿಗಳಲ್ಲಿನ ಟೋಲ್ ಕೇಂದ್ರಗಳಲ್ಲಿ ಫಾಸ್ಟ್ಯಾಗ್ ಬಳಸುವಾಗ ಅನ್ವಯವಾಗುವ ಕೆಲವು ನಿಯಮಗಳು ಫೆಬ್ರುವರಿ 17ರಿಂದ ಜಾರಿಗೆ ಬರುವಂತೆ ಬದಲಾಗಿವೆ. ರಾಷ್ಟ್ರೀಯ ಪಾವತಿ ನಿಗಮವು ಬಿಡುಗಡೆ ಮಾಡಿರುವ ಹೇಳಿಕೆಯಲ್ಲಿ ವಿವರಿಸಿರುವ ಬದಲಾವಣೆ ಹೀಗಿದೆ:

ಟೋಲ್ ಕೇಂದ್ರವನ್ನು ತಲುಪುವ ದಕ್ಕಿಂತ (ಅಂದರೆ, ಫಾಸ್ಟ್ಯಾಗ್ ಆ ಟೋಲ್ ಕೇಂದ್ರದ ಸ್ಕ್ಯಾನರ್ ಕಣ್ಣಿಗೆ ಬೀಳುವ ಸಮಯ) ಒಂದು ತಾಸು ಮೊದಲು ಫಾಸ್ಟ್ಯಾಗ್ ಅನ್ನು ಕಪ್ಪುಪಟ್ಟಿಗೆ ಸೇರಿಸಲಾಗಿದ್ದರೆ, ಅದರಲ್ಲಿ ಅಗತ್ಯ ಪ್ರಮಾಣದಲ್ಲಿ ಹಣವಿಲ್ಲದಿದ್ದರೆ ಹಾಗೂ ಟೋಲ್ ಕೇಂದ್ರ ತಲುಪಿದ ಹತ್ತು ನಿಮಿಷಗಳ ನಂತರವೂ ಆ ಟ್ಯಾಗ್ ಸಕ್ರಿಯಗೊಂಡಿಲ್ಲದೆ ಇದ್ದರೆ ವಹಿವಾಟು ತಿರಸ್ಕೃತಗೊಳ್ಳಲಿದೆ ಎಂದು ನಿಗಮ ಹೇಳಿದೆ.

ಅಂದರೆ, ವಾಹನ ಚಾಲಕರು, ಮಾಲೀಕರು ಟೋಲ್ ಕೇಂದ್ರ ತಲುಪುವ ಒಂದು ತಾಸಿನ ಮೊದಲೇ ಅಗತ್ಯ ಪ್ರಮಾಣದಲ್ಲಿ ಹಣವನ್ನು ಟ್ಯಾಗ್‌ನ ವಾಲೆಟ್‌ಗೆ ಭರ್ತಿ ಮಾಡಿರಬೇಕು. ಅದು ಒಂದು ವೇಳೆ ಸಾಧ್ಯವಾಗದೆ ಇದ್ದಲ್ಲಿ, ಟೋಲ್ ಕೇಂದ್ರ ಪ್ರವೇಶಿಸಿದ ಹತ್ತು ನಿಮಿಷಗಳ ಒಳಗೆ ಫಾಸ್ಟ್ಯಾಗ್ ವಾಲೆಟ್‌ಗೆ ಹಣ ಭರ್ತಿ ಮಾಡಬೇಕು.

ಚಾಲಕರು ಅಥವಾ ಮಾಲೀಕರು ಇವೆರಡರಲ್ಲಿ ಯಾವೊಂದು ಕೆಲಸವನ್ನೂ ಮಾಡದೆ ಇದ್ದರೆ, ಫಾಸ್ಟ್ಯಾಗ್ ಮೂಲಕವೇ ದುಪ್ಪಟ್ಟು ಶುಲ್ಕ ಪಾವತಿಸಬೇಕಾಗುತ್ತದೆ.

ಗಮನಿಸಬೇಕಾದ ಅಂಶಗಳು

- ಇನ್ನು ಮುಂದೆ ಕಡೆ ಕ್ಷಣದಲ್ಲಿ ಫಾಸ್ಟ್‌ಟ್ಯಾಗ್ ರೀಚಾರ್ಜ್ ಕೆಲಸವನ್ನು ಇರಿಸಿಕೊಳ್ಳಬಾರದು
- ಪ್ರಯಾಣದ ಆರಂಭದಲ್ಲಿಯೇ ತುಸು ಹೆಚ್ಚುವರಿ ಮೊತ್ತವನ್ನು ರೀಚಾರ್ಜ್ ಮಾಡಿಕೊಳ್ಳಬೇಕು
- ಆ್ಯಪ್ ಬಳಸಿ ಫಾಸ್ಟ್ಯಾಗ್ ವಹಿವಾಟನ್ನು ಆಗಾಗ ಪರಿಶೀಲಿಸುತ್ತ ಇರಬೇಕು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

ಕಣಿಯರ ಸೇವಾ ಸಮಾಜ (ರಿ)
ನಂ.74/2, 10ನೇ ಕ್ರಾಸ್, ಕಣಿಯರ ಕಾಲೋನಿ,
2ನೇ ಮುಖ್ಯರಸ್ತೆ, ಚಾಮರಾಜಪೇಟೆ, ಬೆಂಗಳೂರು–560018.
ದಿನಾಂಕ: 16–02–2025
ಚುನಾವಣಾ ಪ್ರಕಟಣೆ
ಮೇಲ್ಕಂಡ ಸಂಘದ ಸದಸ್ಯರ ಗಮನಕ್ಕೆ ತರಬಯಸುವುದೇನೆಂದರೆ, ಸಮಾಜದ ಕಾರ್ಯನಿರ್ವಾಹಕ ಸಮಿತಿಗೆ ಚುನಾವಣಾ ದಿನಾಂಕದಿಂದ ಮುಂದಿನ ಮೂರು ವರ್ಷಗಳ ಅವಧಿಗೆ ದಿನಾಂಕ: 02–03–2025ನೇ ಭಾನುವಾರ ಬೆಳಿಗ್ಗೆ 11.00 ಘಂಟೆಯಿಂದ ಸಂಜೆ 4.00 ಘಂಟೆಯವರೆಗೆ, ಶ್ರೀ ರಾಮೇಶ್ವರ ಕಲ್ಯಾಣ ಮಂಟಪ, 3ನೇ ಮುಖ್ಯರಸ್ತೆ, ಚಾಮರಾಜಪೇಟೆ, ಬೆಂಗಳೂರು–560018 ಇಲ್ಲಿ ಚುನಾವಣೆ ನಡೆಯಲಿದ್ದು, ನಾಮಪತ್ರ ಸಲ್ಲಿಸಲು ಕೊನೆಯ ದಿನಾಂಕ: 21–02–2025, ನಾಮಪತ್ರಗಳ ಪರಿಶೀಲನೆ ದಿನಾಂಕ: 22–02–2025, ನಾಮಪತ್ರಗಳ ವಾಪಸ್ಸಾತಿ ದಿನಾಂಕ: 23–02–2025, ಈ ಕುರಿತು ಚುನಾವಣಾ ವೇಳಾಪಟ್ಟಿ ಈಗಾಗಲೇ ಸದಸ್ಯರ ವಿಳಾಸಕ್ಕೆ ಅಂಚೆ ಮೂಲಕ ರವಾನಿಸಲಾಗಿದ್ದು, ಇದು ತಲುಪದೆ ಇದ್ದಲ್ಲಿ, ಇದನ್ನೇ ಚುನಾವಣಾ ಸೂಚನಾ ಪತ್ರವೆಂದು ಪರಿಗಣಿಸಿ ಚುನಾವಣೆ ಪ್ರಕ್ರಿಯೆಯಲ್ಲಿ ಭಾಗವಹಿಸಲು ಕೋರಿದೆ. ಹೆಚ್ಚಿನ ಮಾಹಿತಿಗಾಗಿ ಸಂಘದ ಮೊಬೈಲ್ ಸಂಖ್ಯೆ 9980977051ನ್ನು ಸಂಪರ್ಕಿಸಲು ಕೋರಿದೆ.
ಸಹಿ/–
(ಲಕ್ಷ್ಮಣ ಎಸ್ ಸಿ)
ಕಾರ್ಯದರ್ಶಿ
ಸ್ಥಳ: ಬೆಂಗಳೂರು

KARNATAKA REAL ESTATE REGULATORY AUTHORITY BANGALORE,
No.1/14, Ground Floor, Silver Jubli Block, Unity Building Backside, CSI Compound 3rd Cross, Misson Road Bengaluru, Karnataka 560027
BEFORE THE REAL ESTATE REGULATORY AUTHORITY, AT BANGALORE.
COMPLAINT NO. 01677/2023
COMPLAINANTS : Deep Narayan Bharti & another,
B-706, GK Golden City, Parappna Agrahara Road, Kudlu Village, Bangaluru Urban -560068.
-vs-
RESPONDENTS: G K Shelters Private Limited & others.
SUMMONS/ NOTICE TO RESPONDENTS
1. Sr. Sri. C Muni Reddy, No. 2035, 14th Cross, 23rd Main, HSR 1st Sector, Bengaluru- 560102.
2. Smt. Mr. C Muni Reddy & Mr. Shreyash Vijay Reddy, No. 2035, 14th Cross, 23rd Main, HSR 1st Sector, Bengaluru- 560102.
Whereas, the above complaint got registered with the Karnataka Real Estate Regulatory Authority by the complainants, seeking Compensation for not issuance of OC from the respondents of the real estate project name and style as "GK Golden City".
In view of the above, the Adjudicating Officer considers it appropriate to enforce your attendance in accordance with section 71(3) of the RERA Act, before the court of Adjudicating Officer on 28.02.2025 at 11:00 AM, so as to ensure your presence during the date of hearing and submit your explanations.
This paper publication is treated as the summons issued by the Adjudiating Officer in accordance with section 71(3) of the RERA Act and therefore you are required to be present during the hearing and submit your explanations. In the event of your failure to appear for the hearing and submit your explanations, it would be construed that you have violated the directions of the Adjudicating Officer and they may direct to pay compensation or tnterest, would be initiated for non-compliance with the summons issued under section 71 of the RERA Act.
You are also hereby directed to submit your statement of objections, any other written submissions and documents in support of your contentions on the above complaint in the office of the RERA Authority by 28.02.2025 and ensure to serve the copies of the same on the complainants.
Sd/- Adjudicating Officer,
Real Estate Regulatory Authority
Bangalore.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಸಾರ್ವಜನಿಕ ಪ್ರಕಟಣೆ
BOOK YOUR PUBLIC NOTICE ADS IN PRAJAVANI ALL KARNATAKA, ON ALL DAYS
www.dhclassifieds.com
@ 500/-* PER SQCM
BOOK NOW
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9845114560
+91 9731810277 | 080- 45557163/164

ಉದ್ಯೋಗಾವಕಾಶ

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-, 20,000/-. ESI, PF ಸೌಲಭ್ಯವಿರುತ್ತದೆ. ಬೆಂಗಳೂರು-76. ತಕ್ಷಣಸಂಪರ್ಕಿಸಿ: 9008835841, 9148525233

ಪ್ರವಾಸ

Travel

6 ದಿನಗಳ ಬಾಲಿ ಇಂಡೋನೇಷ್ಯಾ. 8 ದಿನಗಳ ನೇಪಾಳ ಮುಕ್ತಿನಾಥ. 7/11 ದಿನಗಳ ಸಿಂಗಾಪುರ ಮಲೇಶಿಯಾ ಥೈಲ್ಯಾಂಡ್. 18 ದಿನಗಳ ಯುಕೆ,ಯುರೋಪ್. 20 ದಿನಗಳ ಆಸ್ಟ್ರೇಲಿಯಾ ನ್ಯೂಜಿಲೆಂಡ್. 5/9 ದಿನಗಳ ಕಾಶಿ,ಅಯೋಧ್ಯ,ಪ್ರಯಾಗ್‌ರಾಜ್ ಸಂಪರ್ಕಿಸಿ: ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್ ಬಸವನಗುಡಿ ಬೆಂಗಳೂರು-04. 9900099252 9880079588

ಚಾರ್ ಧಾಮ್ ಸ್ಪೆಷಲ್ ಯಾತ್ರೆ: 24.4.2025, 28.5.2025 ರಿಂದ,14ದಿನಗಳು ಕೇದಾರನಾಥ್,ಬದರಿನಾಥ್ (ಪುಷ್ಕರ್ ಸರಸ್ವತಿ ನದಿಸ್ನಾನ) ಯಮುನೋತ್ರಿ,ಗಂಗೋತ್ರಿ ಇತ್ಯಾದಿ.ಸಂಪರ್ಕಿಸಿ: ಕೆ.ಪಿ.ಟೂರ್ಸ್ ಅಂಡ್ ಟ್ರಾವೆಲ್ಸ್, ಬೆಂಗಳೂರು.9741024122, 9740311411.

ದೆಹಲಿ ಆಗ್ರಾ, ಅಯೋಧ್ಯೆ 7 ದಿನಗಳು. ವೈಷ್ಣೋದೇವಿ 7ದಿನಗಳು, ನೇಪಾಳ,ಮುಕ್ತಿನಾಥ ಯಾತ್ರಾ 7 ದಿನಗಳು. ಸಂಪರ್ಕಿಸಿ: ವಿಜಯ ಟ್ರಾವೆಲ್ಸ್, ಮಲ್ಲೇಶ್ವರಂ ಬೆಂಗಳೂರು. 9448294477

'ಪಿಎಂ– ಆಶಾ' ಮುಂದುವರಿಕೆಗೆ ಕೇಂದ್ರದ ಅನುಮೋದನೆ

ನವದೆಹಲಿ (ಪಿಟಿಐ): ಪ್ರಧಾನಮಂತ್ರಿ ಅನ್ನದಾತ ಆಯ್ ಸಂರಕ್ಷಣಾ ಅಭಿಯಾನ (ಪಿಎಂ– ಆಶಾ) ಯೋಜನೆಯನ್ನು 2025–26ನೇ ಸಾಲಿನಲ್ಲೂ ಮುಂದುವರಿಸಲು ಕೇಂದ್ರ ಅನುಮೋದನೆ ನೀಡಿದೆ.

ಈ ಯೋಜನೆಯು ಖರೀದಿ ಪ್ರಕ್ರಿಯೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಗುರಿ ಹೊಂದಿದ್ದು, ರೈತರಿಗೆ ಲಾಭದಾಯಕ ಬೆಲೆಗಳನ್ನು ಒದಗಿಸಲು ಮತ್ತು ಅಗತ್ಯ ವಸ್ತುಗಳ ಬೆಲೆ ಏರಿಳಿತವನ್ನು ನಿಯಂತ್ರಿಸಲು ನಿರ್ಣಾಯಕವಾಗಿದೆ ಎಂದಿದೆ.

ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ತೊಗರಿ, ಉದ್ದು ಖರೀದಿಗೂ ಕೇಂದ್ರ ಸರ್ಕಾರ ಅನುಮತಿ ನೀಡಿದೆ. ಆಂಧ್ರಪ್ರದೇಶ, ಛತ್ತೀಸಗಢ, ಗುಜರಾತ್, ಹರಿಯಾಣ, ಕರ್ನಾಟಕ, ಮಧ್ಯಪ್ರದೇಶ, ಮಹಾರಾಷ್ಟ್ರ, ತೆಲಂಗಾಣ ಮತ್ತು ಉತ್ತರ ಪ್ರದೇಶದಲ್ಲಿ 13.22 ಲಕ್ಷ ಟನ್ ತೊಗರಿ ಖರೀದಿಸಲು ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ ಎಂದು ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ತಿಳಿಸಿದ್ದಾರೆ.

ಶಿವರಾಜ್ ಸಿಂಗ್ ಚೌಹಾಣ್

ಕರ್ನಾಟಕ, ಆಂಧ್ರಪ್ರದೇಶ, ಮಹಾರಾಷ್ಟ್ರ, ತೆಲಂಗಾಣದಲ್ಲಿ ಫೆ.15ರವರೆಗೆ 15 ಲಕ್ಷ ಟನ್ ತೊಗರಿ ಖರೀದಿಸಿದ್ದು, ಈ ರಾಜ್ಯಗಳ 12,006 ರೈತರಿಗೆ ಅನುಕೂಲವಾಗಿದೆ ಎಂದಿರುವ ಚೌಹಾಣ್, ಇತರ ರಾಜ್ಯಗಳಲ್ಲೂ ಶೀಘ್ರದಲ್ಲೇ ಖರೀದಿ ಆರಂಭವಾಗಲಿದೆ ಎಂದಿದ್ದಾರೆ.

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹28150
ಎಸಿ	₹15680
ಆರ್‌ಪಿ	₹24000
ಆರ್‌ಸಿ	₹13100

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1430 (1435)
ಸೋಯಾ (ರಿಫೈನ್ಡ್)	₹1320 (1310)
ಸೂರ್ಯಕಾಂತಿ (ರಿಫೈನ್ಡ್)	₹1420 (1430)
ಪಾಮೋಲಿನ್	₹1360 (1365)

ಸಿಂಗಪುರ: ಭಾರತ ಮೂಲದ ವಿಪಕ್ಷ ನಾಯಕನಿಗೆ ದಂಡ

ಸಿಂಗಪುರ (ಪಿಟಿಐ): ಸಿಂಗಪುರ ಸಂಸತ್‌ನ ಸಂಸದೀಯ ಸಮಿತಿಗೆ ಸುಳ್ಳು ಸಾಕ್ಷ್ಯ ನೀಡಿದ ಪ್ರಕರಣ ದಲ್ಲಿ ಭಾರತ ಮೂಲದ ವಿರೋಧ ಪಕ್ಷದ ನಾಯಕ ಪ್ರೀತಂ ಸಿಂಗ್ ಅವರಿಗೆ ಇಲ್ಲಿನ ಜಿಲ್ಲಾ ನ್ಯಾಯಾಲಯ 14 ಸಾವಿರ ಸಿಂಗಪುರ ಡಾಲರ್ ದಂಡ (₹9 ಲಕ್ಷ) ವಿಧಿಸಿದೆ.

ಉಪ ಪ್ರಧಾನ ಜಿಲ್ಲಾ ನ್ಯಾಯಾಧೀಶ ಲೂಕ್ ಟಾನ್ ಅವರು ಎರಡು ಪ್ರಕರಣಗಳಲ್ಲಿ ಪ್ರೀತಂ ತಪ್ಪಿತಸ್ಥ ಎಂದು ಸೋಮವಾರ ತೀರ್ಪು ನೀಡಿದರು. ಎರಡು ಪ್ರಕರಣಗಳಲ್ಲಿ ತಲಾ 7 ಸಾವಿರ ಸಿಂಗಪುರ ಡಾಲರ್ (₹4.5 ಲಕ್ಷ) ದಂಡ ವಿಧಿಸಿದರು.

ತೀರ್ಪು ಹೊರಬಿದ್ದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ವಿರೋಧ ಪಕ್ಷದ ನಾಯಕ, ಈ ವರ್ಷದ ನವೆಂಬರ್‌ನಲ್ಲಿ ನಡೆಯಲಿರುವ ಸಾರ್ವತ್ರಿಕ ಚುನಾವಣೆಯಲ್ಲಿ ಸ್ಪರ್ಧಿಸುವುದಾಗಿ ತಿಳಿಸಿದರು.

ಯಾವುದೇ ಪ್ರಕರಣದಲ್ಲಿ ಸಂಸದರು ಕನಿಷ್ಠ ಒಂದು ವರ್ಷ ಜೈಲು ಅಥವಾ ಕನಿಷ್ಠ ₹6.50 ಲಕ್ಷ (ಒಂದು ಅಪರಾಧಕ್ಕೆ ಸಂಬಂಧಿಸಿದಂತೆ) ದಂಡಕ್ಕೆ ಗುರಿಯಾದರೆ ಅವರ ಸಂಸತ್ ಸದಸ್ಯತ್ವ ರದ್ದಾಗುತ್ತದೆ ಮತ್ತು ಚುನಾವಣೆಯಲ್ಲಿ ಸ್ಪರ್ಧಿಸಲು ಅನರ್ಹರಾಗುತ್ತಾರೆ ಎಂದು ನಿಯಮ ಹೇಳುತ್ತದೆ. ಆದರೆ, ಸಿಂಗ್ ಅವರಿಗೆ ವಿಧಿಸಿರುವ ಶಿಕ್ಷೆಯು ಅವರನ್ನು ಸಂಸತ್ ಸದಸ್ಯತ್ವದಿಂದ ಅನರ್ಹಗೊಳಿಸುವ ಮಿತಿಯನ್ನು ತಲುಪುವುದಿಲ್ಲ ಎಂದು ಚುನಾವಣಾ ಆಯೋಗ ದೃಢಪಡಿಸಿದೆ.

'ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಲು ಕಾನೂನು ತಂಡಕ್ಕೆ ಸೂಚಿಸಿದ್ದೇನೆ' ಎಂದು ಸಿಂಗಪುರ ಸಂಸತ್‌ನಲ್ಲಿ ವಿಪಕ್ಷ ಸ್ಥಾನದಲ್ಲಿರುವ ವರ್ಕರ್ಸ್ ಪಾರ್ಟಿ ಪ್ರಧಾನ ಕಾರ್ಯದರ್ಶಿಯಾಗಿರುವ ಸಿಂಗ್ ಅವರು ಫೇಸ್‌ಬುಕ್ ಖಾತೆಯಲ್ಲಿ ಬರೆದುಕೊಂಡಿದ್ದಾರೆ.

2021ರಲ್ಲಿ ತಮ್ಮದೇ ಪಕ್ಷದ ಮಾಜಿ ಸಂಸದೆ ರಯೀಸಾ ಖಾನ್ ಅವರಿಗೆ ಸಂಬಂಧಿಸಿದ ಪ್ರಕರಣದ ವಿಚಾರಣೆ ವೇಳೆ ಸಂಸದೀಯ ಸಮಿತಿಗೆ ಸುಳ್ಳು ಸಾಕ್ಷ್ಯ ನೀಡಿದ ಎರಡು ಆರೋಪಗಳು ಸಿಂಗ್ ಮೇಲಿದ್ದವು.

ಇಸ್ರೇಲ್ ಡ್ರೋನ್ ದಾಳಿ: ಹಮಾಸ್ ಮುಖ್ಯಸ್ಥ ಸಾವು

ಜೆರುಸಲೇಂ (ಎಪಿ): ದಕ್ಷಿಣ ಲೆಬನಾನ್ ಮೇಲೆ ಇಸ್ರೇಲ್ ಸೋಮವಾರ ನಡೆಸಿದ ಡ್ರೋನ್ ದಾಳಿಯಲ್ಲಿ ಹಮಾಸ್ ಬಂಡುಕೋರ ಸಂಘಟನೆಯ ಲೆಬನಾನ್ ಘಟಕದ ಮುಖ್ಯಸ್ಥ ಮೃತಪಟ್ಟಿದ್ದಾನೆ ಎಂದು ಇಸ್ರೇಲ್ ಸೇನೆ ತಿಳಿಸಿದೆ.

ಕದನ ವಿರಾಮ ಒಪ್ಪಂದದ ಅಡಿಯಲ್ಲಿ ದಕ್ಷಿಣ ಲೆಬನಾನ್‌ನಿಂದ ಸೇನೆ ಹಿಂಪಡೆಯಲು ಇಸ್ರೇಲ್‌ಗೆ ನೀಡಿರುವ ಗಡುವು ಮುಗಿಯುವ ಒಂದು ದಿನ ಮೊದಲು ಈ ದಾಳಿ ನಡೆದಿದೆ.

'ಲೆಬನಾನ್‌ನ ಹಮಾಸ್ ಸಂಘಟನೆಯ ಮುಖ್ಯಸ್ಥ ಮಹಮ್ಮದ್ ಶಹೀನ್ ಮೃತಪಟ್ಟಿದ್ದಾನೆ. ಈತ ಇತ್ತೀಚೆಗೆ ಇರಾನ್ ನಿರ್ದೇಶಿತ ಭಯೋತ್ಪಾದಕ ದಾಳಿಗಳ ಬಗ್ಗೆ ಯೋಜನೆ ರೂಪಿಸಿದ್ದ' ಎಂದು ಇಸ್ರೇಲ್ ಸೇನೆ ತಿಳಿಸಿದೆ.

ಮಹಮ್ಮದ್ ಸಾವನ್ನು ಹಮಾಸ್ ಸಂಘಟನೆಯು ಖಚಿತಪಡಿಸಿದೆ. ಆದರೆ ಆತನನ್ನು 'ಮಿಲಿಟರಿ ಕಮಾಂಡರ್' ಎಂದು ಕರೆದಿದೆ.

ಅಡಿಕೆ ಧಾರಣೆ (₹ಗಳಲ್ಲಿ)

ಸಾಗರ	
ಬಿಳಿಗೋಟು	7010-18111
ಚಾಲಿ	23300-34129
ಕೋಕ	7010-20099
ಕೆಂಪುಗೋಟು	10199-26807
ರಾಶಿ	21009-51849
ಸಿಪ್ಪೆಗೋಟು	6099-16899
ಶಿವಮೊಗ್ಗ	
ಬೆಟ್ಟೆ	45199-56000
ಗೊರಬಲು	17009-26599
ರಾಶಿ	34299-52011
ಸರಕು	46540-90999
ಸಿದ್ದಾಪುರ	
ಬಿಳಿಗೋಟು	21309-25689
ಚಾಲಿ	33869-37549
ಕೋಕ	13699-21389
ಹೊಸಚಾಲಿ	25118-31599
ಕೆಂಪುಗೋಟು	19609-22309
ರಾಶಿ	42089-49099
ತಟ್ಟಿಬೆಟ್ಟೆ	29099-47609
ಶಿರಸಿ	
ಬೆಟ್ಟೆ	28169-38909
ಬಿಳಿಗೋಟು	14189-29099
ಚಾಲಿ	32319-39089
ಕೆಂಪುಗೋಟು	10909-23899
ರಾಶಿ	43099-47898

₹250ಕ್ಕೆ ಎಸ್‌ಐಪಿ ಆರಂಭಿಸಿದ ಎಸ್‌ಬಿಐ

ಮುಂಬೈ (ಪಿಟಿಐ): ₹250 ಮೊತ್ತದ ವ್ಯವಸ್ಥಿತ ಹೂಡಿಕೆ ಯೋಜನೆಯನ್ನು (ಎಸ್‌ಐಪಿ) ಎಸ್‌ಬಿಐ ಮ್ಯೂಚುವಲ್ ಫಂಡ್ ಸೋಮವಾರ ಆರಂಭಿಸಿದೆ. ಹೂಡಿಕೆ ಯೋಜನೆಗಳು ಎಲ್ಲ ವರ್ಗಗಳ ಜನರಿಗೂ ಲಭ್ಯವಾಗುವಂತೆ ಆಗಬೇಕು ಎಂಬ ಉದ್ದೇಶದಿಂದ ಈ ಯೋಜನೆ ಆರಂಭಿಸಲಾಗಿದೆ.

ಈ ಯೋಜನೆಗೆ 'ಜನ ನಿವೇಶ್ ಎಸ್‌ಐಪಿ ಯೋಜನೆ' ಎಂಬ ಹೆಸರು ನೀಡಲಾಗಿದೆ. ಯೋಜನೆಗೆ ಚಾಲನೆ ನೀಡುವ ಕಾರ್ಯಕ್ರಮದಲ್ಲಿ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ಅಧ್ಯಕ್ಷೆ ಮಾಧವಿ ಪುರಿ ಬುಚ್ ಅವರೂ ಇದ್ದರು.

'ಇಂತಹ ಯೋಜನೆಗಳಲ್ಲಿ ತೊಡಗಿಸುವ ಕನಿಷ್ಠ ಮೊತ್ತವನ್ನು ತಗ್ಗಿಸುವ ಮೂಲಕ, ಡಿಜಿಟಲ್ ವೇದಿಕೆಗಳನ್ನು ಬಳಸಿಕೊಳ್ಳುವ ಮೂಲಕ ನಾವು ಮೊದಲ ಬಾರಿಗೆ ಹೂಡಿಕೆ ಮಾಡುತ್ತಿರುವವರನ್ನು, ಸಣ್ಣ ಮೊತ್ತವನ್ನು ತೊಡಗಿಸುವವರನ್ನು, ಅಸಂಘಟಿತ ವಲಯಗಳಲ್ಲಿ ಇರುವವರನ್ನು ಆಕರ್ಷಿಸುವ ಗುರಿ ಹೊಂದಿದ್ದೇವೆ' ಎಂದು ಎಸ್‌ಬಿಐ ಮ್ಯೂಚುವಲ್ ಫಂಡ್ ವ್ಯವಸ್ಥಾಪಕ ನಿರ್ದೇಶಕ ನಂದ ಕಿಶೋರ್ ಹೇಳಿದ್ದಾರೆ.

3 ವರ್ಷದಿಂದ ನಡೆಯುತ್ತಿರುವ ಯುದ್ಧ ಅಂತ್ಯಗೊಳಿಸಲು ಮಾತುಕತೆ

ರಷ್ಯಾ–ಉಕ್ರೇನ್ ನಡುವೆ ಡ್ರೋನ್ ಸಮರ

ಮಾಸ್ಕೊ/ಕೀವ್ (ಎಎಫ್‌ಪಿ/ ರಾಯಿಟರ್ಸ್): ರಷ್ಯಾದ ಮೇಲೆ 90 ಡ್ರೋನ್‌ಗಳ ಮೂಲಕ ಉಕ್ರೇನ್ ದಾಳಿ ನಡೆಸಿದೆ. ಜೊತೆಗೆ, ಹಡಗು ವಿನಾಶಕ ಕ್ರೂಸ್ ಕ್ಷಿಪಣಿ 'ನೆಪ್ಚೂನ್' ಮೂಲಕವೂ ದಾಳಿ ನಡೆಸಿದೆ. 'ಉಕ್ರೇನ್ ಸಿಡಿಸಿದ ಎಲ್ಲ ಡ್ರೋನ್‌ಗಳನ್ನು ಹಾಗೂ ಕ್ಷಿಪಣಿಯೊಂದನ್ನು ನಾಶಪಡಿಸಲಾಗಿದೆ' ಎಂದು ರಷ್ಯಾ ಹೇಳಿದೆ. ಉಕ್ರೇನ್‌ನ ದಾಳಿಗೆ ಪ್ರತಿಯಾಗಿ ರಷ್ಯಾ ಕೂಡ 147 ಡ್ರೋನ್‌ಗಳ ಮೂಲಕ ದಾಳಿ ನಡೆಸಿದೆ.

'ಮೂರು ವರ್ಷಗಳಿಂದ ನಡೆಯುತ್ತಿರುವ ಯುದ್ಧವನ್ನು ಅಂತ್ಯಗೊಳಿಸುವುದಕ್ಕಾಗಿ ತುರ್ತುಮಾತುಕತೆನಡೆಸಲುಸಿದ್ಧವಾಗಿದ್ದೇವೆ' ಎಂದು ರಷ್ಯಾ ಅಧ್ಯಕ್ಷ ವಾದ್ಲಿಮಿರ್ ಪುಟಿನ್ ಹಾಗೂ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಹೇಳಿಕೆ ನೀಡಿದ ಬೆನ್ನಲ್ಲೇ ಉಕ್ರೇನ್ ಈ ದಾಳಿ ನಡೆಸಿದೆ.

'ರಾತ್ರಿ ವೇಳೆಯಲ್ಲಿ ಡ್ರೋನ್ ದಾಳಿ ನಡೆಸಲಾಗಿದೆ. ನಮ್ಮ ರಕ್ಷಣಾತ್ಮಕ ವ್ಯವಸ್ಥೆಯು ಉಕ್ರೇನ್‌ನ ಡ್ರೋನ್‌ಗಳನ್ನು ಹೊಡೆದುರುಳಿಸಿವೆ. ಸಾವು–ನೋವಿನ ಯಾವುದೇ ಘಟನೆ ಸಂಭವಿಸಿಲ್ಲ' ಎಂದು ರಷ್ಯಾ ರಕ್ಷಣಾ ಸಚಿವಾಲಯ ತಿಳಿಸಿದೆ.

ರಷ್ಯಾ ನಡೆಸಿದ ದಾಳಿಯ ಪರಿಣಾಮವಾಗಿ ಉಕ್ರೇನ್‌ನ ಕೀವ್ ಪ್ರಾಂತ್ಯದ ಕಾರ್ಖಾನೆಯೊಂದಕ್ಕೆ ಬೆಂಕಿ ತಗುಲಿದೆ. ನಾಲ್ಕು ಖಾಸಗಿ ವಸತಿ ನಿಲಯಗಳಿಗೆ ಹಾನಿಯಾಗಿದೆ. ವ್ಯಕ್ತಿಯೊಬ್ಬರಿಗೆ ಗಾಯಗಳಾಗಿವೆ. ಜೊತೆಗೆ, ಹಾರ್ಕಿವ್ ಪ್ರಾಂತ್ಯದಲ್ಲಿ ಮೂರು ಅಂತಸ್ತಿನ ಕಟ್ಟಡಕ್ಕೆ ಹಾನಿಯಾಗಿದೆ. ಸರ್ಕಾರದ ಆಡಳಿತ ಕಚೇರಿ ಮತ್ತು 14 ನಿವಾಸಗಳ ಕಿಟಕಿ ಗಾಜುಗಳಿಗೆ ಹಾನಿಯಾಗಿದೆ' ಎಂದು ಉಕ್ರೇನ್ ತಿಳಿಸಿದೆ.

'ರಷ್ಯಾದ 147 ಡ್ರೋನ್‌ಗಳ ಪೈಕಿ 83 ಡ್ರೋನ್‌ಗಳನ್ನು ಹೊಡೆದುರುಳಿಸಲಾಗಿದೆ. ಗುರಿ ತಲುಪದಂತೆ ಸುಮಾರು 59 ಡ್ರೋನ್ ತಡೆಯಲಾಗಿದೆ' ಎಂದು ಉಕ್ರೇನ್ ಸೇನೆ ಹೇಳಿದೆ. ಆದರೆ, ಉಳಿದ 5 ಡ್ರೋನ್‌ಗಳು ಏನಾದವು ಎನ್ನುವ ಬಗ್ಗೆ ಮಾಹಿತಿ ನೀಡಿಲ್ಲ.

ರಷ್ಯಾ ಮೇಲೆ ಉಕ್ರೇನ್ ಸೋಮವಾರ ರಾಕೆಟ್ ದಾಳಿ ನಡೆಸಿತು –ಎಎಫ್‌ಪಿ ಚಿತ್ರ

ಶೀಘ್ರದಲ್ಲೇ ಪುಟಿನ್ ಭೇಟಿ: ಟ್ರಂಪ್

ವೆಸ್ಟ್ ಪಾಮ್ ಬೀಚ್ (ಎಎಫ್‌ಪಿ): ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರನ್ನು ಶೀಘ್ರದಲ್ಲೇ ಭೇಟಿ ಮಾಡುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಟ್ರಂಪ್ 'ಉಕ್ರೇನ್‌ನೊಂದಿಗಿನ ಯುದ್ಧ ನಿಲ್ಲಬೇಕು ಎಂದು ಪುಟಿನ್ ಕೂಡ ಬಯಸುತ್ತಿದ್ದಾರೆ ಎಂದು ನಾನು ನಂಬಿದ್ದೇನೆ. ಪುಟಿನ್ ಭೇಟಿಗೆ ಸಮಯ ನಿಗದಿಯಾಗಿಲ್ಲ, ಆದರೆ, ಶೀಘ್ರದಲ್ಲಿಯೇ ಭೇಟಿಯಾಗುತ್ತೇವೆ' ಎಂದರು.

ಇಂದು ರಷ್ಯಾ–ಅಮೆರಿಕ ಅಧಿಕಾರಿಗಳ ಚರ್ಚೆ

ಉಕ್ರೇನ್–ರಷ್ಯಾ ಯುದ್ಧ ಕೊನೆಗೊಳಿಸುವ ಸಂಬಂಧ ಅಮೆರಿಕ ಹಾಗೂ ರಷ್ಯಾದ ಅಧಿಕಾರಿಗಳು ಸೌದಿ ಅರೇಬಿಯಾದಲ್ಲಿ ಮಂಗಳವಾರ ಚರ್ಚೆ ನಡೆಸಲಿದ್ದಾರೆ. ಉಕ್ರೇನ್ ಪ್ರಧಾನಿ ವೊಲೊಡಿಮಿರ್ ಝೆಲೆನ್‌ಸ್ಕಿ ಕೂಡ ಮಂಗಳವಾರ ಸೌದಿ ಅರೇಬಿಯಾಕ್ಕೆ ಭೇಟಿ ನೀಡಲಿದ್ದಾರೆ. ಆದರೆ, ಅಮೆರಿಕ ಮತ್ತು ರಷ್ಯಾ ನಡುವೆ ನಡೆಯುವ ಮಾತುಕತೆಯಲ್ಲಿ ಭಾಗವಹಿಸುವುದಿಲ್ಲ ಎಂದು ಝೆಲೆನ್‌ಸ್ಕಿ ಅವರು ಸ್ಪಷ್ಟಪಡಿಸಿದ್ದಾರೆ.

'ಉಕ್ರೇನ್–ರಷ್ಯಾ ಯುದ್ಧ ಅಂತ್ಯಗೊಂಡ ಬಳಿಕ ಉಕ್ರೇನ್‌ಗೆ ಬ್ರಿಟನ್‌ನ ಶಾಂತಿಪಾಲನಾ ಪಡೆಯನ್ನು ಕಳುಹಿಸಲು ನಾವು ಸಿದ್ಧವಾಗಿದ್ದೇವೆ' ಎಂದು ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್ ಅವರು ಪತ್ರಿಕೆಯೊಂದಕ್ಕೆ ಬರೆದ ಲೇಖನದಲ್ಲಿ ಹೇಳಿದ್ದಾರೆ.

ಆ ಮೂಲಕ ಅಮೆರಿಕದೊಂದಿಗೆ ಯುರೋಪ್ ಕೂಡ ಯುದ್ಧ ಅಂತ್ಯಗೊಳಿಸುವಲ್ಲಿ ಮುಖ್ಯ ಪಾತ್ರ ವಹಿಸುವ ಆಸಕ್ತಿ ತೋರಿದೆ ಎನ್ನುವ ಸಂದೇಶ ರವಾನಿಸಿದ್ದಾರೆ. ಆದರೆ, ಇದಕ್ಕೆ ರಷ್ಯಾದ ಸಹಮತವಿಲ್ಲ. 'ಯುದ್ಧ ಅಂತ್ಯಗೊಳಿಸಲು ಯುರೋಪ್‌ನವರಿಗೆ ಸಾಕಷ್ಟು ಸಮಯಾವಕಾಶವಿತ್ತು. ಅವರಿಗೆ ಯುದ್ಧ ನಿಲ್ಲುವುದು ಬೇಡ' ಎಂದು ರಷ್ಯಾದ ವಿದೇಶಾಂಗ ಸಚಿವ ಸೆರ್ಗೆ ಲಾವ್ರೊ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬಾಂಗ್ಲಾ: 41 ಮಾಜಿ ಪೊಲೀಸ್ ಅಧಿಕಾರಿಗಳ ಸೆರೆ

ಢಾಕಾ(ಪಿಟಿಐ): ಬಾಂಗ್ಲಾದಲ್ಲಿ ಕಳೆದ ವರ್ಷ ವಿದ್ಯಾರ್ಥಿಗಳು ನಡೆಸಿದ ಪ್ರತಿಭಟನೆ ವೇಳೆ ದೌರ್ಜನ್ಯ ಎಸಗಿದ ಆರೋಪವನ್ನು 1059 ನಿವೃತ್ತ ಪೊಲೀಸ್ ಸಿಬ್ಬಂದಿ ಎದುರಿಸುತ್ತಿದ್ದಾರೆ. ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ 41 ಮಾಜಿ ಅಧಿಕಾರಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಮಾಜಿ ಪ್ರಧಾನಿ ಶೇಕ್ ಹಸೀನಾ ಪದಚ್ಯುತಿಗೆ ಆಗ್ರಹಿಸಿ ನಡೆದ ಪ್ರತಿಭಟನೆ ವೇಳೆ ನಡೆದ ಹಿಂಸಾಚಾರದಲ್ಲಿ ಬಲಿಯಾದವರ ಕುಟುಂಬಸ್ಥರು ಮತ್ತು ಬದುಕುಳಿದವರು 1059 ಮಂದಿ ವಿರುದ್ಧ ಪೊಲೀಸ್ ಠಾಣೆ ಮತ್ತು ನ್ಯಾಯಾಲಯಗಳಲ್ಲಿ ಪ್ರಕರಣಗಳನ್ನು ದಾಖಲಿಸಿದ್ದಾರೆ ಎಂದು ಪೊಲೀಸ್ ಪ್ರಧಾನ ಕಚೇರಿಯ ಅಧಿಕಾರಿಗಳು ಹೇಳಿರುವುದಾಗಿ ಪತ್ರಿಕೆಯೊಂದು ವರದಿ ಮಾಡಿದೆ.

ಇಬ್ಬರು ಮಾಜಿ ಪೊಲೀಸ್ ಮಹಾ ನಿರ್ದೇಶಕರು, ಢಾಕಾ ಮತ್ತು ಚಿತ್ತಗಾಂವ್‌ನ ಮಾಜಿ ಪೊಲೀಸ್ ಕಮಿಷನರ್‌ಗಳು ಸೇರಿದಂತೆ 41 ಮಂದಿಯನ್ನು ಈವರೆಗೆ ಬಂಧಿಸಲಾಗಿದೆ. ಮಾಜಿ ಹೆಚ್ಚುವರಿ ಪೊಲೀಸ್ ಕಮಿಷನರ್ ಹರುನೂರ್ ರಶೀದ್ ಅವರ ವಿರುದ್ಧ 174 ಪ್ರಕರಣಗಳು ದಾಖಲಾಗಿದ್ದು, ಅವರು ತಲೆಮರೆಸಿಕೊಂಡಿದ್ದಾರೆ.

ನೇಮಕ ಪ್ರಕ್ರಿಯೆ ಮುಂದೂಡಲು ಮನವಿ ಮಾಡಿದ್ದ ಕಾಂಗ್ರೆಸ್

ಜ್ಞಾನೇಶ್ ಕುಮಾರ್ ಹೊಸ ಸಿಇಸಿ

ಜ್ಞಾನೇಶ್ ಕುಮಾರ್

ನವದೆಹಲಿ (ಪಿಟಿಐ): ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರನ್ನು ನೂತನ ಮುಖ್ಯ ಚುನಾವಣಾ ಆಯುಕ್ತರನ್ನಾಗಿ (ಸಿ.ಇ.ಸಿ) ನೇಮಕ ಮಾಡಲಾಗಿದೆ ಎಂದು ಕೇಂದ್ರ ಕಾನೂನು ಸಚಿವಾಲಯ ತಿಳಿಸಿದೆ.

ಕುಮಾರ್ ಅವರು 1988ನೆಯ ಬ್ಯಾಚ್‌ನ ಕೇರಳ ಕೇಡರ್‌ನ ಐಎಎಸ್ ಅಧಿಕಾರಿ.

ಕುಮಾರ್ ಅವರು ಚುನಾವಣಾ ಆಯೋಗದ ಸದಸ್ಯರ ನೇಮಕಕ್ಕೆ ಸಂಬಂಧಿಸಿದಂತೆ ರೂಪಿಸಲಾಗಿರುವ ಹೊಸ ಕಾಯ್ದೆಗೆ ಅನುಗುಣವಾಗಿ ನೇಮಕ ಆಗಿರುವ ಮೊದಲ ಸಿ.ಇ.ಸಿ.

ಕುಮಾರ್ ಅವರ ಅಧಿಕಾರ ಅವಧಿಯು 2029ರ ಜನವರಿ 26ರವರೆಗೆ ಇರಲಿದೆ. ಅಂದರೆ, 2029ರ ಲೋಕಸಭಾ ಚುನಾವಣೆಯ ವೇಳಾಪಟ್ಟಿಯನ್ನು ಆಯೋಗವು ಘೋಷಿಸಬಹುದಾದ ಕೆಲವು ದಿನಗಳ ಮೊದಲು ಅಧಿಕಾರಾವಧಿ ಕೊನೆಯಾಗಲಿದೆ.

1989ರ ಹರಿಯಾಣ ಕೇಡರ್‌ನ ಐಎಎಸ್ ಅಧಿಕಾರಿ ವಿವೇಕ್ ಜೋಷಿ ಅವರನ್ನು ಚುನಾವಣಾ ಆಯುಕ್ತರನ್ನಾಗಿ (ಇ.ಸಿ) ನೇಮಿಸಲಾಗಿದೆ.

26ನೆಯ ಸಿ.ಇ.ಸಿ ಆಗಿರುವ ಕುಮಾರ್ ಅವರು ಈ ವರ್ಷ ಬಿಹಾರ ವಿಧಾನಸಭಾ ಚುನಾವಣೆ, ಮುಂದಿನ ವರ್ಷ ಕೇರಳ ಹಾಗೂ ಪುದುಚೇರಿ ವಿಧಾನಸಭಾ ಚುನಾವಣೆಯ ಮೇಲ್ವಿಚಾರಣೆ ನಡೆಸಲಿದ್ದಾರೆ. 2026ರಲ್ಲಿಯೇ ತಮಿಳುನಾಡು ಮತ್ತು ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆ ಕೂಡ ನಡೆಯಲಿವೆ.

ಜಮ್ಮು ಮತ್ತು ಕಾಶ್ಮೀರಕ್ಕೆ ಸಂವಿಧಾನದ 370ನೆಯ ವಿಧಿಯ ಅಡಿಯಲ್ಲಿ ನೀಡಿದ್ದ ವಿಶೇಷ ಸ್ಥಾನಮಾನ ರದ್ದುಪಡಿಸುವ ತೀರ್ಮಾನವನ್ನು ಅನುಷ್ಠಾನಕ್ಕೆ ತರುವಲ್ಲಿ ಕುಮಾರ್ ಪ್ರಮುಖ ಪಾತ್ರ ವಹಿಸಿದ್ದರು. ಇವರನ್ನು 2024ರ ಮಾರ್ಚ್ 15ರಂದು ಚುನಾವಣಾ ಆಯುಕ್ತರನ್ನಾಗಿ (ಇ.ಸಿ) ನೇಮಿಸಲಾಗಿತ್ತು.

ಸಿ.ಇ.ಸಿ ನೇಮಕಕ್ಕೆ ಸಂಬಂಧಿಸಿದ ಆಯ್ಕೆ ಸಮಿತಿಯ ಸ್ವರೂಪವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಸಲ್ಲಿಕೆಯಾಗಿರುವ ಅರ್ಜಿಯ ವಿಚಾರಣೆ ಪೂರ್ಣಗೊಳ್ಳುವವರೆಗೆ ಹೊಸ ಸಿ.ಇ.ಸಿ ನೇಮಕವನ್ನು ಮುಂದೂಡಬೇಕು ಎಂದು ಕಾಂಗ್ರೆಸ್ ಮನವಿ ಮಾಡಿದ ಕೆಲವೇ ಗಂಟೆಗಳ ನಂತರ ಈ ನೇಮಕ ಆಗಿದೆ.

ಕಾಂಗ್ರೆಸ್ ಪಕ್ಷದ ಈ ಬೇಡಿಕೆಯನ್ನು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಆಯ್ಕೆ ಸಮಿತಿಯ ಸಭೆಯಲ್ಲಿ ಮಂಡಿಸಿದ್ದರು ಎಂದು ಮೂಲಗಳು ತಿಳಿಸಿವೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಸಮಿತಿಯ ಸಭೆ ನಡೆಯಿತು. ಪ್ರಧಾನಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ರಾಹುಲ್ ಅವರು ಈ ಸಮಿತಿಯ ಸದಸ್ಯರು.

ಕುಮಾರ್ ಅವರು ಕೇರಳದ ಎರ್ನಾಕುಳಂ ಜಿಲ್ಲೆಯಲ್ಲಿ ಸಹಾಯಕ ಕಲೆಕ್ಟರ್ ಆಗಿ ಕೆಲಸ ಮಾಡಿದ್ದಾರೆ. ಕೇರಳ ಸರ್ಕಾರದ ವಿವಿಧ ಇಲಾಖೆಗಳ ಕಾರ್ಯದರ್ಶಿಯಾಗಿಯೂ ಅವರು ಕೆಲಸ ನಿರ್ವಹಿಸಿದ್ದಾರೆ.

ರಕ್ಷಣಾ ಸಚಿವಾಲಯದ ಜಂಟಿ ಕಾರ್ಯದರ್ಶಿಯಾಗಿ, ಕೇಂದ್ರ ಗೃಹ ಸಚಿವಾಲಯದ ಜಂಟಿ ಕಾರ್ಯದರ್ಶಿ ಹಾಗೂ ಹೆಚ್ಚುವರಿ ಕಾರ್ಯದರ್ಶಿಯಾಗಿ, ಸಂಸದೀಯ ವ್ಯವಹಾರಗಳ ಸಚಿವಾಲಯದ ಕಾರ್ಯದರ್ಶಿಯಾಗಿ, ಸಹಕಾರ ಸಚಿವಾಲಯದ ಕಾರ್ಯದರ್ಶಿಯಾಗಿ ಅವರು ಕೆಲಸ ಮಾಡಿದ್ದಾರೆ.

ಪೂಜಾ ಸ್ಥಳಗಳ ಕಾಯ್ದೆಗೆ ಸಂಬಂಧಿಸಿದ ಅರ್ಜಿಗಳ ಸಂಖ್ಯೆಯಲ್ಲಿ ಹೆಚ್ಚಳ

ಹೊಸ ಅರ್ಜಿ ವಜಾ ಮಾಡಿದ 'ಸುಪ್ರೀಂ'

ನವದೆಹಲಿ (ಪಿಟಿಐ): ಪೂಜಾ ಸ್ಥಳಗಳ (ವಿಶೇಷ ಅವಕಾಶಗಳು) ಕಾಯ್ದೆ – 1991ರ ಸಿಂಧುತ್ವ ಮತ್ತು ವಿವಿಧ ಅಂಶಗಳನ್ನು ಪ್ರಶ್ನಿಸಿ ಹಲವಾರು ಅರ್ಜಿಗಳು ಸಲ್ಲಿಕೆಯಾಗುತ್ತಿರುವುದಕ್ಕೆ ಸುಪ್ರೀಂ ಕೋರ್ಟ್ ಸೋಮವಾರ ಅಸಮಾಧಾನ ವ್ಯಕ್ತಪಡಿಸಿದ್ದು, ಇನ್ನೂ ನೋಟಿಸ್ ಜಾರಿ ಆಗಿಲ್ಲದ ಹೊಸ ಅರ್ಜಿಗಳನ್ನು ವಜಾಗೊಳಿಸಿದೆ.

ಈ ವಿಷಯಕ್ಕೆ ಸಂಬಂಧಿಸಿದಂತೆ ಈಗಾಗಲೇ ನೋಟಿಸ್ ನೀಡಿರುವ ಬಾಕಿ ಅರ್ಜಿಗಳ ವಿಚಾರಣೆಯನ್ನು ಮೂವರು ನ್ಯಾಯಮೂರ್ತಿಗಳ ಪೀಠವು ಏಪ್ರಿಲ್‌ನಲ್ಲಿ ನಡೆಸಲಿದೆ ಎಂದು ಹೇಳಿದೆ.

ಆದಾಗ್ಯೂ, ಸಮಾಜವಾದಿ ಪಕ್ಷದ ನಾಯಕಿ ಮತ್ತು ಕೈರಾನಾ ಕ್ಷೇತ್ರದ ಸಂಸದೆ ಇಕ್ರಾ ಚೌಧರಿ ಒಳಗೊಂಡಂತೆ ಈಚೆಗೆ ಅರ್ಜಿ ಸಲ್ಲಿಸಿದವರಿಗೆ ಹಾಗೂ ಇದುವರೆಗೂ ನೋಟಿಸ್ ಜಾರಿ ಮಾಡದಿರುವ ಅರ್ಜಿದಾರರಿಗೆ ಹೊಸ ಅಂಶಗಳೇನಾದರೂ ಇದ್ದರೆ ಸೇರಿಸಿ ಮತ್ತೆ ಅರ್ಜಿ ಸಲ್ಲಿಸುವ ಅವಕಾಶವನ್ನು ನೀಡಿದೆ.

ಇನ್ನೂ ನೋಟಿಸ್ ಜಾರಿ ಮಾಡದ ಹೊಸ ಅರ್ಜಿಗಳನ್ನು ವಜಾಗೊಳಿಸಿದ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಮತ್ತು ನ್ಯಾಯಮೂರ್ತಿ ಸಂಜಯ್ ಕುಮಾರ್ ಅವರನ್ನೊಳಗೊಂಡ ಪೀಠ, 'ಸಲ್ಲಿಕೆಯಾಗಿರುವ ಹೊಸ ಅರ್ಜಿಗಳ ಸಂಖ್ಯೆಯನ್ನು ಗಮನಿಸಿದ ಬಳಿಕ ನಾವು ಅನಿವಾರ್ಯವಾಗಿ ಈ ಆದೇಶ ನೀಡುತ್ತಿದ್ದೇವೆ' ಎಂದಿತು.

'ಈ ತನಕ ನೋಟಿಸ್ ನೀಡದೇ ಇರುವ ಬಾಕಿ ಅರ್ಜಿಗಳು ವಜಾಗೊಂಡಿವೆ. ಆದರೆ, ಹೊಸ ಅಂಶಗಳನ್ನು ಸೇರಿಸಿ ಅರ್ಜಿ ಸಲ್ಲಿಸಲು ಅವಕಾಶವಿದೆ. ಬಾಕಿ ಉಳಿದಿರುವ ಅರ್ಜಿಗಳಲ್ಲಿ ಪ್ರಸ್ತಾಪಿಸದೇ ಇರುವಂತಹ ಅಂಶಗಳು ಇದ್ದರೆ ಮಾತ್ರ ಹೊಸ ಅರ್ಜಿಗಳನ್ನು ಪರಿಗಣಿಸುತ್ತೇವೆ' ಎಂದು ಹೇಳಿತು.

ಪೂಜಾ ಸ್ಥಳಗಳ ಕಾಯ್ದೆಗೆ ಸಂಬಂಧಿಸಿದ ಎಲ್ಲ ಬಾಕಿ ಅರ್ಜಿಗಳನ್ನು ಏಪ್ರಿಲ್ 1ರಂದು ಆರಂಭವಾಗುವ ವಾರದಲ್ಲಿ ವಿಚಾರಣೆಗೆ ಕೈಗೆತ್ತಿಕೊಳ್ಳಲು ಪೀಠವು ಪಟ್ಟಿ ಮಾಡಿತು. ಪೂಜಾ ಸ್ಥಳಗಳ ಧಾರ್ಮಿಕ ಸ್ವರೂಪವು 1947ರ ಆಗಸ್ಟ್ 15ರಂದು ಯಾವ ರೀತಿಯಲ್ಲಿ ಇತ್ತೋ, ಅದೇ ರೀತಿಯಲ್ಲೇ ಉಳಿಸಿಕೊಳ್ಳಬೇಕು ಎಂದು ಈ ಕಾಯ್ದೆ ಹೇಳುತ್ತದೆ.

'ನಮ್ಮಲ್ಲಿ ಹೊಸ ಅಂಶಗಳು ಇವೆ ಎಂದು ಹೇಳಿ ಜನರು ಹೊಸ ಅರ್ಜಿಗಳನ್ನು ಸಲ್ಲಿಸುತ್ತಲೇ ಇದ್ದಾರೆ. ಈಗಾಗಲೇ ಸಲ್ಲಿಕೆಯಾಗಿರುವ ಅರ್ಜಿಗಳನ್ನು ಹೊರತುಪಡಿಸಿ ಹೊಸ ಅರ್ಜಿಗಳನ್ನು ವಿಲೇವಾರಿ ಮಾಡುವುದು ನಮಗೆ ಅಸಾಧ್ಯ' ಎಂದು ಸಿಜೆಐ ಹೇಳಿದರು.

ಸಾಲು–ಸಾಲು ಅರ್ಜಿಗಳು

- 10 ಮಸೀದಿಗಳ ಸಮೀಕ್ಷೆ ನಡೆಸುವಂತೆ ಕೋರಿ ವಿವಿಧ ಹಿಂದೂ ಸಂಘಟನೆಗಳು 18 ಅರ್ಜಿಗಳನ್ನು ಸಲ್ಲಿಸಿದ್ದು, ವಿಚಾರಣೆ ನಡೆಯುತ್ತಿದೆ
- ವಾರಾಣಸಿಯ ಗ್ಯಾನವಾಪಿ, ಮಥುರಾದ ಶಾಹಿ ಈದ್ಗಾ ಮಸೀದಿ ಮತ್ತು ಸಂಭಲ್‌ನ ಶಾಹಿ ಜಾಮಾ ಮಸೀದಿಗೆ ಸಂಬಂಧಿಸಿದ ಅರ್ಜಿಗಳೂ ಇದರಲ್ಲಿ ಸೇರಿವೆ
- ಎಐಎಂಐಎಂ ಮುಖ್ಯಸ್ಥ ಅಸಾದುದ್ದೀನ್ ಒವೈಸಿ, ಎಸ್‌ಪಿ ಸಂಸದೆ ಇಕ್ರಾ ಚೌಧರಿ ಸೇರಿದಂತೆ ಹಲವರು 1991ರ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವಂತೆ ಕೋರಿ ಅರ್ಜಿ ಸಲ್ಲಿಸಿದ್ದಾರೆ

ಮರಳು ಅಕ್ರಮ ಗಣಿಗಾರಿಕೆ: ಸಿಬಿಐ ತನಿಖೆಗೆ ಆದೇಶ

ಚೆನ್ನೈ (ಪಿಟಿಐ): ತಮಿಳುನಾಡಿನ ಕರಾವಳಿ ಜಿಲ್ಲೆಗಳ ಸಮುದ್ರ ತೀರಗಳಲ್ಲಿ ನಡೆದಿದೆ ಎನ್ನಲಾದ ಮರಳು ಅಕ್ರಮ ಗಣಿಗಾರಿಕೆ ಹಗರಣದ ಕುರಿತು ಸಿಬಿಐ ತನಿಖೆಗೆ ಮದ್ರಾಸ್ ಹೈಕೋರ್ಟ್ ಸೋಮವಾರ ಆದೇಶಿಸಿದೆ.

ತಿರುನೆಲ್ವೇಲಿ, ತೂತ್ತುಕುಡಿ ಮತ್ತು ಕನ್ಯಾಕುಮಾರಿ ಜಿಲ್ಲೆಗಳಲ್ಲಿ ಖಾಸಗಿ ಕಂಪನಿಗಳು ₹5,832 ಕೋಟಿ ಮೊತ್ತದ ಅಕ್ರಮ ಗಣಿಗಾರಿಕೆ ನಡೆಸಿರುವ ಆರೋಪ ಕೇಳಿಬಂದಿದೆ.

ನ್ಯಾಯಮೂರ್ತಿಗಳಾದ ಎಸ್.ಎಂ.ಸುಬ್ರಮಣ್ಯನ್ ಮತ್ತು ಎಂ.ಜ್ಯೋತಿರಾಮನ್ ಅವರ ಪೀಠವು, ಕ್ರಿಮಿನಲ್ ಮೊಕದ್ದಮೆಗಳನ್ನು ದಾಖಲಿಸಿ ತನಿಖೆ ಕೈಗೆತ್ತಿಕೊಳ್ಳುವಂತೆ ಸಿಬಿಐಗೆ ಸೂಚಿಸಿತು.

ಸ್ವಯಂಪ್ರೇರಿತ ಪಿಐಎಲ್, ವಿ.ವಿ ಮಿನರಲ್ಸ್ ಮತ್ತು ಇತರ 29 ಮಂದಿ ಸಲ್ಲಿಸಿರುವ ಅರ್ಜಿಗಳ ವಿಚಾರಣೆ ನಡೆಸಿದ ಪೀಠವು ಈ ಆದೇಶ ಹೊರಡಿಸಿದೆ.

ಈ ಹಗರಣಕ್ಕೆ ಸಂಬಂಧಿಸಿದಂತೆ ತಮಿಳುನಾಡು ಪೊಲೀಸರು ದಾಖಲಿಸಿರುವ ಎಲ್ಲ ಪ್ರಕರಣಗಳನ್ನೂ ಸಿಬಿಐಗೆ ವರ್ಗಾಯಿಸಬೇಕು. ಪ್ರಕರಣಗಳ ಎಲ್ಲ ಕಡತಗಳನ್ನು ನಾಲ್ಕು ವಾರಗಳ ಒಳಗಾಗಿ ಸಿಬಿಐಗೆ ಒಪ್ಪಿಸಬೇಕು ಎಂದು ಪೀಠವು ಹೇಳಿತು.

ಚೀನಾ ಕುರಿತು ಸ್ಯಾಮ್ ಪಿತ್ರೋಡ ಹೇಳಿಕೆ; ಬಿಜೆಪಿ ಟೀಕೆ

ಅಂತರ ಕಾಯ್ದುಕೊಂಡ ಕಾಂಗ್ರೆಸ್

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಭಾರತೀಯ ಸಾಗರೋತ್ತರ ಕಾಂಗ್ರೆಸ್ ಮುಖ್ಯಸ್ಥ ಸ್ಯಾಮ್ ಪಿತ್ರೋಡ ಅವರು ಚೀನಾ ಕುರಿತು ನೀಡಿರುವ ಹೇಳಿಕೆಯು ಕಾಂಗ್ರೆಸ್ ಪಕ್ಷವನ್ನು ಇಕ್ಕಟ್ಟಿಗೆ ಸಿಲುಕಿಸಿದೆ.

ಪಿತ್ರೋಡ ಹೇಳಿಕೆಯಿಂದ ಕಾಂಗ್ರೆಸ್ ಪಕ್ಷ ಅಂತರ ಕಾಯ್ದುಕೊಂಡರೆ, ಆಡಳಿತಾರೂಢ ಬಿಜೆಪಿಯು ವಿರೋಧ ಪಕ್ಷದ ಮೇಲೆ ಹರಿಹಾಯ್ದಿದೆ. ಚೀನಾ ಬೆಂಬಲಿಸಿ ಹೇಳಿಕೆ ನೀಡುವ ಕಾಂಗ್ರೆಸ್ ಮುಖಂಡರ ಸಾಲಿಗೆ ಪಿತ್ರೋಡ ಕೂಡಾ ಸೇರಿದ್ದಾರೆ ಎಂದು ಟೀಕಿಸಿದೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಈ ಬಗ್ಗೆ 'ಎಕ್ಸ್'ನಲ್ಲಿ ಪ್ರತಿಕ್ರಿಯಿಸಿದ್ದು, 'ಚೀನಾ ಕುರಿತು ಪಿತ್ರೋಡ ವ್ಯಕ್ತಪಡಿಸಿದ ಅಭಿಪ್ರಾಯ ಖಂಡಿತವಾಗಿಯೂ ಕಾಂಗ್ರೆಸ್‌ನ ಅಭಿಪ್ರಾಯ ಅಲ್ಲ. ಚೀನಾವು ನಮ್ಮ ಬಾಹ್ಯ ಭದ್ರತೆ ಮತ್ತು ಆರ್ಥಿಕತೆಗೆ ಸವಾಲಾಗಿಯೇ ಉಳಿದಿದೆ' ಎಂದು ಹೇಳಿದ್ದಾರೆ.

ಕಾಂಗ್ರೆಸ್‌ಅನ್ನು ಟೀಕಿಸಿರುವ ಬಿಜೆಪಿ ವಕ್ತಾರ ಮತ್ತು ಸಂಸದ ಸುಧಾಂಶು ತ್ರಿವೇದಿ, 'ಪಿತ್ರೋಡ ಹೇಳಿಕೆ ಕಾಂಗ್ರೆಸ್‌ನ ಮನಃಸ್ಥಿತಿಯನ್ನು ಬಿಂಬಿಸುತ್ತದೆ. ಚೀನಾದ ಆಡಳಿತ ಪಕ್ಷದೊಂದಿಗೆ ಕಾಂಗ್ರೆಸ್ ಒಪ್ಪಂದ ಮಾಡಿಕೊಂಡಿರುವುದನ್ನು ಅವರು ಬಹಿರಂಗವಾಗಿ ಒಪ್ಪಿಕೊಂಡಿದ್ದಾರೆ' ಎಂದಿದ್ದಾರೆ.

ಈ ಹಿಂದೆ ಹಲವು ಸಲ ವಿವಾದಾತ್ಮಕ ಹೇಳಿಕೆ ನೀಡಿದ್ದ ಪಿತ್ರೋಡ, ಕಳೆದ ವರ್ಷ ಮೇ 8ರಂದು ಭಾರತೀಯ ಸಾಗರೋತ್ತರ ಕಾಂಗ್ರೆಸ್ ಮುಖ್ಯಸ್ಥನ ಹುದ್ದೆಗೆ ರಾಜೀನಾಮೆ ನೀಡಿದ್ದರು. ಆದರೆ ಯಾವುದೇ ವಿವಾದಾತ್ಮಕ ಹೇಳಿಕೆ ನೀಡುವುದಿಲ್ಲ ಎಂಬ ಭರವಸೆ ನೀಡಿದ್ದರಿಂದ ಅವರಿಗೆ ಕಳೆದ ಜೂನ್‌ನಲ್ಲಿ ಮತ್ತೆ ಮುಖ್ಯಸ್ಥನ ಸ್ಥಾನ ನೀಡಲಾಗಿತ್ತು.

ಪಿತ್ರೋಡ ಹೇಳಿಕೆಯು ಭಾರತವನ್ನು ಆಕ್ರಮಣಕಾರಿ ರಾಷ್ಟ್ರ ಎಂಬಂತೆ ಬಿಂಬಿಸುತ್ತದೆ. ಇದರಿಂದ ದೇಶದ ಪ್ರತಿಷ್ಠೆಗೆ ಧಕ್ಕೆ ಉಂಟಾಗಿದೆ

ಸುಧಾಂಶು ತ್ರಿವೇದಿ, ಬಿಜೆಪಿ ವಕ್ತಾರ

ಪಿತ್ರೋಡ ಹೇಳಿದ್ದು...

ಪಿತ್ರೋಡ ಅವರು ವಿಡಿಯೊ ಸಂದೇಶವೊಂದರಲ್ಲಿ, 'ಚೀನಾದಿಂದ ಇರುವ ಬೆದರಿಕೆ ಏನೆಂಬುದೇ ನನಗೆ ಅರ್ಥವಾಗುತ್ತಿಲ್ಲ. ಈ ವಿಷಯವನ್ನು ಅಗತ್ಯಕ್ಕಿಂತ ಹೆಚ್ಚಾಗಿ ವೈಭವೀಕರಿಸಲಾಗಿದೆ ಎಂದು ಭಾವಿಸಿದ್ದೇನೆ. ಏಕೆಂದರೆ, ದೇಶವೊಂದನ್ನು ಶತ್ರು ಎಂಬುದಾಗಿ ಬಿಂಬಿಸುವ ಪ್ರವೃತ್ತಿ ಅಮೆರಿಕದಲ್ಲಿದೆ' ಎಂದು ಹೇಳಿದ್ದಾಗಿ ವರದಿಯಾಗಿದೆ.


ಸ್ಯಾಮ್ ಪಿತ್ರೋಡ

ನೂಕುನುಗ್ಗಲು ಪಟ್ನಾದ ರಾಜೇಂದ್ರ ನಗರ ರೈಲು ನಿಲ್ದಾಣದಿಂದ ಮಹಾ ಕುಂಭಮೇಳ ನಡೆಯುತ್ತಿರುವ ಉತ್ತರ ಪ್ರದೇಶದ ಪ್ರಯಾಗರಾಜ್‌ಗೆ ಹೊರಟಿದ್ದ ರೈಲಿಗೆ ಸೋಮವಾರ ಜನರು ಜೋತು ಬಿದ್ದಿದ್ದರು –ಪಿಟಿಐ ಚಿತ್ರ

'ಪ್ರಶ್ನೆಪತ್ರಿಕೆ ಸೋರಿಕೆ ವದಂತಿ ನಂಬದಿರಿ'

ನವದೆಹಲಿ (ಪಿಟಿಐ): 10 ಮತ್ತು 12ನೇ ತರಗತಿ ವಾರ್ಷಿಕ ಪರೀಕ್ಷೆಯ ಪ್ರಶ್ನೆಪತ್ರಿಕೆಗಳು ಸೋರಿಕೆಯಾಗಿವೆ ಎಂದು ಸಾಮಾಜಿಕ ಮಾಧ್ಯಮಗಳಲ್ಲಿ ಸುಳ್ಳು ಮಾಹಿತಿ ಹಬ್ಬಿಸಲಾಗಿದೆ. ಈ ಬಗ್ಗೆ ಪೋಷಕರು ಎಚ್ಚರ ವಹಿಸಬೇಕು ಎಂದು ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿಯು (ಸಿಬಿಎಸ್‌ಇ) ತಿಳಿಸಿದೆ.

ಸುಳ್ಳು ಮಾಹಿತಿ ಹರಡುತ್ತಿರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

'2025ನೇ ಸಾಲಿನ ವಾರ್ಷಿಕ ಪರೀಕ್ಷೆಗಳ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿರುವುದಾಗಿ ಕೆಲವು ದುಷ್ಟ ಶಕ್ತಿಗಳು ಯೂಟ್ಯೂಬ್, ಫೇಸ್‌ಬುಕ್, 'ಎಕ್ಸ್' ಮತ್ತು ಇತರ ಸಾಮಾಜಿಕ ಮಾಧ್ಯಮಗಳಲ್ಲಿ ವದಂತಿ ಹಬ್ಬಿಸಿವೆ. ವಿದ್ಯಾರ್ಥಿಗಳು ಹಾಗೂ ಪೋಷಕರಲ್ಲಿ ಭೀತಿಯನ್ನುಂಟು ಮಾಡಲು ಈ ರೀತಿ ವದಂತಿ ಹಬ್ಬಿಸಲಾಗಿದೆ. ಮಂಡಳಿಯು ಈ ಬಗ್ಗೆ ನಿಗಾವಹಿಸಿದೆ' ಎಂದು ತಿಳಿಸಿದ್ದಾರೆ.

ದೆಹಲಿ, ಬಿಹಾರದಲ್ಲಿ ಭೂಕಂಪನ

ನವದೆಹಲಿ (ಪಿಟಿಐ): 'ದೆಹಲಿ ಮತ್ತು ರಾಷ್ಟ್ರ ರಾಜಧಾನಿ ಪ್ರದೇಶದಲ್ಲಿ (ಎನ್‌ಆರ್‌ಸಿ) ಸೋಮವಾರ ಬೆಳಗಿನ ಜಾವ 5.30ರ ಹೊತ್ತಿನಲ್ಲಿ ಭೂಕಂಪದ ಅನುಭವವಾಗಿದೆ.

ಭೂಕಂಪದ ತೀವ್ರತೆಯು ರಿಕ್ಟರ್ ಮಾಪಕದಲ್ಲಿ 4ರಷ್ಟು ದಾಖಲಾಗಿದೆ. ಜೊತೆಗೆ ಭೂಕಂಪದ ವೇಳೆ ದೊಡ್ಡ ಶಬ್ದವೊಂದು ಕೇಳಿಸಿದೆ' ಎಂದು ರಾಷ್ಟ್ರೀಯ ಭೂಕಂಪ ಅಧ್ಯಯನ ಕೇಂದ್ರ ತಿಳಿಸಿದೆ.

ದೆಹಲಿಯಲ್ಲಿ ಮಾತ್ರವಲ್ಲದೆ ಬಿಹಾರದ ಸಿವನ್ ಮತ್ತು ಇದರ ಸುತ್ತಮುತ್ತಲಿನ ಜಿಲ್ಲೆಗಳಲ್ಲಿಯೂ ಭೂಕಂಪ ಸಂಭವಿಸಿದೆ. ಇಲ್ಲಿಯೂ 4ರಷ್ಟು ತೀವ್ರತೆ ದಾಖಲಾಗಿದೆ. ದೆಹಲಿಯಲ್ಲಿ ನೆಲಮಟ್ಟದಿಂದ 5 ಕಿ.ಮೀ ಆಳದಲ್ಲಿ ಮತ್ತು ಬಿಹಾರದಲ್ಲಿ 10 ಕಿ.ಮೀ ಆಳದಲ್ಲಿ ಕಂಪನಕೇಂದ್ರವನ್ನು ಗುರುತಿಸಲಾಗಿದೆ' ಎಂದು ಅಧ್ಯಯನ ಕೇಂದ್ರ ಮಾಹಿತಿ ನೀಡಿದೆ.

ಜೇಲ್ ಉದ್ಯಾನದಲ್ಲಿ ಮರವೊಂದು ನೆಲಕ್ಕುರುಳಿದೆ –ಪಿಟಿಐ ಚಿತ್ರ

ಎರಡೂ ಕಡೆಗಳಲ್ಲಿಯೂ ಯಾವುದೇ ಹಾನಿ ಅಥವಾ ಸಾವು–ನೋವು ಸಂಭವಿಸಿಲ್ಲ.

ದೆಹಲಿಯಲ್ಲಿನ ಭೂಕಂಪದ ಕೇಂದ್ರ ಬಿಂದುವು ದೌಲಾ ಕುವಾಂ ಪ್ರದೇಶದಲ್ಲಿತ್ತು. ಜನರು ತಮ್ಮ ಮನೆಗಳಿಂದ ಹೊರಬಂದು ರಸ್ತೆಯಲ್ಲಿ ನಿಂತುಕೊಂಡಿದ್ದ ದೃಶ್ಯಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಪ್ರಧಾನಿ ನರೇಂದ್ರ ಮೋದಿ, ಹಂಗಾಮಿ ಮುಖ್ಯಮಂತ್ರಿ ಆತಿಶಿ, ಕಾಂಗ್ರೆಸ್ ನಾಯಕಿ ರಾಗಿಣಿ ನಾಯಕ್ ಅವರು ಪೋಸ್ಟ್ ಹಂಚಿಕೊಂಡು ಸುರಕ್ಷಿತವಾಗಿರುವಂತೆ ಜನರಲ್ಲಿ ಮನವಿ ಮಾಡಿಕೊಂಡರು.

ಕುಸಿದ ಬಂಡೆ: 'ಸಾಮಾನ್ಯವಾಗಿ ಭೂಕಂಪವು ಭೂ ಫಲಕಗಳ ಚಲನೆಯಿಂದಾಗಿ ಸಂಭವಿಸುತ್ತದೆ. ಆದರೆ, ದೆಹಲಿಯಲ್ಲಾದ ಭೂಕಂಪವು ಇದರಿಂದ ಸಂಭವಿಸಿಲ್ಲ. ಬದಲಿಗೆ, ನದಿಯಾಳದಲ್ಲಿನ ಬಂಡೆಗಳು ಕುಸಿದ ಪರಿಣಾಮದಿಂದಾಗಿ ಭೂಕಂಪ ಸಂಭವಿಸಿದೆ' ಎಂದು ಅಧ್ಯಯನ ಕೇಂದ್ರ ವಿಶ್ಲೇಷಿಸಿದೆ. 'ಬಂಡೆ ಕುಸಿದಿದ್ದರಿಂದಲೇ ಜನರಿಗೆ ದೊಡ್ಡ ಶಬ್ದ ಕೇಳಿಸಿದೆ' ಎಂದೂ ಅದು ಹೇಳಿದೆ.

ಮುಖ್ಯಾಂಶಗಳು

- ಬೆಳಗಿನ ಜಾವ 5.30ರ ಹೊತ್ತಿಗೆ ನಡುಗಿದ ಭೂಮಿ
- ರಿಕ್ಟರ್ ಮಾಪಕದಲ್ಲಿ 4ರಷ್ಟು ತೀವ್ರತೆ ದಾಖಲು

ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಲಿಮಿಟೆಡ್

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

An ISO-9001:2015 & 14001:2015 Company

ಶ್ರೀಗಂಧ ನಗರ: ಅಂಚೆ ಪೆಟ್ಟಿಗೆ ಸಂ.5531, ಬೆಂಗಳೂರು–ಪುಣೆ ಹೆದ್ದಾರಿ, ಬೆಂಗಳೂರು–560 055.

ದೂರವಾಣಿ: 080–22164879, 22164886, ಜಾಲತಾಣ: www.mysoresandal.org ಇ–ಮೇಲ್: **ksdl.dgmmtls@gmail.com**

ದಿನಾಂಕ: 17.02.2025

ಟೆಂಡರ್ ಪ್ರಕಟಣೆ

ಕೆಎಸ್&ಡಿಎಲ್ ಸಂಸ್ಥೆಗೆ ಈ ಕೆಳಕಂಡ ಸರಕು/ಸೇವೆ/ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಜಾಲತಾಣ (**https://kppp.karnataka.gov.in**)ದ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಟೆಂಡರ್ ಸಂಖ್ಯೆ	ಟೆಂಡರ್ ಹೆಸರು	ಸಂಖ್ಯೆ	ಪ್ರಕಟಣೆ ದಿನಾಂಕ	ಬಿಡ್ ಸಲ್ಲಿಸಲು ಕೊನೆಯ ದಿನಾಂಕ
1	KSDL/2024-25/IND0789	ಗ್ಲಿಸರಿನ್ – IW (Glycerine - IW) ಖರೀದಿ	40 ಮೆ.ಟ.	13-02-2025	01-03-2025
2	KSDL/2024-25/SE0146	ಸಾಬೂನು ಉತ್ಪಾದನಾ ವಿಭಾಗ/ SEP ನಲ್ಲಿ ಒಂದು ವರ್ಷದ ಅವಧಿಯ ಜಾಬ್ ವರ್ಕ್‌ಗೆ ಟನ್ ಆಧಾರದ ಮೇಲೆ ವಿವಿಧ ಸಾಬೂನುಗಳ ಉತ್ಪಾದನೆ ಮತ್ತು ಶ್ರಿಂಕ್ ರ್‍ಯಾಪಿಂಗ್ ಕಾರ್ಯಕ್ಕೆ ತೊಡಗಿಸಿಕೊಳ್ಳುವುದು.	ಸೇವೆಗಳು	14-02-2025	17-03-2025

ಯಾವುದೇ ಹೆಚ್ಚಿನ ವಿಚಾರಣೆ/ಸ್ಪಷ್ಟೀಕರಣಕ್ಕೆ ಕೆಳಕಂಡ ಸಹಿದಾರರನ್ನು ಸಂಪರ್ಕಿಸಬಹುದು.

ಸಹಿ/–ಸಹಾಯಕ ಪ್ರಧಾನ ವ್ಯವಸ್ಥಾಪಕರು (ಸಾಮಗ್ರಿ)

ಉಪ ವಿಭಾಗಾಧಿಕಾರಿ ದೊಡ್ಡಬಳ್ಳಾಪುರ ಉಪವಿಭಾಗ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ,

1ನೇ ಮಹಡಿ, ದೊಡ್ಡಬಳ್ಳಾಪುರ ಟೌನ್ ದೊಡ್ಡಬಳ್ಳಾಪುರ

Tel:080-22864260, e-mail:beeacdbpsubdiv@gmail.com

SPLOCA/ADM/CR/82/2024-25 Dated:15.02.2025

ಸಾರ್ವಜನಿಕ ಪ್ರಕಟಣೆ

M/s Yellow Express Logistics Limited Company(Nelamangala), ದೂಷಿತ ಸಂಸ್ಥೆಗೆ ಸಂಬಂಧಿಸಿದಂತೆ ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣಾ (ಕೆ.ಪಿ.ಐ.ಡಿ.ಎಫ್.ಇ) ಕಾಯ್ದೆ,2004ರ ಕಲಂ 7(2) ರ ಅನ್ವಯ ಭದ್ರತೆ ಸಾಲ ಕೊಟ್ಟವರಿಂದ ಮತ್ತು ಠೇವಣಿದಾರರಿಂದ ಕ್ಲೇಮು ಅರ್ಜಿಗಳನ್ನು ಆಹ್ವಾನಿಸಲು ಸಾರ್ವಜನಿಕ ತಿಳಿವಳಿಕೆ.

ಕ್ಲೇಮು ಅರ್ಜಿಗಳನ್ನು ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರು,(ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು) ವಿ ವಿ ಗೋಪುರ ಪೋಡಿಯಂ ಬ್ಲಾಕ್ 4ನೇ ಮಹಡಿ, ಅಂಬೇಡ್ಕರ್ ವೀದಿ, ಬೆಂಗಳೂರು Phone No : +91-80-295668556, + 91-80-29604556ರವರ ಕಛೇರಿಯಲ್ಲಿ ಠೇವಣಿದಾರರು/ಅಧಿಕೃತ ಪ್ರತಿನಿಧಿ/ನಾಮಿನಿದಾರರಿಗೆ ವಿತರಿಸಲಾಗುವುದು ಹಾಗೂ ನಾಮಿನಿದಾರರು ಗೈರಾಗಿದ್ದಲ್ಲಿ ಪವರ್ ಆಫ್ ಅಟಾರ್ನಿ ಹೊಂದಿರುವವರು ಅಧಿಕೃತ ಗುರುತಿನ ಚೀಟಿ ಹಾಗೂ ಹಣ ಹೂಡಿಕೆ ಮಾಡಿರುವ ಬಗ್ಗೆ ಪುರಾವೆ ದಾಖಲೆಗಳ ದೃಢೀಕೃತ ಪ್ರತಿ (ಬಾಂಡ್/ಎಂ.ಓ.ಯು) ಮತ್ತು ಅಧಿಕೃತ ಪತ್ರ /ಪಿ.ಒ.ಎ ದಾಖಲೆಗಳ ಮೂಲ ಪ್ರತಿಗಳನ್ನು ಹಾಜರುಪಡಿಸಿ ಕ್ಲೇಮ್ ಅರ್ಜಿಗಳನ್ನು ಪಡೆಯಬಹುದಾಗಿರುತ್ತದೆ.

ಕ್ಲೇಮು ಅರ್ಜಿಗಳನ್ನು ಸಲ್ಲಿಸಲು ಪ್ರಾರಂಭಿಕ ದಿನಾಂಕ:	20/02/2025	10-00 AM
ಕ್ಲೇಮು ಅರ್ಜಿಗಳನ್ನು ಸಲ್ಲಿಸಲು ಕಡೆಯ ದಿನಾಂಕ	21/03/2025	05-30 PM

ಹಾಜರು ಪಡಿಸಬೇಕಾದ ದಾಖಲೆಗಳು: 1. ಮೂಲ ಐಡಿ– ಆಧಾರ್, ಪ್ಯಾನ್/ಎಪಿಕ್ ದೃಢೀಕರಣಕ್ಕಾಗಿ ಜೆರಾಕ್ಸ್‌ನೊಂದಿಗೆ.

2. ಬ್ಯಾಂಕ್ ಮ್ಯಾನೇಜರ್‌ನಿಂದ ದೃಢೀಕರಿಸಲಾದ ಬ್ಯಾಂಕ್ ಪಾಸ್ ಶೀಟ್– **M/s Yellow Express Logistics Limited Company(Nelamangala),** ಕಂಪನಿಯಲ್ಲಿ ಹೂಡಿಕೆಯ ದಿನಾಂಕಕ್ಕೆ 2 ತಿಂಗಳ ಮುಂಚಿತವಾಗಿ ಇಲ್ಲಿಯವರೆಗೆ.

3. **KYC** ತೋರಿಸುವ ಪುಟಗಳ ಪ್ರತಿಯೊಂದಿಗೆ ಪಾಸ್‌ಬುಕ್‌ನ ಪ್ರತಿ.

4. ಮೂಲ ಬಾಂಡ್‌ಗಳು / ಒಪ್ಪಂದಗಳು / ನೋಟರೈಸ್ಡ್ ಅಫಿಡವಿಟ್ಟುಗಳು/ಕಂಪನಿಯಿಂದ ಪಡೆದ ಇತರೆ ದಾಖಲೆಗಳನ್ನು ಸಲ್ಲಿಸತಕ್ಕದ್ದು.

5. ಅಧಿಕೃತ ಪ್ರತಿನಿಧಿಯಾಗಿದ್ದಲ್ಲಿ ಜನರಲ್ ಪವರ್ ಆಫ್ ಅಟಾರ್ನಿ ಮತ್ತು ಶಾಸನಾತ್ಮಕ ಮೂಲ ದಾಖಲೆಗಳನ್ನು ಹಾಜರುಪಡಿಸಬೇಕು.

6. ದೃಢೀಕರಿಸಿದ ಸ್ಪಷ್ಟವಾದ ಜೆರಾಕ್ಸ್ ಪ್ರತಿಯನ್ನು ಒದಗಿಸಬೇಕು ಅಥವಾ ಸಂಬಂಧಪಟ್ಟ ಅಧಿಕಾರಿಯಿಂದ ದೃಢೀಕರಣಕ್ಕಾಗಿ ಮೂಲವನ್ನು ಜೆರಾಕ್ಸ್ ಪ್ರತಿಯೊಂದಿಗೆ ಒದಗಿಸಬೇಕು. ಸ್ಕ್ಯಾನ್‌ಗಳು / **WhatsApp** ನಕಲುಗಳು ಸ್ವೀಕರಿಸುವುದಿಲ್ಲ.

7. ಎಫ್. ಇ ನೀಡಿದ ಪಾಸ್‌ಬುಕ್.

8. ಕಾಯ್ದೆಯ ಸೆಕ್ಷನ್ 7(4) ಮತ್ತು 7(5) ರ ಪ್ರಕಾರ, ಭದ್ರತೆ ಸಾಲ ನೀಡಿದವರು ದಿನಾಂಕ 20–02–2025 ರಿಂದ ಒಂದು ತಿಂಗಳ ಅವಧಿ ಮುಗಿಯುವ ಮೊದಲು ಭದ್ರತಾ ಪತ್ರದ ಮೌಲ್ಯಮಾಪನ ಮಾಡಿಸಿ ಸಲ್ಲಿಸತಕ್ಕದ್ದು.ತಪ್ಪಿದಲ್ಲಿ ಸಕ್ಷಮ ಪ್ರಾಧಿಕಾರವೇ ಸ್ವತ ಮೌಲ್ಯ ಮಾಪನ ಮಾಡುತ್ತಾರೆ. ಇದಕ್ಕೆ ಭದ್ರತೆ ಸಾಲ ಕೊಟ್ಟವರು ಬದ್ಧರಾಗಿರತಕ್ಕದ್ದು. ಠೇವಣಿದಾರರು ಮರಣ ಹೊಂದಿದ್ದರೆ ಅಥವಾ ಆಸ್ಪತ್ರೆಗೆ ದಾಖಲಾಗಿದ್ದಲ್ಲಿ ಅವರ ನಾಮ ನಿರ್ದೇಶಿತರು/ವಾರಸುದಾರರು ಅರ್ಜಿ ಸಲ್ಲಿಸುವಾಗ ಅದಕ್ಕೆ ಪುರಾವೆಯಾಗಿರುವ ಈ ಕೆಳಕಂಡ ದಾಖಲೆಗಳನ್ನು ಸಲ್ಲಿಸಬೇಕಾಗಿರುತ್ತದೆ

ಕ್ರಮ ಸಂ.	ಠೇವಣಿದಾರರು/ ಠೇವಣಿದಾರರ ಸಂಬಂಧಿಕರು	ಸಲ್ಲಿಸಬೇಕಾಗಿರುವ ದಾಖಲೆಗಳು
1	ಠೇವಣಿದಾರರು Depositors	ಠೇವಣಿದಾರರು ದಾಖಲೆಗಳನ್ನು ನೋಟರಿ/ಪತ್ರಾಂಕಿತ ಅಧಿಕಾರಿ/ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.
2	ನಾಮಿನಿದಾರರು Nominee	1. ಠೇವಣಿದಾರರ ಮರಣ ಪ್ರಮಾಣಪತ್ರ 2. ವಂಶವೃಕ್ಷ (ತಹಶೀಲ್ದಾರ್‌ರವರಿಂದ ಪಡೆದಿರತಕ್ಕದ್ದು) 3. ನಾಮಿನಿದಾರರು ಮೇಲಿನ ದಾಖಲೆಗಳನ್ನು ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು
3	ವಾರಸುದಾರರು Legal heirs	1. ಠೇವಣಿದಾರರ ಮರಣ ಪ್ರಮಾಣ ಪತ್ರ 2. ವಂಶ ವೃಕ್ಷ (ತಹಶೀಲ್ದಾರ್‌ರವರಿಂದ ಪಡೆದಿರತಕ್ಕದ್ದು) 3. ನಿರ್ದಿಷ್ಟ ನಾಮಿನಿ (Nominee)ರವರ ಮರಣ ಪ್ರಮಾಣ ಪತ್ರ 4. ವಾರಸುದಾರರ ಪ್ರಮಾಣ ಪತ್ರ – ನ್ಯಾಯಾಲಯದ ಆದೇಶ 5. ವಾರಸುದಾರರು ಮೇಲಿನ ದಾಖಲೆಗಳನ್ನು ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು. 6. ಉಳಿದ ವಾರಸುದಾರರ ಒಪ್ಪಿಗೆ (Consent from other legal heirs)
4	PoA – Power of Attorney	1. ಠೇವಣಿದಾರರು ಆಸ್ಪತ್ರೆಗೆ ದಾಖಲಾಗಿರುವುದಕ್ಕೆ ಸಂಬಂಧಿಸಿದ ದಾಖಲೆಗಳು. (ಗಂಭೀರ ಆರೋಗ್ಯ ಸಮಸ್ಯೆ ಇರುವವರು) ವೈದ್ಯರಿಂದ ವರದಿ ಪಡೆದು ಸಲ್ಲಿಸುವುದು. 2. ಹೊರದೇಶದಲ್ಲಿ ವಾಸಿಸುತ್ತಿರುವವರು Apostilled copy citizen card & Passport 3. ಮೇಲಿನ ಕ್ರ. ಸಂ. 1 ಮತ್ತು 2 ಕ್ಕೆ ಸಂಬಂಧಪಟ್ಟವರು ಕಡ್ಡಾಯವಾಗಿ Notarized Power of Attorney certificate ಸಲ್ಲಿಸತಕ್ಕದ್ದು. 4. PoA. ಹೊಂದಿರುವವರು ಮೇಲಿನ ದಾಖಲೆಗಳನ್ನು ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.
5	ಅಪ್ರಾಪ್ತರ ಗಾರ್ಡಿಯನ್ (ಪೋಷಕರು)	1. ಠೇವಣಿದಾರರ ಮರಣ ಪತ್ರ 2. ಗಾರ್ಡಿಯನ್ ನೇಮಕದ ದಾಖಲೆ 3. ಸ್ವಯಂ ದೃಢೀಕೃತ ದಾಖಲೆ

ಕ್ಲೇಮು ಅರ್ಜಿಯನ್ನು ಸಲ್ಲಿಸುವ ಅರ್ಜಿದಾರರು **M/s Yellow Express Logistics Limited Company(Nelamangala)** ದೂಷಿತ ಕಂಪನಿಯಲ್ಲಿನ ಪ್ರತಿ ಹೂಡಿಕೆಗೆ ಸಂಬಂಧಿಸಿದ ಈ ಕೆಳಕಂಡ ಎಲ್ಲಾ ಅಗತ್ಯ ದಾಖಲೆಗಳನ್ನು ಕಡ್ಡಾಯವಾಗಿ ಸಲ್ಲಿಸುವುದು

ಕ್ರಮ ಸಂ.	ಠೇವಣಿದಾರರು/ ಠೇವಣಿದಾರರ ಸಂಬಂಧಿಕರು	ಸಲ್ಲಿಸಬೇಕಾಗಿರುವ ದಾಖಲೆಗಳು
1	ಪಿಗ್ಮಿ ಠೇವಣಿ (Pigmy Deposit)	1. ಭಾವಚಿತ್ರ ಇರುವ ಪಾಸ್ ಪುಸ್ತಕದ ಮುಖ ಪುಟ (Front page) ನಕಲು. 2 ಪಿಗ್ಮಿ ಠೇವಣಿ ಪಾಸ್ ಪುಸ್ತಕ 3. ಪಾಸ್ ಪುಸ್ತಕದಲ್ಲಿ ಠೇವಣಿದಾರರು ಹಣ ಸಂದಾಯ ಮಾಡಿದ ಬಗ್ಗೆ ವಹಿವಾಟಿನ ವಿವರ (Transaction statement page in passbook of claimed amount). * ಠೇವಣಿದಾರರು/ನಾಮಿನಿದಾರರು/ವಾರಸುದಾರರು/PoAದಾರರು ಮೇಲಿನ ದಾಖಲೆಗಳನ್ನು ನೋಟರಿ/ಪತ್ರಾಂಕಿತ ಅಧಿಕಾರಿಗಳು/ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.
2	ನಿಶ್ಚಿತ ಠೇವಣಿ (Fixed Deposit)	1. ಭಾವಚಿತ್ರ ಇರುವ ಪಾಸ್ ಪುಸ್ತಕದ ಮುಖ ಪುಟ (Front page) ನಕಲು. 2. ಬಾಂಡ್ ಪ್ರಮಾಣ ಪತ್ರ/ನಿಶ್ಚಿತ ಠೇವಣಿ ಪ್ರಮಾಣ ಪತ್ರ/ಇತರೆ 3. ಪಾಸ್ ಪುಸ್ತಕದಲ್ಲಿ ಠೇವಣಿದಾರರು ಹಣ ಸಂದಾಯ ಮಾಡಿದ ಬಗ್ಗೆ ವಹಿವಾಟಿನ ವಿವರ (Transaction statement page in passbook of claimed amount) * ಠೇವಣಿದಾರರು/ನಾಮಿನಿದಾರರು/ವಾರಸುದಾರರು/PoAದಾರರು ಮೇಲಿನ ದಾಖಲೆಗಳನ್ನು ನೋಟರಿ/ಪತ್ರಾಂಕಿತ ಅಧಿಕಾರಿಗಳು/ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.
3	ಸಂಚಿತ ಠೇವಣಿ (Cumulative Deposit)	1. ಭಾವಚಿತ್ರ ಇರುವ ಪಾಸ್ ಪುಸ್ತಕದ ಮುಖ ಪುಟ (Front page) ನಕಲು. 2.ಸಂಚಿತ ಠೇವಣಿ ಪ್ರಮಾಣ ಪತ್ರ 3.ಪಾಸ್ ಪುಸ್ತಕದಲ್ಲಿ ಠೇವಣಿದಾರರು ಹಣ ಸಂದಾಯ ಮಾಡಿದ ಬಗ್ಗೆ ವಹಿವಾಟಿನ ವಿವರ (Transaction statement page in passbook of claimed amount) * ಠೇವಣಿದಾರರು/ನಾಮಿನಿದಾರರು/ವಾರಸುದಾರರು/PoA ದಾರರು ಮೇಲಿನ ದಾಖಲೆಗಳನ್ನು ನೋಟರಿ/ಪತ್ರಾಂಕಿತ ಅಧಿಕಾರಿಗಳು/ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.
4	ಆವರ್ತ ಠೇವಣಿ (Recurring Deposit)	1. ಭಾವಚಿತ್ರವಿರುವ ಇರುವ ಪಾಸ್ ಪುಸ್ತಕದ ಮುಖ ಪುಟ (Front page) ನಕಲು 2. ಆವರ್ತ ಠೇವಣಿ ಪಾಸ್ ಪುಸ್ತಕ 3. ಪಾಸ್ ಪುಸ್ತಕದಲ್ಲಿ ಠೇವಣಿದಾರರು ಹಣ ಸಂದಾಯ ಮಾಡಿದ ಬಗ್ಗೆ ವಹಿವಾಟಿನ ವಿವರ (Transaction statement page in passbook of claimed amount) * ಠೇವಣಿದಾರರು/ನಾಮಿನಿದಾರರು/ವಾರಸುದಾರರು/PoAದಾರರು ಮೇಲಿನ ದಾಖಲೆಗಳನ್ನು ನೋಟರಿ/ಪತ್ರಾಂಕಿತ ಅಧಿಕಾರಿಗಳು/ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.

* ಕೆ ಪಿ ಐ ಡಿ ಕಾಯ್ದೆಯ ಕಲಂ 7(3) ರ ಅನ್ವಯ ಕ್ಲೇಮು ಅರ್ಜಿ ಸಲ್ಲಿಸುವುದಕ್ಕೆ ನಿಗಧಿಪಡಿಸಿರುವ ಕಡೆಯ ದಿನಾಂಕದ ನಂತರ ಬರುವ ಯಾವುದೇ ಅರ್ಜಿಗಳನ್ನು ಕಾಯ್ದೆಯ ಉಪಬಂಧಗಳ ಅನ್ವಯ ಸ್ವೀಕರಿಸಲಾಗುವುದಿಲ್ಲ.
* ಸುಳ್ಳು ದಾಖಲೆಗಳ ಆಧಾರದ ಅರ್ಜಿ ಅಥವಾ ಸ್ವಯಂ–ಸೃಷ್ಟಿತ ಕ್ಲೇಮು ಅರ್ಜಿಗಳನ್ನು ಸಲ್ಲಿಸಿದರೆ ಅಂತಹ ಅರ್ಜಿಗಳನ್ನು ತಿರಸ್ಕರಿಸುವುದರೊಂದಿಗೆ ಅಂತಹ ಅರ್ಜಿದಾರರ ವಿರುದ್ಧ ಕ್ರಿಮಿನಲ್ ಕ್ರಮ ಜರುಗಿಸಲಾಗುವುದು.
* ಅರ್ಜಿದಾರರು **M/s Yellow Express Logistics Limited Company(Nelamangala),** ಇದರಲ್ಲಿ ಒಂದಕ್ಕಿಂತ ಹೆಚ್ಚಿನ ಸ್ಕೀಮ್ ಗಳಲ್ಲಿ ಹೂಡಿಕೆ ಮಾಡಿದ್ದಲ್ಲಿ, ಕಡ್ಡಾಯವಾಗಿ ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸತಕ್ಕದ್ದು.

ಸಹಿ/–
ಸಕ್ಷಮ ಪ್ರಾಧಿಕಾರಿಗಳು,
ಮೆ: ಯಲ್ಲೋ ಎಕ್ಸ್‌ಪ್ರೆಸ್ ಲಾಜಿಸ್ಟಿಕ್ ಲಿಮಿಟೆಡ್ ಕಂಪನಿ (ನೆಲಮಂಗಲ)

DIPR/CP/5128/Zenkar/2024-25

ಮಂದಾನ ಅಬ್ಬರ; ಡೆಲ್ಲಿ ತತ್ತರ

ಆರ್‌ಸಿಬಿಗೆ ಸತತ 2ನೇ ಗೆಲುವು: ರೇಣುಕಾ, ಜಾರ್ಜಿಯಾಗೆ ತಲಾ 3 ವಿಕೆಟ್

ಮಹಿಳಾ ಪ್ರೀಮಿಯರ್ ಲೀಗ್

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ನಾಯಕಿ ಸ್ಮೃತಿ ಮಂದಾನ ಬ್ಯಾಟಿಂಗ್ –ಡಬ್ಲ್ಯುಪಿಎಲ್ ಎಕ್ಸ್ ಚಿತ್ರ

ವಡೋದರ (ಪಿಟಿಐ): ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಬೌಲರ್‌ಗಳು ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಅಲ್ಪಮೊತ್ತಕ್ಕೆ ಕಟ್ಟಿಹಾಕಿದ ನಂತರ ನಾಯಕಿ ಸ್ಮೃತಿ ಮಂದಾನ (81, 47ಎ) ಭರ್ಜರಿ ಆಟವಾಡಿದರು. ಸೋಮವಾರ ನಡೆದ ಮಹಿಳಾ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯದಲ್ಲಿ ಹಾಲಿ ಚಾಂಪಿಯನ್ ತಂಡ ಎಂಟು ವಿಕೆಟ್‌ಗಳಿಂದ ಡೆಲ್ಲಿ ಕ್ಯಾಪಿಟಲ್ಸ್ ಮೇಲೆ ಜಯಗಳಿಸಿತು.

ಕಳೆದ ಬಾರಿಯ ರನ್ನರ್ ಅಪ್ ಡೆಲ್ಲಿ 19.3 ಓವರುಗಳಲ್ಲಿ 141 ರನ್‌ಗಳಿಗೆ ಆಲೌಟ್ ಆಯಿತು. ಆರ್‌ಸಿಬಿ ಇನ್ನೂ 22 ಎಸೆತಗಳಿರುವಂತೆ 2 ವಿಕೆಟ್‌ಗೆ 146 ರನ್ ಹೊಡೆದು ಸತತ ಎರಡನೇ ಗೆಲುವನ್ನು ಆಚರಿಸಿತು. ಈ ಬಾರಿಯ ಲೀಗ್‌ನ ನಾಲ್ಕನೇ ಪಂದ್ಯದಲ್ಲೂ ಎರಡನೆಯದಾಗಿ ಆಡಿದ ತಂಡವೇ ಜಯಗಳಿಸಿದಂತಾಯಿತು.

ಕೋತಂಬಿ ಕ್ರೀಡಾಂಗಣದಲ್ಲಿ ಹತ್ತು ಬೌಂಡರಿ, ಮೂರು ಸಿಕ್ಸರ್‌ಗಳನ್ನು ಸಿಡಿಸಿದ ಮಂದಾನ ಗೆಲುವಿಗೆ 9 ರನ್‌ಗಳು ಬೇಕಿದ್ದಾಗ ನಿರ್ಗಮಿಸಿದರು. ಎಲಿಸ್ ಪೆರಿ (ಅಜೇಯ 7) ಮತ್ತು ರಿಚಾ ಘೋಷ್ (ಅಜೇಯ 11) ಗೆಲುವಿನ ಔಪಚಾರವನ್ನು ಪೂರೈಸಿದರು.

ಸ್ಮೃತಿ ಮತ್ತು ಡ್ಯಾನಿ ವ್ಯಾಟ್ ಹಾಜ್ ಅವರು ತಂಡಕ್ಕೆ ಬಿರುಸಿನ ಆರಂಭ ಒದಗಿಸಿದರು. ಪವರ್ ಪ್ಲೇಯಲ್ಲಿ 57 ರನ್‌ಗಳು ಹರಿದುಬಂದವು. ಇವರಿಬ್ಬರು ಮೊದಲ ವಿಕೆಟ್‌ಗೆ 10.5 ಓವರುಗಳಲ್ಲಿ 107 ರನ್‌ಗಳನ್ನು ಸೇರಿಸಿದರು. ವೇಗದ ಬೌಲರ್ ಅರುಂಧತಿ ಈ ಜೊತೆಯಾಟ ಮುರಿದರು. ವ್ಯಾಟ್‌ಹಾಜ್ ಅವರು ಕವರ್ಸ್ ಮೇಲೆ ಚೆಂಡನ್ನು ಎತ್ತಲುಹೋಗಿ ಜೆಮಿಮಾ ಅವರಿಗೆ ಕ್ಯಾಚಿತ್ತರು. ಆದರೆ ಮಂದಾನ ಆಕ್ರಮಣದ ಆಟ ಮುಂದುವರಿಸಿದ್ದರಿಂದ ಗೆಲುವು ಸಲೀಸಾಯಿತು.

ಇದಕ್ಕೆ ಮೊದಲು, ಅನುಭವಿ ವೇಗದ ಬೌಲರ್ ರೇಣುಕಾ ಸಿಂಗ್ (23ಕ್ಕೆ4) ಮತ್ತು ಲೆಗ್ ಸ್ಪಿನ್ನರ್ ಜಾರ್ಜಿಯಾ ವ್ಹೇರ್‌ಹ್ಯಾಮ್ (25ಕ್ಕೆ3) ಅವರ ಪರಿಣಾಮಕಾರಿ ಬೌಲಿಂಗ್ ದಾಳಿಗೆ, ಡೆಲ್ಲಿ ತಂಡ ಕುಸಿತ ಅನುಭವಿಸಿತು.

ಪವರ್‌ಪ್ಲೇ ಅವಧಿಯಲ್ಲಿ 1 ವಿಕೆಟ್‌ಗೆ 55 ರನ್ ಗಳಿಸಿ ಉತ್ತಮ ಆರಂಭ ಮಾಡಿದ್ದ ಡೆಲ್ಲಿ ತಂಡ ಏಳು ಮತ್ತು ಎಂಟನೇ ಓವರ್ ನಡುವೆ ಐದು ಎಸೆತಗಳಲ್ಲಿ ಜೆಮಿಮಾ ರಾಡ್ರಿಗಸ್ ಮತ್ತು ನಾಯಕಿ ಮೆಗ್ ಲ್ಯಾನಿಂಗ್ ಅವರ ವಿಕೆಟ್ ಕಳೆದುಕೊಂಡಿತು. ನಂತರ ಆರ್‌ಸಿಬಿ ಬೌಲರ್‌ಗಳು ಎದುರಾಳಿಗಳ ಮೇಲೆ ನಿರಂತರವಾಗಿ ಒತ್ತಡ ಹೇರಿದರು.

ಇಂದಿನ ಪಂದ್ಯ
ಗುಜರಾತ್ ಜೈಂಟ್ಸ್ Vs ಮುಂಬೈ ಇಂಡಿಯನ್ಸ್
ರಾತ್ರಿ 7.30
ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್

22 ಎಸೆತಗಳಲ್ಲಿ 34 (4x4, 6x2) ರನ್ ಬಾರಿಸಿದ್ದ ಜೆಮಿಮಾ ರಾಡ್ರಿಗಸ್ ಅವರು ವ್ಹೇರ್‌ಹ್ಯಾಮ್ ಬೌಲಿಂಗ್‌ನಲ್ಲಿ ರಿವರ್ಸ್ ಸ್ವೀಪ್‌ಗೆ ಯತ್ನಿಸಿ ರಿಚಾ ಘೋಷ್ ಅವರಿಂದ ಸ್ಟಂಪಿಂಗ್‌ಗೆ ಒಳಗಾದರು. ಡೆಲ್ಲಿ ಕೊನೆಯ ಐದು ವಿಕೆಟ್‌ಗಳನ್ನು ಆರು ಓವರುಗಳ ಅಂತರದಲ್ಲಿ ಕಳೆದುಕೊಂಡು ಮೂರು ಎಸೆತಗಳಿರುವಂತೆ ಆಲೌಟಾಯಿತು.

ಸಂಕ್ಷಿಪ್ತ ಸ್ಕೋರು: ಡೆಲ್ಲಿ ಕ್ಯಾಪಿಟಲ್ಸ್: 19.3 ಓವರುಗಳಲ್ಲಿ 141 (ಜೆಮಿಮಾ ರಾಡ್ರಿಗಸ್ 34, ಸಾರಾ ಬ್ರೈಸ್ 23; ರೇಣುಕಾ ಸಿಂಗ್ 23ಕ್ಕೆ3, ಕಿಮ್ ಗಾರ್ತ್ 19ಕ್ಕೆ2, ಏಕ್ತಾ ಬಿಷ್ಟ್ 35ಕ್ಕೆ2, ಜಾರ್ಜಿಯಾ ವ್ಹೇರ್‌ಹ್ಯಾಮ್ 25ಕ್ಕೆ3); ರಾಯಲ್ ಚಾಲೆಂಜರ್ಸ್ ಬೆಂಗಳೂರು: 16.2 ಓವರುಗಳಲ್ಲಿ 2 ವಿಕೆಟ್‌ಗೆ 146 (ಸ್ಮೃತಿ ಮಂದಾನ 81, ಡ್ಯಾನಿ ವ್ಯಾಟ್ ಹಾಜ್ 42). ಪಂದ್ಯದ ಆಟಗಾರ್ತಿ: ರೇಣುಕಾ ಸಿಂಗ್

ರಣಜಿ ಟ್ರೋಫಿ ಸೆಮಿಫೈನಲ್: ಮುಂಬೈ ವಿರುದ್ಧದ ಪಂದ್ಯ

ವಿದರ್ಭ ನೆರವಿಗೆ ಧ್ರುವ್, ದಾನಿಶ್

ನಾಗ್ಪುರ (ಪಿಟಿಐ): ಆರಂಭ ಆಟಗಾರ ಧ್ರುವ್ ಶೋರೆ (74, 109ಎ, 4x9) ಅವರ ಸೊಗಸಾದ ಆಟ ಮತ್ತು ದಾನಿಶ್ ಮಾಲೆವಾರ್ (79, 157ಎ) ಅವರ ಕೆಚ್ಚೆದೆಯ ಆಟದಿಂದ ವಿದರ್ಭ ತಂಡ, ಸೋಮವಾರ ಮುಂಬೈ ವಿರುದ್ಧ ಆರಂಭವಾದ ರಣಜಿ ಟ್ರೋಫಿ ಸೆಮಿಫೈನಲ್ ಪಂದ್ಯದಲ್ಲಿ ದಿನದ ಕೊನೆಗೆ 5 ವಿಕೆಟ್‌ಗೆ 308 ರನ್‌ಗಳ ಗೌರವಾರ್ಹ ಮೊತ್ತ ಗಳಿಸಿತು.

ಕನ್ನಡಿಗ ಕರುಣ್ ನಾಯರ್ (45, 70ಎ, 4x6) ಅವರು ಮತ್ತೊಂದು ದೊಡ್ಡ ಇನಿಂಗ್ಸ್ ಆಡಲು ಸಜ್ಜಾಗುತ್ತಿರುವಂತೆ ಶಿವಂ ದುಬೆ ಬೌಲಿಂಗ್‌ನಲ್ಲಿ ವಿಕೆಟ್ ಕೀಪರ್ ಆಕಾಶ್ ಆನಂದ್‌ಗೆ ಕ್ಯಾಚ್ ಆದರು.

ವಿದರ್ಭದ ಯಶಸ್ವಿ ಬ್ಯಾಟರ್ ಯಶ್ ರಾಥೋಡ್ 47 ರನ್ (86ಎ) ಗಳಿಸಿ ಅಜೇಯರಾಗಿ ಉಳಿದಿದ್ದಾರೆ. ಅವರೊಡನೆ ನಾಯಕ ಅಕ್ಷಯ್ ವಾಡಕರ್ 13 ರನ್ (35ಎ) ಗಳಿಸಿ ಆಟ ಕಾದಿರಿಸಿದ್ದಾರೆ. ಇವರಿಬ್ಬರು ಮುರಿಯದ ಆರನೇ ವಿಕೆಟ್‌ಗೆ 47 ರನ್ ಸೇರಿಸಿದ್ದು ತಂಡದ ಮೊತ್ತ 300 ದಾಟಿಸಿದ್ದಾರೆ.

ಸ್ಪಿನ್ನರ್ ಶಮ್ಸ್ ಮುಲಾನಿ (44ಕ್ಕೆ2) ಪರಿಣಾಮಕಾರಿ ಎನಿಸಿದರು. ಶಿವಂ ದುಬೆ 35 ರನ್ನಿಗೆ 2 ವಿಕೆಟ್ ಪಡೆದರು. ಇದರಲ್ಲಿ ಒಂದು ವಿಕೆಟ್‌ನ ಶ್ರೇಯಸ್ಸು ಸೂರ್ಯಕುಮಾರ್ ಯಾದವ್ ಅವರಿಗೂ ಸಲ್ಲಬೇಕು. ಪಾರ್ಥ ರೇಖಡೆ (23) ಅವರ ಕ್ಯಾಚನ್ನು ಮೂರನೇ ಸ್ಲಿಪ್‌ನಲ್ಲಿದ್ದ ಸೂರ್ಯ ಒಂದೇ ಕೈಯಲ್ಲಿ ಹಿಡಿದ ರೀತಿ ಅಮೋಘವಾಗಿತ್ತು.

ಆರಂಭ ಆಟಗಾರ ಅಥರ್ವ ತೈಡೆ (4) ಹೆಚ್ಚುಹೊತ್ತು ನಿಲ್ಲಲಿಲ್ಲ. ಆದರೆ ಜೊತೆಯಾಟಗಳಿಂದ ವಿದರ್ಭ ತಂಡ ಇನಿಂಗ್ಸ್ ಕಟ್ಟಿಕೊಂಡಿತು. ಶೋರೆ ಮತ್ತು ರೇಖಡೆ 54 ರನ್ ಸೇರಿಸಿದರು. ಶೋರೆ ಮತ್ತು ದಾನಿಸ್ ನಡುವೆ ಮೂರನೇ ವಿಕೆಟ್‌ಗೆ 51 ರನ್ ಹರಿದುಬಂದವು. ದಾನಿಶ್ ಮತ್ತು ಕರುಣ್ ನಾಯರ್ ನಾಲ್ಕನೇ ವಿಕೆಟ್‌ಗೆ 78 ರನ್ ಸೇರಿಸಿ ಮುಂಬೈ ಹಿಡಿತ ಪಡೆಯದಂತೆ ನೋಡಿಕೊಂಡರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ವಿದರ್ಭ: 88 ಓವರುಗಳಲ್ಲಿ 5 ವಿಕೆಟ್‌ಗೆ 308 (ಧ್ರುವ್ ಶೋರೆ 74, ದಾನಿಶ್ ಮಾಲೇವಾರ್ 79, ಕರುಣ್ ನಾಯರ್ 45, ಯಶ್ ರಾಥೋಡ್ ಬ್ಯಾಟಿಂಗ್ 47, ಶಮ್ಸ್ ಮುಲಾನಿ 44ಕ್ಕೆ2, ಶಿವಂ ದುಬೆ 35ಕ್ಕೆ2) ವಿರುದ್ಧ ಮುಂಬೈ.

ಅರ್ಧಶತಕ ಗಳಿಸಿದ ವಿದರ್ಭ ತಂಡದ ದಾನಿಶ್ ಮಾಲೆವಾರ್ –ಪಿಟಿಐ ಚಿತ್ರ

ನೆಲಕಚ್ಚಿ ಆಡಿದ ಕೇರಳ ತಂಡ

ಅಹಮದಾಬಾದ್ (ಪಿಟಿಐ): ಅನುಭವಿ ಆಟಗಾರ ಹಾಗೂ ನಾಯಕ ಸಚಿನ್ ಬೇಬಿ ಅವರ ಅರ್ಧ ಶತಕದ ನೆರವಿನಿಂದ ಕೇರಳ ತಂಡ ಇನ್ನೊಂದು ಸೆಮಿಫೈನಲ್‌ನಲ್ಲಿ ಆತಿಥೇಯ ಗುಜರಾತ್ ವಿರುದ್ಧ ಸೋಮವಾರ ಮೊದಲ ದಿನದಾಟ ಮುಗಿದಾಗ 89 ಓವರುಗಳಲ್ಲಿ 4 ವಿಕೆಟ್‌ಗೆ 206 ರನ್ ಗಳಿಸಿದೆ.

36 ವರ್ಷ ವಯಸ್ಸಿನ ಎಡಗೈ ಆಟಗಾರ ಸಚಿನ್ 193 ಎಸೆತ ಎದುರಿಸಿ ಅಜೇಯ 69 ರನ್ ಗಳಿಸಿದರು. ಮೊಹಮ್ಮದ್ ಅಜರುದ್ದೀನ್ (ಅಜೇಯ 30, 66ಎ, 4x8) ಅವರಿಗೆ ಬೆಂಬಲ ನೀಡಿದರು.

ಆರಂಭ ಆಟಗಾರ ಅಕ್ಷಯ್ ಚಂದ್ರನ್, ರೋಹನ್ ಕುನ್ನುಮಾಳ್, ಜಲಜ್ ಸಕ್ಸೇನಾ ತಲಾ 30 ರನ್ ಗಳಿಸಿದರು. ವರುಣ್ ನಾಯನಾರ್ ಗಳಿಸಿದ್ದು 10 ರನ್‌ಗಳಾದರೂ (55ಎ) ಒಂದು ಗಂಟೆ ಆಡಿದರು! ಗುಜರಾತ್ ಕಡೆ ಅರ್ಜನ್ ನಾಗ್ವಸ್ವಲ್ಲಾ, ಪ್ರಿಯಜಿತ್ ಸಿಂಗ್ ಜಡೇಜ ಮತ್ತು ರವಿ ಬಿಷ್ಣೋಯಿ ತಲಾ ಒಂದು ವಿಕೆಟ್ ಪಡೆದರು.

ಐಸಿಸಿ ಚಾಂಪಿಯನ್ಸ್ ಟ್ರೋಫಿ ನಾಳೆಯಿಂದ

ಪಾಕಿಸ್ತಾನದಲ್ಲಿ ಕ್ರಿಕೆಟ್ ಹವಾ

ಕರಾಚಿ (ಪಿಟಿಐ): ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿ ಆರಂಭಕ್ಕೆ ಎರಡು ದಿನಗಳಿರುವಂತೆ ಪಾಕಿಸ್ತಾನದಲ್ಲಿ ಕ್ರಿಕೆಟ್ ಜ್ವರ ಏರಿದೆ. ಆತಿಥೇಯ ಪಾಕಿಸ್ತಾನ ಮೊದಲ ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡವನ್ನು ಎದುರಿಸಲಿದ್ದು, ವಾಣಿಜ್ಯ ಚಟುವಟಿಕೆಗಳೂ ಗರಿಗೆದರಿವೆ.

ಆದರೆ ಭಾರತ ತಂಡವು ತನ್ನ ಪಂದ್ಯಗಳನ್ನು ತಮ್ಮ ದೇಶದಲ್ಲಿ ಆಡದಿರುವುದು ಇಲ್ಲಿನ ಕ್ರಿಕೆಟ್ ಪ್ರಿಯರಲ್ಲಿ ನಿರಾಶೆಯನ್ನೂ ಮೂಡಿಸಿದೆ. 'ಭಾರತ ತಂಡದ ಬಗ್ಗೆ, ವಿಶೇಷವಾಗಿ ವಿರಾಟ್ ಕೊಹ್ಲಿ ಅವರ ಬಗ್ಗೆ ದೇಶದಲ್ಲಿ ಅಪಾರ ಮೆಚ್ಚುಗೆ ಇದೆ. ಹೀಗಾಗಿ ತಂಡ ಆಡದಿರುವುದು ನಿರಾಶೆ ಮೂಡಿಸಿದೆ' ಎಂದು ಕರಾಚಿಯ ಜನನಿಬಿಡ ಸದ್ದರ್ ಪ್ರದೇಶದ ಅಂಗಡಿ ಮಾಲಕ ಮೊಯಿಝ್ ಅಹಮ್ಮದ್ ಬೇಸರ ವ್ಯಕ್ತಪಡಿಸಿದರು.

'ಪಾಕಿಸ್ತಾನ ತಂಡದ ಜರ್ಸಿ ಜೊತೆ ಭಾರತ ತಂಡದ ಜರ್ಸಿಗಳಿಗೂ ಇರುವ ಬೇಡಿಕೆ ಕಂಡು ಅವರಿಗೆ ಅಚ್ಚರಿ ಮೂಡಿಸಿದೆ. ವಿರಾಟ್ ಕೊಹ್ಲಿ ಅವರಿಗೆ ಖಂಡಿತಕ್ಕೂ ಇಲ್ಲಿ ಸಾಕಷ್ಟು ಅಭಿಮಾನಿಗಳಿದ್ದಾರೆ' ಎಂದು ವಿವಿಧ ತಂಡಗಳ ಜರ್ಸಿ ಹುಡುಕಾಡಲು ಸೇರಿದ್ದ ಯುವಕರನ್ನು ನಿಭಾಯಿಸುತ್ತಾ ಅವರು ಹೇಳಿದರು.

'ಆಟಗಾರನಾಗಿ ಮತ್ತು ವಿನಮ್ರತೆಯ ಕಾರಣದಿಂದ ನಾನು ಕೊಹ್ಲಿಯನ್ನು ಇಷ್ಟಪಡುತ್ತೇನೆ. ಮಾಧ್ಯಮಗಳಲ್ಲಿ ನಾನು ಕಂಡುಕೊಂಡಿರುವಂತೆ ಅವರಲ್ಲಿ ಅಹಮಿಕೆ ಇಲ್ಲ' ಎಂದು ಕಾಲೇಜು ವಿದ್ಯಾರ್ಥಿ ಖಾಸಿಫ್ ಅಭಿಪ್ರಾಯಪಟ್ಟರು. ಈ ಮಾರುಕಟ್ಟೆಯ ವ್ಯಾಪಾರಿಗಳು ತಂಡದ ಜರ್ಸಿಗಳ ನಕಲು ಮಾಡುವುದಕ್ಕೆ ಲೈಸೆನ್ಸ್ ಪಡೆದಿದ್ದಾರೆ. ಚಾಂಪಿಯನ್ಸ್ ಟ್ರೋಫಿ ಪಾಕಿಸ್ತಾನದಲ್ಲಿ ನಡೆಯುತ್ತಿರುವುದರಿಂದ ಅವರಿಗೆ ವ್ಯಾಪಾರ ವೃದ್ಧಿಯಾಗಿದೆ. 'ಮೂರೇ ದಿನಗಳಲ್ಲಿ ನಾನು 4000 ದಿಂದ 5000 ಶರ್ಟುಗಳ ಮಾರಾಟ ಮಾಡಿದ್ದೇನೆ' ಎಂದು ಜಾವೆದ್ ಪಖಾಲಿ ಖುಷಿಪಟ್ಟರು. ಕೊಹ್ಲಿ ಹೆಸರಿರುವ ಜರ್ಸಿಗಳನ್ನು ಧರಿಸುವವರೂ ಕಾಣಸಿಗುತ್ತಾರೆ.

ಕರಾಚಿಯ ನ್ಯಾಷನಲ್ ಸ್ಟೇಡಿಯಂನಲ್ಲಿ ಅಭ್ಯಾಸ ನಡೆಸುವ ವಿವಿಧ ತಂಡಗಳ ಆಟಗಾರರನ್ನು ಕಾಣಲು ಕ್ರಿಕೆಟ್ ಅಭಿಮಾನಿಗಳ ದಂಡೇ ಸೇರುತ್ತಿರುವುದು ಕ್ರಿಕೆಟ್ ಹವಾ ಎಷ್ಟರ ಮಟ್ಟಿಗೆ ವ್ಯಾಪಿಸಿದೆ ಎಂಬುದನ್ನು ಸೂಚಿಸುತ್ತಿದೆ.

29 ವರ್ಷಗಳ ನಂತರ ದೊಡ್ಡ ಟೂರ್ನಿಯೊಂದಕ್ಕೆ ಪಾಕಿಸ್ತಾನ ಆತಿಥ್ಯ ವಹಿಸುತ್ತಿದೆ. 2023ರಲ್ಲಿ ಏಷ್ಯಾ ಕಪ್ ಆತಿಥ್ಯ ವಹಿಸಿದ್ದರೂ ಈಗಿನ ಉತ್ಸಾಹ ಆಗ ಕಂಡಿರಲಿಲ್ಲ.

ಉದ್ಘಾಟನೆ: ಲಾಹೋರ್ ಕೋಟೆಯಲ್ಲಿ ಭಾನುವಾರ ರಾತ್ರಿ ಅಧಿಕೃತ ಉದ್ಘಾಟನಾ ಸಮಾರಂಭ ನಡೆದರೂ, ಕರಾಚಿಯಲ್ಲಿ ಕಂಡುಬರುತ್ತಿರುವ ಉತ್ಸಾಹದ ಎದುರು ಅದು ಸ್ವಲ್ಪ ಸಪ್ಪೆಯೇ ಆಗಿ ಕಂಡಿತು. ಸಮಾರಂಭದಲ್ಲಿ 2017ರಲ್ಲಿ ಚಾಂಪಿಯನ್ ಆಗಿದ್ದ ಪಾಕಿಸ್ತಾನ ತಂಡದ ಆಟಗಾರರನ್ನು ಸನ್ಮಾನಿಸಲಾಯಿತು.

ಮಾಜಿ ನಾಯಕ ಜಾವೆದ್ ಮಿಯಾಂದಾದ್ ಅವರು ಐಸಿಸಿ ಟೂರ್ನಿಯನ್ನು ದೇಶಕ್ಕೆ ತಂದ ಕ್ರಿಕೆಟ್ ಮಂಡಳಿಯನ್ನು ಕೊಂಡಾಡಿದರು.

ಉದ್ಘಾಟನಾ ಪಂದ್ಯವು ಪಾಕ್ ಆತಿಥ್ಯ ಮತ್ತು ಕ್ರಿಕೆಟ್ ಪ್ರೇಮಕ್ಕೆ ವೇದಿಕೆಯಾಗಲಿದೆ ಎಂದು ಪಾಕ್ ಕ್ರಿಕೆಟ್ ಮಂಡಳಿ ಅಧ್ಯಕ್ಷ ಮೊಹ್ಸಿನ್ ನಖ್ವಿ ತಿಳಿಸಿದರು.

ಕರಾಚಿಯ ನ್ಯಾಷನಲ್ ಕ್ರೀಡಾಂಗಣದ ಸುತ್ತ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ –ಎಎಫ್‌ಪಿ ಚಿತ್ರ

ಪಾಕ್ ತಂಡಕ್ಕೆ ಹ್ಯಾರಿಸ್ ರವೂಫ್ ಲಭ್ಯ

ಕರಾಚಿ, (ಪಿಟಿಐ): ಪಾಕಿಸ್ತಾನ ತಂಡದ ವೇಗಿ ಹ್ಯಾರಿಸ್ ರವೂಫ್ ಗಾಯದ ಸಮಸ್ಯೆಯಿಂದ ಚೇತರಿಸಿಕೊಂಡಿದ್ದು ಅಭ್ಯಾಸ ಆರಂಭಿಸಿದ್ದಾರೆ. ಬುಧವಾರ ಐಸಿಸಿ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಉದ್ಘಾಟನಾ ಪಂದ್ಯದಲ್ಲಿ ನ್ಯೂಜಿಲೆಂಡ್ ವಿರುದ್ಧ ಆಡಲಿದ್ದಾರೆ.

ಇತ್ತೀಚೆಗೆ ನಡೆದ ತ್ರಿಕೋನ ಏಕದಿನ ಸರಣಿ ವೇಳೆ ವೇಗಿ ಹ್ಯಾರಿಸ್ ರೌಫ್ ಎದೆಯ ಕೆಳ ಭಾಗದಲ್ಲಿ ಸ್ನಾಯು ನೋವಿಗೆ ಒಳಗಾಗಿದ್ದರು. ಇದೀಗ ಕರಾಚಿಯಲ್ಲಿ ನಡೆಯುವ ಚಾಂಪಿಯನ್ಸ್ ಟ್ರೋಫಿ ಉದ್ಘಾಟನಾ ಪಂದ್ಯದಲ್ಲಿ ಆಡಲಿದ್ದಾರೆ ಎಂದು ಪಾಕ್ ತಂಡ ಸುದ್ದಿ ಸಂಸ್ಥೆಗೆ ಖಚಿತಪಡಿಸಿದೆ.

'ಫಿನಿಷರ್' ಪಾತ್ರಕ್ಕೆ ರಾಹುಲ್ ತಯಾರಿ

ದುಬೈ, (ಪಿಟಿಐ): 'ಫಿನಿಷರ್ ಪಾತ್ರ'ಕ್ಕೆ ಸಜ್ಜಾಗುತ್ತಿರುವ ವಿಕೆಟ್ ಕೀಪರ್‌ಡ-ಬ್ಯಾಟರ್ ಕೆ.ಎಲ್.ರಾಹುಲ್ ಅವರು ಸೋಮವಾರ ಭಾರತ ಕ್ರಿಕೆಟ್ ತಂಡದ ತಾಲೀಮಿನ ವೇಳೆ ದೊಡ್ಡ ಹೊಡೆತಗಳ ಕೌಶಲ ಪರೀಕ್ಷಿಸಿಕೊಂಡರು.

ಚಾಂಪಿಯನ್ಸ್ ಟ್ರೋಫಿ ಟೂರ್ನಿಯ ಮೊದಲ ಪಂದ್ಯದಲ್ಲಿ ಬಾಂಗ್ಲಾದೇಶ ತಂಡವನ್ನು ಎದುರಿಸಲು ಭಾರತ ಸಜ್ಜಾಗುತ್ತಿದೆ. ಸಾಮಾನ್ಯವಾಗಿ ತಾಂತ್ರಿಕ ಕೌಶಲಕ್ಕೆ ಒತ್ತು ನೀಡುವ ರಾಹುಲ್ ಇಲ್ಲಿ ಆಕ್ರಮಣಕಾರಿಯಾಗಿ ಆಡುವ ಪಾತ್ರಕ್ಕೆ ತಯಾರಿ ಮಾಡಿಕೊಳ್ಳುವಂತೆ ಕಂಡುಬಂದರು. ಹೆಚ್ಚುಕಮ್ಮಿ ಪ್ರತಿಯೊಂದು ಹೊಡೆತವನ್ನು ಬೌಂಡರಿ ಯಾಚೆ ಎತ್ತಲು ಪ್ರಯತ್ನಿಸುತ್ತಿದ್ದರು.

ಕೀಪರ್ ರಿಷಭ್ ಪಂತ್ ಅವರೂ 11ರಲ್ಲಿ ಸ್ಥಾನ ಪಡೆಯುವ ಪೈಪೋಟಿ ಯಲ್ಲಿದ್ದಾರೆ. ಹೀಗಾಗಿ 32 ವರ್ಷ ವಯಸ್ಸಿನ ರಾಹುಲ್ ಹೆಚ್ಚು ಆಕ್ರಮಣಕಾರಿ ಆಟಕ್ಕೆ ಒತ್ತು ನೀಡಲು ಮುಂದಾಗಿದ್ದಾರೆ. ಇಂಗ್ಲೆಂಡ್ ವಿರುದ್ಧ ಇತ್ತೀಚಿನ ಏಕದಿನ ಸರಣಿಯ ಮೂರನೇ ಪಂದ್ಯದಲ್ಲಿ ರಾಹುಲ್ 29 ಎಸೆತಗಳಲ್ಲಿ 40 ರನ್ ಗಳಿಸಿದ್ದರು.

ರಾಹುಲ್ ತಂಡದಲ್ಲಿ ಐದು ಅಥವಾ ಆರನೇ ಕ್ರಮಾಂಕದಲ್ಲಿ ಆಡುವ ಸಾಧ್ಯತೆಯಿದೆ. ಹೀಗಾಗಿ ರನ್ ವೇಗ ಹೆಚ್ಚಿಸುವ ನಿಟ್ಟಿನಲ್ಲಿ ಕೊನೆಯ ಕೆಲವು ಓವರುಗಳಲ್ಲಿ ಅವರ ಪಾತ್ರ ತಂಡಕ್ಕೆ ಪ್ರಮುಖವಾಗಲಿದೆ.

ಕೆ.ಎಲ್.ರಾಹುಲ್

ಇಂಗ್ಲೆಂಡ್ ವಿರುದ್ಧ ಸರಣಿಯಲ್ಲಿ ಮಿಂಚಿದ್ದ ಆರಂಭ ಆಟಗಾರ ಶುಭಮನ್ ಗಿಲ್ ಸಹ ಕೂಡ ಉತ್ತಮ ಲಯದಲ್ಲಿರುವಂತೆ ಕಂಡರು. ಡ್ರೈವ್ ಮತ್ತು ಪುಲ್ ಹೊಡೆತಗಳನ್ನು ಸಲೀಸಾಗಿ ಆಡಿದರು. ರೋಹಿತ್ ಶರ್ಮಾ ಅವರೂ ಕಟ್ ಹೊಡೆತಗಳನ್ನು ಅಭ್ಯಾಸ ಮಾಡಿದರು.

ಪಂತ್ ಪರದಾಟ: ಹಾರ್ದಿಕ್ ಪಾಂಡ್ಯ ಬ್ಯಾಟಿಂಗ್ ವೇಳೆ ಹೊಡೆತವೊಂದನ್ನು ತಡೆಯುವ ವೇಳೆ ಮೊಣಕಾಲಿಗೆ ಚೆಂಡು ಬಡಿದು ನೋವು ಅನುಭವಿಸಿದ್ದ ರಿಷಭ್ ಪಂತ್ ಅವರು ಸ್ವಲ್ಪ ಕುಂಟುತ್ತಿದ್ದಂತೆ ಕಂಡುಬಂದರು. ಎಂದಿನ ರೀತಿಯಲ್ಲಿ ಅವರಿಗೆ ಆಡಲಾಗಲಿಲ್ಲ. ಅವರು ವಿಕೆಟ್ ಕೀಪಿಂಗ್ ಮತ್ತು ಫೀಲ್ಡಿಂಗ್ ಪ್ರಾಕ್ಟೀಸ್ ಮಾಡಲಿಲ್ಲ.ತಂಡವು ಮೂರು ಗುಂಪುಗಳಾಗಿ ಅಭ್ಯಾಸ ನಡೆಸಿತು.

ಲಾಹೋರ್‌ಗೆ ಬಂದಿಳಿದ ಆಸ್ಟ್ರೇಲಿಯಾ ತಂಡ

ಲಾಹೋರ್, (ಪಿಟಿಐ): ಐಸಿಸಿ ಚಾಂಪಿಯನ್ಸ್ ಟ್ರೋಫಿ ಆಡಲು ಆಸ್ಟ್ರೇಲಿಯಾ ಕ್ರಿಕೆಟ್ ತಂಡ ಸೋಮವಾರ ಪಾಕಿಸ್ತಾನಕ್ಕೆ ಬಂದಿಳಿಯಿತು. ಇದೇ 19ರಂದು ಟೂರ್ನಿ ಆರಂಭವಾಗಲಿದ್ದು ಉದ್ಘಾಟನಾ ಪಂದ್ಯದಲ್ಲಿ ಆತಿಥೇಯ ಪಾಕಿಸ್ತಾನ ಮತ್ತು ನ್ಯೂಜಿಲೆಂಡ್ ತಂಡಗಳು ಸೆಣಸಲಿವೆ.

ಫೆಬ್ರುವರಿ 22ರಂದು ಗಡ್ಡಾಫಿ ಕ್ರೀಡಾಂಗಣದಲ್ಲಿ ಇಂಗ್ಲೆಂಡ್ ವಿರುದ್ಧ ಆಡುವ ಮೂಲಕ ಆಸ್ಟ್ರೇಲಿಯಾ ಟೂರ್ನಿಯಲ್ಲಿ ಅಭಿಯಾನ ಆರಂಭಿಸಲಿದೆ.

'ಬೂಮ್ರಾ ಗೈರು ಬಾಂಗ್ಲಾಕ್ಕೆ ಅವಕಾಶ'

ನವದೆಹಲಿ, (ಪಿಟಿಐ): 'ಚಾಂಪಿಯನ್ಸ್ ಟ್ರೋಫಿಯಲ್ಲಿ ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಅವರ ಅನುಪಸ್ಥಿತಿಯು ಭಾರತ ತಂಡದ ದಾಳಿಯ ಮೇಲೆ ಒತ್ತಡ ಹೇರಲು ನಮ್ಮ ತಂಡಕ್ಕೆ ಅವಕಾಶ ಒದಗಿಸಿದೆ' ಎಂದು ಬಾಂಗ್ಲಾದೇಶ ತಂಡದ ಆರಂಭ ಆಟಗಾರ ಇಮ್ರುಲ್‌ಕಯೆಸ್‌ತಿಳಿಸಿದ್ದಾರೆ.

ಪ್ರೊ ಲೀಗ್ ಹಾಕಿ: ಮಹಿಳಾ ತಂಡಕ್ಕೆ ಸ್ಪೇನ್ ಎದುರಾಳಿ

ಹರ್ಮನ್ ಬಳಗಕ್ಕೆ ಜರ್ಮನಿ ಸವಾಲು

ಭುವನೇಶ್ವರ (ಪಿಟಿಐ): ಪ್ಯಾರಿಸ್ ಒಲಿಂಪಿಕ್ಸ್‌ನ ಕಂಚಿನ ಪದಕ ವಿಜೇತ ಭಾರತ ಪುರುಷರ ಹಾಕಿ ತಂಡವು ಮಂಗಳವಾರ ಎಫ್‌ಐಎಚ್ ಪ್ರೊ ಲೀಗ್ ಟೂರ್ನಿಯ ಪಂದ್ಯದಲ್ಲಿ ಜರ್ಮನಿ ತಂಡದ ಸವಾಲನ್ನು ಎದುರಿಸಲಿದೆ.

ಶನಿವಾರ ತವರು ಲೆಗ್‌ನ ಆರಂಭಿಕ ಪಂದ್ಯದಲ್ಲಿ 1–3ರಿಂದ ಸ್ಪೇನ್ ತಂಡಕ್ಕೆ ಸೋತಿದ್ದ ಆತಿಥೇಯ ತಂಡವು ಭಾನುವಾರ ಮರು ಲೆಗ್‌ನ ಹಣಾಹಣಿಯಲ್ಲಿ ಅದೇ ತಂಡವನ್ನು 2–0ಯಿಂದ ಮಣಿಸಿದೆ.

ಗೆಲುವಿನ ಹಳಿಗೆ ಮರಳಿರುವ ಭಾರತದ ಪುರುಷರು, ತಮ್ಮ ಮೂರನೇ ಪಂದ್ಯದಲ್ಲಿ ಒಲಿಂಪಿಕ್ಸ್ ಬೆಳ್ಳಿ ಪದಕ ವಿಜೇತ ಜರ್ಮನಿ ವಿರುದ್ಧ ಉತ್ತಮ ಆಟ ಪ್ರದರ್ಶಿಸುವ ವಿಶ್ವಾಸದಲ್ಲಿದ್ದಾರೆ.

ಎರಡು ಪಂದ್ಯಗಳಿಂದ ಮೂರು ಅಂಕ ಗಳಿಸಿರುವ ಭಾರತ ತಂಡವು ಪಾಯಿಂಟ್ ಪಟ್ಟಿಯಲ್ಲಿ ಎಂಟನೇ ಸ್ಥಾನದಲ್ಲಿದೆ. ಜರ್ಮನಿ (4) ಏಳನೇ ಸ್ಥಾನದಲ್ಲಿದೆ. ನೆದರ್ಲೆಂಡ್ಸ್ (14), ಇಂಗ್ಲೆಂಡ್ (11) ಕ್ರಮವಾಗಿ ಮೊದಲೆರಡು ಸ್ಥಾನದಲ್ಲಿವೆ. ಟೂರ್ನಿಯಲ್ಲಿ ಒಟ್ಟು ಒಂಬತ್ತು ತಂಡಗಳು ಸೆಣಸುತ್ತಿವೆ.

ಮೊದಲ ಪಂದ್ಯದಲ್ಲಿ ಎಸಗಿದ್ದ ತಪ್ಪನ್ನು ತಿದ್ದುಕೊಂಡು ಎರಡನೇ ಪಂದ್ಯಕ್ಕೆ ಅದ್ಭುತವಾಗಿ ಪುನರಾಗಮನ ಮಾಡಿದ ಹರ್ಮನ್‌ಪ್ರೀತ್ ಬಳಗವು ಸ್ಪೇನ್ ವಿರುದ್ಧ ಅಧಿಕಾರಯುತ ಜಯ ಸಾಧಿಸಿತು. ಮನ್‌ದೀಪ್ ಸಿಂಗ್ ಮತ್ತು ದಿಲ್‌ಪ್ರೀತ್ ಸಿಂಗ್ ಅವರು ಅಮೋಘವಾಗಿ ಫೀಲ್ಡ್ ಗೋಲು ಗಳಿಸಿ, ಗೆಲುವಿನ ರೂವಾರಿಯಾಗಿದ್ದರು.

ಭಾರತ ತಂಡವು ಪೆನಾಲ್ಟಿ ಕಾರ್ನರ್ ಅವಕಾಶವನ್ನು ಗೋಲಾಗಿ ಪರಿವರ್ತಿಸಲು ಎಡವುತ್ತಿರುವುದು ಮುಖ್ಯ ಕೋಚ್ ಕ್ರೇಗ್ ಫುಲ್ಟನ್ ಅವರನ್ನು ಚಿಂತೆಗೀಡುಮಾಡಿದೆ. ಎರಡು ಪಂದ್ಯಗಳಲ್ಲಿ ಏಳು ಪೆನಾಲ್ಟಿ ಕಾರ್ನರ್ ಅವಕಾಶಗಳು ಭಾರತದ ಆಟಗಾರರಿಗೆ ದಕ್ಕಿದರೂ ಒಂದೂ ಬಾರಿಯೂ ಚೆಂಡನ್ನು ಗುರಿ ಸೇರಿಸಲು ಅವರಿಗೆ ಸಾಧ್ಯವಾಗಿಲ್ಲ.

ಮಹಿಳೆಯರಿಗೆ ಸ್ಪೇನ್ ಸವಾಲು: ಭಾರತ ವನಿತೆಯರು ಮಂಗಳವಾರ ತಮ್ಮ ಮೂರನೇ ಪಂದ್ಯದಲ್ಲಿ ಸ್ಪೇನ್ ತಂಡದೊಂದಿಗೆ ಮುಖಾಮುಖಿಯಾಗುವರು. ಬುಧವಾರವೂ ಅದೇ ತಂಡದ ವಿರುದ್ಧ ಕಣಕ್ಕೆ ಇಳಿಯುವರು.

ತವರು ಲೆಗ್‌ನ ಮೊದಲ ಪಂದ್ಯದಲ್ಲಿ 3–2ರಿಂದ ಇಂಗ್ಲೆಂಡ್ ವಿರುದ್ಧ ಗೆದ್ದು ಶುಭಾರಂಭ ಮಾಡಿದ್ದ ಸಲಿಮಾ ಟೆಟೆ ಬಳಗವು ಎರಡನೇ ಪಂದ್ಯದಲ್ಲಿ ಅದೇ ತಂಡದ ವಿರುದ್ಧ ಪೆನಾಲ್ಟಿ ಶೂಟೌಟ್‌ನಲ್ಲಿ 1–2ರಿಂದ (ನಿಗದಿತ ಅವಧಿಯಲ್ಲಿ 2–2 ಗೋಲು) ಪರಾಭವಗೊಂಡಿದೆ.

ಆಡಿರುವ ಎರಡು ಪಂದ್ಯಗಳಿಂದ ಮೂರು ಅಂಕ ಗಳಿಸಿರುವ ಭಾರತ ತಂಡವು ಪಾಯಿಂಟ್ ಪಟ್ಟಿಯಲ್ಲಿ ಎಂಟನೇ ಸ್ಥಾನದಲ್ಲಿದೆ. ಆರು ಪಂದ್ಯಗಳಿಂದ 8 ಅಂಕ (2 ಗೆಲುವು, 1 ಡ್ರಾ ಮತ್ತು 3 ಸೋಲು) ಪಡೆದಿರುವ ಸ್ಪೇನ್ ತಂಡವು ನಾಲ್ಕನೇ ಸ್ಥಾನದಲ್ಲಿವೆ. ಚೀನಾ (16) ಮತ್ತು ನೆದರ್ಲೆಂಡ್ಸ್ (9) ಕ್ರಮವಾಗಿ ಮೊದಲೆರಡು ಸ್ಥಾನದಲ್ಲಿವೆ.

ಭಾರತ ತಂಡದ ನಾಯಕ ಹರ್ಮನ್‌ಪ್ರೀತ್ ಸಿಂಗ್

ಇಂದಿನ ಪಂದ್ಯ
ಮಹಿಳೆಯರ ವಿಭಾಗ
ಭಾರತ Vs ಸ್ಪೇನ್ — ಪಂದ್ಯ ಆರಂಭ ಸಂಜೆ 5.15
ಪುರುಷರ ವಿಭಾಗ
ಭಾರತ Vs ಜರ್ಮನಿ — ಪಂದ್ಯ ಆರಂಭ ರಾತ್ರಿ 7.30
ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಡಿಡಿ ಸ್ಪೋರ್ಟ್ಸ್

ಫುಟ್‌ಬಾಲ್: ಕಿಕ್‌ಸ್ಟಾರ್ಟ್ ಎಫ್‌ಸಿಗೆ ಭರ್ಜರಿ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಿಕ್‌ಸ್ಟಾರ್ಟ್ ಎಫ್‌ಸಿ ತಂಡ ಸೂಪರ್ ಡಿವಿಷನ್ ಲೀಗ್ ಪಂದ್ಯದಲ್ಲಿ ಸೋಮವಾರ ಎಎಸ್‌ಸಿ ಮತ್ತು ಸೆಂಟರ್ ಎಫ್‌ಸಿ ತಂಡದ ವಿರುದ್ಧ 8–0 ಗೋಲುಗಳ ಭರ್ಜರಿ ಜಯ ಪಡೆಯಿತು.

ಅಶೋಕನಗರದ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣ ದಲ್ಲಿ ನಡೆದ ಪಂದ್ಯದಲ್ಲಿ ಕಿಕ್‌ಸ್ಟಾರ್ಟ್ ತಂಡದ ಅಭಿಷೇಕ್ ಶಂಕರ್ ಪವಾರ್ (5ನೇ, 45 ಮತ್ತು 75ನೇ), ಸಾಯಿಕೋಮ್ ಬೋರಿಶ್ ಸಿಂಗ್ (22ನೇ, 51ನೇ, 79ನೇ ನಿ.), ಕ್ರಿಸ್ಪಿನ್ ಕ್ಲೀಟಸ್ (63ನೇ ನಿ.) ಮತ್ತು ಆರ್.ರಾಹುಲ್ (72ನೇ ನಿ.) ಗೋಲುಗಳನ್ನು ಗಳಿಸಿದರು.

ಇನ್ನೊಂದು ಪಂದ್ಯದಲ್ಲಿ ಬಿಎಫ್‌ಸಿ ತಂಡ 5–0 ಗೋಲುಗಳಿಂದ ರೆಬೆಲ್ಸ್ ಎಫ್‌ಸಿ ವಿರುದ್ಧ ಜಯಿಸಿತು.

ಸನ್‌ರೈಸ್ ಎಫ್‌ಸಿಗೆ ಜಯ: ಸಿ ಡಿವಿಷನ್ ಲೀಗ್ ಪಂದ್ಯದಲ್ಲಿ ಸನ್‌ರೈಸ್ ಎಫ್‌ಸಿ ತಂಡ 6–0 ಗೋಲುಗಳಿಂದ ಐಟಿಸಿ ಎಫ್‌ಸಿ ತಂಡದ ವಿರುದ್ಧ ಗೆದ್ದುಕೊಂಡಿತು.

ಬೆಂಗಳೂರು ಕ್ಲಬ್‌ನ ಪ್ರಾಂತಿಕ್ ಸಾಹಾ (ಎಡ) ಮತ್ತು ರೆಬೆಲ್ಸ್ ಎಫ್‌ಸಿ ತಂಡದ ರಿಷಭ್ ಚೆಂಡಿಗಾಗಿ ಪೈಪೋಟಿ ನಡೆಸಿದ್ದು ಹೀಗೆ ಚಿತ್ರ: ಪುಷ್ಕರ್‌ವಿ.

ಚೆನ್ನೈನಲ್ಲಿ ರಾಷ್ಟ್ರೀಯ ಪ್ಯಾರಾ ಅಥ್ಲೆಟಿಕ್ಸ್ ಇಂದಿನಿಂದ

ಚೆನ್ನೈ (ಪಿಟಿಐ): ಇಲ್ಲಿನ ಜವಾಹರಲಾಲ್ ನೆಹರೂ ಕ್ರೀಡಾಂಗಣದಲ್ಲಿ ಮಂಗಳವಾರ ಆರಂಭವಾಗಲಿರುವ 23ನೇ ರಾಷ್ಟ್ರೀಯ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್ ನಲ್ಲಿ ದೇಶದಾದ್ಯಂತ 1476 ಕ್ರೀಡಾಪಟುಗಳು ತಮ್ಮ ಕೌಶಲಗಳನ್ನು ಪ್ರದರ್ಶಿಸಲಿದ್ದಾರೆ.

ಇದು ದೇಶದ ಅತಿದೊಡ್ಡ ಪ್ಯಾರಾ ಅಥ್ಲೆಟಿಕ್ ಕೂಟಗಳಲ್ಲಿ ಒಂದಾಗಿದೆ. ಇದೇ ಮೊದಲ ಬಾರಿಗೆ ಚೆನ್ನೈ ಆತಿಥ್ಯ ವಹಿಸುತ್ತಿದೆ. 155 ಸ್ಪರ್ಧೆಗಳಲ್ಲಿ 30 ತಂಡಗಳಿಂದ ಕ್ರೀಡಾಪಟುಗಳು ಕಣಕ್ಕೆ ಇಳಿಯಲಿದ್ದಾರೆ.

ಪ್ಯಾರಾಲಿಂಪಿಕ್ಸ್‌ನಲ್ಲಿ ಪದಕ ವಿಜೇತರು ಸೇರಿದಂತೆ ಭಾರತದ ಪ್ರಮುಖ ಆಟಗಾರರು ಸ್ಪರ್ಧೆಯಲ್ಲಿದ್ದಾರೆ. ಜಾವೆಲಿನ್ ಥ್ರೋಪಟು ಸುಮಿತ್ ಅಂಟಿಲ್, ನವದೀಪ್ ಸಿಂಗ್, ಶಾಟ್‌ಪಟ್ ಥ್ರೋಪಟುಗಳಾದ ಮನೋಜ್ ಸಿಂಗರಾಜ್, ಮುತ್ತುರಾಜ, ಹೊಕಾಟೊ ಸೆಮಾ, ಹೈಜಂಪ್ ಅಥ್ಲೀಟ್ ಮರಿಯಪ್ಪನ್ ತಂಗವೇಲು, ಡಿಸ್ಕಸ್ ಥ್ರೋಪಟು ಯೋಗೇಶ್ ಕಥುನಿಯಾ ಅವರು ವಿವಿಧ ತಂಡಗಳಲ್ಲಿ ಪದಕ ಬೇಟೆ ನಡೆಸುವ ಪ್ರಮುಖ ಕ್ರೀಡಾಪಟುಗಳು.

'ಚೆನ್ನೈನಲ್ಲಿ ನಡೆಯುವ ಈ ಚಾಂಪಿಯನ್‌ಷಿಪ್ ಭಾರತದ ಪ್ಯಾರಾ ಅಥ್ಲೆಟಿಕ್ಸ್‌ನಲ್ಲಿ ಹೊಸ ಅಧ್ಯಾಯವನ್ನು ಸೃಷ್ಟಿಸಲಿದೆ. ಪ್ಯಾರಾ ಕ್ರೀಡೆಗಳ ತ್ವರಿತ ಬೆಳವಣಿಗೆ ಮತ್ತು ಹೆಚ್ಚುತ್ತಿರುವ ಸ್ಪರ್ಧಾತ್ಮಕತೆಯನ್ನು ಇದು ಪ್ರತಿಬಿಂಬಿಸುತ್ತದೆ' ಎಂದು ಭಾರತದ ಪ್ಯಾರಾಲಿಂಪಿಕ್ ಸಮಿತಿ ಅಧ್ಯಕ್ಷ ದೇವೇಂದ್ರ ಝಝಾರಿಯಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಾವೆಲಿನ್ ಥ್ರೋಪಟು ಸುಮಿತ್ ಅಂಟಿಲ್

ಸಿಂಗಲ್ಸ್‌ನಲ್ಲಿ ಕಣಕ್ಕೆ ಇಳಿಯಲಿರುವ ಕೊಪ್ರಿವಾ, ಟ್ರಿಸ್ಟಾನ್

24ರಿಂದ ಬೆಂಗಳೂರು ಓಪನ್ ಟೆನಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಝೆಕ್ ರಿಪಬ್ಲಿಕ್‌ನ ವಿಟ್ ಕೊಪ್ರಿವಾ, ಆಸ್ಟ್ರೇಲಿಯಾದ ಟ್ರಿಸ್ಟಾನ್ ಸ್ಕೂಲ್ಕೇಟ್ ಸೇರಿ ಎಟಿಪಿ ರ್‍ಯಾಂಕಿಂಗ್‌ನಲ್ಲಿ ಅಗ್ರ 200ರಲ್ಲಿ ಸ್ಥಾನ ಹೊಂದಿರುವ ಒಂಬತ್ತು ಆಟಗಾರರು ಇದೇ 24ರಂದು ಆರಂಭವಾಗುವ ಬೆಂಗಳೂರು ಓಪನ್ ಎಟಿಪಿ ಚಾಲೆಂಜರ್ ಟೂರ್ನಿಯಲ್ಲಿ ಕಣಕ್ಕೆ ಇಳಿಯಲಿದ್ದಾರೆ.

ಕಬ್ಬನ್ ಪಾರ್ಕ್‌ನಲ್ಲಿರುವ ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಯ ಕೋರ್ಟ್‌ನಲ್ಲಿ ನಡೆಯುವ ಒಂಬತ್ತನೇ ಆವೃತ್ತಿಯ ಟೂರ್ನಿಯು 'ಚಾಲೆಂಜರ್ 125' ಮಟ್ಟದ್ದಾಗಿದೆ. ಒಟ್ಟು ₹1.73 ಕೋಟಿ ಬಹುಮಾನ ಮೊತ್ತವನ್ನು ಹೊಂದಿರುವ ಟೂರ್ನಿಯಲ್ಲಿ ಸಿಂಗಲ್ಸ್ ವಿಜೇತರು 125 ಎಟಿಪಿ ಅಂಕಗಳನ್ನು ತಮ್ಮದಾಗಿಸಿಕೊಳ್ಳಲಿದ್ದಾರೆ.

ಇದೇ ಋತುವಿನ ಆರಂಭದಲ್ಲಿ ಬ್ಯಾಂಕಾಕ್ ಓಪನ್‌ನಲ್ಲಿ ಫೈನಲ್ ತಲುಪಿದ್ದ 128ನೇ ಕ್ರಮಾಂಕದ ಕೊಪ್ರಿವಾ ಅವರು ಸಿಂಗಲ್ಸ್‌ನ ಪ್ರಬಲ ಸ್ಪರ್ಧಿಯಾಗಿದ್ದಾರೆ. ಅವರೊಂದಿಗೆ ಟ್ರಿಸ್ಟಾನ್ (135ನೇ ರ್‍ಯಾಂಕ್), ಡೆನ್ಮಾರ್ಕ್‌ನ ಎಲ್ಮರ್ ಮುಲ್ಲರ್ (152), ಫ್ರಾನ್ಸ್‌ನ ಉಗೊ ಬ್ಲಾಂಚೆಟ್ (159), ಕೆನಡಾದ ಅಲೆಕ್ಸಿಸ್ ಗಲಾರ್ನ್ಯೂ (177) ಕಣದಲ್ಲಿದ್ದಾರೆ. 2016ರಲ್ಲಿ ವೃತ್ತಿಜೀವನದ ಶ್ರೇಷ್ಠ 17ನೇ ಸ್ಥಾನ ತಲುಪಿದ್ದ ಆಸ್ಟ್ರೇಲಿಯಾದ ಬರ್ನಾರ್ಡ್ ಟಾಮಿಕ್ (213) ಅವರೂ ಅದೃಷ್ಟ ಪರೀಕ್ಷೆಗೆ ಇಳಿಯಲಿದ್ದಾರೆ.

ಸಿಂಗಲ್ಸ್‌ನ ಮುಖ್ಯ ಡ್ರಾದಲ್ಲಿ 32 ಆಟಗಾರರು ಇರಲಿದ್ದು, 20 ಮಂದಿ ನೇರ ಪ್ರವೇಶ ಪಡೆಯುವರು. ಕ್ವಾಲಿಫೈಯರ್ ಹಂತದಿಂದ ಆರು, ವೈಲ್ಡ್ ಕಾರ್ಡ್ ಮೂಲಕ ಮೂರು ಮಂದಿ ಪ್ರಧಾನ ಸುತ್ತಿಗೆ ಅರ್ಹತೆ ಪಡೆಯುವರು.

ಕಳೆದ ಆವೃತ್ತಿಯಲ್ಲಿ ಇಟಲಿಯ ಸ್ಟೆಫಾನೊ ನಪೊಲಿಟಾನೊ ಅವರು ಫೈನಲ್‌ನಲ್ಲಿ ಭಾರತದ ಸುಮಿತ್ ನಗಾಲ್ ಅವರನ್ನು ಮಣಿಸಿ ಚಾಂಪಿಯನ್ ಆಗಿದ್ದರು.

'2015ರಲ್ಲಿ ಮೊದಲ ಆವೃತ್ತಿ ನಡೆದಿದ್ದು, ಟೂರ್ನಿಗೆ ಈಗ ದಶಕದ ಸಂಭ್ರಮ. ಈ ಬಾರಿಯೂ ಗುಣಮಟ್ಟದ ಸ್ಪರ್ಧೆಯನ್ನು ಪ್ರೇಕ್ಷಕರು ಎದುರು ನೋಡಬಹುದು. ಸ್ಥಳೀಯ ಪ್ರತಿಭಾವಂತ ಸಾಮರ್ಥ್ಯ ಪ್ರದರ್ಶನಕ್ಕೆ ಇದು ವೇದಿಕೆಯಾಗಿದೆ' ಎಂದು ಟೂರ್ನಿಯ ನಿರ್ದೇಶಕ ಸುನಿಲ್ ಯಜಮಾನ್ ತಿಳಿಸಿದ್ದಾರೆ.

ವಿಟ್ ಕೊಪ್ರಿವಾ



ಟ್ರಿಸ್ಟಾನ್ ಸ್ಕೂಲ್ಕೇಟ್

ಕರಣ್ ಸಿಂಗ್‌ಗೆ ನಿರಾಸೆ

ಪುಣೆ (ಪಿಟಿಐ): ಭಾರತದ ಕರಣ್ ಸಿಂಗ್ ಅವರು ಇಲ್ಲಿ ನಡೆಯುತ್ತಿರುವ ಮಹಾ ಓಪನ್ ಎಟಿಪಿ ಚಾಲೆಂಜರ್ಸ್ 100 ಪುರುಷರ ಟೆನಿಸ್ ಚಾಂಪಿಯನ್‌ಷಿಪ್‌ನ ಸಿಂಗಲ್ಸ್‌ನ ಮೊದಲ ಸುತ್ತಿನಲ್ಲೇ ಹೊರಬಿದ್ದಿದ್ದಾರೆ.

ವೈಲ್ಡ್‌ಕಾರ್ಡ್ ಮೂಲಕ ಮುಖ್ಯಸುತ್ತಿಗೆ ಪ್ರವೇಶ ಪಡೆದಿದ್ದ 21 ವರ್ಷದ ಕರಣ್ ಸೋಮವಾರ ನಡೆದ 32ರ ಘಟ್ಟದ ಪಂದ್ಯದಲ್ಲಿ 6-4, 6-1ರಿಂದ ಎಂಟನೇ ಶ್ರೇಯಾಂಕದ ಅಲೆಕ್ಸಿಸ್ ಗಲಾರ್ನಿಯೊ (ಕೆನಡಾ) ಅವರಿಗೆ ಮಣಿದರು.

ವಿಶ್ವ ರ್‍ಯಾಂಕಿಂಗ್‌ನಲ್ಲಿ 170ನೇ ಸ್ಥಾನದಲ್ಲಿರುವ ಅಲೆಕ್ಸಿಸ್ ಅವರಿಗೆ ಮೊದಲ ಸೆಟ್‌ನಲ್ಲಿ ಕರಣ್ ಕೊಂಚ ಪೈಪೋಟಿ ನೀಡಿದರು. ಆದರೆ, ಎರಡನೇ ಸೆಟ್‌ನಲ್ಲಿ ಕೆನಡಾದ ಆಟಗಾರ ನಿರಾಯಾಸವಾಗಿ ಗೆದ್ದು, ಎರಡನೇ ಸುತ್ತು ಪ್ರವೇಶಿಸಿದರು.

ಭಾರತದ ರಾಮ್‌ಕುಮಾರ್ ರಾಮನಾಥನ್ ಅವರು ಕ್ವಾಲಿಫೈಯರ್‌ನ ಅಂತಿಮ ಸುತ್ತಿನಲ್ಲಿ ನಿರಾಸೆ ಮೂಡಿಸಿದರು. ಏಳನೇ ಶ್ರೇಯಾಂಕದ ಕಿಮ್ಮರ್ ಕೊಪ್ಪೆಜಾನ್ಸ್ (ಬೆಲ್ಜಿಯಂ) ಅವರು 6-4, 6-7 (5), 6-0ರಿಂದ ರಾಮಕುಮಾರ್ ಅವರನ್ನು ಮಣಿಸಿ, ಮುಖ್ಯಸುತ್ತು ಪ್ರವೇಶಿಸಿದರು.

ಶೂಟರ್ ಭಾಕರ್‌ಗೆ ಬಿಬಿಸಿ ಮಹಿಳಾ ಕ್ರೀಡಾಪಟು ಗೌರವ

ನವದೆಹಲಿ (ಪಿಟಿಐ): ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಎರಡು ಕಂಚಿನ ಪದಕ ವಿಜೇತೆ ಮನು ಭಾಕರ್ ಅವರು ಬಿಬಿಸಿ ಇಂಡಿಯನ್ ಮಹಿಳಾ ಕ್ರೀಡಾಪಟು ಗೌರವಕ್ಕೆ ಪಾತ್ರವಾಗಿದ್ದಾರೆ.

ಈ ಪ್ರಶಸ್ತಿಯ ರೇಸ್‌ನಲ್ಲಿ ಮನು ಅವರೊಂದಿಗೆ ಗಾಲ್ಫ್ ಆಟಗಾರ್ತಿ ಅದಿತಿ ಅಶೋಕ್, ಪ್ಯಾರಾ ಶೂಟರ್ ಅವನಿ ಲೇಖರಾ, ಭಾರತ ಕ್ರಿಕೆಟ್ ತಂಡದ ಉಪ ನಾಯಕಿ ಸ್ಮೃತಿ ಮಂದಾನ ಮತ್ತು ಕುಸ್ತಿಪಟು ವಿನೇಶ್ ಫೋಗಾಟ್ ಇದ್ದರು. ಅಂತಿಮವಾಗಿ ಶೂಟರ್ ಮನು ಆಯ್ಕೆಯಾಗಿದ್ದಾರೆ.

22 ವರ್ಷ ವಯಸ್ಸಿನ ಮನು ಅವರು ಪ್ಯಾರಿಸ್‌ನಲ್ಲಿ 10 ಮೀಟರ್ ಏರ್ ಪಿಸ್ತೂಲ್ ವೈಯಕ್ತಿಕ ಸ್ಪರ್ಧೆ ಮತ್ತು ಮಿಶ್ರ ತಂಡ ಸ್ಪರ್ಧೆಯಲ್ಲಿ ಪದಕ ಗೆದ್ದಿದ್ದರು. ಈ ಮೂಲಕ ಸ್ವಾತಂತ್ರ್ಯ ನಂತರ ಒಂದೇ ಒಲಿಂಪಿಕ್ಸ್‌ನಲ್ಲಿ ಎರಡು ಪದಕ ಗೆದ್ದ ಭಾರತದ ಮೊದಲ ಕ್ರೀಡಾಪಟು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದರು.